# ಕುರುಗೋಡು

## ಸಂಪಾದಕರ ಮಾತು

ಪುರಾತತ್ತ್ವ ಮತ್ತು ಇತಿಹಾಸಗಳಂಥ ವಿಷಯಗಳ ಅಧ್ಯಯನ ಕ್ರಮಗಳು ಕಾಲಕಾಲಕ್ಕೆ ಬದಲಾಗುತ್ತಾ ಬಂದಿವೆ. ಗತಕಾಲದ ರಾಜಕೀಯ ವಿದ್ಯಮಾನಗಳು ಮಾತ್ರ ಇತಿಹಾಸವನ್ನು ಕಟ್ಟಿಕೊಡುವ ಪ್ರಮುಖ ಆಕರಗಳಲ್ಲ. ಸುತ್ತಲಿನ ಪರಿಸರದಲ್ಲಿ ಅಗಣಿತವಾಗಿ ಹಾಗೂ ವಿಸ್ತಾರವಾಗಿ ಹರಡಿಕೊಂಡಿರುವ ಎಲ್ಲ ತರದ ಅವಶೇಷಗಳು ತುಂಬಾ ಮಹತ್ವವಾದುವುಗಳು. ಅಲ್ಲಿರುವ ಬೆಟ್ಟಗುಡ್ಡಗಳು, ಗವಿಗಳು, ಅಲ್ಲಿರುವ ಚಿತ್ರ ಅಲಂಕರಣೆಗಳು, ಪ್ರಾಚೀನ ಕಾಲದ ಆಯುಧ ಸಲಕರಣೆಗಳು, ಮಡಿಕೆ-ಕುಡಿಕೆ, ಕೋಟೆ ಕೊತ್ತಲಗಳು ಹಾಗೂ ಇತರೆ ಅವಶೇಷಗಳು ವಸ್ತುನಿಷ್ಠ ಸಾಧ್ಯವಾದ ಪ್ರಾಚೀನ ಇತಿಹಾಸ ಪರಂಪರೆಯನ್ನು ನಿರ್ಮಿಸಿ, ನಿರ್ಣಯಿಸುವ ಜೀವಂತ ಸೆಲೆಯಾಗಿವೆ. ಇಂಥ ಪ್ರಮಾಣಬದ್ಧ ಆಕರ ಸಾಮಗ್ರಿಗಳನ್ನು ಮೇಳೈಸಿಕೊಂಡು ಪ್ರತಿ ಗ್ರಾಮದ ಸಮಗ್ರ ಪುರಾತತ್ತ್ವ ಇತಿಹಾಸವನ್ನು ಕಟ್ಟಬೇಕಾಗಿದೆ.

ಹೆಚ್ಚಿನ ಸಂಖ್ಯೆಯಲ್ಲಿ ಐತಿಹಾಸಿಕ ಹಳ್ಳಿಗಳನ್ನೇ ಹೊಂದಿರುವ ಕರ್ನಾಟಕದ ಪ್ರದೇಶವನ್ನು ಇತಿಹಾಸ ಮತ್ತು ಪುರಾತತ್ತ್ವದಂಥ ಮಾನವಿಕ ಅಧ್ಯಯನಗಳ ಹಿನ್ನೆಲೆಯಲ್ಲಿ ಸೂಕ್ಷ್ಮ ಅಧ್ಯಯನಾತ್ಮಕ ದೃಷ್ಟಿಕೋನದಿಂದ ನೋಡುವ ಅಗತ್ಯವಿದೆ. ಅಲ್ಲದೇ ನಿತ್ಯವು ದೊರಕುವ ಆಕರ ಮಾಹಿತಿಗಳ ಎಲ್ಲ ಮಗ್ಗಲುಗಳನ್ನು ಬಳಸಿಕೊಂಡು ಸಮಕಾಲೀನಗೊಳಿಸುವ ಕಾರ್ಯವನ್ನು ಪುರಾತತ್ತ್ವ ಇತಿಹಾಸಕ್ತ ಅಧ್ಯಯನಕಾರರು ಮಾಡಬೇಕಾಗಿದೆ. ಸಿಕ್ಕುವ ಅವಶೇಷಗಳನ್ನು ಸೂಕ್ಷ್ಮ ಅಧ್ಯಯನಗಳ ಚೌಕಟ್ಟಿನಲ್ಲಿಟ್ಟು ನೋಡುವ ಹಾಗೂ ಅವುಗಳಿಂದ ವಿಶ್ಲೇಷಣಾತ್ಮಕ ಫಲಿತಗಳನ್ನು ಕಂಡುಕೊಳ್ಳುವ ದಿಸೆಯತ್ತ ಕ್ರಮವಹಿಸಬೇಕಾಗಿದೆ. ಆದ್ದರಿಂದಲೇ ಈ ಹೊತ್ತಿನ ಸಂದರ್ಭಗಳಲ್ಲಿ ಪ್ರಾದೇಶಿಕ ಹಾಗೂ ಸ್ಥಳೀಯ ಅಧ್ಯಯನಗಳು ಹೆಚ್ಚಿನ ಮಹತ್ವ ಪಡೆಯುತ್ತವೆ. ಇಂಥ ಅಧ್ಯಯನಗಳು ಮೌಲ್ಯಯುತಗೊಳ್ಳಬೇಕಾದರೆ ಮೊದಲು ಆಕರಸಾಮಗ್ರಿಗಳನ್ನು ಕ್ರೂಢೀಕರಿಸುವುದು ಅವಶ್ಯಕ.

ನೆಲದಡಿಯಲ್ಲಿ ಮರೆಯಾಗಿರುವ ಆಕರಸಾಮಗ್ರಿಗಳನ್ನು ಅಚ್ಚುಕಟ್ಟಾದ ಕ್ಷೇತ್ರ ಕಾರ್ಯದ ಮೂಲಕ ಅನಾವರಣಗೊಳಿಸುವುದು ಹಾಗೂ ಸಿಗುವ ಮಾಹಿತಿಗಳನ್ನು ಪ್ರಸ್ತುತಗೊಳಿಸುವುದು ಪುರಾತತ್ತ್ವ ಇತಿಹಾಸ ಅಧ್ಯಯನಕಾರರಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಪ್ರತಿ ಗ್ರಾಮದ ಪುರಾತತ್ತ್ವ ಹಾಗೂ ಚರಿತ್ರೆಯನ್ನು ಏಕವ್ಯಕ್ತಿ ಸಾಹಸಿಗರಾಗಿ ಮಂಥನ ಮಾಡಿ ಕಟ್ಟಿಕೊಡುವುದಕ್ಕಿಂತ ಬಹುಜನರು ಭಿನ್ನ ನೆಲೆಗಳಿಂದ ಹಾಗೂ ಹೊಸ ಆಯಾಮಗಳಿಂದ ವಿಶ್ಲೇಷಿಸಿ ಬರೆಯುವುದು ತುಂಬಾ ಅವಶ್ಯಕವಾಗಿದೆ. ಹೀಗಾಗಿ ಮೌಖಿಕ ಚರಿತ್ರೆ, ಸಾಹಿತ್ಯ ಆ ಪ್ರದೇಶದ ಜನರ ನಂಬಿಕೆ ಆಚರಣೆಗಳ ಚಿದಂಬರ ರಹಸ್ಯಗಳನ್ನು ಬಿಡಿಸಿ ನೋಡುವುದು ಸಹ ಪ್ರಾಮುಖ್ಯವಾದುದು.

ಈ ನಿಟ್ಟಿನಲ್ಲಿ ನಮ್ಮ ವಿಭಾಗವು ಕರ್ನಾಟಕದ ಐತಿಹಾಸಿಕ ಗ್ರಾಮಗಳನ್ನು ಬಿಡಿ ಬಿಡಿಯಾಗಿ ಅವಲೋಕಿಸುತ್ತಾ ಇಡೀಯಾದ ಫಲಿತಾಂಶಗಳನ್ನು ಕಂಡುಕೊಳ್ಳುವ ಯೋಜನೆಯನ್ನು ಪ್ರಾರಂಭಿಸಿದೆ. ಸ್ಥಳೀಯ ಚರಿತ್ರೆ ಮತ್ತು ಪುರಾತತ್ತ್ವ ಮಾಲೆ ಎಂಬ ಮಹತ್ ಯೋಜನೆಯ ಅತೀ ಪ್ರಮುಖ ಉದ್ದೇಶವೆಂದರೆ ಆಯಾ ಗ್ರಾಮದ ಸಮಗ್ರ ಇತಿಹಾಸವನ್ನು ಅಲ್ಲಿಯ ಜನರಿಗೆ ತಿಳಿಸುವುದಾಗಿದೆ. ಜೊತೆಗೆ ಕರ್ನಾಟಕದ ಪ್ರಾಚೀನ ಇತಿಹಾಸದಲ್ಲಿ ಅಲ್ಲಲ್ಲಿ ಕಳಚಿಹೋಗಿರುವ ಪುರಾತತ್ತ್ವ ಹಾಗೂ ಇತಿಹಾಸದ ಕೊಂಡಿಗಳನ್ನು ಮರುಜೋಡಿಸುವ ಅಥವಾ ಮರುನಿರ್ಮಿಸುವ ತುಡಿತವಿದೆ. ಇಂಥ ಮಹತ್ತರ ಯೋಜನೆ ಮತ್ತು ಯೋಚನೆ ಹೊಂದಿರುವ ನಮ್ಮ ವಿಭಾಗವು ಚೊಚ್ಚಲ ಪ್ರಯತ್ನವಾಗಿ ಅಧ್ಯಯನಕ್ಕೆ ಕುರುಗೋಡು ಪಟ್ಟಣವನ್ನು ಆಯ್ದುಕೊಂಡಿದೆ. ಬಳ್ಳಾರಿ ಜಿಲ್ಲೆಯಲ್ಲಿರುವ ಈ ಐತಿಹಾಸಿಕ ಪಟ್ಟಣದ ಅಧ್ಯಯನವನ್ನು ಇದೇ ಜಿಲ್ಲೆಯಲ್ಲಿರುವ ನಮ್ಮ ವಿಶ್ವವಿದ್ಯಾಲಯವು ಅಧ್ಯಯನಕ್ಕೆ ಆಯ್ದುಕೊಂಡಿರುವುದು ಸಮಂಜಸವಾಗಿದೆಯೆಂದು ಭಾವಿಸಿದ್ದೇನೆ.

ಕುರುಗೋಡು ಪಟ್ಟಣದ ಪುರಾತತ್ತ್ವ ಹಾಗೂ ಇತಿಹಾಸ ಅಧ್ಯಯನಗಳ ಹೊರತಾಗಿ ಅಲ್ಲಿರುವ ಐತಿಹ್ಯ, ಪುರಾಣ ಹಾಗೂ ಜನಪದಗಳಂಥ ವಿಷಯಗಳನ್ನು ಒಳಗು ಮಾಡಿಕೊಂಡು ಅಧ್ಯಯನದ ಮಹತ್ವ ಹಾಗೂ ವಿಸ್ತಾರವನ್ನು ಹೆಚ್ಚಿಸಿಕೊಳ್ಳಲಾಗಿದೆ.

ಕುರುಗೋಡು ಪಟ್ಟಣಕ್ಕೆ ಸಂಬಂಧಿಸಿದಂತೆ ಈ ಹಿಂದೆ ಅನೇಕ ಮಹತ್ ಕಾರ್ಯಗಳು ಆಗಿವೆ. ಅಲ್ಲಲ್ಲಿ ಬಿಡಿ ಲೇಖನಗಳು ಪ್ರಕಟವಾಗಿದೆ. ಅಚ್ಚಾದ ಮಾಹಿತಿಗಳನ್ನು ಸೇರಿಸಿಕೊಂಡು ಹೆಚ್ಚಿನ ಸಮಗ್ರತೆಯನ್ನು ತಂದುಕೊಡುವಲ್ಲಿ ಎಲ್ಲ ಅಧ್ಯಯನಕಾರರು ಪ್ರಯತ್ನಿಸಿದ್ದಾರೆ. ಹಾಳಾಗಿರುವ ಹಳೆಯ ಕುರುಗೋಡು ಪಟ್ಟಣದಲ್ಲಿ ಅನೇಕ ಮಾಹಿತಿಗಳು ನೆಲದಲ್ಲಿಯೇ ಹುದುಗಿಕೊಂಡಿರುವುದರಿಂದ ಇಂಥ ಮಾಹಿತಿಗಳ ಅಲಭ್ಯತೆಯಿಂದ ಪೂರ್ಣ ಮಾಹಿತಿಗಳನ್ನು ದೊರಕಿಸಿಕೊಡುವಲ್ಲಿ ಕೆಲವು ಕೊರತೆಗಳನ್ನು ಅಧ್ಯಯನಕಾರರು ಅನುಭವಿಸಿದ್ದಾರೆ.

ವಿಶಾದದಿಂದ ಹೇಳುವ ಇನ್ನೊಂದು ಸಂಗತಿಯೆಂದರೆ, ನಾವು ವಿಚಾರ ಸಂಕಿರಣ ಹಮ್ಮಿಕೊಂಡು ಅಲ್ಲಿ ಚರ್ಚಿತ ವಿಷಯಗಳನ್ನು ಪ್ರಕಟಗೊಳಿಸುವುದರ ಒಳಗಾಗಿಯೇ ಕುರುಗೋಡು ಬೆಟ್ಟಗಳಲ್ಲಿರುವ ಅನೇಕ ಗುಹಾಚಿತ್ರಗಳು ಗಣಿಗಾರಿಕೆಯಂಥ ಕೆಲಸಗಳಿಂದ ನಾಶವಾಗಿವೆ. ಹಾಗೂ ಪಟ್ಟಣದಲ್ಲಿ ಅಲ್ಲಲ್ಲಿ ಬಿದ್ದುಹೋಗಿರುವ ಪ್ರಾಚೀನ ಮಹತ್ವದ ಸ್ಮಾರಕಗಳು ತುಂಬಾ ಅವಜ್ಞೆಗೆ ಒಳಗಾಗಿವೆ. ಇಂಥ ಪ್ರಮಾದಗಳನ್ನು ಎಲ್ಲರೂ ಗಂಭೀರವಾಗಿ ಪರಿಗಣಿಸುವುದು ಸೂಕ್ತ ಎಂಬುದು ನನ್ನ ಕಳಕಳಿ.

ನಮ್ಮ ಮಹತ್ ಯೋಜನೆಗೆ ಸ್ಫೂರ್ತಿಸೆಲೆಯಾಗಿ ನಿಂತವರು ಮಾನ್ಯ ಕುಲಪತಿಗಳಾದ ಪ್ರೊ. ಎಚ್.ಜೆ. ಲಕ್ಕಪ್ಪಗೌಡ ಅವರು. ಅವರಿಗೆ ನಮ್ಮ ವಿಭಾಗವು ಋಣಿಯಾಗಿದೆ. ಸೂಕ್ತ ಸಲಹೆ ಸೂಚನೆಗಳಿತ್ತು ಪ್ರೋತ್ಸಾಹಿಸಿದವರು ನಮ್ಮ ಕುಲಸಚಿವರಾದ ಪ್ರೊ. ಕೆ.ವಿ.ನಾರಾಯಣ ಅವರು ಅವರಿಗೂ ನಾವು ಆಭಾರಿಯಾಗಿದ್ದೇವೆ. ಸಹಕಾರ ನೀಡಿದ ಅಧ್ಯಯನಾಂಗ ನಿರ್ದೇಶಕ ಪ್ರೊ.ಕರೀಗೌಡ ಬೀಚನಹಳ್ಳಿ ಹಾಗೂ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಹಿ.ಚಿ.ಬೋರಲಿಂಗಯ್ಯ ಅವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ ೧ರ ಕುರುಗೋಡು ವಿಚಾರ ಸಂಕೀರ್ಣವನ್ನು ಉದ್ಘಾಟಿಸಿ ಮೌಲಿಕ ಮಾತುಗಳನ್ನಾಡಿದ ಪ್ರೊ. ಎಸ್.ರಾಜಶೇಖರ, ಪ್ರಧ್ಯಾಪಕರು, ಚರಿತ್ರೆ ಮತ್ತು ಪುರಾತತ್ವ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಹಾಗೂ ಗೋಷ್ಠಿಗಳ ಅಧ್ಯಕ್ಷತೆಯನ್ನು ವಹಿಸಿ ವಿಚಾರ ಸಂಕಿರಣದ ಮಹತ್ವವನ್ನು ಹೆಚ್ಚಿಸಿದ ನಮ್ಮವರೇ ಆದ ಪ್ರೊ. ಲಕ್ಷ್ಮಣ್ ತೆಲಗಾವಿ ಅವರಿಗೂ ಆಭಾರಿಯಾಗಿದ್ದೇವೆ. ವಿಚಾರಸಂಕಿರಣದ ಗೋಷ್ಠಿಗಳಲ್ಲಿ ಭಾಗವಹಿಸಿ ಸಕಾಲಕ್ಕೆ ಲೇಖನಗಳನ್ನು ಕೊಟ್ಟು ಸಹಕರಿಸಿದ ವಿದ್ವಾಂಸ ಮಿತ್ರರಿಗೆ ವಂದನೆಗಳು.

ಮೃದುಭಾಷಿ ಹಾಗೂ ಸಹೃದಯಿಗಳಾದ ಕುರುಗೋಡಿನ ಶಾಸಕ, ಸಚಿವರಾದ ಅಲ್ಲಂ ವೀರಭದ್ರಪ್ಪನವರನ್ನು ನೆನೆಯಲೇಬೇಕು. ನಮ್ಮ ವಿಶ್ವವಿದ್ಯಾಲಯದ ಬಗೆಗೆ ಅಪಾರ ಪ್ರೀತಿ ಹೊಂದಿರುವ ಅವರು ವಿಚಾರ ಸಂಕಿರಣವನ್ನು ಯಶಸ್ವಿಗೊಳಿಸುವಲ್ಲಿ ಪ್ರಮುಖ ರೂವಾರಿಯಾಗಿ ನಿಂತಿದ್ದಾರೆ. ಉತ್ಸಾಹಿ ಯುವಕ ಸಿ.ಯುವರಾಜ, ಉಪಾಧ್ಯಕ್ಷರು, ಬಳ್ಳಾರಿ ತಾಲ್ಲೂಕು ಪಂಚಾಯತ್ ನಮ್ಮ ಕಾರ್ಯವನ್ನು ಫಲಪ್ರದಗೊಳಿಸುವಲ್ಲಿ ತುಂಬಾ ಮುತ ವರ್ಜಿವಹಿಸಿದ್ದಾರೆ. ಅದೇ ರೀತಿ ಮಹನೀಯರಾದ ಎ. ರವೀಂದ್ರ, ಮಂಜುನಾಥಗೌಡ, ತಿಪ್ಪೇರುದ್ರಗೌಡ ಹಾಗೂ ವೈ. ಹನುಮಂತರೆಡ್ಡಿ ಅವರಿಗೂ ಪರೋಕ್ಷವಾಗಿ ಸಹಕರಿಸಿದ ಕುರುಗೋಡು ನಾಗರಿಕ ವೇದಿಕೆಯ ಎಲ್ಲ ಸದಸ್ಯರಿಗೂ ಹಾಗೂ ಸ್ಥಳೀಯರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಪುಸ್ತಕ ಪ್ರಕಟಣೆಯಲ್ಲಿ ಸಹಕರಿಸಿದ ನಮ್ಮ ವಿಭಾಗದ ಎಲ್ಲ ಸದಸ್ಯರಿಗೂ ಹಾಗೂ ಪ್ರಸಾರಾಂಗದ ಶ್ರೀ ಕೆ.ಎಲ್. ರಾಜಶೇಖರ್, ಸುಂದರವಾಗಿ ಅಕ್ಷರ ಸಂಯೋಜಿಸಿದ ವಿದ್ಯಾರಣ್ಯ ಗಣಕ ಕೇಂದ್ರದ ಶ್ರೀನಿವಾಸ ಕೆ.ಕಲಾಲ್ ಹಾಗೂ ಶ್ರೀ ಎಸ್.ಕೆ. ವಿಜಯೇಂದ್ರ ಹಾಗೂ ಅಚ್ಚುಕಟ್ಟಾಗಿ ಮುದ್ರಿಸಿದ ಸತ್ಯಶ್ರೀ ಪ್ರಿಂಟರ್ಸ್, ಬೆಂಗಳೂರು ಅವರಿಗೆ ಧನ್ಯವಾದಗಳು.

**ಬಾಲಸುಬ್ರಮಣ್ಯ**

# ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಿಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯಪೂರ್ಣವೂ ಆಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜಮಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆ ಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ, ನಾಡಿನ ಕೋಟಿ ಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾ ಸಂಸ್ಥೆ ಇದು. ಕನ್ನಡಪ್ರಜ್ಞೆ ತನ್ನ ಸತ್ವ ಮತ್ತು ಸ್ವತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕುಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡಮಾನವ ವಿಶ್ವ ಮಾನವನಾಗಿ ಬೆಳೆಯಲು ಸಾಧನವಾಗಬೇಕು. ಕನ್ನಡಗಿರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾರಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ವದ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೬೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಯಾವುದೇ ಜ್ಞಾನಶಿಸ್ತಿನಲ್ಲಿ ವ್ಯಾಪಕವೂ ಮತ್ತು ಸೂಕ್ಷ್ಮವೂ ಆದ ಸಂಶೋಧನೆಗಳು, ಅಧ್ಯಯನಗಳು ಬೆಳೆದಂತೆಲ್ಲ ಆ ನಿಟ್ಟಿನಲ್ಲಿ ಇರಿಸಿಕೊಂಡ ಪೂರ್ವ ನಿರ್ಧರಿತ ಉದ್ದೇಶಗಳು ಮತ್ತು ಕ್ಷೇತ್ರಗಳ ಚೌಕಟ್ಟು ಹಾಗೂ ಗಮಿಸುವ ಹಾದಿ ಪರಿಮಿತಗೊಂಡಿರುವ ಅನುಭವ ನೈಜ ಸಂಶೋಧಕರನ್ನು ಪದೇ ಪದೇ ಕಾಡುತ್ತದೆ, ಕೆಣಕುತ್ತದೆ; ಉದ್ದೇಶಿತ ಮತ್ತು ವಿಷಯದ ಬೇರು ತಾಳು ನಾಡಿಗಳು ಈ ಸೀಮಿತ ಕಣ್ಣುಪಟ್ಟಿಯ ವಸಯದಲ್ಲಿ ಮಾತ್ರವಲ್ಲದೆ ಅದರಿಂದಾಚೆಗೂ ಗೋಚರಾಗೋಚರವಾಗಿ ಹಬ್ಬಿಕೊಂಡಿರುವ, ಅವುಗಳ ಬೆನ್ನಹತ್ತಿ

ಹುಡುಕದಿದ್ದರೆ ಪರ್ಯಾಲೋಚಿಸದಿದ್ದರೆ ಮೂಲ ಸಮಸ್ಯೆಗಳ ಬಗೆಗಿನ ಅರಿವು ಮುಕ್ಕಾಗುವ, ಆ ಕಾರಣದಿಂದಾಗಿ ತಪ್ಪು ನಿರ್ಣಯಗಳ ನಿಲ್ದಾಣದಲ್ಲಿ ಸಂಶೋಧಕ ನಿಂತುಬಿಡುವ ಅಪಾಯಗಳು ಸಂಭವಿಸುತ್ತವೆ. ಸಂಶೋಧಕನ ಅನ್ಯಜ್ಞಾನ ಶಿಸ್ತುಗಳ ಅರಿವು, ಪ್ರಸ್ತುತ ವಿಷಯಕ್ಕೆ ಸಂಬಂಧಿಸಿ ಆ ಅರಿವನ್ನು ಅನ್ವಯಿಸುವ ವಿವೇಚನಾ ಕೌಶಲ, ತಾನು ಕಂಡ ಮೊಲಕೆ ಮೂರು ಕೊಂಬು ಎನ್ನುವ ಅಹಂ ಪ್ರತಿಷ್ಠೆಗೆ ಬದಲಾಗಿ ಸತತ ಪರಿಶ್ರಮ ಮತ್ತು ಸತ್ಯನಿಷ್ಠೆಯಿಂದ ತಾನು ತಲುಪಿದ ನಿರ್ಣಯಗಳನ್ನು ಸಮಾನ ಮನಸ್ಕರೊಡನೆ ಸಮಾಲೋಚಿಸುವ ಸಂವಾದಿಸುವ ಮೂಲಕ ಪರಿಷ್ಕರಿಸಿ ನಿಷ್ಕೃಷ್ಟಗೊಳಿಸಿಕೊಳ್ಳುವ ಪ್ರಾಂಜಲ ಸಂಶೋಧನಾ ಬರಹಗಳಿಗೆ ಅಧಿಕೃತ ವ್ಯಾಪ್ತಿ ಮತ್ತು ಮೌಲಿಕತೆ ಪ್ರಾಪ್ತವಾಗುತ್ತದೆ; ಆಗ ಅದು ಸತ್ಯದರ್ಶನ ನಿಷ್ಠ ಜನಾಂಗದ ಕಣ್ಣು ತೆರೆಸಲು ಸಾಧ್ಯವಾಗುತ್ತದೆ.

ಮೇಲಿನ ಹಿನ್ನೆಲೆಯಲ್ಲಿ, ಮೌಲಿಕ ಸಂಶೋಧನೆಗಾಗಿಯೇ ಮೈವೆತ್ತಿರುವ ಕನ್ನಡ ವಿಶ್ವವಿದ್ಯಾಲಯದ ಪುರಾತತ್ವ ಮತ್ತು ಪ್ರಾಚೀನ ಇತಿಹಾಸ ವಿಭಾಗ ಪುರಾತತ್ವದೊಂದಿಗೆ ಪ್ರಾಚೀನ ಇತಿಹಾಸವನ್ನು ತನ್ನ ಕಕ್ಷ್ಯೆಗೆ ತೆಗೆದುಕೊಂಡು, ತನ್ನ ಸಂಶೋಧನೆಗಳಿಗೆ ಅರ್ಥಪೂರ್ಣ ವ್ಯಾಪ್ತಿಯನ್ನು ಮತ್ತು ಹೆಚ್ಚಿನ ಗಟ್ಟಿತನ ಹಾಗೂ ಗಾಂಭೀರ್ಯಗಳನ್ನು ಮೇಳವಿಸಿಕೊಂಡಿದೆ.

ಪ್ರಾಚೀನ ಕರ್ನಾಟಕದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಮೌಲ್ಯಗಳು ಅಚ್ಚರಿಗೊಳಿಸುವಷ್ಟು ಅಗಾಧ ಪ್ರಮಾಣದಲ್ಲಿದ್ದು ಅವಿನ್ನೂ ಸಂಪೂರ್ಣವಾಗಿ ಅನಾವರಣಗೊಂಡಿಲ್ಲ. ಆಗಿರುವ ಎಷ್ಟೋ ಅಧ್ಯಯನಗಳು ಏಕಮುಖತೆಯಿಂದ ಪೂರ್ವಗ್ರಹಗಳಿಂದ ಪಾರ್ಶ್ವವಾಯುಗ್ರಸ್ತವಾಗಿದೆ. ಈ ಕೊರತೆಯನ್ನು ದೃಷ್ಟಿಯಲ್ಲಿರಿಸಿಕೊಂಡು, ಅದನ್ನು ದಾಟುವ ಪೂರ್ಣತೆಯ ಕಡೆಗೆ ಚಲಿಸುವ ಪ್ರಾಮಾಣಿಕ ಉದ್ದೇಶವನ್ನು ಇರಿಸಿಕೊಂಡು ಈ ವಿಭಾಗ ಬಳ್ಳಾರಿ ಜಿಲ್ಲೆಯ ಪ್ರಸಿದ್ಧ ಪುರಾತತ್ವ ಕ್ಷೇತ್ರಗಳಲ್ಲಿ ಒಂದಾದ ಕುರುಗೋಡನ್ನು ಕುರಿತು ಬಹುದೃಷ್ಟಿಕೋನಗಳಲ್ಲಿ ನಡೆಸಿದ ಚಿಂತನ ಮಂಥನದ ಫಲಶ್ರುತಿ ಈ ಕೃತಿ. ಕುರುಗೋಡಿನ ಪ್ರಾಕೃತಿಕ ಪರಿಸರ, ಪ್ರಾಗಿತಿಹಾಸ, ಚಿತ್ರಕಲೆ, ಚರಿತ್ರೆ, ವಾಸ್ತು ಮತ್ತು ಮೂರ್ತಿಶಿಲ್ಪ, ಶಾಸನಗಳು, ರಕ್ಷಣಾವಾಸ್ತು, ಮೌಖಿಕ ಆಕರಗಳು, ನಂಬಿಕೆ ಮತ್ತು ಆಚರಣೆಗಳು ಇಲ್ಲಿ ಸೋಪಜ್ಞಶೀಲ ವಿಶ್ಲೇಷಣೆಗೆ ಒಳಗಾಗಿವೆ. ಎಂಟು ಜನ ವಿದ್ವಾಂಸರು ಸೂಕ್ಷ್ಮವಾದ ಕ್ಷೇತ್ರಕಾರ್ಯ ಹಾಗೂ ಉಪಲಬ್ಧ ಸಾಮಗ್ರಿಗಳ ಗಂಭೀರ ಅಧ್ಯಯನಗಳಿಂದ ಈ ಪ್ರಬಂಧಗಳನ್ನು ರೂಪಿಸಿದ್ದಾರೆ. ಆ ಸ್ಥಳಕ್ಕೆ ಸಂಬಂಧಿಸಿದ ಹಲವು ಹೊಸ ವಿಷಯಗಳು ಇಲ್ಲಿ ಮೊದಲ ಬಾರಿಗೆ ಚರ್ಚೆ, ಚಿಂತನೆಗಳ ಮೂಲಕ ಹೊರಹೊಮ್ಮಿವೆ; ಮುಂದೆ ವಿಭಾಗ ಕೈಗೊಳ್ಳಬಹುದಾದ ವಿಶಿಷ್ಟ ಯೋಜನೆಗಳ ಬಗ್ಗೆ ಬೌದ್ಧಿಕ ಮತ್ತು ಸಾಂಸ್ಕೃತಿಕ ಕುತೂಹಲ ಆಸಕ್ತಿಗಳನ್ನು ಮೂಡಿಸುವಲ್ಲಿ ಸಫಲವಾಗಿದೆ ಎಂಬುದು ಸಂತೋಷದ ಸಂಗತಿ. ಇಂಥ ಹೊಸ ಹುಡುಕಾಟದ ನೆಲೆಗಳನ್ನು ಶೋಧಿಸುತ್ತಿರುವ ಪುರಾತತ್ವ ಮತ್ತು ಪ್ರಾಚೀನ ಇತಿಹಾಸ ವಿಭಾಗಕ್ಕೆ, ಮುಖ್ಯಸ್ಥರಾದ ಡಾ.ಸಿ.ಮಹದೇವವರಿಗೆ, ತಜ್ಞ ಸಂಪಾದಕರಾದ ಶ್ರೀ ಬಾಲಸುಬ್ರಹ್ಮಣ್ಯ ಅವರಿಗೆ, ಈ ಸಂಕಿರಣದಲ್ಲಿ ಪಾಲ್ಗೊಂಡು ಉತ್ತಮ ಪ್ರಬಂಧಗಳನ್ನು ಸಾದರಪಡಿಸಿದ ವಿದ್ವಾಂಸರಿಗೆ ಹಾರ್ದಿಕ ಅಭಿನಂದನೆಗಳು.

**ಡಾ. ಎಚ್.ಜೆ. ಲಕ್ಕಪ್ಪಗೌಡ**
ಕುಲಪತಿಯವರು

# ಮುಖ್ಯಸ್ಥರ ಮಾತು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗವು ೨೦೦೩ನೆಯ ವರ್ಷದಿಂದ ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ ಎಂಬ ನಿರಂತರ ಯೋಜನೆಯನ್ನು ಆರಂಭಿಸಿದೆ. ಈ ಯೋಜನೆ ಅಡಿಯಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ ಸಾಂಸ್ಕೃತಿಕವಾಗಿ ಮಹತ್ವ ಪಡೆದ ಸ್ಥಳವೊಂದನ್ನು ಆಯ್ಕೆಮಾಡಿಕೊಂಡು ಚರಿತ್ರೆ ಮತ್ತು ಪುರಾತತ್ವದ ನೆಲೆಯಲ್ಲಿ ಅದರ ಬಹುಮುಖ ಅಧ್ಯಯನವನ್ನು ಮಾಡಲಾಗುವುದು. ಜೊತೆಗೆ ಸಂಬಂಧ ಪಟ್ಟ ಕ್ಷೇತ್ರದ ಸೂಕ್ಷ್ಮ ಅಧ್ಯಯನವೂ ಆಗಿದೆ. ಹೀಗೆ ಹೊಸದಾಗಿ ಕ್ಷೇತ್ರಕಾರ್ಯಮಾಡಿ ಸಿದ್ಧಗೊಂಡ ಈ ಸಂಶೋಧನ ಲೇಖನಗಳನ್ನು ವಿಶ್ವವಿದ್ಯಾಲಯವು ಪ್ರಕಟಿಸುವುದು. ಪ್ರಕಟಣೆಗೆ ಮುನ್ನ, ಆ ಸ್ಥಳದಲ್ಲಿ ವಿಚಾರ ಸಂಕಿರಣವನ್ನು ನಡೆಸಿ, ಆ ಮೂಲಕ ಅಲ್ಲಿನ ಜನರಿಗೆ ಚರಿತ್ರೆ ಮತ್ತಿತರ ಸಂಗತಿಗಳನ್ನು ತಿಳಿಸುವ ಪ್ರಯತ್ನ ಮಾಡಲಾಗುತ್ತದೆ. ಅಲ್ಲಿ ನಡೆದ ಚರ್ಚಿತ ವಿಷಯಗಳನ್ನು ಅಳವಡಿಸಿಕೊಂಡು ಅಂತಿಮವಾಗಿ ಪುಸ್ತಕವನ್ನು ಪ್ರಕಟಿಸುವುದು ಈ ಯೋಜನೆಯ ಮುಖ್ಯ ಆಶಯ.

ಪ್ರಸ್ತುತ ಯೋಜನೆಯಿಂದಾಗಿ ನಿರ್ಲಕ್ಷಕ್ಕೊಳಪಟ್ಟ ಸಾಂಸ್ಕೃತಿಕ ಸ್ಥಳಗಳು ಅಧ್ಯಯನಕ್ಕೊಳಪಟ್ಟಿವೆ. ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಮಾನ್ಯ ಕುಲಪತಿಗಳಾದ ಡಾ. ಎಚ್.ಜೆ. ಲಕ್ಕಪ್ಪಗೌಡ ಅವರು, ಮಾನ್ಯ ಕುಲಸಚಿವರಾದ ಡಾ. ಕೆ.ವಿ. ನಾರಾಯಣ ಅವರು, ಹಾಗೂ ಮಾನ್ಯ ಅಧ್ಯಯನಾಂಗದ ನಿರ್ದೇಶಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರು ವಿಶೇಷವಾದ ಆಸಕ್ತಿಯನ್ನು ತೋರಿಸಿದ್ದಾರೆ. ಈ ಯೋಜನೆಯ ಮೊದಲ ಪ್ರಯತ್ನವಾಗಿ ಬಳ್ಳಾರಿ ಜಿಲ್ಲೆ ಕುರುಗೋಡು ಪಟ್ಟಣವನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಅದರ ಫಲವೇ ಪ್ರಸ್ತುತ ಕೃತಿ.

ಪ್ರಾಚೀನ ಕಾಲದಿಂದಲೂ ರಾಜಕೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ತನ್ನ ಹಿರಿಮೆಯನ್ನು ಪ್ರಕಟಿಸುತ್ತ ಬಂದಿರುವ ಕುರುಗೋಡು ಇಂತಹ ಅಧ್ಯಯನಕ್ಕೆ ಒಳಗಾದುದು ನಿಜಕ್ಕೂ ಸಾರ್ಥಕ ಕೆಲಸ. ಪ್ರಸ್ತುತ ಕೃತಿಯನ್ನು ಸಂಪಾದಿಸುವ ಮೂಲಕ ಪ್ರೊ.ಬಾಲಸುಬ್ರಮಣ್ಯ ಅವರು ವಿಭಾಗದ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ಅವರ ಶ್ರಮವನ್ನು ಪ್ರೀತಿಯಿಂದ ನೆನೆಯುತ್ತೇನೆ. ಪ್ರಸ್ತುತ ಕೃತಿ ಕರ್ನಾಟಕದ ಪ್ರಾಚೀನ ಚರಿತ್ರೆ ಮತ್ತು ಪುರಾತತ್ವ ಅಧ್ಯಯನ ಕ್ಷೇತ್ರಕ್ಕೆ ಮಹತ್ವದ ಸೇರ್ಪಡೆ ಎಂದು ಹೇಳಲು ಹರ್ಷಿಸುತ್ತೇನೆ. ಕೃತಿಯ ಪ್ರಕಟಣೆಗೆ ಕಾರಣಕರ್ತರಾದ ವಿದ್ವಾಂಸರನ್ನು ಹಾಗೂ ಪ್ರಸಾರಾಂಗದ ನಿರ್ದೇಶಕರಾದ ಡಾ. ಹಿ.ಚಿ.ಬೋರಲಿಂಗಯ್ಯ ಅವರನ್ನು ವಿಭಾಗದ ವತಿಯಿಂದ ಸ್ಮರಿಸುತ್ತೇನೆ.

**ಡಾ. ಸಿ. ಮಹದೇವ**

# ೧. ಭೌಗೋಳಿಕ ಪರಿಸರ ಮತ್ತು ಪ್ರಾಗಿತಿಹಾಸ

ಕುರುಗೋಡು ಪ್ರದೇಶವು ೧೫', ೨೦', ೫೫" ಅಕ್ಷಾಂಶ ೭೬', ೫೦', ೧೭" ರೇಖಾಂಶವನ್ನು ಹೊಂದಿದೆ. ಈ ಪ್ರದೇಶವು ಸಮುದ್ರಮಟ್ಟದಿಂದ ಸುಮಾರು ೪೬೦ ಮೀ. ಎತ್ತರದಲ್ಲಿದೆ. ಅತಿ ಗರಿಷ್ಠವಾದ ಬೆಟ್ಟದ ಎತ್ತರ ೫೯೯ ಮೀಟರ್‌ಗಳು. ಇಡೀ ಬೆಟ್ಟಗಳು ಗ್ರಾನೈಟಿಕ್ ನೈಸ್ ಶಿಲೆಗಳಿಂದ ಕೂಡಿವೆ. ಇದರಲ್ಲಿ ಕೋಳಿಗುಡ್ಡದ ಕಲ್ಲಿನ ಸಮೂಹ ಒಂದು ಗೊತ್ತಾದ ರೀತಿ ಹರಡಿದೆ. ಬೆಟ್ಟಗಳ ನಡುವೆ ಅಲ್ಲಲ್ಲಿ ಸಣ್ಣ ಬಯಲು ಪ್ರದೇಶವಿದೆ. ಅಲ್ಲಿಯ ತಗ್ಗು ಪ್ರದೇಶಗಳು ಹಿಂದೆ ನೀರಿನ ಪೂರೈಕೆಯ ತಾಣಗಳಾಗಿದ್ದವು. ಕುರುಗೋಡು ಬೆಟ್ಟಗಳ ಸಮೂಹವನ್ನು ಅತಿ ಎತ್ತರದಿಂದ ಸುಮಾರು ೧೦೦೦ ಅಡಿಯಿಂದ ನೋಡಿದರೆ ಪೂರ್ವಾಭಿಮುಖವಾಗಿ ಕುಳಿತ ಬಸವನ ರೀತಿ ಕಾಣುತ್ತದೆ. ಈ ಪ್ರದೇಶದಲ್ಲಿ ಪ್ರಾಚೀನ ಕಾಲದ ಕುರುಹುಗಳು ಹರಡಿಕೊಂಡಿವೆ. ಈ ಕುರುಹುಗಳಲ್ಲಿ ಮಧ್ಯಹಳೇಶಿಲಾಯುಗದಿಂದ ಇಂದಿನವರೆಗಿನ ಬದುಕಿನ ಅನೇಕ ಅಂಶಗಳು ಕಾಣಸಿಗುತ್ತವೆ. ಅಂದರೆ ಮಧ್ಯ ಹಳೇ ಶಿಲಾಯುಗ, ನೂತನಶಿಲಾಯುಗ, ಕಬ್ಬಿಣಯುಗದ ಬೃಹತ್‌ಶಿಲಾಯುಗ, ಆದಿಚಾರಿತ್ರಿಕ ಮತ್ತು ಚಾರಿತ್ರಿಕಯುಗದ ಕುರುಹುಗಳು ಎಂದು ಗುರುತಿಸಬಹುದಾಗಿದೆ. ಇಲ್ಲಿ ಮಾನವ ಜೀವನ ಸಂಸ್ಕೃತಿ ನಿರಂತರವಾಗಿ ಮುಂದುವರೆದಿದ್ದರಿಂದ ಇದರ ಭೌಗೋಳಿಕ ಪ್ರಾಮುಖ್ಯತೆಯನ್ನು ತಿಳಿಯಬಹುದು. ಸಮೃದ್ಧಿಯಾದ ಈ ಪ್ರದೇಶ ಚಾರಿತ್ರಿಕ ಅಂಶಗಳ ಬೀಡಾಗಿದೆ. ಒಟ್ಟಾರೆ ಕುರುಗೋಡಿನ ಸುಮಾರು ೨೦ ಚ.ಕಿ.ಮೀ. ಪ್ರದೇಶದಲ್ಲಿ ಸಾಂಸ್ಕೃತಿಕ ಕುರುಹುಗಳು ದೊರಕುತ್ತವೆ. ಅಲ್ಲಲ್ಲೆ ಪ್ರಾಚೀನ ಸಂಸ್ಕೃತಿಯ ಅವಶೇಷಗಳು ಹರಡಿ ಕೊಂಡಿವೆ. ಇತ್ತೀಚಿನ ದಿನಗಳಲ್ಲಿ ನಗರೀಕರಣದಿಂದ ಅನೇಕ ಕುರುಹುಗಳು ವರ್ಷದಿಂದ ವರ್ಷಕ್ಕೆ ಕಣ್ಮರೆಯಗುತ್ತಿವೆ. ಕುರುಗೋಡಿನ ಪ್ರತಿ ಬೆಟ್ಟಕ್ಕೂ ಒಂದೊಂದು ಹೆಸರಿದೆ. ಅವುಗಳನ್ನು ಕಂದಾಯ ಇಲಾಖೆಯ ದಾಖಲೆಯಲ್ಲಿ ಜಿಲೆಲಿ ಕೊಂಡ, ಹನುಮನಕೊಂಡ, ನಿಶಾನಿಕೊಂಡ, ಆಲಬಾವಿಕೊಂಡ, ರಾಮನಕೊಂಡ, ಐದುಗುಡ್ಡಕೊಂಡ, ಜಿಂಕಲಕೊಂಡ, ಬೈರಿಕಲ್ಲು ಮುಂತಾಗಿ ಗುರುತಿಸಲಾಗಿದೆ.

ಇಲ್ಲಿಯ ಪ್ರಾಗೈತಿಹಾಸಿಕ ನಿವೇಶನಗಳ ಕ್ರಮಬದ್ಧವಾದ ಸತತ ಪ್ರಾದೇಶಿಕ ಅನ್ವೇಷಣೆ ಹಾಗೂ ನಂತರದ ಉದ್ದೇಶಿತ ವೈಜ್ಞಾನಿಕ ಅಧ್ಯಯನಗಳಿಂದ ನಂಬಲು ಅಸಾಧ್ಯವಾದ ಮಾನವ ಸಂಸ್ಕೃತಿಯ ಅನೇಕ ವಿಕಸನ ಹಂತಗಳು ಇಲ್ಲಿ ಸ್ಪಷ್ಟವಾಗುತ್ತಾ ಬಂದಿದೆ. ಇದರಿಂದಾಗಿ ಪ್ರಾಗೈತಿಹಾಸಿಕ ಕಾಲದ ಜೀವನ ವಿಧಾನ, ಸಂಸ್ಕೃತಿಯ ಘಟ್ಟಗಳು ಬೆಳಕಿಗೆ ಬಂದಿವೆ. ಪುರಾತತ್ವ ಅವಶೇಷಗಳ ಶೋಧನೆ ಮತ್ತು ಅವುಗಳ ಮಹತ್ವದ ಅರಿವು ಪ್ರಾಗೈತಿಹಾಸಿಕ ಕಾಲಸ ಸಂಸ್ಕೃತಿಯನ್ನು ತಿಳಿಯಲು ಅನುಕೂಲವಾಗುತ್ತದೆ.

ಇತ್ತೀಚಿನ ಅನ್ವೇಷಣೆ ಹಾಗೂ ಉತ್ಖನನದಿಂದ ಅನೇಕ ಮಾಹಿತಿಗಳು ದೊರಕುತ್ತಿವೆ. ಈ ಅನ್ವೇಷಣೆ ಹಾಗೂ ಉತ್ಖನನದಿಂದ ಭಾಗಗಳಾಗಿವೆ. ೧. ಪ್ರಾಗೈತಿಹಾಸಿಕ ೨. ಐತಿಹಾಸಿಕ

ಈ ಪ್ರದೇಶವು ಮುಂಗಾರು ಹಾಗೂ ಹಿಂಗಾರು ಮಳೆಯ ಸೆರಗಿನ ಪ್ರದೇಶ. ಆದುದರಿಂದ ಅಲ್ಬೇಜಿಯ (Albizzia) ಅಕೇಶಿಯ ಅರಾಬಿಕ (Acacia Arabica) ಯುಫ಼್ರೊಬಿಯಸ್ (Euphorbias) ಜಾತಿಗಳಿಗೆ ಸೇರಿದ ಮರಗಿಡಗಳ ಪ್ರದೇಶವಾಗಿದೆ. ಇಂತಹ ಮರಗಿಡದ ಪ್ರದೇಶವನ್ನು ಅವಲಂಬಿಸುವ ಪ್ರಾಣಿಗಳಾದ ಮೊಲ, ಜಿಂಕೆಯಂತಹ ಸಣ್ಣ ಸಸ್ತನಿ ಪ್ರಾಣಿಗಳು ಇಲ್ಲಿ ಕಂಡುಬರುತ್ತವೆ.

ಇದಕ್ಕೆ ಪೂರಕವಾಗಿ ಹೇಳುವುದಾದರೆ ತೆಕ್ಕಲಕೋಟೆ, ಸಂಗನಕಲ್ಲು, ಹಳ್ಳೂರಿನಲ್ಲಿ ಅಲ್ಜಿಝಿಯಾ ಅಕಾಶಿಯ ಗುಂಪಿಗೆ ಸೇರಿದ ಸಸ್ಯಗಳು ಬೆಳೆಯುತ್ತಿದ್ದವು. ತೆಕ್ಕಲಕೋಟೆ, ಸಂಗನಕಲ್ಲು, ಹಳ್ಳೂರಿನಲ್ಲಿ ದೊರೆತಿರುವ 'ಇದ್ದಿಲಿ'ನಿಂದ ಈ ಸಸ್ಯಗಳನ್ನು ಗುರುತಿಸಲಾಗಿದೆ. ಇಂದಿಗೂ ಸಹ ಉರುವಲು, ಬೇಸಾಯದ ಉಪಕರಣಗಳಿಗೆ ಇವನ್ನು ಬಳಸುತ್ತಾರೆ. ಈ ಪ್ರದೇಶವು ಕಪ್ಪು ಎರೆಮಣ್ಣಿನಿಂದ ಕೂಡಿದ್ದು, ಇಲ್ಲಿ ಮೇಲೆ ತಿಳಿಸಿದ ಕುರುಚಲುಗಿಡಗಳ ಪ್ರದೇಶದಿಂದ ಆವೃತ್ತವಾಗಿದೆ. ಮಣ್ಣು ಫಲವತ್ತಾದರೂ ಮಳೆ ಕಡಿಮೆ ಆದುದರಿಂದ ಇತ್ತೀಚಿನವರೆವಿಗೂ ಒಣ ಬೇಸಾಯಕ್ಕೆ ಒಳಪಟ್ಟಿತ್ತು, ಆದರೆ ತುಂಗಭದ್ರ ಅಣೆಕಟ್ಟು ನಿರ್ಮಾಣದಿಂದ ತೋಡಿದ ಕಾಲುವೆಗಳಿಂದಾಗಿ ಇವು ನೀರಾವರಿ ಭೂಮಿಯಾಗಿವೆ. ಇಲ್ಲಿಯ ಭೂ ಭೌತಿಕ ಸ್ವರೂಪ, ದೊರೆಯುವ ಅದಿರು, ಖನಿಜ ಶಿಲಾಸ್ತೋಮ, ಮಣ್ಣು, ಸಸ್ಯಗಳು, ಕೃಷಿಗೆ ಒಳಪಡಿಸಿದ ಮೂಲ ತಳಿಗಳ ಅಸ್ತಿತ್ವ ಇವೆಲ್ಲ ಒಕ್ಕಲು ಸಂಸ್ಕೃತಿಗೆ ಬೇಕಾದ ಸಂಪನ್ಮೂಲಗಳ ತಳಪಾಯವನ್ನು ಹಾಕಿವೆ. ಒಟ್ಟಾರೆ ಹೇಳುವುದಾದರೆ ಭೌಗೋಳಿಕವಾಗಿ ಇದು ಪ್ರಾಚೀನ ಪ್ರದೇಶ, ವಿಶಾಲವಾಗಿ ಹರಡಿಕೊಂಡಿದೆ. ಬೀದರ್, ಗುಲ್ಬರ್ಗ, ಬಳ್ಳಾರಿ ಈ ಸ್ಥಳಗಳು ಎರೆಮಣ್ಣಿನಿಂದ ಫಲವತ್ತಾಗಿದ್ದರೂ ಕಡಿಮೆ ಪ್ರಮಾಣದ ಮಳೆಯಿಂದಾಗಿ ಕೃಷಿ ಉತ್ಪನ್ನ ಗರಿಷ್ಠ ಪ್ರಮಾಣ ಮುಟ್ಟುವತ್ತ ಸೆಣಸುತ್ತಿವೆ.

ಕುರುಗೋಡಿನ ಬೆಟ್ಟ ಶ್ರೇಣಿಗಳನ್ನು ಅಭ್ಯಾಸ ಮಾಡುವ ಮುನ್ನ ಈ ಜಿಲ್ಲೆಯಲ್ಲಿರುವ ಇತರೆ ಬೆಟ್ಟಗುಡ್ಡದ ಸಾಲುಗಳ ಪರಿಚಯ ಹಾಗೂ ಅವುಗಳ ವ್ಯಾಪಿಸಿರುವ ಪ್ರದೇಶಗಳ ಬಗೆಗೆ ತಿಳಿಯುವುದು ಸೂಕ್ತವಾಗಿದೆ. ಇವುಗಳಲ್ಲದೆ ಇಲ್ಲಿ ಹರಿಯುವ ತುಂಗಭದ್ರ ಹಲವು ರೀತಿಯಲ್ಲಿ ಜನಜೀವನದ ಮೇಲೆ ಪ್ರಭಾವ ಬೀರಿದೆ. ಅಲ್ಲದೆ ಇಲ್ಲಿ ಅನೇಕ ಸಂಸ್ಕೃತಿ ನೆಲೆಗಳ ಇರುವಿಕೆಗೂ ಕಾರಣವಾಗಿದೆ. ಇಲ್ಲಿನ ಬೆಟ್ಟಗುಡ್ಡಗಳಲ್ಲಿ ದೊರೆಯುವ ನೀರನ್ನು ಆಧರಿಸಿ ಆದಿಮಾನವ ಈ ಸ್ಥಳವನ್ನು ಮಾಡಿರಬೇಕೆನಿಸುತ್ತದೆ.

ಬಳ್ಳಾರಿ ಜಿಲ್ಲೆಯ ಜೀವನದಿ ತುಂಗಭದ್ರ. ಇದು ಪಶ್ಚಿಮಘಟ್ಟದಲ್ಲಿ ಹುಟ್ಟಿ ಈ ಜಿಲ್ಲೆಯ ನೆಲದಲ್ಲಿ ಹಸಿರು ಹೊದಿಕೆ ಹೊದಿಸುವುದರಲ್ಲಿ ತನ್ನದ ಕಾಣಿಕೆ ನಿಡಿದೆ. ಜಿಲ್ಲೆಯ ಪಶ್ಚಿಮದಲ್ಲಿ ಈ ನದಿ ಧಾರವಾಡದೊಡನೆ ಗಡಿರೇಖೆಯಾದರೆ, ಉತ್ತರದಲ್ಲಿ ರಾಯಚೂರು ಜಿಲ್ಲೆಯೊಡನೆ ಗಡಿರೇಖೆಯಾಗಿದೆ. ಇದೇ ರೀತಿ ಈ ಜಿಲ್ಲೆಯಲ್ಲಿ ಅತೀ ಮುಖ್ಯವಾದ ಭೌಗೋಳಿಕ ಮೇಲ್ಮೈ ಲಕ್ಷಣವನ್ನು ಗುರುತಿಸಬಹುದಾಗಿದೆ. ಪೂರ್ವ ಹಾಗೂ ಪಶ್ಚಿಮದ ನಡುವೆ ಸಂಡೂರು ಬೆಟ್ಟಗಳ ಶ್ರೇಣಿಯಿದೆ. ಈ ಶ್ರೇಣಿಗಳು ಈಶಾನ್ಯದಿಂದ ಆಗ್ನೇಯದ ವರೆಗೂ ಹರಡಿವೆ. ಸಿರಗುಪ್ಪ ಹಾಗೂ ಬಳ್ಳಾರಿ ಜಿಲ್ಲೆಯ ಪೂರ್ವದ ಭಾಗ ಬಯಲು ಪ್ರದೇಶವಾಗಿದೆ. ಸಮತಟ್ಟಾಗಿರುವುದರಿಂದ ನೀರಿನ ಶೇಖರಣೆಗೆ ಕಣಿವೆಗಳು ವಿರಳವಾಗಿವೆ. ಅಲ್ಲಲ್ಲಿ ಇರುವ ತಗ್ಗಿನಿಂದಾಗಿ ಮಳೆಗಾಲದ ನೀರು ಇಂಗುವಂಥ ವ್ಯವಸ್ಥೆಯಿದೆ. ಈ ಪ್ರದೇಶವು ಸಮತಟ್ಟಾಗಿರುವುದರಿಂದ ಯಾವುದೇ ಹೆಚ್ಚಿನ ಮರಗಿಡಗಳು ಇರುವುದಿಲ್ಲ. ಅಲ್ಲದೆ ಈ ಪ್ರದೇಶ ಕಪ್ಪು ಎರೆಮಣ್ಣಿನಿಂದ ಕೂಡಿದೆ. ಸಮತಟ್ಟಾದ ಪ್ರದೇಶದಲ್ಲಿ ಅಲ್ಲಲ್ಲಿ ಸಣ್ಣ ಬೆಟ್ಟಗಳ ಸಾಲನ್ನು ಕಾಣಬಹುದು. ಈ ಸಾಲು ಒಂದು ತುದಿಯಿಂದ ಇನ್ನೊಂದು ತುದಿಯವರೆಗೂ ಅಂದರೆ ಪೂರ್ವ ಪಶ್ಚಿಮ, ಉತ್ತರ ದಕ್ಷಿಣ ಹೀಗೆ ಯಾವುದೇ ರೀತಿಯ ಬಹು ಉದ್ದವಾದ ಶ್ರೇಣಿಗಳಾಗಿರುವುದಿಲ್ಲ. ಆದರೆ ಬೆಟ್ಟಗಳು ಅಲ್ಲಲ್ಲಿ ಸಣ್ಣದ್ವೀಪಗಳ ರೀತಿಯಾಗಿ ಮೇಲೆದ್ದಿರುವುದನ್ನು ಕಾಣಬಹುದು. ಈ ರೀತಿ ಅಲ್ಲಲ್ಲಿ ಬೆಟ್ಟಗಳು ಗುಂಪುಗಳಾಗಿರುವುದನ್ನು ಸಾಮಾನ್ಯವಾಗಿ ದಖ್ಖನ್ ಪ್ರಸ್ತಭೂಮಿಯ ಹಲವೆಡೆ ಕಾಣಬಹುದು. ಈ ಲಕ್ಷಣಗಳು ಜಿಲ್ಲೆಯ ಪೂರ್ವದಿಕ್ಕಿನಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಆದರೆ ಪಶ್ಚಿಮದಲ್ಲಿ ಕೆಲವೆಡೆ ಮಾತ್ರ ಕಪ್ಪು ಎರೆಭೂಮಿ ಇದ್ದರೂ ಅದರೊಡನೆ ಕೆಂಪು ಹಾಗೂ ಕಬ್ಬಿಣಾಂಶ ಹೊಂದಿದ ಕೆಂಪು ಮಣ್ಣಿನ ಭೂಮಿಯಿದೆ. ಆದರೆ ಹಡಗಲಿಯ ಭಾಗದಲ್ಲಿ ಮೇಲ್ಕಂಡ ಲಕ್ಷಣಗಳು ಸ್ವಲ್ಪ ಭಿನ್ನವಾಗಿವೆ. ಇಲ್ಲಿಯ ಬೆಟ್ಟ ಗುಡ್ಡಗಳು ಪೂರ್ವದಲ್ಲಿ ಕಂಡುಬರುವ ಭೂ ಪ್ರದೇಶಕ್ಕಿಂತ ಭಿನ್ನವಾಗಿವೆ.

ಬೆಟ್ಟಗುಡ್ಡಗಳಿರುವುದರಿಂದ ಇಲ್ಲಿ ಸ್ವಲ್ಪ ಮಳೆ ಜಾಸ್ತಿ ಬೀಳುತ್ತದೆ. ಒರಟಾದ ನೆಲ ಹಾಗೂ ಎತ್ತರದ ದಿಣ್ಣೆಗಳು ಇಲ್ಲಿವೆ. ಅಲ್ಲದೆ ಇವು ಇಳಿಜಾರನ್ನು ಉತ್ತರದ ಕಡೆ ಹೊಂದಿದೆ. ಇದರಿಂದಾಗಿ ಮಳೆಯ ನೀರು ಉತ್ತರದಲ್ಲಿರುವ ಜೀವನದಿ ತುಂಗಭದ್ರೆಗೆ ಹರಿಯುತ್ತದೆ. ಪಶ್ಚಿಮದಲ್ಲಿ ಭೂ ಮೇಲ್ಮೈ ಎತ್ತರದಲ್ಲಿರುವ ಜೀವನದಿ ತುಂಗಭದ್ರೆಗೆ ಹರಿಯುತ್ತದೆ. ಪಶ್ಚಿಮದಲ್ಲಿ ಭೂ ಮೇಲ್ಮೈ ಎತ್ತರದಲ್ಲಿರುವುದರಿಂದ ಕುರುಚಲುಗಿಡದ ಸಣ್ಣ ಕಾಡುಗಳಿವೆ.

ಸಂಡೂರು ಬೆಟ್ಟಗಳ ಶ್ರೇಣಿಯು ಮಧ್ಯದಲ್ಲಿರುವುದರಿಂದ ಜಿಲ್ಲೆಯಲ್ಲಿ ಎದ್ದು ಕಾಣುತ್ತದೆ. ಅಲ್ಲದೆ ಅದು ಕಬ್ಬಿಣ, ಮ್ಯಾಂಗನೀಸ್ ಅದಿರಿನ ಅಗಾಧ ಭಂಡಾರವನ್ನು ಹೊಂದಿದೆ. ಆದುದರಿಂದ ಈ ಪ್ರದೇಶ ಕಬ್ಬಿಣ ಹಾಗೂ ಮ್ಯಾಂಗನೀಸ್ ಅದಿರಿನ ಗಣಿಗಾರಿಕೆಗೆ ಹೆಸರುವಾಸಿಯಾಗಿದೆ.

ಮೇಲೆ ತಿಳಿಸಿದ ಬೆಟ್ಟಗಳ ಸಾಲುಗಳಲ್ಲದೆ, ಈ ಜಿಲ್ಲೆಯಲ್ಲಿ ಕೆಲವು ಬಿಡಿ ಬಿಡಿಯಾದ ಬೆಟ್ಟಗಳ ಗುಂಪುಗಳಿವೆ. ಸಂಡೂರು, ಬೆಟ್ಟಗಳ ಉತ್ತರಕ್ಕೆ ದರೋಜಿ ಬೆಟ್ಟಗಳಿವೆ. ಇದು ದರೋಜಿ ಗ್ರಾಮದ ಬಳಿಯಿದೆ. ದರೋಜಿ ಹಾಗೂ ಸಂಡೂರು ಬೆಟ್ಟಗಳ ನಡುವೆ ಕಣಿವೆ ಪ್ರದೇಶವಿದ್ದು ವ್ಯವಸಾಯಕ್ಕೆ ಅನುಕೂಲವಾಗಿದೆ. ಅಲ್ಲದೆ ಫಲವತ್ತಾದ ಭೂಮಿಯನ್ನು ಹೊಂದಿದೆ. ನೀರಾವರಿಯಿಂದಾಗಿ ಹಸಿರು ಕಂಗೊಳಿಸುತ್ತಿದೆ. ದರೋಜಿ ಬೆಟ್ಟಗಳ ಉತ್ತರಕ್ಕೆ ಕಂಪ್ಲಿ ಬೆಟ್ಟಗಳ ಸಾಲುಗಳಿವೆ. ಈ ಎರಡೂ ಬೆಟ್ಟಗಳ ಸಾಲಿನ ನಡುವಿನ ಭೂ ಪ್ರದೇಶದ ಕಣಿವೆಯಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯಿದೆ.

ಕಂಪ್ಲಿ ಬೆಟ್ಟಗಳ ಸಾಲಿನಂತೆ ಇನ್ನೊಂದು ಬೆಟ್ಟಗಳ ಸಾಲು ಕುರುಗೋಡು ಪ್ರದೇಶದಲ್ಲಿ ಕಂಡುಬರುತ್ತದೆ. ಇವುಗಳನ್ನು ಕುರುಗೋಡು ಬೆಟ್ಟಗಳು ಎಂದು ಕರೆಯಲಾಗುತ್ತದೆ. ಇದು ಉತ್ತರ ಪೂರ್ವ ದಿಕ್ಕಿಗಿದೆ. ಈ ಬೆಟ್ಟಗಳ ಸಾಲು ಸ್ವಲ್ಪದೂರದವರೆಗೆ ಮಾತ್ರ ಹರಡಿದೆ. ಹೀಗೆಯೆ ಕೆಲವು ಬೆಟ್ಟಗಳು ಎಂದರೆ ಬಳ್ಳಾರಿಯಲ್ಲಿರುವ ಬೆಟ್ಟಗಳ ಸಾಲು. ಈ ಬೆಟ್ಟಗಳು ಗುಂಪುಗಳ ರೀತಿಯಿದ್ದು ಎತ್ತರವಾಗಿ ಕಾಣಬರುತ್ತವೆ.

ಸಂಡೂರು ಬೆಟ್ಟಗಳಲ್ಲಿ, ಮಲ್ಲಪ್ಪನ ಗುಡ್ಡ ಮತ್ತು ಕಲ್ಲಹಲಿಗುಂದ, ಧಾರವಾಡ ಸಿಶ್ಟ್ ಶಿಲಾ ಶ್ರೇಣಿಯನ್ನು ಹೊಂದಿವೆ. ದರೋಜಿ, ಕಂಪ್ಲಿ, ಕುರುಗೋಡು ಹಂಪಿಯ ಬೆಟ್ಟಗಳನ್ನು ಸೇರಿಸಿಕೊಂಡು ಎಲ್ಲವೂ ಗ್ರಾನೈಟ್ ಶಿಲೆಗಳನ್ನು ಹೊಂದಿವೆ. ಇಲ್ಲಿನ ಸಿಶ್ಟ್ ಶಿಲಾವರ್ಗದ ಶ್ರೇಣಿಗಳಲ್ಲಿ ಎತ್ತರದ ಕೋಡು ಬೆಟ್ಟಗಳನ್ನು ಕಾಣಬಹುದು. ಅದರೊಡನೆ ದೊಡ್ಡ ಕೊರಕಲಿನ ಕಣಿವೆಗಳು ಇರುವುದು ಸಾಮಾನ್ಯ. ಈ ಗ್ರಾನೈಟ್ ಬೆಟ್ಟಗಳಲ್ಲಿ ಕಲ್ಲುಗಳ ಕುಪ್ಪೆಗಳು ದೊಡ್ಡ ದೊಡ್ಡ ರಾಶಿಯಾಗಿದ್ದು, ಇಲ್ಲಿ ಬೆಟ್ಟಗಳ ಗುಂಪನ್ನು ಕಾಣಬಹುದಾಗಿದೆ. ಈ ರೀತಿಯ ಬೆಟ್ಟಗಳ ಗುಂಪನ್ನು ರಾಯಚೂರು-ಚಿತ್ರದುರ್ಗ ಮತ್ತು ಬಳ್ಳಾರಿಯ ಕೆಲವು ಪ್ರದೇಶಗಳಲ್ಲಿ ಕಾಣಬಹುದು. ಈ ಬೆಟ್ಟಗಳ ವಿಶೇಷತೆ ಎಂದರೆ, ಈ ಬೆಟ್ಟಗಳು ಅಸಾಮಾನ್ಯ ಕಂದು ಇಲ್ಲವೆ ಬೂದು ವರ್ಣದ, ಈಗಾಗಲೇ ತಿಳಿಸಿರುವ ಗ್ರಾನೈಟ್ ಶಿಲಾವರ್ಗಕ್ಕೆ ಸೇರಿವೆ. ಈ ಪ್ರದೇಶದಲ್ಲಿ ಸಾಮಾನ್ಯವಾಗಿ ಇರುವ ಅತೀ ಹೆಚ್ಚಿನ ಉಷ್ಣ ಶೀತಗಳಿಂದಾಗಿ, ಅಂದರೆ ಹವಾಗುಣದ ವೈಪರೀತ್ಯದಿಂದಾಗಿ ದೊಡ್ಡ ಬಂಡೆಗಳು ಸೀಳಿವೆ. ಹೀಗೆ ಬಿರುಕು ಬಿಟ್ಟು ಸೀಳಿದವುಗಳಲ್ಲಿ ಕೆಲವು ಮುಂಚಾಚಿನ ಕಲ್ಲಾಸರೆಗಳಾದರೆ ಕೆಲವು ಗುಹೆಗಳಾಗಿವೆ. ಸಹಸ್ರಾರು ವರ್ಷಗಳ ನಿರಂತರವಾದ ಸವಕಳಿಯಿಂದ ಗುಹೆಗಳು ಹೆಚ್ಚಾಗಿ ಕಂಡುಬಂದಿವೆ. ಇವು ಆದಿ ಮಾನವನ ವಸತಿಗೆ ಆಸರೆಯಾಗುತ್ತಿದ್ದವು. ಬೆಟ್ಟಗಳಿಂದ ಸುತ್ತುವರಿದ ಎತ್ತರವಾದ ಭೂ ಪ್ರದೇಶ ಪ್ರಕೃತಿದತ್ತ ಸುರಕ್ಷತೆಯನ್ನು ನೀಡಿವೆ. ಆದಿಮಾನವರು ವಾಸಿಸುವುದಕ್ಕೆ ಯೋಗ್ಯವಾಗಿವೆ.

ಇಂತಹ ಬೆಟ್ಟಗಳ ಸಾಲಿನಲ್ಲಿ ನದಿ, ಸಣ್ಣನದಿ, ಹಳ್ಳಗಳು ಹರಿಯುವುದು ಸಾಮಾನ್ಯ ಈ ನೀರಿನ ಪ್ರದೇಶಗಳ ಆಸುಪಾಸಿನಲ್ಲಿ ಫಲವತ್ತಾದ ಮಣ್ಣಿನಿಂದ ಕಾಡು ಮತ್ತು ಕೃಷಿಗೆ ಯೋಗ್ಯವಾದ ಪ್ರದೇಶ ದೊರಕಿದೆ. ಆದಿಮಾನವನು ವ್ಯವಸಾಯಕ್ಕೆ ತೊಡಗುವುದಕ್ಕೆ ಮುನ್ನ ಇಲ್ಲಿ ಉತ್ತಮ ಸಸ್ಯವರ್ಗಗಳಿದ್ದು, ಆತನ ಹಸಿವನ್ನು ಇಂಗಿಸುವ ಆಹಾರ ಪೂರೈಕೆಯ ಭಂಡಾರವಾಗಿತ್ತು. ವ್ಯವಸಾಯದ ಕಸಬನ್ನು ಕರಗತಮಾಡಿಕೊಂಡ ನಂತರ ಈ ಸ್ಥಳಗಳಲ್ಲಿದ್ದ ಉತ್ತಮವಾದ ಭೂಮಿ ವ್ಯವಸಾಯಕ್ಕೆ ಆಸರೆಯಾಗಿವೆ. ಈ ತೆರನಾದ ಬದುಕು ಪ್ರಾಗೈತಿಹಾಸಿಕ ಚಿತ್ರಗಳಲ್ಲಿ ಬಿಂಬಿತವಾಗಿವೆ. ಪ್ರಾಗೈತಿಹಾಸಿಕ ಜನರ ಜೀವನದ ಆರ್ಥಿಕ ಸಫಲತೆ, ತಮಗೆ ಆಹಾರವಾದ ಪ್ರಾಣಿಗಳ ಅಭಿವೃದ್ಧಿ, ಬೇಟೆ, ತಮ್ಮ ಜನಾಂಗದ ವಂಶಾಭಿವೃದ್ಧಿ, ಮುಂತಾದ ವಿಷಯಗಳನ್ನಾಧರಿಸಿ ಚಿತ್ರಗಳನ್ನು ರಚಿಸಲಾಗಿದೆ.

ಸಾಮಾನ್ಯವಾಗಿ ಒಬ್ಬ ವ್ಯಕ್ತಿ ತಾನು ಕಂಡದ್ದನ್ನು ಹಾಗೆಯೇ ಚಿತ್ರಿಸುವ ಕಲಾವಂತಿಕೆಯನ್ನು ಹೊಂದಿದ್ದ. ಅಂದರೆ ಛಾಯಾ ನಿರೂಪಣಾ ತಂತ್ರವನ್ನು ಬಳಸಿ ಬಯಲುಬಂಡೆ ಹಾಗೂ ಗುಹೆಗಳಲ್ಲಿ ಚಿತ್ರ ರಚಿಸಲಾಗಿದೆ. ಚಿತ್ರಗಳು ಬಹು ಪ್ರಭಾವಶಾಲಿಯಾಗಿದ್ದು ಸಂಕೇತದಲ್ಲಿ ಪರಿಣಾಮಕಾರಿಯಾಗಿದೆ.

ಬಳ್ಳಾರಿ ಜಿಲ್ಲೆಯ ಅನೇಕ ಪ್ರದೇಶಗಳಲ್ಲಿ ಪುರಾತತ್ವ ಅವಶೇಷಗಳು ಕಂಡುಬರುತ್ತವೆ. ಅವುಗಳಲ್ಲಿ ಬಳ್ಳಾರಿ, ಕಪ್ಪಗಲ್ಲು, ಸಂಗನಕಲ್ಲು, ಕುರಕುಪ್ಪೆ ಹಾಗೂ ಗಾದಿಗನೂರುಗುಳಲ್ಲಿ ಹೇರಳವಾಗಿ ಪ್ರಾಗೈತಿಹಾಸಿಕ ಕುರುಹುಗಳು ದೊರಕಿವೆ. ಈ ಸ್ಥಳಗಳಲ್ಲಿ ಆದಿ ಹಳೇ ಶಿಲಾಯುಗ, ಮಧ್ಯ ಹಳೇಶಿಲಾಯುಗ, ಅಂತಿಮ ಪ್ರಾಚೀನಶಿಲಾಯುಗ, ನೂತನ ಶಿಲಾಯುಗ - ತಾಮ್ರಶಿಲಾಯುಗ ಸಂಸ್ಕೃತಿಯ ಮತ್ತು ಬೃಹತ್‌ಶಿಲಾಯುಗದ ಹಲವಾರು ಅವಶೇಷಗಳು ದೊರಕಿವೆ.

ಆದಿ ಹಳೇಶಿಲಾಯುಗದ ಕೆಲವು ಮುಖ್ಯ ಅವಶೇಷಗಳು ಕುರುಗೋಡು ಆಸುಪಾಸಿನಲ್ಲಿ ಕಂಡುಬಂದಿದೆ. ಅವುಗಳಲ್ಲಿ ಮುಖ್ಯವಾದವು ಬಾದನಹಟ್ಟಿ, ಲಿಂಗಸೂಗೂರು, ದರೋಜಿ, ಜೋಗ, ಗಾದಿಗನೂರು ಮುಂತಾದ ಸ್ಥಳಗಳಲ್ಲಿ ದೊರಕಿವೆ. ಈ ಸ್ಥಳಗಳಲ್ಲಿ ಕಂಡುಬಂದ ಆಯುಧಗಳನ್ನು ಕುರುಗೋಡಿನಲ್ಲಿ ದೊರೆತ ಆಯುಧಗಳಂತೆ ಟ್ರ್ಯಾಪ್ ಶಿಲೆಯಿಂದ ಮಾಡಲಾಗಿದೆ. ಆದರೆ ಹಿರೆಕುರವತ್ತಿಯ ಅವಶೇಷಗಳನ್ನು ಬೆಣಚುಕಲ್ಲಿನಿಂದ ಮಾಡಲಾಗಿದೆ. ಬಳ್ಳಾರಿಯ ದೊಡ್ಡ ಬೆಟ್ಟದಲ್ಲಿ ನೂತನ ಶಿಲಾಯುಗದ ಅವಶೇಷಗಳನ್ನು ೧೮೭೨ರಲ್ಲಿ ಫ್ರೆಜರ್ ಅವರು ಮೊದಲು ಗುರುತಿಸಿದರು. ಇದಾದ ನಂತರ ೧೮೮೪ರಿಂದ ರಾಬರ್ಟ್ ಬ್ರೂಸ್‌ಫೂಟ್ ಅವರು ನೂತನ ಶಿಲಾಯುಗದ ಅವಶೇಷಗಳೊಡನೆ, ಕಬ್ಬಿಣ ಕರಗಿಸುವ ವಸ್ತುಗಳನ್ನು ಹಾಗೂ ಕುಲುಮೆಯನ್ನು ಗುರುತಿಸಿದರು. ಇದೇ ರೀತಿ ಕಪ್ಪಗಲ್‌ನಲ್ಲಿ ಆಯುಧಗಳನ್ನು ತಯಾರಿಸುವ ಕಲ್ಲು, ವಿವಿಧ ಹಂತದಲ್ಲಿ ಸಿದ್ಧಪಡಿಸಿದ ಆಯುಧಗಳು, ತ್ಯಾಜ್ಯಶಿಲೆ, ಸಂಪೂರ್ಣವಾಗಿ ತಯಾರಾದ ಆಯುಧಗಳು. ಹೀಗೆ ನೂತನ ಶಿಲಾಯುಗದ ಆಯುಧದ ಭಂಡಾರ ಎನ್ನುವಷ್ಟು ವಸ್ತುಗಳು ಇಲ್ಲಿ ದೊರಕಿವೆ. ಇಲ್ಲಿ ಆಯುಧಗಳ ತಯಾರಿಕೆಗೆ ವಿವಿಧ ಜಾತಿಯ ಶಿಲೆಗಳನ್ನು ಉಪಯೋಗಿಸಿದ್ದಾರೆ. ಟ್ರ್ಯಾಪ್‌ಶಿಲೆಗಳಿಂದ ಕುಟ್ಟುವ ಕಲ್ಲು, ಅರೆಯುವ ಕಲ್ಲನ್ನು ತಯಾರಿಸಿದ್ದರು, ಅಲಗುಗಳ ತಯಾರಿಕೆಯಲ್ಲಿ ಚರ್ಟ್ ಅಗೇಟ್, ಚಾಲ್ಸಿಡನಿ, ರಾಕ್‌ಕ್ರಿಸ್ಟಲ್‌ಗಳನ್ನು ಉಪಯೋಗಿಸಿ ಹಲವಾರು ರೀತಿಯ ಸೂಕ್ಷ್ಮ ಶಿಲಾಯುಧಗಳನ್ನು ತಯಾರಿಸಿರುವುದು ತಿಳಿದುಬರುತ್ತದೆ. ಈ ಸ್ಥಳದ ಹತ್ತಿರದಲ್ಲಿ ಬಯಲು ಬಂಡೆಯ ಚಿತ್ರಗಳು ಹಾಗೂ ರೇಖಾಚಿತ್ರಗಳು ಹೇರಳವಾಗಿ ದೊರಕುತ್ತವೆ. ಮನುಷ್ಯ, ಜಿಂಕೆ, ಗೂಳಿ ಮುಂತಾದ ಚಿತ್ರಗಳನ್ನು ನಿಖರವಾಗಿ ಬಿಡಿಸಲಾಗಿದೆ.

ಸಂಗನಕಲ್ಲು ಬಳ್ಳಾರಿಯ ಇನ್ನೊಂದು ಮುಖ್ಯ ಪ್ರದೇಶ. ಇಲ್ಲಿ ೧೯೪೬ರಲ್ಲಿ ಬಿ.ಸುಬ್ಬರಾವ್ ಅವರು ಉತ್ಖನನ ನಡೆಸಿದರು. ಇದು ಬ್ರಹ್ಮಗಿರಿ ಹಾಗೂ ಚಂದ್ರಗಿರಿಗಿಂಥ ಮಿಗಿಲಾದ ಕೆಲವು ಕುರುಹುಗಳನ್ನು ನೀಡಿದೆ. ಇಲ್ಲಿ ಮೇಲಿಂದ ಕೆಳಗಿನ ಸ್ತರಗಳನ್ನು ನೋಡುವುದಾದರೆ, ಮೊದಲನೆಯದು ಬೃಹತ್‌ಶಿಲಾಯುಗ. ಇದು ಕೈಗೊಡಲಿ ಸಂಸ್ಕೃತಿಯೊಡನೆ ಮಿಲನವಾಗಿರುವುದನ್ನು ಕಾಣಬಹುದು. ಇದರ ಕೆಳಭಾಗದಲ್ಲಿ ನೂತನಶಿಲಾಯುಗದ ಕೈಗೊಡಲಿಗಳನ್ನು ಗುರುತಿಸಲಾಗಿದೆ. ಇದರ ತಳಭಾಗದಲ್ಲಿ ಯಾವುದೇ ಮೃತ್‌ಪಾತ್ರೆ ದೊರಕದ ಸೂಕ್ಷ್ಮಶಿಲಾಯುಗದ ಅಲಗುಗಳ ರೀತಿಯಲ್ಲಿನ ಆಯುಧಗಳು ದೊರಕಿವೆ. ಇವನ್ನು ಟ್ರಾಪ್ ಹಾಗೂ ಮರಳು ಕಲ್ಲಿನಿಂದ ತಯಾರಿಸಲಾಗಿದೆ. ಇಲ್ಲಿ ದೊರೆತ ಅಗಾಧ ಪ್ರಮಾಣದ ನೂತನ ಶಿಲಾಯುಗದ ಆಯುಧಗಳನ್ನು ಗಮನಿಸಿ ಇದನ್ನು "ಬಳ್ಳಾರಿಯ ನೂತನಶಿಲಾಯುಗ"ದ ಉಪಕರಣಗಳನ್ನು ತಯಾರಿಸುವ ತಾಣವಾಗಿತ್ತು ಎಂದು ಗುರುತಿಸಲಾಗಿದೆ. ಇಲ್ಲಿ ತಯಾರಿಸಿದ ಅಲಗುಗಳು ವಿವಿಧ ಅಳತೆಯದ್ದಾಗಿದೆ. ಅರ್ಧಚಂದ್ರಾಕೃತಿ ಮತ್ತು ಕೊಳವೆಯಾಕಾರದ ಸೀಳುಗಳನ್ನು ತೆಗೆದ ಉಂಡೆಕಲ್ಲುಗಳೂ ಇಲ್ಲಿ ಹೇರಳವಾಗಿ ದೊರಕಿವೆ.

ಈ ಕಾಲಘಟ್ಟದಲ್ಲಿ ಸುಟ್ಟಮಣ್ಣಿನಿಂದ ಗೂಳಿ, ಪಕ್ಷಿಗಳನ್ನು ರಚಿಸಿರುವುದು ತಿಳಿದಿದೆ. ಇವುಗಳಲ್ಲದೆ ಸೂಕ್ಷ್ಮಶಿಲಾಯುಗದ ಕಾಲಮಾನವನ್ನು ಕ್ರಿ.ಪೂ. ೩೫೦೦ ಎಂದು ಗುರುತಿಸಲಾಗಿದೆ. ಈ ಸಾಂಸ್ಕೃತಿಕ ಹಂತದ ಕೆಲವು ಮಹತ್ವದ ಅಂಶಗಳು ಗಮನಾರ್ಹ. ಮೇಲ್ಮೈನಲ್ಲಿ ಕೆಲವು ಆಕೃತಿಗಳು ದೊರಕಿದ್ದು ಅವು ಸಾಕಷ್ಟು ಹಾಳಾಗಿರುವುದರಿಂದ ಕಾಲಮಾನ ನಿರ್ಧರಿಸುವುದು. ಕಷ್ಟಕರವಾಗಿದೆ. ಸೂಕ್ಷ್ಮಶಿಲಾಯುಗದ ಅನೇಕ ಉಪಕರಣಗಳನ್ನು, ಕುರುಗೋಡಿನ ವಜ್ರದುಂಡಿ ಬಸಪ್ಪನ ದೇಗುಲದ ಮುಂದಿನ ದಿಣ್ಣೆಯಲ್ಲಿ ಮತ್ತು

ಜಿಂಕಲಕೊಂಡದ ಹಿಂಭಾಗದಲ್ಲಿ ದೊರಕುತ್ತವೆ. ವಜ್ರದುಂಡಿ ಬಸಪ್ಪನ ದೇಗುಲದ ಎದುರಿನ ಜಾಗದಲ್ಲಿ ಕಣ್ಣು ಕೋರೈಸುವಷ್ಟು ಬಿಳಿಕಲ್ಲಿನ ಸಣ್ಣ ತುಣುಕುಗಳನ್ನು ಕಾಣಬಹುದು. ಇವು ತಯಾರಿಕೆಯಲ್ಲಿ ಉಂಟಾದ ಪುಡಿಚಕ್ಕೆಗಳು. ಅನುಪಯುಕ್ತ ಕಲ್ಲುಚೂರುಗಳು, ಅರೆ ಉಪಕರಣಗಳು, ಸಿದ್ಧ ಉಪಕರಣಗಳು. ಈ ಪ್ರದೇಶವು ಉಪಕರಣಗಳನ್ನು ತಯಾರಿಸುವ ಕಾರ್ಯಾಗಾರದ ಮೊದಲನೆಯ ಹಂತದ್ದೆಂದು ತೋರುತ್ತದೆ. ಜಿಂಕಲಕೊಂಡದ ಹಿಂಭಾಗದಲ್ಲಿ ದೊರೆಯುವ ಅಲಗುಗಳನ್ನು ಜಾಸ್ಪರ್, ಅಗೇಟ್, ಚರ್ಟ್‌ನಿಂದ ಸಿದ್ಧಪಡಿಸಲಾಗಿದೆ.

**ಉಪಕರಣಗಳನ್ನು ತಯಾರಿಸಿದ ವಸ್ತುಗಳು**

ವಜ್ರದುಂಡಿ ಕಲ್ಲಿನಲ್ಲಿ ನೂತನಶಿಲಾಯುಗದ ಆಯುಧಗಳನ್ನು ತಯಾರಿಸಿರುವುದು ಹೇರಳವಾಗಿ ಕಂಡುಬರುತ್ತದೆ. ವಜ್ರದುಂಡಿ ಬಸಪ್ಪ ದೇವಾಲಯದ ಬಳಿ ವಜ್ರದುಂಡಿ ಶಿಲೆಯು ಉಂಡೆಕಲ್ಲುಗಳ ರೂಪದಲ್ಲಿ ಕಾಣಬರುತ್ತವೆ. ಹಾಗೆಯೇ ಬಾಳೇಕೊಳ್ಳದ ಪ್ರದೇಶದಲ್ಲಿ ವಜ್ರದುಂಡಿ ಕಲ್ಲುಗಳು ಹೇರಳವಾಗಿ ದೊರಕುತ್ತವೆ. ನೂತನಶಿಲಾಯುಗದ ಆಯುಧಗಳನ್ನು ಸ್ಥಳೀಯವಾಗಿ ತಯಾರಿಸಲಾಗಿದೆ. ಪಂಚಮುಖಿ ವೀರಭದ್ರನ ಎದುರು ಬೆಟ್ಟದಲ್ಲಿ ನೂತನಶಿಲಾಯುಗದ ಕೊಡಲಿಗಳನ್ನು ಹರಿತವಾಗಿ ಮಾಡಲು ಗ್ರಾನೈಟ್ ಕಲ್ಲಿನಲ್ಲಿ ಸಣ್ಣ ತಗ್ಗನ್ನು ಮಾಡಿ ಸತತವಾಗಿ ಉಜ್ಜಿರುವುದನ್ನು ಅಲ್ಲಲ್ಲಿ ಕಾಣಬಹುದು. ಇಂತಹ ತಗ್ಗನ್ನು ಪಂಚಮುಖಿ ವೀರಭದ್ರನ ಗುಡಿಯ ಮುಂದಿನ ಬೆಟ್ಟಗಳಲ್ಲಿಯೂ ಕಾಣಬಹುದು. ತಯಾರಿಕೆಯ ಪ್ರಕ್ರಿಯೆಯಲ್ಲಿ ತೊಡಗಿದ್ದಾಗ ಕೆಲವು ಕೊಡಲಿಗಳು ಮುರಿದು ಹಾಳಾಗಿರುವುದನ್ನು ಹಾಗೂ ತಯಾರಿಕೆಯ ವಿವಿಧ ಹಂತಗಳಲ್ಲಿರುವ ಕೊಡಲಿಗಳು ಕಂಡುಬರುತ್ತವೆ. ಕೈಗೊಡಲಿಗಳನ್ನು ತಯಾರಿಸುವ ಬೃಹತ್ ತಯಾರಿಕಾ ಪ್ರದೇಶ ಇದಾಗಿಲ್ಲದಿದ್ದರೂ, ತಮ್ಮ ಅಗತ್ಯಕ್ಕೆ ಅನುಗುಣವಾಗಿ ಬೇಕಾಗುವ ಕೊಡಲಿಗಳನ್ನು ಇಲ್ಲಿ ಸಿದ್ಧಪಡಿಸಿಕೊಂಡಿರುವುದಕ್ಕೆ ಅನೇಕ ನಿರ್ದಶನಗಳನ್ನು ಬಾಳೇಕೊಳ್ಳದಲ್ಲಿ ಗುರುತಿಸಬಹುದಾಗಿದೆ. ನೆಲದ ಮೇಲ್ಭಾಗದಲ್ಲಿ ಅಲ್ಲಲ್ಲಿ ಅಂದರೆ ಸಂಗಮೇಶ್ವರ ಗುಡಿ, ಉಜಾಳೇಶ್ವರ ಪೇಟೆಯ ಆಸುಪಾಸಿನಲ್ಲಿ ಅನೇಕ ಅಳತೆಯ ಕೈಗೊಡಲಿಗಳು ದೊರಕಿವೆ. ಈ ಎಲ್ಲಾ ಉಪಕರಣಗಳು ಉತ್ತಮ ರೀತಿಯಲ್ಲಿವೆ.

ಮಸ್ಕಿ ಹಾಗೂ ಸಂಗನಕಲ್ಲಿನ ಉತ್ಖನನದಲ್ಲಿ ಕಂಡುಬಂದಂತೆ ಇಲ್ಲಿಯೂ ಅದೇ ರೀತಿಯ ಅಂಶಗಳು ಕಾಣಸಿಗುತ್ತವೆ. ಸಂಗನಕಲ್ಲಿನ ಉತ್ಖನನದಲ್ಲಿ ಕಂಡುಬಂದ ಮೃತ್ಪಾತ್ರೇ ರಹಿತವಾದ ಹಂತವು ಇಲ್ಲಿ ಇದ್ದಿರಬಹುದು. ಇಲ್ಲಿ ನೂತನಶಿಲಾಯುಗಕ್ಕೆ ಸಂಬಂಧಿಸಿದ ಕೈಯಿಂದ ಸಿದ್ಧಪಡಿಸಿದ ಮೃತ್ಪಾತ್ರೆಗಳು ದೊರಕಿವೆ. ಈ ಹಂತವನ್ನು ನೂತನ ಶಿಲಾ-ತಾಮ್ರಯುಗದ ಆರಂಭಿಕ ಹಂತಕ್ಕೆ ಸೇರಿದವು ಎಂದು ಹೇಳಬಹುದಾಗಿದೆ.

**ವಾಸ್ತವ್ಯದ ನೆಲೆ**

ನೂತನಶಿಲಾಯುಗದ ನೆಲೆಗಳು ಹೆಚ್ಚಾಗಿ ನದಿಗಳ ಅಥವಾ ಉಪನದಿಗಳ ದಂಡೆ ಮೇಲೆ ಅಥವಾ ಸಮೀಪದಲ್ಲಿ ಇರುವುದು ಕಂಡುಬರುತ್ತವೆ. ಫಲವತ್ತಾದ ನೆಲೆ, ದನಕರುಗಳಿಗೆ ಬೇಕಾಗುವ ಹುಲ್ಲುಗಾವಲು, ಇವು ಸಾಮಾನ್ಯವಾಗಿ ಕಂಡುಬರುತ್ತವೆ. ಕುರುಗೋಡಿನ ಬೆಟ್ಟಗಳ ಕಣಿವೆಯಲ್ಲಿ ಪ್ರಸ್ತುತ ಹರಿಯುವ ಸಣ್ಣ ಹಳ್ಳಗಳು ಬೇಸಿಗೆಯನ್ನು ಹೊರತುಪಡಿಸಿ ನೀರಿಗೆ ಬಹಳವಾಗಿ ಅನುಕೂಲವಾಗಿವೆ. ಉಜಾಳೇಶ್ವರ ಪೇಟೆಯ ಬಳಿಯ ಹಿರೇಹಳ್ಳದ ಪ್ರದೇಶ, ಸನಿಹದಲ್ಲಿರುವ ಬೆಟ್ಟದ ತಪ್ಪಲು, ಆದಿಮಾನವನ ವಾಸಕ್ಕೆ ಯೋಗ್ಯವಾದ ಪ್ರದೇಶಗಳಾಗಿವೆ. ಬೆಟ್ಟಗುಡ್ಡಗಳ ಮಧ್ಯದ ಬಯಲಿನಲ್ಲಿ ಅನೇಕ ಕಡೆ ನೀರಿನ ಅವಶ್ಯಕತೆಗೆ ಬೇಕಾಗುವ ನೀರಿನ ದೊಣೆಗಳಿವೆ. ಸುತ್ತಲೂ ಬೃಹತ್ ಕಲ್ಲುಗಳ ಕೋಟೆಯಂಥ ಪ್ರದೇಶವು ಸೂಕ್ತ ರಕ್ಷಣೆ ಒದಗಿಸಿವೆ. ಈ ಬೆಟ್ಟಗುಡ್ಡಗಳಲ್ಲಿ ಕಾಣಬರುವ ಅನೇಕ ಪ್ರಾಣಿಗಳನ್ನು ಆ ಜನರು ಬೇಟೆಯಾಡಿರಬೇಕು. ಬೆಟ್ಟಗಳ ಬುಡದಲ್ಲಿರುವ ಕರಿಮಣ್ಣಿನ ಫಲವತ್ತಾದ ಭೂಮಿ ವ್ಯವಸಾಯಕ್ಕೆ ಅಗತ್ಯವಾದ ಭೂಮಿಯಾಗಿದೆ. ಈ ಪ್ರದೇಶಗಳ ಹತ್ತಿರದಲ್ಲೇ ವಸತಿಗೆ ಯೋಗ್ಯವಾದ ಸ್ಥಳಗಳನ್ನು ಜನರು ಆಯ್ದುಕೊಂಡು ಸೂಕ್ತ ರಕ್ಷಣಾ ವ್ಯವಸ್ಥೆಯಲ್ಲಿ ಬದುಕು ನಡೆಸುತ್ತಿದ್ದರು ಎಂದು ತಿಳಿಯುತ್ತದೆ. ಒಟ್ಟಾರೆ ಈ ಪ್ರದೇಶವನ್ನು ಗಮನಿಸಿದರೆ ಕೆಲವು ನೆಲೆಗಳು ಸಣ್ಣಪುಟ್ಟ ಗುಂಡಿಗಳ ಬಳಿ ಇವೆ. ಇಲ್ಲಿ ಮಳೆಗಾಲದ ನಂತರ ನೀರು ಕಡಿಮೆಯಾಗುತ್ತಿದ್ದರೆ ಚಳಿಗಾಲದಲ್ಲಿ ಸುತ್ತಲಿನ

ಪ್ರದೇಶದಿಂದ ನೀರು ಬಸಿದು ಹಸಿರು ಬೆಳೆಯುವುದಕ್ಕೆ ಸಹಕಾರಿಯಾಗಿತ್ತು. ಪ್ರಾಣಿಗಳ ಆಹಾರಕ್ಕೆ ಉತ್ತಮ ತಾಣವಾದ್ದರಿಂದ ಮನುಷ್ಯನು ಬೇಟೆಯಾಡುವುದಕ್ಕೆ ಉತ್ತಮ ನೆಲೆಯನ್ನು ಇಲ್ಲಿ ಕಂಡುಕೊಂಡಿದ್ದ.

**ಕೈಗೊಡಲಿಗಳು**

ವಜ್ರದುಂಡಿ ಕಲ್ಲುಗಳನ್ನು ಉಪಯೋಗಿಸಿ ಆಯುಧಗಳನ್ನು ತಯಾರಿಸುತ್ತಿದ್ದರು. ಆಯ್ದ ಕಲ್ಲನ್ನು ಒಂದು ಆಕಾರಕ್ಕೆ ತರುವುದು, ನಂತರ ಸಣ್ಣಸಣ್ಣ ಚಕ್ಕೆಗಳನ್ನು ತೆಗೆದು ಸಮತಲ ಮಾಡುವುದು, ಇದಾದನಂತರ ಉಜ್ಜಿ ನಯಮಾಡುವುದು, ನಂತರ ಇಡೀ ಭಾಗವನ್ನು ತಿಕ್ಕಿ ತಿಕ್ಕಿ ಹೊಳೆಯುವಂತೆ ಮಾಡಿರುವುದನ್ನು ಗುರುತಿಸಲಾಗಿದೆ. ಈ ರೀತಿಯ ಹಂತಗಳು ಸಂಗನಕಲ್ಲು, ತೆಕ್ಕಲಕೋಟೆ ಮುಂತಾದ ಕಡೆ ಕಂಡುಬಂದಿದೆ. ಕುರುಗೋಡಿನಲ್ಲೂ ಸಹ ಪಂಚಮುಖಿ ವೀರಭದ್ರ ಹಾಗೂ ಬಾಳೇಕೊಳ್ಳದಲ್ಲಿ ಸಣ್ಣ ಗುಡಿಗಳನ್ನು ದೊಡ್ಡ ಬಂಡೆಗಳ ಹರವಿನ ಮೇಲೆ ಸಿದ್ಧಪಡಿಸಿ ಅಲ್ಲಿ ಕೈಗೊಡಲಿಗಳನ್ನು ಉಜ್ಜಿ ಹೊಳಪಾಗುವಂತೆ ಮಾಡಿರುವುದನ್ನು ಗುರುತಿಸಬಹುದು.

ಈ ಪ್ರದೇಶದಲ್ಲಿ ದೊಡ್ಡ ಕಲ್ಲಿನ ಉಪಕರಣಗಳಲ್ಲದೆ ದ್ವಿಮುಖ ಅಲಗಿನ ನೀಳ ಚಕ್ಕೆಗಳು ಮತ್ತು ಚಕ್ಕೆಗಳನ್ನು ತೆಗೆದ ತಿರುಳುಗಲ್ಲುಗಳನ್ನು ಇಲ್ಲಿ ದೊರಕಿವೆ. ಈ ಅಲಗುಗಳು ಚಾಲ್ಸಿಡೆನಿ, ಜಾಸ್ಪರ್, ಚರ್ಟ್ ಅಗೇಟ್ ಮುಂತಾದ ಶಿಲೆಗಳಲ್ಲಿ ಉಪಯೋಗಿಸಿ ಅಲಗುಗಳನ್ನು ಸಿದ್ಧಪಡಿಸಿದ್ದಾರೆ. ನೀಳ ಚಕ್ಕೆಗಳನ್ನು ಅದರ ತುದಿ ಹಾಗೂ ಒಂದು ತ್ರಿಕೋನಾಕೃತಿಯ ಉಪಕರಣಗಳನ್ನು ಸಿದ್ಧಪಡಿಸಿ ಉಪಯೋಗಿಸಿರುವುದು ಇಲ್ಲಿ ಕಂಡುಬರುತ್ತದೆ. ವಜ್ರದುಂಡಿ ಬಸಪ್ಪ ದೇವಾಲಯದ ಮುಂಭಾಗದ ದಿಣ್ಣೆಯಲ್ಲಿ ವ್ಯಾಪಕವಾಗಿ ಅಲಗಿನ ತುಂಡುಗಳು, ನಿಷ್ಪ್ರಯೋಜಕವೆಂದು ನಿರಾಕರಿಸಿದ ತುಂಡುಗಳು, ಉಪಕರಣಕ್ಕೆ ಬೇಕಾದ ಮೂಲ ಶಿಲೆಗಳನ್ನು ಗುರುತಿಸಬಹುದು. ಕೋರ್‌ಗಳು ಹೀಗೆ ಜಿಂಕಲಕೊಂಡ ಗುಡ್ಡದ ಬಳಿಯೂ ಹೆಚ್ಚಿನ ಅಲಗಿನ ತುಂಡುಗಳು ದೊರಕುತ್ತವೆ.

**ಮೃತ್ಪಾತ್ರೆಗಳು**

ಇಲ್ಲಿನ ಮೃತ್ಪಾತ್ರೆಗಳನ್ನು ಕೈಯಿಂದಲೇ ಸಿದ್ಧಪಡಿಸಲಾಗಿದೆ. ಇವು ನಸುಕಂದು ಬಣ್ಣ ಹಾಗೂ ಕಪ್ಪೊತ್ತಿದ ಪಾತ್ರೆಗಳು ಇವುಗಳ ಮೇಲೆ ತೆಳ್ಳನೆಯ ಲೇಪನವಿದ್ದು, ಕೆಲವು ಒರಟಾದ ಮೇಲ್ಮೈಯನ್ನು ಹೊಂದಿವೆ. ಇಲ್ಲಿ ದೊಡ್ಡ ಗುಡಾಣಗಳು, ಮಧ್ಯಮ ಆಕಾರದ ಉಬ್ಬಿದ ಹೊಟ್ಟೆಯ ಗಡಿಗೆಗಳು, ಬಟ್ಟಲು, ಮುಚ್ಚಳ ಮುಂತಾದ ಆಕಾರಗಳಲ್ಲಿ ಉಪಯೋಗವಾಗುತ್ತಿದ್ದವು. ಗುಡಾಣಗಳನ್ನು ಶವ ಸಂಸ್ಕಾರಕ್ಕೂ ಉಪಯೋಗಿಸಿರುವುದು ತೆಕ್ಕಲಕೋಟೆಯ ಉತ್ಖನನದಲ್ಲಿ ಕಂಡುಬಂದಿವೆ. ಈ ಮೃತ್ಪಾತ್ರೆಗಳು ನೂತನ ಶಿಲಾಯುಗ-ತಾಮ್ರ ಶಿಲಾಯುಗಕ್ಕೆ ಸೇರಿವೆ. ಕೆಲವು ಮೃತ್ಪಾತ್ರೆಗಳ ಮೇಲೆ ರೇಖಾಚಿತ್ರಗಳನ್ನು ಬಿಡಿಸಲಾಗಿದೆ. ಕೆಲವು ಮೃತ್ಪಾತ್ರೆಯ ಬಾಯಿಯ ಭಾಗಕ್ಕೆ ಬೆರಳನ್ನು ಒತ್ತಿ ಉದ್ದಕ್ಕೂ ಮಣಿಗಳ ಹಾಗೆ ಸಿಂಗರಿಸಿರುವುದು ಕಂಡುಬರುತ್ತದೆ. ಅದೇ ರೀತಿ ಚವುಟುವುದರ ಮೂಲಕವೂ ಸಿಂಗರಿಸಲಾಗಿದೆ. ಕೆಲವು ರೇಖಾ ಚಿತ್ರಗಳು ಗಮನ ಸೆಳೆಯುತ್ತವೆ. ಕೆಲವು ರೀತಿಯ ಚಿಕ್ಕ ಆಕಾರಗಳನ್ನು ಅಂಟಿಸಿರುವುದೂ ಕಂಡುಬರುತ್ತವೆ. ಇವು ಮನುಷ್ಯಾಕೃತಿಯನ್ನು ಹೋಲುತ್ತವೆ. ಕುರುಗೋಡಿನ ಪೂರ್ವಕ್ಕೆ ಬೂದದಿನ್ನೆಗಳು ಇದ್ದ ಪ್ರದೇಶ ಕಂಡುಬರುತ್ತದೆ. ಕುರುಗೋಡಿಗೆ ಹತ್ತಿರದ ಕಪ್ಪಗಲ್ಲಿನಲ್ಲಿ ಬೂದಿದಿನ್ನೆಗಳ ಉತ್ಖನನವನ್ನು ನಡೆಸಲಾಗಿದೆ. ಹಾಗೆಯೇ ಗಾದಿಗನೂರು, ಕುಡುತಿನಿಯ ಬಳಿಯೂ ಬೂದಿದಿನ್ನೆಗಳಿವೆ. ರಾಬರ್ಟ್ ಬ್ರೂಸ್‌ಫೂಟ್ ೧೮೮೭ರಲ್ಲಿ ಕೆಲವು ಬೂದಿದಿನ್ನೆಗಳು ಮತ್ತು ಸುತ್ತಮುತ್ತಲಿನ ಶಿಲಾಯುಗದ ಸಂಸ್ಕೃತಿಯ ನೆಲೆಗಳನ್ನು ಪರಿಶೀಲಿಸಿ, ಅವುಗಳ ನೂತನ ಶಿಲಾಯುಗದ ಕಾಲದ್ದೆಂದು ನಿರ್ಧರಿಸಿದ್ದರು. ಸಗಣಿಯನ್ನು ಸುಮಾರು ೧೨೦೦ ಸೆಂಟಿ ಗ್ರೇಡ್‌ನಲ್ಲಿ ಸುಡುವುದರಿಂದ ಬೂದಿದಿನ್ನೆಗಳನ್ನು ನಿರ್ಮಾಣವಾಗಿವೆ ಎಂದು ಧೃಡಪಡಿಸಿದ್ದಾರೆ. ಡಾ. ಪದ್ಮಯ್ಯನವರ ಪ್ರಕಾರ ಕಾಡು ಪ್ರಾಣಿಗಳಿಂದ ದೂರವಿರಲು ಇಂತಹ ಸಗಣಿಯನ್ನು ಸುಡುವ ಕ್ರಿಯೆ ನಡೆಯುತ್ತಿತ್ತು ಎಂದು ತಿಳಿದುಬರುತ್ತದೆ. ಡಾ.ಸುಂದರ ಅವರು ಅಭಿಪ್ರಾಯ ಪಟ್ಟಿರುವಂತೆ ಇವು ದೊಡ್ಡ ಪ್ರಮಾನದ ಸ್ಮಾರಕ ದಹನಗಳಿಂದ ಉಂಟಾದುವು ಎಂದು ತಿಳಿಯಬಹುದಾಗಿದೆ.

ಬೂದಿಗುಡ್ಡಗಳು ಬಾಳೇಕೊಳ್ಳದ ಬುಡದಲ್ಲಿ ಉಜಾಳೇಶ್ವರ ದೇವಾಲಯದ ಬಳಿ ಕಂಡುಬಂದಿವೆ. ಹಾಗೆಯೆ ಬಾದನಹಟ್ಟಿಯಲ್ಲೂ ಕಂಡುಬಂದಿವೆ.

**ಕಬ್ಬಿಣ ಯುಗದ ಬೃಹತ್ ಶಿಲಾಸಂಸ್ಕೃತಿ**

ಬಳ್ಳಾರಿ ಜಿಲ್ಲೆಯ ಹಲವು ಸ್ಥಳಗಳಲ್ಲಿ ಈ ಸಂಸ್ಕೃತಿಯ ಜನ ವಾಸ್ತವ್ಯವಿದ್ದ ಸಾಂಸ್ಕೃತಿಕ ಅವಶೇಷಗಳು ದೊರಕಿವೆ. ಜೊತೆಗೆ ಈ ಹಂತದ ಹಿಂದಿನ ಶಿಲಾ-ತಾಮ್ರಯುಗ, ಅಲ್ಲದೆ ಬೃಹತ್‌ಶಿಲಾಯುಗದ ತರುವಾಯದ ಆದಿಇತಿಹಾಸ ಕಾಲದ ಜನವಾಸ್ತವ್ಯದ ಅವಶೇಷಗಳೂ ಕಂಡುಬಂದಿವೆ. ಹೀಗೆ ಮೂರು ಸಾಂಸ್ಕೃತಿಕ ಹಂತಗಳ ಜನರ ನೆಲಗಳು ಮಸ್ಕಿ, ಸಂಗನಕಲ್ಲು, ಚಂದ್ರವಳ್ಳಿ, ಬ್ರಹ್ಮಗಿರಿ ಮುಂತಾದ ಕಡೆಗಳಲ್ಲಿವೆ. ಆದರೆ ಜನ ವಾಸ್ತವ್ಯದ ನೆಲೆಗಳು ಬಳ್ಳಾರಿ, ರಾಯಚೂರು ಪ್ರದೇಶದಲ್ಲಿ ದೊರಕಿವೆ. ಉತ್ಖನನಗೊಂಡ ಪ್ರದೇಶಗಳಲ್ಲಿ ಅಂದರೆ ಸಂಗನಕಲ್ಲು, ಟಿ.ನರಸೀಪುರ ಇಲ್ಲಿ ಶಿಲಾ-ತಾಮ್ರಯುಗ ಸಂಸ್ಕೃತಿಯ ಅವಶೇಷಗಳು ಮತ್ತು ಕಬ್ಬಿಣ ಯುಗದ ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಗಣನೀಯ ಪ್ರಮಾಣದಲ್ಲಿ ದೊರಕಿವೆ. ಇಲ್ಲಿ ಎರಡು ಪರಸ್ಪರ ಸಂಬಂಧವಿದ್ದ ಬಗ್ಗೆ ಸ್ಪಷ್ಟವಾಗುತ್ತದೆ.

**ವಾಸ್ತವ್ಯದ ನೆಲೆಗಳು**

ಕಲ್ಲು ಬಂಡೆಗಳು, ಚಪ್ಪಡಿಗಳು ದೊರೆಯುವ ಬೆಟ್ಟಗುಡ್ಡಗಳ ಬಳಿ ಶಿಲಾಗೋರಿಗಳಿರುವುದು ಸಹಜ. ಬೆಟ್ಟಗುಡ್ಡಗಳ ತಪ್ಪಲಲ್ಲಿ, ಬೆಟ್ಟಗಳ ಸಮತಟ್ಟಾದ ಪ್ರದೇಶಗಳಲ್ಲಿ ಶಿಲಾಮಯವಾದ ಎರಡು ಭೂಮಿಗಳಲ್ಲಿ ಇಂಥ ನಿರ್ಮಿತಿಗಳಾಗುತ್ತಿದ್ದವೇ ಹೊರತು ಫಲವತ್ತಾದ ಭೂಮಿಯಲ್ಲಿ ಇವು ಹೆಚ್ಚಾಗಿ ಕಂಡುಬಂದಿಲ್ಲ. ಇಲ್ಲಿಯ ಜನರು ಅನೇಕ ಮಣಿಗಳು ಹಾಗೂ ಬಳೆಗಳನ್ನು ಉಪಯೋಗಿಸಬೇಕು. ಅಲಗುಗಳನ್ನು ಅಗೇಟ್, ಚರ್ಟ್ ಜಾಸ್ಪರ್ ಮುಂತಾದ ಶಿಲೆಗಳನ್ನು ಉಪಯೋಗಿಸಿ ತಯಾರಿಸಿದ್ದಾರೆ. ಇದೇ ಶಿಲೆಗಳಿಂದ ಮಣಿಗಳನ್ನು ವಿವಿಧ ಆಕಾರದಲ್ಲಿ ಮಾಡಿರುವುದು ಪಕ್ಕದ ತೆಕ್ಕಲಕೋಟೆ ಹಾಗೂ ಸಂಗನಕಲ್ಲಿನಲ್ಲಿ ಕೂಡ ಕಾಣಬಹುದು. ಇಲ್ಲಿ ವಿವಿಧ ರೀತಿಯ ಶಿಲೆಗಳನ್ನು ಉಪಯೋಗಿಸಿ ಅಲಗುಗಳನ್ನು ತಯಾರಿಸಿರುವುದು ಕಂಡುಬರುತ್ತದೆ. ಅಲಗುಗಳನ್ನು ಸಿದ್ಧಪಡಿಸಲು ವಿವಿಧ ಶಿಲೆಗಳ ಉಪಯೋಗ ತಿಳಿದಿದ್ದ ಜನರು ಮಣಿಗಳ ತಯಾರಿಕೆಯಲ್ಲಿಯೂ ಈ ಶಿಲೆಗಳನ್ನು ಉಪಯೋಗಿಸಿರಬೇಕು. ಇದಕ್ಕೆ ಪೂರಕವಾಗಿ ಕುರುಗೋಡಿನಲ್ಲಿ ಬಾಳೆಕೊಳ್ಳದಲ್ಲಿ ಚರ್ಟ್‌ನಿಂದ ಸಿದ್ಧಪಡಿಸಿದ ಒಂದು ಮಣಿ ದೊರಕಿದೆ.

**ಕಲೆ**

ನೂತನಶಿಲಾಯುಗದ ಜನರು ಮಣ್ಣಿನಗೊಂಬೆಗಳನ್ನು ಹಾಗೂ ಕಲ್ಲಾಸರೆಗಳಲ್ಲಿ ಅನೇಕ ವರ್ಣಚಿತ್ರಗಳನ್ನು ಬಿಡಿಸಿರುವುದು ಬಳ್ಳಾರಿ ಜಿಲ್ಲೆಯ ಅನೇಕ ಕಡೆಗಳಲ್ಲಿ ಕಾಣಬಹುದು. ಸಂಗನಕಲ್ಲಿನಲ್ಲಿ ಅನೇಕ ಆಕರ್ಷಕ ಸರಳಾಕೃತಿಗಳು, ಹಾಗೆಯೇ ರಾಯಚೂರು ಜಿಲ್ಲೆಯ ವಟಗಲ್‌ನಲ್ಲಿ ಸ್ತ್ರೀ ಆಕೃತಿಯನ್ನು ಮೃತ್ಪಾತ್ರೆಯ ಮೇಲೆ ಅಂಟಿಸಿರುವುದು ಕಂಡು ಬರುತ್ತದೆ. ತಾಮ್ರದ ತಂತಿಗಳು ತೆಕ್ಕಲಕೋಟೆ ಹಾಗೂ ವಟಗಲ್‌ನಲ್ಲಿ ದೊರಕಿದೆ. ಅಲ್ಲದೆ ರಾಯಚೂರು ಬಳಿಯ ವಟಗಲ್‌ನಲ್ಲಿ ಮಹಾರಾಷ್ಟ್ರದ ಚಂದೋಲಿಯ ರೀತಿಯ ಶವಸಂಸ್ಕಾರ ಪದ್ಧತಿ ರೂಢಿಯಲ್ಲಿದ್ದುದುರ ಬಗ್ಗೆ ಮಾಹಿತಿಯಿದೆ. ಮಹಾರಾಷ್ಟ್ರದ ಚಾಂದೋಲಿಯಲ್ಲಿ ದೊರೆತ ಮಗುವಿನ ಅಸ್ಥಿಪಂಜರದ ಕತ್ತಿನ ಸುತ್ತ ತಾಮ್ರದ ಮಣಿಗಳನ್ನು ಪೋಣಿಸಿದ ಸರ ದೊರೆತಿದೆ. ತಾಮ್ರದ ದಪ್ಪ ತಂತಿಯ ಬಳೆಗಳು ಸಾಮಾನ್ಯ, ಇಲ್ಲಿನ ರೇಖಾ ಚಿತ್ರದಲ್ಲಿ ಆಭರಣಗಳನ್ನು ಧರಿಸಿರುವುದು ಕಂಡುಬಂದಿವೆ.

ಕುರುಗೋಡಿನ ಗವಿ ರೇಖಾಚಿತ್ರಗಳಲ್ಲಿ ಆಕಳುಮ, ಜಿಂಕೆ, ಹುಲಿ, ಮನುಷ್ಯರ ಛಾಯಾ-ಕೃತಿಗಳು, ಕೈಹಿಡಿದು ನರ್ತಿಸುವ ನೃತ್ಯ ಸಮೂಹ, ಬೇಟೆ ಚಿತ್ರಣಗಳನ್ನು ಕಾಣಬಹುದು. ಗೂಳಿಯ ಚಿತ್ರ, ಸಮೂಹ ನೃತ್ಯ ಚಿತ್ರಗಳು ಇವು ಪಿಕ್ಕಳಿಹಾಳು, ತೆಕ್ಕಲಕೋಟೆ ಹಾಗೂ ವಟಗಲ್ ವರ್ಣಚಿತ್ರಗಳಲ್ಲಿ ಕಾಣಬಹುದು, ಇವು ಶಿಲಾ-ತಾಮ್ರಯುಗಕ್ಕೆ ಸೇರಿದವು. ಅದೇ ರೀತಿ ಕುಟ್ಟಿ ಸಿದ್ಧಪಡಿಸಿದ ಬಯಲು ಬಂಡೆಯ ರೇಖಾಚಿತ್ರಗಳು ಹಾಗೂ ತಂತ್ರಗಾರಿಕೆಯ ರೇಖಾ ಆಕೃತಿಗಳು, ಗೂಳಿ, ಹುಲಿ ಮುಂತಾದ ಆಕೃತಿಗಳಾಗಿದ್ದು ಅವು ಶಿಲಾ-ತಾಮ್ರಯುಗದ ಪಶುಸಂಗೋಪನೆಗೆ ಸಂಬಂಧಿಸಿದ ಜನರದ್ದಾಗಿತ್ತೆಂದು ನಿರ್ಧರಿಸಲಾಗಿದೆ. ಈ ರೀತಿಯ ಚಿತ್ರಗಳು ಕುರುಗೋಡಿನ ಅನೇಕ ಸ್ಥಳಗಳಲ್ಲಿ ಅಂದರೆ ಪಂಚಮುಖಿ ವೀರಭದ್ರ, ಬಾಳೇಕೊಳ್ಳದಲ್ಲಿ ರೇಖಾಚಿತ್ರಗಳಿದ್ದು ಅವು ಶಿಲಾ-

ತಾಮ್ರಯುಗಕ್ಕೆ ಸೇರಿವೆ. ಫಲವತ್ತಾದ ಭೂಮಿಯಲ್ಲಿ ರೇಖಾಚಿತ್ರಗಳು ವಿರಳ. ಈ ಲೇಖನದಲ್ಲಿ ಕೇವಲ ಕಾಲಮಾನಕ್ಕೆ ಮಾತ್ರ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಆದರೆ ಇದರ ವಿವರಣೆಯನ್ನು ಮುಂದಿನ ಲೇಖನದಲ್ಲಿ ಚರ್ಚಿಸಲಾಗಿದೆ.

ಕಬ್ಬಿಣದ ನಿಕ್ಷೇಪದ ಪ್ರದೇಶ, ಅಲಂಕಾರಿಕ ವಸ್ತುಗಳಾದ ಮಣಿಗಳ ತಯಾರಿಕೆಯ ಪ್ರದೇಶಗಳಲ್ಲಿ ಕಲ್ಗೋರಿ ನೆಲೆಗಳಿವೆ. ಈ ಕಾಲಘಟ್ಟದ ಜನರು ನೀರಿನ ವಿವಿಧ ಉಪಯೋಗಗಳನ್ನು ಕಂಡುಕೊಂಡಿದ್ದರಿಂದ ನೀರು ದೊರಕುವ ಸ್ಥಳಗಳಲ್ಲಿ ಕಲ್ಗೋರಿಗಳು ಕಾಣಬರುತ್ತವೆ.

ಕಲ್ಲುಗಳನ್ನು ವಿವಿಧ ಆಕಾರದಲ್ಲಿ ಕತ್ತರಿಸುವುದು, ಉಪಕರಣಗಳನ್ನು ಬಳಸಿ ವಿಶಿಷ್ಟ ವಾಸ್ತು ರಚನೆಯ ಕಲ್ಗೋರಿಗಳ ನಿರ್ಮಾಣ ಮಾಡುವುದು ಇವರಿಗೆ ಚೆನ್ನಾಗಿ ಪರಿಚಯವಿದ್ದಿರಬೇಕು. ಕಬ್ಬಿಣದ ವಿವಿಧ ಗೃಹೋಪಯೋಗಿ ವಸ್ತುಗಳು, ದಿನ ನಿತ್ಯದ ಬಳಕೆಗೆ ಬೇಕಾಗುವ ಸಾಮಾನು ಸರಂಜಾಮುಗಳನ್ನು ತಯಾರಿಸುವಲ್ಲಿ ಇವರು ನಿಪುಣರಾಗಿದ್ದರು.

ಈ ಸಂಸ್ಕೃತಿಯ ಜನ ಬಳಸುತ್ತಿದ್ದ ಲೇಪನವುಳ್ಳ ಪಾತ್ರೆಗಳು ಹಾಗೂ ತೆಳ್ಳನೆಯ ಹೊಳಪು ರಹಿತ ಪಾತ್ರೆಗಳು, ಸಾಮಾನ್ಯ ಗಾತ್ರದ ಪಾತ್ರೆಗಳು ಇವುಗಳನ್ನು ತಿರುಗಣಿ ಚಕ್ರದ ಮೇಲೆ ಮಾಡಿದ್ದರೆ, ದೊಡ್ಡ ಪಾತ್ರೆಗಳನ್ನು ಕೈಯಿಂದ ಸಿದ್ಧಪಡಿಸಿದ್ದಾರೆ. ತೆಳು ಲೇಪನದ ಕೆಂಪು ಮಸುಕು ಪಾತ್ರೆಗಳು, ಕಪ್ಪು ಕೆಂಪು ದ್ವಿವರ್ಣ ಪಾತ್ರೆಗಳು, ಕೆಂಪು, ಕಪ್ಪು ಬಣ್ಣದ ಪಾತ್ರೆಗಳು, ಕೊಡ, ಗುಡಾಣ, ಬಾನಿ, ಇಂತಹ ನಾನಾ ಪ್ರಕಾರಗಳಲ್ಲಿ ಈ ಪಾತ್ರೆಗಳು ದೊರೆಯುತ್ತವೆ. ಕುರುಗೋಡಿನಲ್ಲಿ ಅನೇಕ ರೀತಿಯ ಕಪ್ಪು-ಕೆಂಪು ಬಣ್ಣದ ದ್ವಿವರ್ಣದ ಪಾತ್ರೆಗಳ ಚೂರುಗಳು, ಅದರಲ್ಲೂ ಬೋಗುಣಿಯ ತರದ ದೊಡ್ಡ ಚೂರುಗಳು ಕಾಣಸಿಕ್ಕಿವೆ. ಕೆಲವು ಕಪ್ಪು, ಕೆಂಪು ಪಾತ್ರೆಗಳಲ್ಲಿ ಬಿಳಿ ಬಣ್ಣದ ರೇಖಾಚಿತ್ರಗಳಿವೆ. ಇವು ಸರಳವಾದವು, ವಿರುದ್ಧ ದಿಕ್ಕಿನಲ್ಲಿ ಬೇರೆಯಾಗಿರುವ ಸಮಾನಾಂತರದ ನಾಲ್ಕೈದು ಗಿಡ್ಡ ರೇಖೆಗಳನ್ನು ಜೋಡಿಸಿ ಇವುಗಳನ್ನು ರಚಿಸಲಾಗಿದೆ. ಒಂದೆರಡು ಪಾತ್ರೆಗಳ ಚೂರಿನಲ್ಲಿ ಗೀಚಿದ ಚಿತ್ರವಿದೆ. ಹಾಲುಬಾವಿಯ ಬಳಿ ಕೆಲವು ಬೃಹತ್ ಶಿಲಾಗೋರಿಗಳು ಕಂಡುಬಂದಿವೆ.

**ಅಲಂಕಾರ ಸಾಧನಗಳು**

ಅನೇಕ ಬಗೆಯ ಮಣಿಗಳನ್ನು ಅಗೇಟ್, ಜಾಸ್ಪರ್ ಮುಂತಾದ ಶಿಲೆಗಳಿಂದ ತಯಾರಿಸಿದ್ದಾರೆ, ಕೆಲವೊಮ್ಮೆ ಶಂಕದ ಬಳೆಯನ್ನು ತಯಾರಿಸಿ ತೊಟ್ಟಿರಬೇಕು. ಕುರುಗೋಡಿನ ಬಾಳೇಕೊಳ್ಳದ ಪೂರ್ವಕ್ಕಿರುವ ಇಳಿಜಾರಿನಲ್ಲಿ ಕತ್ತರಿಸಿದ ಶಂಖದ ಬಳೆಯ ಚೂರುಗಳು ಕಂಡುಬಂದಿವೆ. ಅಂದರೆ ಇತರ ನೆಲೆಗಳಂತೆ ಇವರೂ ಕೂಡ ಶಂಖವನ್ನು ಉಪಯೋಗಿಸಿದ್ದಾರೆ.

**ಶವಕುಣಿಗಳು**

ವೃತ್ತಾಕಾರದ ಶವಕುಣಿಗಳು ಸಂಗಮೇಶ ದೇವಾಲಯದ ಹಿಂಬದಿಯಲ್ಲಿ ಹಾಗೂ ಬೆಟ್ಟದ ಮೇಲೆ ಇತ್ತೆಂದು ಗುರುತಿಸಲಾಗಿದೆ. ಈ ಸ್ಥಳದಲ್ಲಿದ್ದ ವೃತ್ತಾಕಾರದ ಶವಕುಣಿಯನ್ನು ವ್ಯವಸಾಯ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಲಾಗಿದೆ. ಆದರೆ ಆ ಪ್ರದೇಶದಲ್ಲಿ ಬೃಹತ್‌ಶಿಲಾಸಂಸ್ಕೃತಿಯ ಮೃತ್ಪಾತ್ರೆಗಳು ಹೇರಳವಾಗಿ ದೊರಕುತ್ತವೆ. ಕಪ್ಪು, ಕಪ್ಪು-ಕೆಂಪು ಬಣ್ಣದ ದ್ವಿವರ್ಣದ ಪಾತ್ರೆಗಳು ಹೇರಳವಾಗಿ ದೊರಕುತ್ತವೆ. ಬೃಹತ್‌ಶಿಲಾಯುಗದ ಸಂಸ್ಕೃತಿಯ ಜನರು ಸಾಮಾನ್ಯವಾಗಿ ಬಳಸುತ್ತಿದ್ದ ಈ ಬಗೆಯ ಪಾತ್ರೆಗಳ ಚೂರು ಈ ಪ್ರದೇಶದಲ್ಲಿ ದೊರಕಿವೆ. ಸಾಮಾನ್ಯವಾಗಿ ಕೆಲವು ಕಲ್ಗೋರಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮೃತ್ಪಾತ್ರೆಗಳಿರುತ್ತವೆ. ಬೃಹತ್ ಶಿಲಾಗೋರಿಗಳು ಹಾಳಾದಾಗ ಹೂತಿಟ್ಟ ಈ ಪಾತ್ರೆಗಳನ್ನು ಹೊರತೆಗೆದು ಹಾಕಿದಾಗ ಸಣ್ಣ ಸಣ್ಣ ಚೂರುಗಳಾಗಿರುವುದನ್ನು ಕಾಣಬಹುದು.

ಶವಸಂಸ್ಕಾರಕ್ಕಾಗಿ ನಾನಾ ಪ್ರಕಾರದ ಗೋರಿಗಳನ್ನು ಈ ಜನರು ನಿರ್ಮಿಸಿದ್ದರು. ದಾರಿ ಕೋಣೆ, ಕಂಡಿಕೋಣೆ, ಜಂಬಿಟ್ಟಿಗೆ ಪ್ರಸ್ಥಭೂಮಿಯ ಆಳವಾಗಿ ಕೊರೆದ ಕೋಣೆ, ಮಣ್ಣಿನ ಶವಪೆಟ್ಟಿಗೆಗಳು, ದುಂಡು ವೃತ್ತಗಳು, ನಿಲಸಗಲ್ಲುಗಳು, ಕಲ್ಲುಕುಂಟೆಗಳು ಸಾಮಾನ್ಯ ರೂಪಗಳು. ಇಲ್ಲಿ ಎರಡನೇ ಬಾರಿಗೆ ಶವಸಂಸ್ಕಾರ ಮಾಡಲಾಗಿರುತ್ತದೆ. ಕೆಲವು ಗೋರಿಗಳಲ್ಲಿ ಒಂದಕ್ಕಿಂತ ಹೆಚ್ಚು

ವ್ಯಕ್ತಿಯ ಅಸ್ಥಿಪಂಜರ, ಕಬ್ಬಿಣದ ಮತ್ತು ಕಲ್ಲಿನ ಆಯುಧಗಳು, ಮಣಿಗಳು ದೊರಕಿವೆ. ಈ ತೆರನಾದ ರೂಪಗಳು ಕರ್ನಾಟಕದಲ್ಲಿ ಅನೇಕ ಕಡೆ ಕಂಡುಬಂದಿವೆ. ಬೃಹತ್ ಶಿಲೆಗಳನ್ನು ಒಂದರ ಪಕ್ಕದಲ್ಲಿ ಒಂದನ್ನಿಟ್ಟು ಮಧ್ಯದಲ್ಲಿ ಕಲ್ಲಿನ ಚೆಕ್ಕೆಯಿಂದ ತುಂಬಿರುವಂತವು, ಕುರುಗೋಡಿನಲ್ಲಿ ದೊರಕಿವೆ. ಹಾಲುಬಾವಿ ಬಳಿ ಬೃಹತ್ ಶಿಲಾಗೋರಿಗಳು ಇದ್ದ ಬಗ್ಗೆ ತಿಳಿದುಬಂದಿದೆ. ಹಾಗೆಯೇ ಬಾದನಹಟ್ಟಿ, ಉಜಾಳ ಪೇಟೆಯ ಬಳಿ ಬೂದಿದಿಬ್ಬಗಳು ಇದ್ದ ಬಗ್ಗೆ ಮಾಹಿತಿಯಿದೆ. ಇದರಿಂದ ಪ್ರಾಗಿತಿಹಾಸ ಕಾಲದಿಂದ ಇಂದಿನವರೆಗೂ ಕುರುಗೋಡು ಸಂಸ್ಕೃತಿಯ ಬೀಡಾಗಿತ್ತು ಎನ್ನುವುದನ್ನು ಕಾಣಬಹುದು.

**ಪರಾಮರ್ಶನ ಗ್ರಂಥಗಳು**

೧. ಕೃಷ್ಣಮೂರ್ತಿ ಎಂ.ಎಸ್., ೧೯೭೭, ಕುರುಗೋಡು ಆನ್ ಆರ್ಕಿಯಾಲಾಜಿಕಲ್ ನೋಟ್, ಆರ್ಕಿಯಾಲಾಜಿಕಲ್ ಸ್ಟಡೀಸ್, ಮೈಸೂರು ವಿಶ್ವಿವಿದ್ಯಾನಿಲಯ, ಮೈಸೂರು.

೨. ಸುಂದರ ಅ., ೧೯೯೪, ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೩.ಫೂಟ್ ಆರ್.ಬಿ., ೧೯೧೬, ದಿ ಫೂಟ್ ಕಲೆಕ್ಷನ್ ಆಫ್ ದಿ ಇಂಡಿಯನ್ ಪ್ರಿ ಹಿಸ್ಟಾರಿಕ್ ಆಂಡ್ ಪ್ರೋಟೋ ಹಿಸ್ಟಾರಿಕ್ ಆಂಟಿಕ್ವಿಟೀಸ್, ನೋಟ್ಸ್ ಆನ್ ದೇರ್ ಏಜಸ್ ಆಂಡ್ ಡಿಸ್ಟ್ರಿಬ್ಯೂಷನ್, ಮದ್ರಾಸ್.

೪. ಅಭಿಶಂಕರ್ ಬಿ., ೧೯೭೨, ಬಳ್ಳಾರಿ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್, ಮೈಸೂರ್ ಸ್ಟೇಟ್ ಗ್ಯಾಸೆಟಿಯರ್ಸ್, ಬೆಂಗಳೂರು

## ೨. ಪ್ರಾಕ್ಚಾರಿತ್ರಿಕ ಚಿತ್ರಕಲೆ

ಕುರುಗೊಡು ಪರಿಸರವು ಸಶಕ್ತವಾದ ದಖನ್ ಪ್ರಸ್ಥಭೂಮಿಯಲ್ಲಿರುವುದರಿಂದ ಸಹಜವಾಗಿ ಪ್ರಾಚೀನ ಕಾಲದಿಂದಲೂ ಜನವಸತಿಗೆ ತಕ್ಕುದಾದ ಪ್ರದೇಶವಾಗಿದೆ. ಶಿಲಾಯುಗದಲ್ಲಿ ಮಾನವ ಜೀವನ ಚಟುವಟಿಕೆಗೆ ಪೂರಕವಾದ ಬೆಟ್ಟಗುಡ್ಡಗಳು, ಅಲ್ಲಲ್ಲಿ ನೀರಿನ ಮೂಲಗಳು ಇಲ್ಲಿರುವುದರಿಂದ ಆ ಕಾಲದ ಮಾನವ ತನ್ನ ವಾಸ್ತವ್ಯಕ್ಕೆ ಈ ಪ್ರದೇಶವನ್ನು ಆಯ್ದುಕೊಂಡು ಜೀವನ ನಡೆಸಿರುವುದು ಪ್ರಾಚ್ಯಾವಶೇಷಗಳಿಂದ ತಿಳಿದು ಬರುತ್ತದೆ. ಇಲ್ಲಿ ಹಳೆಯ ಶಿಲಾಯುಗ, ಮಧ್ಯಶಿಲಾಯುಗ, ನೂತನಶಿಲಾಯುಗ, ಕಬ್ಬಿಣ ಯುಗದ ಬೃಹತ್‌ಶಿಲಾಯುಗ, ಆದಿಚಾರಿತ್ರಿಕ ಮತ್ತು ಚಾರತ್ರಿಕಯುಗ ಹೀಗೆ ನಿರಂತರವಾಗಿ ಮಾನವ ಜೀವನ ಸಂಸ್ಕೃತಿ ಎಡಬಿಡದೆ ಬೆಳೆದುಬಂದಿರುವುದು ಈ ಪ್ರದೇಶದ ಭೌಗೋಳಿಕ ಮತ್ತು ಚಾರಿತ್ರಿಕ ಮಹತ್ವವನ್ನು ಬಿಂಬಿಸುತ್ತದೆ.

ಅಕ್ಷರವಿನ್ನೂ ಉಗಮವಾಗಿರುವ ಶಿಲಾಯುಗದಲ್ಲಿ ಮಾನವ ತನ್ನ ಭಾವನೆಗಳನ್ನು ಚಿತ್ರಗಳ ರೂಪದಲ್ಲಿ ಅಭಿವ್ಯಕ್ತಿಸುತ್ತಿದ್ದರು. ಅಂಥ ಚಿತ್ರಗಳು ಅವನ ಖಾಯಂ ವಾಸಸ್ಥಾನಗಳಾಗಿದ್ದ ಗವಿಗಳಲ್ಲಾಗಲಿ ಇಲ್ಲವೇ ತಾತ್ಕಾಲಿಕ ಆಶ್ರಯ ತಾಣಗಳಾಗಿದ್ದ ಕಲ್ಲಾಸರೆಗಳಲ್ಲಿ ಮತ್ತು ಒಂದು ನಿರ್ದಿಷ್ಟ ಪ್ರದೇಶದ ಬಯಲು ಬಂಡೆಗಳಲ್ಲಿ ಕಂಡುಬರುತ್ತವೆ. ಗವಿ ಮತ್ತು ಕಲ್ಲಾಸರೆಗಳಲ್ಲಿ ವರ್ಣಚಿತ್ರ (ಸಾಮಾನ್ಯವಾಗಿ ಕೆಂಪು)ಗಳಿದ್ದರೆ, ಬಯಲು ಬಂಡೆಗಳಲ್ಲಿ ಕೊರೆದ ಇಲ್ಲವೇ ಕುಟ್ಟಿ ಮೂಡಿಸಿದ ಚಿತ್ರಗಳಿರುತ್ತವೆ. ಮನುಷ್ಯ ಹಾಗೂ ಪ್ರಾಣಿ (ವಿಶೇಷವಾಗಿ ಸಾಕುಪ್ರಾಣಿಗಳು) ಸಂಬಂಧಿತ ವಿಷಯದ ಸುತ್ತ ಕೇಂದ್ರೀಕೃತವಾಗಿರುವ ಇಂಥ ಚಿತ್ರಗಳಿಂದ ಆ ಕಾಲದ ಪಶುಪಾಲನೆ, ಬೇಟೆಗಾರಿಕೆ, ಸಮೂಹ ಕುಣಿತ, ನಂಬಿಕೆಗಳನ್ನು ಹಾಗೂ ಕಲಾಭಿಜ್ಞತೆ ಇವುಗಳನ್ನು ತಿಳಿಯಬಹುದಾಗಿದೆ.

ಕರ್ನಾಟಕದ ರಾಜ್ಯವು ಪ್ರಾಗಿತಿಹಾಸ ಕಾಲದ ಚಿತ್ರಗಳ ದೃಷ್ಟಿಯಿಂದ ಶ್ರೀಮಂತ ವಲಯವಾಗಿದೆ. ವಿಶೇಷವಾಗಿ ಬಳ್ಳಾರಿ ಜಿಲ್ಲೆಯ ಸಂಗನಕಲ್ಲು, ಕುರುಗೋಡು (ಬಳ್ಳಾರಿ ತಾ.) ತೆಕ್ಕಲುಕೋಟೆ (ಸಿರಗುಪ್ಪಾ ತಾ.), ಹಂಪಿ, ವೆಂಕಟಾಪುರ, ಕಮಲಾಪುರ, ನಾಗೇನಹಳ್ಳಿ ಮತ್ತು ಬುಕ್ಕಸಾಗರ (ಹೊಸಪೇಟೆ ತಾ.)ಗಳಲ್ಲಿ ಗವಿವರ್ಣಚಿತ್ರಗಳು ಕಪ್ಪಗಲ್ಲು, ಕುರುಗೋಡು, ಹಳಕುಂದಿ, ಬೆಳಗಲ್ಲು (ಬಳ್ಳಾರಿ ತಾ.)

ಕಮಲಾಪುರ, ನಂದಿಬಂಡಿ (ಹೊಸಪೇಟೆ ತಾ.) ಅಪ್ಪಯ್ಯನ ಹಳ್ಳಿ (ಕೊಟ್ಟೂರು ತಾ.) ಮತ್ತು ರಾಜಾಪುರ, ಬೈರನಾಯಕನಹಳ್ಳಿಗಳಲ್ಲಿ ಬಯಲುಬಂಡೆ ಕೊರೆದ/ಕುಟ್ಟಿದ ಚಿತ್ರಗಳು ಕಂಡುಬಂದಿವೆ. ಕುರುಗೋಡಿನಲ್ಲಿ ಎರಡೂ ಪ್ರಕಾರದ ಚಿತ್ರಗಳು ಇವೆ.

[1]

ಕಪ್ಪಗಲ್‌ನ ಚಿತ್ರಗಳನ್ನು ೧೮೮೦ರ ಸುಮಾರಿಗೆ ಹೂಬರ್ಟ್‌ನಾಕ್ಸ್‌ರವರು ಶೋಧಿಸಿದ್ದು, ದೇಶದ ಬಂಡೆಚಿತ್ರಗಳ ಶೋಧನೆಯಲ್ಲಿ ಮೊದಲ ದಾಖಲೆಯಾಗಿದೆ.[2] ಕುರುಗೋಡಿನ ಚಿತ್ರಗಳನ್ನು ಪ್ರಥಮವಾಗಿ ಎಂ.ಎಸ್. ಕೃಷ್ಣಮೂರ್ತಿಯವರು[3] ನಂತರ ಡಾ. ಅ. ಸುಂದರರವರು[4] ಹಾಗೂ ಡಬ್ಲ್ಯೂ.ವಿ.ಎಸ್. ನರಸಿಂಹರವರು[5] ಶೋಧಿಸಿ ಬೆಳಕಿಗೆ ತಂದಿದ್ದಾರೆ. ಕೃಷ್ಣಮೂರ್ತಿಯವರು ಕೆಲವು ಚಿತ್ರಗಳ ಬಗೆಗೆ ಸಂಕ್ಷಿಪ್ತವಾಗಿ ವಿವರಸಿದ್ದರೆ, ಡಾ. ಅ. ಸುಂದರವರು ಹೊಸದಾಗಿ ಮತ್ತೆ ಕೆಲವು ನೆಲೆಗಳನ್ನು ಬೆಳಕಿಗೆ ತಂದು ಸ್ವಲ್ಪ ವಿವರವಾಗಿ ಚರ್ಚಿಸಿದ್ದಾರೆ. ನರಸಿಂಹರವರು ವಿಸ್ತೃತ ವಿಶ್ಲೇಷಣೆ ಮಾಡಿದ್ದಾರೆ. ಈ ಮೊದಲಿನ ಶೋಧನೆಗಳ ಹಿನ್ನೆಲೆಯಲ್ಲಿ ಮಾತ್ರ ನಾನು ಸ್ವತಃ ಕ್ಷೇತ್ರಕಾರ್ಯ ಕೈಗೊಂಡು ಗಮನಿಸಿದಂತೆ ಕುರುಗೋಡಿನ ಪ್ರಾಗಿತಿಹಾಸ ಕಾಲದ ಚಿತ್ರಕಲೆಯ ಅಧ್ಯಯನಾತ್ಮಕ ವಿಶ್ಲೇಷಣೆ ಮುಂದಿನಂತಿದೆ.

**ಕಲಾನೆಲೆಗಳು**

**ನೆಲೆ-೧ :** ಕುರುಗೋಡು ಮುಷ್ಟಗಟ್ಟೆ ರಸ್ತೆಯಲ್ಲಿ ಸಂಗಮೇಶ್ವರ ದೇವಾಲಯದ ಬಲಬದಿಯ ಗವಿ.

ಪ್ರಸ್ತುತ ಕಲ್ಲುಗಣಿಗಾರಿಕೆಯಿಂದಾಗಿ ಈ ಗವಿ ಸಂಪೂರ್ಣ ನಾಶವಾಗಿದೆ. ಡಾ. ಎಂ.ಎಸ್. ಕೃಷ್ಣಮೂರ್ತಿಯವರು ಗಮನಿಸಿದಂತೆ ಇಲ್ಲಿ ಗರ್ಭಧರಿಸಿದ ಜಿಂಕೆಯ ಚಿತ್ರ ಹಾಗೂ ಒಳಗಿನ ಗವಿಯಲ್ಲಿ ಕೆಲವು ಜನರು ಕೈಯಲ್ಲಿ ಕೋಲು, ಈಟಿ ಮೊದಲಾದ ಆಯುಧಗಳನ್ನು ಹಿಡಿದುಕೊಂಡು ಪ್ರಾಣಿಗಳನ್ನು ಬೇಟೆಯಾಡುತ್ತಿರುವಂತೆ, ನರ್ತಿಸುತ್ತಿರುವಂತೆ ಇರುವ ಮನುಷ್ಯರ ಚಿತ್ರಗಳು, ಆನೆ, ಕೋಣ, ಎಮ್ಮೆ, ಚಿಗರೆ ಮೊದಲಾದ ಪ್ರಾಣಿಗಳ ಚಿತ್ರಗಳಿದ್ದವು, ಇಲ್ಲಿಯೇ ಬಿಳಿಬಣ್ಣದ ಕೆಲವು ಮನುಷ್ಯ ರೇಖಾಚಿತ್ರಗಳನ್ನು ಕೂಡ ಬಿಡಿಸಲಾಗಿತ್ತು.

**ನೆಲೆ-೨ :** ಪಂಚಮುಖಿ ವೀರಭದ್ರ ದೇವಾಲಯದ ಎದುರು ನಂದಿಯ ಎಡಭಾಗದ ಕಲ್ಲಾಸರೆ ಬೆಟ್ಟದಲ್ಲಿ ಉತ್ತರಮುಖಿಯಾಗಿರುವ ಈ ಕಲ್ಲಾಸರೆ ಸುಮಾರು ೧೦ ಮೀ. ಎತ್ತರವಾಗಿದೆ. ವಿಶಾಲವಾದ ಕಲ್ಲಾಸರೆಯ ತುಂಬೆಲ್ಲ ಅನೇಕ ಚಿತ್ರಗಳಿದ್ದಂತೆ ತೋರುತ್ತದೆ. ಆದರೆ ಇಂದು ಬಹಳಷ್ಟು ಚಿತ್ರಗಳು ನಾಶವಾಗಿವೆ. ಉಳಿದ ಚಿತ್ರಗಳೂ ಬಹಳಷ್ಟು ಮಾಸಿಹೋಗಿವೆ.

ಕಲ್ಲಾಸರೆಯ ಎಡಭಾಗ ಹಾಗೂ ಮಧ್ಯಭಾಗದಲ್ಲಿ ಕೆಲವು ಚಿತ್ರಗಳನ್ನು ಗುರುತಿಸಬಹುದು. ಎಡಭಾಗದ ಮೂಲೆಯಲ್ಲಿ ಅತ್ಯಂತ ತೆಳುವಾದ ರೇಖೆಯಲ್ಲಿ ಬಿಡಿಸಿರುವ ಕೋಣದ ಚಿತ್ರ ರಚನಾಶೈಲಿಯಿಂದ ಗಮನ ಸೆಳೆಯುತ್ತದೆ. ೧.೬x೦.೬ ಮೀ. ಅಳತೆಯ ಇದು ಎತ್ತರವಾದ ಒಳಬಾಗಿರುವ ಕೋಡು, ಉದ್ದವೆನಿಸಿದರೂ ಸಹಜವಾಗಿರುವ ಮುಂಡದಿಂದ ಕೂಡಿದೆ. ಪುಷ್ಠಭಾಗಕ್ಕಿಂತ ಎದೆಯಭಾಗ ದಪ್ಪವಾಗಿದೆ. ಬಾಲ, ಶಿಶ್ನವನ್ನು ಬಿಡಿಸಲಾಗಿದೆ. ಇದರ ಮುಂಬದಿಯಲ್ಲಿ ಕೆಲವು ಚಿಕ್ಕ, ಚಿಕ್ಕ ಎಮ್ಮೆ (೦.೩ x ೦.೩ ಮೀ.). ಹಸು (೦.೨ x ೦.೨ ಮೀ.)ಮುಂತಾದ ಪ್ರಾಣಿಗಳ ಛಾಯಾರೂಪದ (ಪೂರ್ಣ ವರ್ಣ ತುಂಬಿದ) ಚಿತ್ರಗಳು, ಒಂದು ಬಾಹ್ಯ ರೇಖೆಯ (ವರ್ಣ ತುಂಬಿದ) ಪ್ರಾಣಿಯ ಚಿತ್ರಗಳಿವೆ. ಇಲ್ಲಿಯೇ ಕಡ್ಡಿಯಾಕೃತಿಯ ಎರಡು ಮನುಷ್ಯ ಚಿತ್ರಗಳು ಇದ್ದು, ಒರ್ವನ ಕೈಯಲ್ಲಿ ಕೋಲಿನಂತಹ ಉದ್ದವಾದ ವಸ್ತುವೊಂದಿದೆ. ಇಡೀ ಸನ್ನಿವೇಶವನ್ನು ಗಮನಿಸಲಾಗಿ ಇದು ಪಶುಪಾಲನೆಯ ದೃಶ್ಯ ಚಿತ್ರವೆಂದು ಗುರುತಿಸಬಹುದು.

ಮಧ್ಯಭಾಗದಲ್ಲಿ ದೊಡ್ಡ ಅಳತೆಯ ಅನೇಕ ಪ್ರಾಣಿಗಳ ಚಿತ್ರಗಳಿವೆ. ಅವುಗಳಲ್ಲಿ ಪರಸ್ಪರ ಎದುರಾಗಿ ನಿಂತ ಎರಡು ಜೋಡಿ ಜಿಂಕೆಗಳು, ಎರಡು ಗೂಳಿಗಳು ಒಂದು ಪಶು (?) ಜಿಂಕೆ ಮತ್ತು ಒಬ್ಬ ವ್ಯಕ್ತಿಯ ಚಿತ್ರಗಳನ್ನು ಗಮನಿಸಬಹುದಾಗಿದೆ. ಪರಸ್ಪರ ಎದುರಾಗಿ ನಿಂತ ಜೋಡಿ ಜಿಂಕೆಗಳು (ಪ್ರತಿಯೊಂದು ೦.೧೬ ಮೀ. ಉದ್ದ, ೦.೧೨ ಮೀ ಎತ್ತರ) ಮುಖಗಳನ್ನು ಮಾತ್ರ ಮಂಡದ ಹಿಂಭಾಗಕ್ಕೆ ಹೊರಳಿಸಿರುವುದು ಕುತೂಹಲದಾಯಕ. ಎರಡೂ ಜಿಂಕೆಗಳು ಹೊಂದಿಕೊಂಡಂತೆ ವೃತ್ತಾಕಾರದ ವಸ್ತುವನ್ನು ಇರಿಸಿದಂತಿದೆ. ಇವು ಛಾಯಾರೂಪದವು, ಈ ಜಿಂಕೆಯ ಮುಂಭಾಗದಲ್ಲಿ ಮತ್ತು ಹಿಂಭಾಗದಲ್ಲಿ ದಷ್ಠ ಪುಷ್ಠವಾದ ಎರಡು ಗೂಳಿಗಳಿವೆ. (ಕ್ರಮವಾಗಿ ೦.೧೨ಮೀ ಎತ್ತರ, ೦.೧೮ ಮೀ ಉದ್ದ ಹಾಗೂ ೦.೧೩ ಮೀ ಉದ್ದ, ೦.೧೫ಮೀ. ಎತ್ತರ) ಮುಂದಿನ ಗೂಳಿಯ ಇಣಿ

ದೊಡ್ಡ ಪ್ರಮಾಣದಲ್ಲಿದ್ದು, ಗಮನಾರ್ಹವೆನಿಸುತ್ತದೆ. ಇದರ ಕಾಲುಗಳನ್ನು ದ್ವಿ ಬಿಡಿ ರೇಖೆಯಲ್ಲಿ, ಹಿಂದಿನ ಗೂಳಿಯ ಕಾಲುಗಳನ್ನು ದ್ವಿಸಂಯುಕ್ತ ರೇಖೆಯಲ್ಲಿ ಬಿಡಿಸಲಾಗಿದೆ. ಕೆಳಭಾಗದಲ್ಲಿ ಒಂದು ಜಿಂಕೆ (೦.೧೨x೦.೧೨ಮೀ), ಜೋಡಿ ಜಿಂಕೆ ಹಾಗೂ ಮನುಷ್ಯನ ಕಡ್ಡಿಯಾಕೃತಿ ಚಿತ್ರವಿದೆ. ಮನುಷ್ಯ ಕಾಲುಗಳನ್ನು ಅಗಲಿಸಿ ನಿಂತಿದ್ದು ಶಿಶ್ನವನ್ನು ಬಿಡಿಸಲಾಗಿದೆ. ಪ್ರಾಯಶಃ ನಗ್ನ ಸ್ಥಿತಿಯಲ್ಲಿರಬೇಕು.

**ನೆಲೆ-೩ :** ಪಂಚಮುಖಿ ವೀರಭದ್ರ ದೇವಾಲಯದ ಉತ್ತರಕ್ಕಿಂತ ಬಾಳೇಕೊಳ್ಳದಲ್ಲಿ ಈ ಕಲ್ಲಾಸರೆ ಇದೆ. ಅಲ್ಲಿಯ ಶಿಥಿಲ ದೇವಾಲಯದಿಂದ ಈಶಾನ್ಯಕ್ಕೆ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಎರಡನೇ ಬೆಟ್ಟ ಸಾಲಿನಲ್ಲಿ ದಕ್ಷಿಣಾಭಿಮುಖವಾಗಿ ಇರುವ ಈ ಕಲ್ಲಾಸರೆ ನೆಲದಿಂದ ಸುಮಾರು ೨೦ಮೀ. ಎತ್ತರದಲ್ಲಿದೆ.

ಇಲ್ಲಿ ಒಂದು ಚಿರತೆ, ಮೂರು ಹುಲಿಗಳು ಮತ್ತು ಎರಡು ಜಿಂಕೆಗಳ ಚಿತ್ರಗಳಿವೆ. ಮೈಮೇಲೆ ಚುಕ್ಕೆಗಳಿರುವುದರಿಂದ ಇಲ್ಲಿಯ ಒಂದು ಪ್ರಾಣಿಯನ್ನು ಚಿರತೆ ಎಂದು ಗುರುತಿಸಬಹುದು. ಆದರೆ ಅದರ ದೇಹದ ರೂಪ ಚಿರತೆಯನ್ನು ಹೋಲುವುದಿಲ್ಲ. ಮೈಮೇಲೆ ಪಟ್ಟೆಗಳು ಹಾಗೂ ದೇಹದ ರಚನೆಯಿಂದ ಹುಲಿಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಅವುಗಳಲ್ಲಿ ಒಂದಕ್ಕೆ ನೆಲದೆಡೆಗೆ ಬಾಗಿ ತುದಿಯಲ್ಲಿ ಸುರುಳಿ ಸುತ್ತಿಕೊಂಡಿರುವ ಬಾಲವಿದೆ. ಇನ್ನೊಂದು ಬಾಲವನ್ನು ಎತ್ತರಿಸಿ ಬಾಯಿಯನ್ನು ತೆರೆದಿದೆ. ಮತ್ತೊಂದು ಇದೇ ಭಂಗಿಯಲ್ಲಿದ್ದು, ಬಾಯಿಯನ್ನು ಹೆಚ್ಚು ಅಗಲಿಸಿ ತೆರೆದಿದೆ. ಮೊದಲನೆರಡು ಹುಲಿಗಳಿಗೆ ಕಿವಿಗಳನ್ನು ತೋರಿಸಲಾಗಿದೆ. ಜಿಂಕೆಗಳೆಂದು ತೋರುವ ಎರಡು ಪ್ರಾಣಿಗಳು ಒಂದರ ಬದಿ ಒಂದು ನಿಂತಂತೆ ತೋರುತ್ತದೆ. ಮುಖವನ್ನು ದೇಹದ ಹಿಂಭಾಗಕ್ಕೆ ಹೊರಳಿಸಿವೆ. ಇವುಗಳಿಗೆ ಕೋಡುಗಳನ್ನು ತೋರಿಸಲಾಗಿದೆ.

**ನೆಲೆ-೪ :** ಈ ಕಲ್ಲಾಸರೆ ಕೂಡ ಬಸರಿಕೊಳ್ಳದಲ್ಲಿದೆ. ಇಲ್ಲಿ ಚಿತ್ರಕಾರನು ಅಂಗಾತವಾಗಿ ಚಿತ್ರಗಳನ್ನು ಬಿಡಿಸಿರಲಿಕ್ಕೆ ಸಾಧ್ಯ. ಇಲ್ಲಿ ಆನೆಗಳ ಹಿಂಡಿನ ಚಿತ್ರವಿದೆ. ಚಿತ್ರಗಳು ಸ್ಪಷ್ಟವಿಲ್ಲ. ಮೂರು ಆನೆಗಳ ಮುಖ ಮತ್ತು ಸೊಂಡಿಲುಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಇವು ರೇಖಾಚಿತ್ರಗಳು ಆನೆಗಳ ಹಿಂಬಂದಿಯ ಅರ್ಧಭಾಗ ಮಾತ್ರ ಸ್ಪಷ್ಟವಿದೆ. ಆದರೂ ಆನೆಗಳ ದೈಹಿಕ, ದಾರ್ಢ್ಯತೆಯನ್ನು ಪುಷ್ಠಭಾಗದಲ್ಲಿ ಬೆನ್ನನ್ನು ಕಮಾನಿನಂತೆ ಭಾಗಿಸಿರುವುದರಿಂದ ಎತ್ತಿ ತೋರಿಸಲಾಗಿದೆ. ಆದರೆ ಇದರ ಬಾಲ ಸ್ವಲ್ಪ ಉದ್ದ ಮತ್ತು ಉದ್ದಕ್ಕೂ ಕೂದಲಿನಂತೆ ಆ ಕಡೆ ಈ ಕಡೆ ಸಣ್ಣ ರೇಖೆಗಳಿವೆ. ವಾಸ್ತವವಾಗಿ ಆನೆಯ ಬಾಲದ ತುದಿಯಲ್ಲಿ ಕೂದಲಿನ ಸಣ್ಣಗೊಂಡೆಯಿರುವುದೇ ವಿನಾ ಉದ್ದಕ್ಕೂ ಕೂದಲಿರುವುದಿಲ್ಲ. ಆದ್ದರಿಂದ ಈ ಬಾಲದ ವಿಶಿಷ್ಟ ಲಕ್ಷಣದ ಮರ್ಮವನ್ನು ತಿಳಿಯಬೇಕಾಗಿದೆ.

**ನೆಲೆ : ೫ :** ಇದು ಎರಡನೇ ಸಂಖ್ಯೆಯ ಕಲ್ಲಾಸರೆಯಿಂದ ಸ್ವಲ್ಪ ಮುಂದಕ್ಕೆ ಇದೆ. ಇದು ಪೂರ್ವಾಭಿಮುಖವಾಗಿದ್ದು, ವಿಶಾಲವಾಗಿದೆ. ಇಲ್ಲಿ ಅನೇಕ ಚಿತ್ರಗಳಿದ್ದು, ಅವುಗಳು ಬಹಳಷ್ಟು ಮಾಸಿಹೋಗಿವೆ. ಇಲ್ಲಿ ಮೂರು ಕುದುರೆ, ನಾಲ್ಕು ಎತ್ತು, ಒಂದು ರೀತಿಯ ಬಳ್ಳಿ ಹಾಗೂ ಎರಡು ಪುರುಷ, ಒಂದು ಸ್ತ್ರೀಯ ಚಿತ್ರವಿದೆ.

ಮುಖಭಾಗ ನಾಶವಾಗಿರುವ ಕುದುರೆ (೦.೭೦ ಮೀ.x ೦.೫೭ ಮೀ.) ಛಾಯಾ ರೂಪದಲ್ಲಿದೆ. ಬಾಲದಲ್ಲಿ ಉದ್ದಕ್ಕೂ ರೋಮಗಳನ್ನು ತೋರಿಸಲಾಗಿದೆ. ಉಳಿದ ಎರಡು ಕುದುರೆಗಳು ಚಿಕ್ಕ ಅಳತೆಯಲ್ಲಿದ್ದು, ರೇಖಾಕೃತಿಗಳಾಗಿವೆ. ಪಶುಗಳು ಕೂಡ ರೇಖಾಕೃತಿಯವು ಕೋಡು, ಇಣಿ, ಬಾಲ ಸಹಜವಾಗಿವೆ. ೦.೩೦ಮೀx೦.೨೪ ಮೀ ಅಳತೆಯ ಹಾಗೂ ೦.೫೧x೦.೫೦ ಅಳತೆಯ ಎತ್ತುಗಳು ತುಂಬಾ ಸಹಜವಾದ ರಚನೆಗಳಾಗಿವೆ. ಉಳಿದ ಎರಡು ಪಶುಗಳು ಚಿಕ್ಕ ಆಕೃತಿಯವು. ಅವುಗಳಲ್ಲಿ ಒಂದು ಛಾಯಾರೂಪದಲ್ಲಿದ್ದೂ, ನಂತರ ಕಾಲದ ರಚನೆಯೆಂದು ತೋರುತ್ತದೆ.

ಮನುಷ್ಯ ಚಿತ್ರಗಳಲ್ಲಿ ಸ್ತ್ರೀಯ ಚಿತ್ರ ಗಮನ ಸೆಳೆಯುತ್ತದೆ. ೦.೫೫ ಮೀ ಎತ್ತರ ಕೋಲಿನಂತೆ ನೀಳವಾದ ಮುಂಡ, ಕಡ್ಡಿಯಂಥ ಕಾಲು, ಕೈಗಳು, ಸಹಜವಾದ ಕತ್ತು, ತಲೆಗಳಿವೆ. ತಲೆಯಲ್ಲಿ ಎರಡೂ ಬದಿಯಿಂದ ನೀಳವಾಗಿ ಇಳಿ ಬಿದ್ದಿರುವ ಜಡೆಗಳಿವೆ. ಎರಡೂ ಸ್ತನಗಳು ದೊಡ್ಡ ಪ್ರಮಾಣದಲ್ಲಿವೆ. ಈ ರೀತಿಯ ಸ್ತ್ರೀಯ ಚಿತ್ರ ಇಲ್ಲಿಯ ವಿಶೇಷವಾಗಿದೆ. ಎರಡು ಪುರುಷ ಚಿತ್ರಗಳಲ್ಲಿ ಒಂದು ಚಿಕ್ಕ ಅಳತೆಯ ಛಾಯಾರೂಪದಲ್ಲಿದೆ. ಇನ್ನೊಂದು ಕುಳಿತ ಭಂಗಿಯಲ್ಲಿದೆ. ಮುಖ ವೃತ್ತಕಾಲದಲ್ಲಿ ದೊಡ್ಡ ಪ್ರಮಾಣದಲ್ಲಿದೆ. ಉಳಿದಂತೆ

ಮುಂಡ, ಕಾಲುಗಳು ಕಡ್ಡಿ ರೂಪದವು. ಇಲ್ಲಿಯೇ ೧.೬೦ಮೀ. ಉದ್ದವಿರುವ ಒಂದು ರೇಖಾಕೃತಿ ಇದೆ. ಇದಕ್ಕೆ ಕೆಳಭಾಗಕ್ಕೆ ನೇತುಬಿದ್ದಿರುವ ನಾಲ್ಕು ರೇಖೆಗಳು ಅವುಗಳ ತುದಿಯಲ್ಲಿ ಬಾಲದ ಗೋಡೆಯಂತೆ ಅಥವಾ ಬೇರುಗಳಂತೆ ಹಲವು ರೇಖೆಗಳಿವೆ. ಡಾ. ಅ.ಸುಂದರರವರು ಇದನ್ನು ಒಂದು ಜಾತಿಯ ಬಳ್ಳಿಯ ಚಿತ್ರವೆಂದು ಅಭಿಪ್ರಾಯ ಪಟ್ಟಿದ್ದಾರೆ.

ಇದೇ ಕಲ್ಲಾಸರೆಯ ದಕ್ಷಿಣ ಭಾಗದಲ್ಲಿ ಕೆಂಗಂದು ಬಣ್ಣದ ಜಿಂಕೆಯ ಚಿತ್ರ ಶೈಲಿಯು ಸುಂದರ, ಸರಳ ರಚನೆಯಾಗಿದೆ. ಬಾಲ ನೇರವಾಗಿದ್ದು, ಶಿಶ್ನವನ್ನು ಬಿಡಿಸಲಾಗಿದೆ.

**ನೆಲೆ-೬ :** ಪಂಚಮುಖಿ ವೀರಭದ್ರ ದೇವಾಲಯದ ಎದುರು ನಂದಿಯ ಹಿಂಭಾಗದಲ್ಲಿ ಈ ಕಲ್ಲಾಸರೆ ಇದೆ. ಇಲ್ಲಿಯ ಚಿತ್ರಗಳು ತೀರಾ ಮಾಸಿಹೋಗಿವೆ. ಇರುವ ಚಿತ್ರಗಳಲ್ಲಿ ಪ್ರಾಣಿ, ಮನುಷ್ಯರ ರೇಖಾಚಿತ್ರಗಳನ್ನು ಗುರುತಿಸಬಹುದು. ಚಿತ್ರ ನೆಲೆ ಐದರಲ್ಲಿರುವಂತಹ ಕಡ್ಡಿ ದೇಹ, ವೃತ್ತಾಕಾರದ ದೊಡ್ಡ ತಲೆಯ ಮನುಷ್ಯಾಕೃತಿಯೊಂದು ಇಲ್ಲಿದೆ.

**ನೆಲೆ-೭ :** ಗ್ರಾಮದ ಉತ್ತರಕ್ಕಿಂತ ಬೆಟ್ಟದ ಬೂದಿಕೊಳ್ಳದ ಪ್ರದೇಶದಲ್ಲಿ (ನವಶಿಲಾಯುಗದ ನೆಲೆ) ನೀರಿನ ಟ್ಯಾಂಕ್ ಹಿಂಬದಿಯಲ್ಲಿ ಈ ಕಲ್ಲಾಸರೆ ಇದೆ.

ಇಲ್ಲಿ ಏಳು ಮನುಷ್ಯ ಚಿತ್ರಗಳಿವೆ. ಎಲ್ಲವೂ ರೇಖಾ ಚಿತ್ರಗಳು. ಸುಮಾರು ೩೦ ಮೀ. ಎತ್ತರ ೦.೧೨ ಮೀ. ಅಗಲವಿರುವ ಮನುಷ್ಯ ಚಿತ್ರವೊಂದು ದೊಡ್ಡ ಅಳತೆಯಿಂದ ಗಮನ ಸೆಳೆಯುತ್ತದೆ. ದ್ವಿತ್ರಿಕೋನಾಕಾರದ ಮುಂಡವನ್ನು ಹೊಂದಿದ್ದು, ಕಾಲುಗಳನ್ನು ಅಗಲಿಸಿ ನಿಂತಿದೆ. ಕೈಗಳು ವಕ್ರವಾಗಿ ಕೆಳಕ್ಕೆ ಚಾಚಿವೆ. ಕತ್ತು, ವೃತ್ತಾಕಾರದ ತಲೆ ಇದೆ. ಬದಿಯಲ್ಲಿ ಕಡ್ಡಿಯಾಕಾರದ ಮೂರು ಮನುಷ್ಯ ಚಿತ್ರಗಳು ಸಾಲಾಗಿವೆ. ಎಲ್ಲವಕ್ಕೂ ಕೈ, ಕಾಲುಗಳು ಅಗಲಿಸಿವೆ. ಕೆಳಭಾಗದಲ್ಲಿ ಇದೇ ರೀತಿಯ ಎರಡು ಮನುಷ್ಯ ಚಿತ್ರಗಳಿದ್ದು, ಅವುಗಳಲ್ಲಿ ಒಂದು ಚಿತ್ರದಲ್ಲಿ ಕಾಲುಗಳನ್ನು ಅರೆ ಮಡಚಿ ಕುಳಿತಂತೆ ಚಿತ್ರಿಸಿದೆ. ಇಲ್ಲಿಯ ಇನ್ನೊಂದು ವ್ಯಕ್ತಿಯ ಚಿತ್ರ ಗಮನ ಸೆಳೆಯುತ್ತದೆ. ೦.೧೨x೦.೬ ಮೀ. ಅಳತೆಯ ಐದು ಕೈಗಳನ್ನು ಅಗಲಸಿದ್ದು, ಉದ್ದವಾದ ನಿಲುವಾಗಿ, ಧೋತಿಯನ್ನು ಧರಿಸಿದಂತೆ ತೋರುತ್ತದೆ.[6] ಇಂಥ ಚಿತ್ರವೊಂದು ಗಂಗಾವತಿ ತಾಲೂಕಿನ ಸಂಗಾಪುರದ ಐದನೆಯ ಕಲ್ಲಾಸರೆಯಲ್ಲಿದೆ. ಈ ಚಿತ್ರದ ವೈಶಿಷ್ಟ್ಯತೆಯನ್ನು ಗುರುತಿಸಬೇಕಾಗಿದೆ.

**ನೆಲೆ-೮ :** ಪಂಚಮುಖಿ ವೀರಭದ್ರ ದೇವಾಲಯದ ಹಿಂಬದಿಯ ಬೆಟ್ಟದಲ್ಲಿ ಈ ಕಲ್ಲಾಸರೆ ಇದೆ. ಇಲ್ಲಿಯ ಛಾವಣಿಯಲ್ಲಿ ಉಡದ ಚಿತ್ರ ಮತ್ತು ಗಿಡದಂಥ ಆಕೃತಿಯ ಚಿತ್ರ ಹಾಗೂ ಕೆಳಗಿನ ಆಸರೆಯ ಕಲ್ಲಿನಲ್ಲಿ ಎತ್ತಿನ ಚಿತ್ರ ಇದೆ. ಹಲ್ಲಿಯಾಕಾರದ ಉಡದ ಚಿತ್ರ ೦.೩೦ ಮೀ x೦.೧೨ ಮೀ ಅಳತೆಯದಾಗಿದ್ದು ಅಲಂಕರಣೆಯಿಂದ ಗಮನ ಸೆಳೆಯುತ್ತದೆ. ಚೂಪಾದ ಮೂತಿಯ ತಲೆ, ತೆಳುವಾದ ಕತ್ತು, ಎಲೆಯಾಕಾರದ ದಪ್ಪ ದೇಹ ಮತ್ತು ಉದ್ದವಾದ ಬಾಲವಿದೆ. ಮುಂದಿನ ಕಾಳುಗಳು ಮುಂದಕ್ಕೆ, ಹಿಂದಿನ ಕಾಲುಗಳು ಹಿಂದಕ್ಕೆ ಚಾಚಲ್ಪಟ್ಟಿವೆ. ಬೆನ್ನಿನ ಮಧ್ಯಭಾಗದಲ್ಲಿ ತಲೆಯಿಂದ ಪುಷ್ಠಭಾಗದವರೆಗೆ ನೇರ ರೇಖೆಯನ್ನು ಹಾಕಲಾಗಿದ್ದು, ಅದರಿಂದ ಎರಡೂ ಬದಿಗೆ ವಕ್ರವಾಗಿ ಸಾಲು ಗೆರೆಗಳನ್ನು ಎಳೆದಿರುವುದು ವಿಶೇಷ. ಇದೇ ರೀತಿಯಲ್ಲಿ ಸ್ವಲ್ಪ ಭಿನ್ನವಾದ ಉಡದ ಚಿತ್ರಗಳು ಹಿರೇಬೆನಕಲ್‌ನ ಹದಿನಾರನೇ ಕಲ್ಲಾಸರೆಯಲ್ಲಿವೆ.[7]

ಉಡದ ಬದಿಯಲ್ಲಿ ಒಂದು ವಿಶಿಷ್ಟ ಆಕೃತಿಯ ಚಿತ್ರವಿದೆ (೦.೨೪ ಮೀ.ಉದ್ದ) ಉದ್ದವಾದ ರೇಖೆಯನ್ನು ಮಧ್ಯವಾಗಿರಿಸಿ, ಮೇಲಿಂದ ಕೆಳಕ್ಕೆ ಐದು ಅಸಮ ವಜ್ರಾಕೃತಿಗಳನ್ನು ಹಾಕಲಾಗಿದೆ. ತೀರ ಕೆಳಗಿನದು ಹಲ್ಲಿಯ ಬಾಲದಂತೆ ಉದ್ದವಾಗಿದೆ. ಇದು ಯಾವ ಚಿತ್ರವೆಂದು ಗುರುತಿಸುವುದು ಕಷ್ಟ. ಕೆಳಗಿನ ಆಸರೆ ಕಲ್ಲಿನಲ್ಲಿ ಛಾಯಾರೂಪದ ಎತ್ತಿನ ಚಿತ್ರವಿದೆ. ರಚನಾಶೈಲಿಯಿಂದ ಇದು ನಂತರ ಕಾಲದ್ದೆಂದು ಹೇಳಬಹುದು.

**ನೆಲೆ-೯ :** ಕುರುಗೋಡು ಮುಷ್ಠಗಟ್ಟೆ ರಸ್ತೆಯಲ್ಲಿ ಸಂಗಮೇಶ್ವರ ದೇವಾಲಯದಿಂದ ಸುಮಾರು ಒಂದು ಕಿ.ಮೀ. ದೂರದಲ್ಲಿ ಈ ಕಲ್ಲಾಸರೆ ಇದೆ. ರಸ್ತೆಯ ಎಡಬದಿಗೆ ಹೊಂದಿಕೊಂಡಿರುವ ಇದು ಸುತ್ತಲೂ ಬಯಲಿನ ಮಧ್ಯದ ಸ್ವತಂತ್ರ ಕಲ್ಲಾಸರೆ. ಕಲ್ಲಾಸರೆಯ

ಸಮುಚ್ಚಯದಲ್ಲಿ ದಕ್ಷಿಣ, ಉತ್ತರ ಮತ್ತು ಪಶ್ಚಿಮ ಬದಿಯ ಕಲ್ಲಾಸರೆಗಳಲ್ಲಿ ಚಿತ್ರಗಳಿವೆ. ಸದ್ಯ ಇದು ಜನಸಂಪರ್ಕದ ಪ್ರದೇಶವಾಗಿರುವುದರಿಂದ ಚಿತ್ರಗಳು ಬಹಳಷ್ಟು ಮಾಸಿ ಹೋಗಿವೆ.

ದಕ್ಷಿಣ ಬದಿಯ ಕಲ್ಲಾಸರೆಯಲ್ಲಿ ಒಂದು ದೊಡ್ಡ ಗೂಳಿಯ ಹಾಗೂ ಕೆಲವು ಚಿಕ್ಕ ಚಿಕ್ಕ ಪ್ರಾಣಿಗಳ ಚಿತ್ರಗಳನ್ನು ಗುರುತಿಸಬಹುದು. ಚಿಕ್ಕ ಪ್ರಾಣಿಗಳು ಏನೆಂದು ಹೇಳುವುದು ಕಷ್ಟ. ಕೊಡು, ಬಾಲವುಳ್ಳ ಒಂದು ಪಶುವಿನ ಮೈಮೇಲೆ ಪರಸ್ಪರ ಛೇದಿಸುವ ವಕ್ರ ರೇಖೆಗಳನ್ನು ಹಾಕಲಾಗಿದೆ.

ಉತ್ತರ ಬದಿಯಲ್ಲಿ ಕಲ್ಲಾಸರೆಯಲ್ಲಿ ಮೂರು ಪ್ರಾಣಿಗಳ ದೊಡ್ಡ ಚಿತ್ರಗಳಿವೆ. ಅವುಗಳಲ್ಲಿ ಎರಡು ತೀರಾ ಅಸ್ಪಷ್ಟವಾಗಿದ್ದು, ಗುರುತಿಸುವುದು ಅಸಾಧ್ಯ. ಆದರೆ ೦.೨೪ ಮೀ. ೦.೧೨ಮೀ. ಅಳತೆಯ ಹುಲಿಯ ಚಿತ್ರ ಸ್ಪಷ್ಟವಿದೆ. ಮುಖ, ಮುಂಡ, ಕಾಲು ಸಹಜವಾಗಿವೆ. ಕಿವಿಗಳನ್ನು ತೋರಿಸಲಾಗಿದೆ. ಬಾಲ ಮೇಲಕ್ಕೆ ಎತ್ತಿದ್ದು, ತುದಿಯಲ್ಲಿ ಸ್ವಲ್ಪ ಬಾಗಿಸಿದೆ. ಸಾಮಾನ್ಯವಾಗಿ ಅನೇಕ ಸಂದರ್ಭದಲ್ಲಿ ಪ್ರಾಣಿಗಳಿಗೆ ಕಾಲುಗಳನ್ನು ದ್ವಿಸಂಯುಕ್ತ ರೇಖೆಯಲ್ಲಿ ತೋರಿಸಲಾಗಿದ್ದರೂ ಇಲ್ಲಿ ನಾಲ್ಕು ಕಾಲುಗಳನ್ನು ಪ್ರತ್ಯೇಕವಾಗಿ ಬಿಡಿಸಿರುವುದು ಗಮನಾರ್ಹ, ಅಲ್ಲದೆ ಮೈಮೇಲೆ ಪಟ್ಟೆಗಳನ್ನು ಹಾಕಲಾಗಿದೆ. ಇದು ಹಂಪಿಯ ೨ನೇ ನೆಲೆಯ (ಮೊಸಳಯ್ಯನ ಗುಡ್ಡ) ಹುಲಿಯ ಚಿತ್ರವನ್ನು ಹೋಲುತ್ತಿರುವುದು ವಿಶೇಷ.

ಪಶ್ಚಿಮ ಬದಿಯ ಕಲ್ಲಾಸರೆಯಲ್ಲಿ ಪ್ರಾಣಿಯ ಚಿತ್ರ ೦.೨೪ x ೦.೧೨ಮೀ. ಹೊಂದಿದೆ. ಮೈಮೇಲೆ ಸಾಲಾಗಿ ಅಡ್ಡರೇಖೆಗಳನ್ನು ಹಾಕಲಾಗಿದೆ. ನಾಲ್ಕು ಕಾಲುಗಳು ಬಿಡಿಯಾಗಿವೆ. ಈ ರಚನೆಯನ್ನು ಗಮನಿಸಿದರೆ ಇದು ಕತ್ತೆಕಿರುಬ ಪ್ರಾಣಿಯ ಚಿತ್ರವೆಂದು ಹೇಳಬಹುದು.

**ನೆಲೆ-೧೦ :** ಕುರುಗೋಡು ಮುಷ್ಟಗಟ್ಟೆ ರಸ್ತೆಯಲ್ಲಿ ಕಣಿವೆಯ ನಂತರದಲ್ಲಿ ಬರುವ ಜಿಂಕೆಗುಡ್ಡದಲ್ಲಿ ಈ ಕಲ್ಲಾಸರೆ ಇರುವುದು ತಿಳಿಯುತ್ತದೆ. ರಸ್ತೆಯ ಎಡಬದಿಯಲ್ಲಿರುವ ಶಿಲಾಶಾಸನವಿರುವ ಗೂಡಿನ ಎದುರಿಗೆ ಜಿಂಕೆಗುಡ್ಡವಿದೆ. ಈ ಕಲ್ಲಾಸರೆಯಲ್ಲಿ ಕೆಲವು ಜಿಂಕೆಗಳ ಮತ್ತು ಹುಲಿಯ ಚಿತ್ರವಿದೆ.

**ನೆಲೆ-೧೧ :** ಜಿಂಕೆಗುಡ್ಡದ ಹಿಂಬದಿಯ ಕಣಿವೆಯಲ್ಲಿ ಈ ಕಲ್ಲಾಸರೆ ಇದೆ. ಇಲ್ಲಿ ಕೋಣ, ಸ್ತ್ರೀ ಪುರುಷರ ಸಂಭೋಗ ಸ್ಥಿತಿಯ ಚಿತ್ರಗಳು ಇವೆ. ಮನುಷ್ಯ ಚಿತ್ರಗಳು ರೇಖಾಕೃತಿಯಲ್ಲಿವೆ.

**ನೆಲೆ-೧೨ :** ಕುರುಗೋಡ ಮುಷ್ಟಗಟ್ಟೆ ರಸ್ತೆಯಲ್ಲಿ ಈಶ್ವರ ದೇವಾಲಯದ ರಸ್ತೆ ಬದಿಯ ಬೆಟ್ಟದಲ್ಲಿ ಈ ಕಲ್ಲಾಸರೆ ಇದೆ. ಇಲ್ಲಿ ಕೆಂಪು ಮತ್ತು ಬಿಳಿ ಬಣ್ಣದಲ್ಲಿ ರಚಿಸಿರುವ ಮೂರು ಮನುಷ್ಯ ಚಿತ್ರಗಳಿವೆ. ಇವು ಕಡ್ಡಿರೂಪದ ಚಿತ್ರಗಳು.

**ನೆಲೆ-೧೩ :** ಗ್ರಾಮದ ಪಶ್ಚಿಮಕ್ಕೆ ಹೊಂದಕೊಂಡಿರುವ ವಜ್ರಯ್ಯನ ಗುಡ್ಡದಲ್ಲಿ ಈ ಕಲ್ಲಾಸರೆ ಇದೆ. ಇಲ್ಲಿ ಚಾರಿತ್ರಿಕ ಕಾಲದ ಬಿಳಿಬಣ್ಣದಲ್ಲಿ ರಚಿಸಿರುವ ಅನೇಕ ಶಂಖ, ಚಕ್ರ, ತ್ರಿನಾಮಗಳ ವಿವಿಧ ರೀತಿಯ ಚಿತ್ರಗಳಿವೆ. ಒಂದು ಚಿಕ್ಕ ಆನೆ ಸವಾರನ ಚಿತ್ರವೂ ಇಲ್ಲಿದೆ.

**ನೆಲೆ : ೧೪ :** ಗ್ರಾಮದ ಪಶ್ಚಿಮಕ್ಕಿರುವ ಕೋಳಿಗುಡ್ಡದಲ್ಲಿಯ ಕಪ್ಪು, ಗುಂಡುಗಳಲ್ಲಿ ಕುಟ್ಟಿದ, ಕೊರೆದ ಗೂಳಿ, ಎತ್ತು ಮನುಷ್ಯ ಚಿತ್ರಗಳಿವೆ.


**ನೆಲೆ : ೧೫ :** ಪಂಚಮುಖಿ ವೀರಭದ್ರ ದೇವಾಲಯದ ಎದುರು ನಂದಿಯ ಸುತ್ತಮುತ್ತಲಿನ ಕಲ್ಲಾಸರೆಗಳ ನೆಲ ಬಂಡೆಗಳ ಮೇಲೆ ಚಿಕ್ಕ ಚಿಕ್ಕ ಕುಳಿಗಳನ್ನು ಸಾಲಾಗಿ ಮೂಡಿಸಿ ವೃತ್ತ, ಚೌಕ, ಆಯತಾಕಾರದ ಅಂಕಣಾಕೃತಿಗಳನ್ನು ಕೊರೆಯಲಾಗಿದೆ. ಇವು ತೀರ ಆಳವಾಗಿಲ್ಲ. ವೃತ್ತಗಳು ೦.೬೨ ಮೀ. ವ್ಯಾಸವನ್ನು ಹೊಂದಿವೆ. ಕೆಲವು ಚೌಕಾಕೃತಿಗಳು ೦.೪೨x೦.೫೬ ಮೀ. ಅಳತೆಯನ್ನು ಹಾಗೂ ಕೆಲವು .೩೬ಮೀ. ಚೌಕ ಅಳತೆಯನ್ನು ಹೊಂದಿವೆ. ಎಲ್ಲ ಚೌಕ, ಆಯತ, ವೃತ್ತಗಳಿಗೆ ಮಧ್ಯದಲ್ಲಿ ಅಡ್ಡ ಹಾಗೂ ಉದ್ದವಾಗಿ ಕುಳಿಯ ರೇಖೆಗಳಿವೆ.

**ಚಿತ್ರಗಳ ವಿಶ್ಲೇಷಣೆ**

ಪ್ರಾಗಿತಿಹಾಸಕಾಲದ ಈ ಚಿತ್ರಗಳು ಸಾಮಾನ್ಯ ವ್ಯಕ್ತಿಗಳಿಂದ ಬಿಡಿಸಲ್ಪಟ್ಟ ಸಾಂಪ್ರದಾಯಿಕ ಚಿತ್ರಗಳೇ ವಿನಃ ಪ್ರಬುದ್ಧ ಕಾಲಕೃತಿಗಳೇನಲ್ಲ. ಬಹುಮಟ್ಟಿಗೆ ಚಿತ್ರಿತ ನೆಲೆಗಳು ಸರಳವಾಗಿ ಕಣ್ಣಿಗೆ ಬೀಳದೆ ಬೆಟ್ಟದ ದುರ್ಗಮ ಭಾಗದಲ್ಲಿವೆ. ಇಂಥ ನೆಲೆಗಳನ್ನು ಹುಡುಕಿ ಚಿತ್ರಿಸಿರುವಲ್ಲಿ ಜೀವನಭರಣದ ಸುಗಮತೆಯ ಉದ್ದೇಶದ ಕಟ್ಟಳೆ ಪ್ರಧಾನವಾಗಿರುವುದನ್ನು ಗ್ರಹಿಸಬಹುದು. ಈ ಚಿತ್ರಗಳಲ್ಲಿ ಸಾಮಾನ್ಯವಾಗಿ ಪ್ರಾಣಿ ಚಿತ್ರಗಳೇ ಅಧಿಕವಾಗಿವೆ. ಮನುಷ್ಯ ಹಾಗೂ ಇತರ ಚಿತ್ರಗಳು ಇವೆ. ಇವುಗಳನ್ನು ಛಾಯಾ ಇಲ್ಲದೇ ಬಾಹ್ಯ ರೇಖಾ ರೂಪದಲ್ಲಿ ಬಿಡಿಸಲಾಗಿದೆ. ಚಿತ್ರಗಳೂ ಸಾಂಕೇತಿಕ ಆಕೃತಿಗಳೇ ವಿನಃ ನಿರ್ದಿಷ್ಟವಾಗಿ ಕಣ್ಣು, ಮೂಗು, ಕಿವಿ ಮುಂತಾದ ದೈಹಿಕ ಲಕ್ಷಣಗಳನ್ನು ಹೊಂದಿರುವುದಿಲ್ಲ. ಆದಾಗ್ಯೂ ಚಿತ್ರಗಳಲ್ಲಿ ಭಾವ ಭಂಗಿ ಸತ್ವಭರಿತವಾಗಿರುತ್ತದೆ. ಚಿತ್ರಗಳು ಆಕೃತಿ ಪ್ರಧಾನವಾಗಿರದೆ ಜೀವಂತಿಕೆಯನ್ನು ನಿದರ್ಶಿಸುತ್ತವೆ. ಸರಳವಾಗಿ ಎಳೆದ ಗೆರೆಗಳಲ್ಲಿ ಆಯಾ ಪ್ರಾಣಿಗಳ ಗುಣ ಸ್ವಭಾವಗಳು ಎದ್ದು ಕಾಣುತ್ತವೆ. ಆನೆ, ಗೂಳಿ, ಕಾಡುಕೋಣಗಳ ಗಾಂಭೀರ್ಯ ನಿಲುವು, ಜಿಂಕೆಗಳ ಮುಗ್ಧತೆ, ಚುರುಕುತನ ಚಿತ್ರಗಳಲ್ಲಿ ವ್ಯಕ್ತವಾಗುತ್ತದೆ. ಹೆಚ್ಚಿನ ಚಿತ್ರಗಳನ್ನು ಸಾಮಾನ್ಯವಾಗಿ ಕೆಮ್ಮಣ್ಣಿನಂಥ ಬಣ್ಣದಿಂದ ಚಿತ್ರಿಸಲಾಗಿದೆ. ತೆಳುಮಸುಕು ಬಿಳಿ ಬಣ್ಣವನ್ನು ಬಳಸಲಾಗಿದೆ. ಕಾಲಮಾನದ ವೈಪರೀತ್ಯದಿಂದ ಈ ಬಣ್ಣಗಳು ಮಾಸಿದ್ದು ಕೆಲವು ಕಡೆ ಚಿತ್ರಗಳನ್ನು ಗುರುತಿಸುವುದು ಕಠಿಣವಾಗಿದೆ.

**ಚಿತ್ರ ಪ್ರಕಾರಗಳು : ಪಶು ಪ್ರಾಣಿಗಳು**

ವೈವಿಧ್ಯ ಪ್ರಾಣಿಗಳು ಚಿತ್ರಿತಗೊಂಡಿರುವುದು, ಗಮನಾರ್ಹವಾಗಿದೆ. ಆನೆ, ಕೋಣ, ಎಮ್ಮೆ, ಚಿಗರೆ, ಜಿಂಕೆ, ಚಿರತೆ,ಹುಲಿ, ಕುದುರೆ, ಉಡ ಹಾಗೂ ಕತ್ತೆಕಿರುಬ ಪ್ರಾಣಿಗಳ ಚಿತ್ರಗಳು ಕಂಡುಬರುತ್ತವೆ. ಗೂಳಿ, ಹುಲಿ, ಕಾಡುಕೋಣಗಳ ನಿರ್ಭಯವಾಗಿ ಸಹಜವಾಗಿ ನಿಂತಾಗ ಎದ್ದು ಕಾಣುವ ಗಾಂಭೀರ್ಯತೆಯನ್ನು, ಜಿಂಕೆಗಳ ಮುಗ್ಧತೆಯನ್ನು ಸಹಜವಾಗಿ ಗೆರೆಗಳಲ್ಲಿ ಸೆರೆ ಹಿಡಿಯಲಾಗಿದೆ. ೨ನೆಯ ಕಲ್ಲಾಸರೆಯಲ್ಲಿ ತೆಳುವಾದ ರೇಖೆಯಲ್ಲಿ ಬಿಡಿಸಿರುವ ಕಾಡುಕೋಣದ ಚಿತ್ರ ಅತ್ಯಂತ ಸಹಜ, ಸುಂದರ ಚಿತ್ರವೆನ್ನಬಹುದು. ಉದ್ಧವಾಗಿ ಒಳಬಾಗಿರುವ ಕೋಡು, ಎದೆಭಾಗ ದಷ್ಟ ಪುಷ್ಠವಿರುವ ಮುಂಡಗಳು ಪ್ರಮಾಣಬದ್ಧವಾಗಿವೆ. ಇಲ್ಲಿಯೇ ಇರುವ ಜಿಂಕೆಗಳ ಚಿತ್ರಗಳೂ ಕುತೂಹಲ ಉಂಟುಮಾಡುತ್ತವೆ. ಅವು ಪರಸ್ಪರ ಎದುರುಬದುರಾಗಿ ನಿಂತಿದ್ದರೂ ಮುಖಗಳನ್ನು ಮುಂಡದ ಹಿಂಭಾಗಕ್ಕೆ ಹೊರಳಿಸಿವೆ. ಎರಡರ ಮಧ್ಯದಲ್ಲಿ ದುಂಡಾದ ವಸ್ತುವನ್ನು ಇರಿಸಿದಂತಿದ್ದು ವಿಶೇಷವೆನಿಸುತ್ತದೆ. ಜೊತೆಗೆ ಪರಸ್ಪರ ಎದುರು ಮುಖಮಾಡಿ ನಿಂತಿರುವ ಜಿಂಕೆಗಳು, ೩ನೆಯ ಕಲ್ಲಾಸರೆಯಲ್ಲಿ ಒಂದರ ಬದಿ ಒಂದು ನಿಂತಿರುವ ಜಿಂಕೆಗಳ ಚಿತ್ರಗಳು ವಿಶಿಷ್ಟ ರಚನೆ ಎನ್ನಿಸುತ್ತವೆ. ೫ನೆಯ ಕಲ್ಲಾಸರೆಯ ದಕ್ಷಿಣ ಬದಿಯಲ್ಲಿ ಬಿಡಿಸಿರುವ ಜಿಂಕೆಯ ಚಿತ್ರ ಒಂದು ಸರಳ ಸಹಜದ ರಚನೆ. ಬಾಲವನ್ನು ನೇರವಾಗಿ ಸೆಟಿಸಿ ಮುಖವನ್ನು ಮೇಲಕ್ಕೆತ್ತಿ ನಿಂತಭಂಗಿ ಕಲಾವಿದನ ಕಲಾಪ್ರಜ್ಞೆಗೆ ಸಾಕ್ಷಿಯಾಗಿದೆ. ೧ನೇ ಗವಿಯಲ್ಲಿದ್ದ ಗಬ್ಬದ ಜಿಂಕೆಯ ಚಿತ್ರ ಗಮನಾರ್ಹ. ಪ್ರಾಯಶಃ ಇದು ಮಾಂತ್ರಿಕ ಕಟ್ಟಳೆಗಳಿಗೆ ಸಂಬಂಧಿಸಿದ್ದು ಎನ್ನಬಹುದು.




ಮನುಷ್ಯ ಹಾಗೂ ವಿವಿಧ ಪ್ರಾಣಿಗಳು (೫ನೇ ಕಲ್ಲಾಸರೆ)




ವಿವಿಧ ಪ್ರಾಣಿಗಳು (೨ನೆ ಕಲ್ಲಾಸರೆ)

೨ನೆಯ ಕಲ್ಲಾಸರೆಯಲ್ಲಿ ಗೂಳಿ ಎತ್ತುಗಳ ಚಿತ್ರಗಳಿವೆ. ಸಾಮಾನ್ಯವಾಗಿ ಅವೆರಡರ ದೇಹರಚನಾ ವಿನ್ಯಾಸ ಒಂದೇ ತೆರನಾಗಿರುತ್ತದೆ. ಇವುಗಳ ಚಿತ್ರರಚನಾ ಸಂದರ್ಭದಲ್ಲಿ ಚಿತ್ರರಚನಾಕಾರನಿಗೆ ಅವುಗಳ ವಿಶಿಷ್ಠ ಅಂಗಭಂಗಿಗಳ ಪರಿಕಲ್ಪನೆ ಇರಬೇಕಾಗುತ್ತದೆ. ಪ್ರಸ್ತುತ ಚಿತ್ರಗಳಲ್ಲಿ ಎತ್ತು, ಗೂಳಿಗಳ ಚಿತ್ರಗಳನ್ನು ಸ್ಪಷ್ಟವಾಗಿ ಗುರುತಿಸುವಂತೆ ಬಿಡಿಸಿರುವ ರೀತಿ ಗಮನಾರ್ಹವೆನಿಸುತ್ತದೆ. ಆಂಗಿಕವಾಗಿ ಗೂಳಿಯ ಇಣಿ ಎತ್ತಿನದಕ್ಕಿಂತ ದೊಡ್ಡ ದಾಗಿರುವುದು ಮತ್ತು ಎತ್ತು ಸಹಜ ಭಂಗಿಯಲ್ಲಿದ್ದರೆ ಗೂಳಿಯ ಗಾಂಭೀರ್ಯತೆ ಅದರ


ಭಂಗಿಯಲ್ಲಿ ವ್ಯಕ್ತವಾಗುತ್ತಿದೆ. ೩ನೆಯ ಕಲ್ಲಾಸರೆ ಬೆಟ್ಟದ ಮೇಲ್ತುದಿಯಲ್ಲಿ ಇದೆ. ಇಕ್ಕಟ್ಟಾದ ಜಾಗದಲ್ಲಿರುವ ಇದರಲ್ಲಿ ಚಿತ್ರಗಳನ್ನು ಬಿಡಿಸಿರುವುದು ಆಶ್ಚರ್ಯದಾಯಕ. ಇಲ್ಲಿ ಹುಲಿ, ಚಿರತೆಯಂತಹ ಕ್ರೂರ ಪ್ರಾಣಿಗಳ ಚಿತ್ರಗಳಿವೆ. ಚಿರತೆಯ ಮೈಮೇಲೆ ಚುಕ್ಕೆಗಳನ್ನು ಹುಲಿಯ ಮೈಮೇಲೆ ಪಟ್ಟೆಗಳನ್ನು ಬಿಡಿಸಲಾಗಿದ್ದು, ಬಾಲ ಮೇಲಕ್ಕೆತ್ತಿರುವುದು ಸಹಜವೆನಿಸುತ್ತದೆ. ೯ನೆಯ ಕಲ್ಲಾಸರೆಯಲ್ಲಿಯ ಹುಲಿಯ ಚಿತ್ರ ದೊಡ್ಡ ಅಳತೆಯಲ್ಲಿದೆ. ಇದಕ್ಕೆ ನಾಲ್ಕು ಅಂಗಗಳನ್ನು ಬಿಡಿಸಿರುವುದು ಗಮನಾರ್ಹ.



ಹುಲಿ, ಚಿರತೆ, ಜಿಂಕೆಗಳು (೩ನೆ ಕಲ್ಲಾಸರೆ)



ಆನೆಗಳ ಹಿಂಡು (೪ನೆ ಕಲ್ಲಾಸರೆ) | ಮನುಷ್ಯ ರೇಖಾ ಚಿತ್ರಗಳು (೭ನೆ ಕಲ್ಲಾಸರೆ) | ಉಡ (೮ನೆ ಕಲ್ಲಾಸರೆ) | ಗಬ್ಬಾದ ಜಿಂಕೆ (೧ನೆ ಕಲ್ಲಾಸರೆ)



ಕತ್ತೆ ಕಿರುಬ, ಹುಲಿ (೯ನೆ ಕಲ್ಲಾಸರೆ)

ಳನೇ ಕಲ್ಲಾಸರೆಯನ್ನು ಆನೆಗಳ ಹಿಂಡಿನ ಚಿತ್ರವಿದೆ. ಆನೆಗಳ ಮುಖಭಾಗ ಮತ್ತು ಹಿಂಬದಿಯ ಅರ್ಧಭಾಗ ಮಾತ್ರ ಸ್ಪಷ್ಟವಿದೆ. ಆದರೂ ಆನೆಗಳ ದೈಹಿಕ ದಾಢ್ಯತೆಯನ್ನು ಪುಷ್ಠಭಾಗದಲ್ಲಿ ಬೆನ್ನನ್ನು ಕಮಾನಿನಂತೆ ಬಾಗಿಸಿರುವುದರಿಂದ ಎತ್ತಿ ತೋರಿಸಲಾಗಿದೆ. ಆದರೆ ಇದರ ಬಾಲ ಸ್ವಲ್ಪ ಉದ್ದ ಮತ್ತು ಉದ್ದಕ್ಕೂ ಕೂದಲಿನಂತೆ ಆ ಕಡೆ ಈ ಕಡೆ ಸಣ್ಣ ರೇಖೆಗಳಿವೆ. ವಾಸ್ತವವಾಗಿ ಆನೆಯ ಬಾಲದ ತುದಿಯಲ್ಲಿ ಕೂದಲಿನ ಸಣ್ಣ ಗೊಂಡೆಯಿರುವುದೇ ವಿನಾಃ ಉದ್ದಕ್ಕೂ ಕೂದಲಿರುವುದಿಲ್ಲ. ಆದ್ದರಿಂದ ಈ ಬಾಲದ ವಿಶಿಷ್ಟ ಲಕ್ಷಣದ ಮರ್ಮವನ್ನು ತಿಳಿಯಬೇಕಾಗಿದೆ. ಲನೆಯ ಕಲ್ಲಾಸರೆಯ ಉಡದ ಚಿತ್ರ ಕೂಡ ಒಂದು ವಿಶೇಷ ರಚನೆ. ಉಡದ ಮೈಮೇಲೆ ಮಧ್ಯಭಾಗದಿಂದ ಎರಡೂ ಬದಿಗೆ ವಕ್ರರೇಖೆಗಳನ್ನು ಹಾಕಲಾಗಿದೆ. ವಾಸ್ತವವಾಗಿ ಉಡದ ದೇಹದ ಮೇಲೆ ಈ ರೀತಿ ಇರುವುದಿಲ್ಲ ಹಾಗಾಗಿ ಈ ರೇಖೆಗಳು ಅಲಂಕರಣೆಯ ಉದ್ದೇಶದವೆಂದು ಹೇಳಬಹುದು. ಹಿರೇಬೆಣಕಲ್‌ನ ಹದಿನಾರ ನೆಯ ಕಲ್ಲಾಸರೆಯಲ್ಲಿಯೂ ಇದೇ ರೀತಿ ವಜ್ರಾಕೃತಿಯ ಅಕಂಕರಣೆಯುಳ್ಳ ಉಡದ ಚಿತ್ರಗಳನ್ನು ಇಲ್ಲಿ ಗಮನಿಸಬಹುದು. ಉಳಿದಂತೆ ಇತರ ಪ್ರಾಣಿಗಳ ಚಿತ್ರಗಳಲ್ಲಿ ವಿಶೇಷ ಅಂಶಗಳೇನಿಲ್ಲ.


**ಮನುಷ್ಯ ಚಿತ್ರಗಳು**

ಮನುಷ್ಯ ಚಿತ್ರಗಳು ಹೆಚ್ಚಾಗಿ ಒಂದೇ ರೀತಿಯಲ್ಲಿವೆ. ದ್ವಿತ್ರಿಕೋನಾಕಾರದ ಮುಂಡದ ರಚನೆಯಲ್ಲಿ ಛಾಯಾ ಇಲ್ಲವೇ ಬಾಹ್ಯರೇಖಾ ರೂಪದಲ್ಲಿವೆ. ಕೈಯ ಬೆರಳಿನಿಂದ ಗೆರೆ ಮೂಡಿಸಿ ಬಿಡಿಸಿರುವ ಮನುಷ್ಯ ಚಿತ್ರಗಳು ರೇಖಾರೂಪದಲ್ಲಿವೆ. ೭ನೇ ಕಲ್ಲಾಸರೆಯಲ್ಲಿಯ ಮನುಷ್ಯ ಚಿತ್ರ ೩೦ ಸೆಂ.ಮೀ. ಎತ್ತರವಿದ್ದು ಗಮನ ಸೆಳೆಯುತ್ತದೆ. ನಿಂತಭಂಗಿಯಲ್ಲಿದೆ. ಇಲ್ಲಿಯ ರೇಖಾರೂಪದ ಮನುಷ್ಯ ಚಿತ್ರಗಳ ಜೊತೆ ಇನ್ನೊಂದು ಮನುಷ್ಯ ಚಿತ್ರ ಕುತೂಹಲದಾಯಕವಾಗಿದೆ. ಉದ್ದವಾದ, ನಿಲುವಾಗಿ ಮತ್ತು ದೋತಿಯನ್ನು ಧರಿಸಿದಂತಿದೆ. ಇಂಥಹದೇ ಚಿತ್ರವೊಂದು ಗಂಗಾವತಿ ತಾಲ್ಲೂಕಿನ ಸಂಗಾಪುರದ ಐದನೆಯ ಕಲ್ಲಾಸರೆಯಲ್ಲಿದೆ. ಈ ಚಿತ್ರದ ವೈಶಿಷ್ಟ್ಯತೆಯನ್ನು ಗುರುತಿಸಬೇಕಾಗಿದೆ. ೧ನೇ ಗವಿಯಲ್ಲಿ ಆಯುಧ ಹಿಡಿದ ಮನುಷ್ಯ ಚಿತ್ರಗಳು, ಸಮೂಹ ಕುಣಿತದ ಚಿತ್ರಗಳಿವೆ. ಬಿಡಿ ಕೆಂಪು ಮತ್ತು ಬಿಳಿ ಬಣ್ಣದ ಕಡ್ಡಿರೂಪದ ಮನುಷ್ಯ ಚಿತ್ರಗಳು ವಿವಿಧ ಭಂಗಿಯಲ್ಲಿವೆ. ೫ನೇ ಕಲ್ಲಾಸರೆಯಲ್ಲಿರುವ ಸ್ತ್ರೀ ಚಿತ್ರವೊಂದು

ಗಮನಾರ್ಹವಾಗಿದೆ. ಮುಂಡ ಕೋಲಿನಂತೆ ನೀಳವಾಗಿದ್ದು, ತಲೆಯಲ್ಲಿ ಜಡೆಗಳು ಎರಡೂ ಕಡೆ ಇಳಿಬಿದ್ದಿರುವುದು ಅಲ್ಲದೆ ಎರಡೂ ಸ್ತನಗಳನ್ನು ದೊಡ್ಡ ಪ್ರಮಾಣದಲ್ಲಿ ತೋರಿಸಲಾಗಿದೆ. ಸ್ತ್ರೀ ಚಿತ್ರಕ್ಕೆ ಸಂಬಂಧಿಸಿದಂತೆ ಇದೊಂದು ಅಪರೂಪದ ರಚನೆಯಾಗಿದೆ. ಕುಟ್ಟಿ ಮೂಡಿಸಿದ ಚಿತ್ರಗಳಲ್ಲಿ ಇತಿಹಾಸ ಕಾಲದ ಮನುಷ್ಯನ ಚಿತ್ರಗಳು ಹೆಚ್ಚಿವೆ.

**ಇತರ ಚಿತ್ರಗಳು**

ಇತರ ಚಿತ್ರಗಳಲ್ಲಿ ಪ್ರಾಣಿ ಸವಾರಿಯಂತಹ ಸಂಯುಕ್ತ ಚಿತ್ರಗಳು ಇಲ್ಲ. ಆದರೆ ೧೩ನೇ ಕಲ್ಲಾಸರೆಯಲ್ಲಿ ಇತಿಹಾಸ ಕಾಲದ ಬಿಳಿ ಬಣ್ಣದಲ್ಲಿ ರಚಿಸಿರುವ ಒಂದು ಚಿಕ್ಕ ಆನೆ ಸವಾರನ ಚಿತ್ರವಿದೆ. ಅದು ಅಂಥ ಗಮನಾರ್ಹವಾಗಿಲ್ಲ. ದೃಶ್ಯ ಚಿತ್ರಗಳಲ್ಲಿ ಕೆಲವು ಗಮನ ಸೆಳೆಯುತ್ತವೆ. ೧ನೇ ನೆಲೆಯಲ್ಲಿ ಸಾಲು ಕುಣಿತದ ದೃಶ್ಯವಿದೆ. ಹಾಗೇ ೨ನೇ ಕಲ್ಲಾಸರೆಯಲ್ಲಿ ಪಶುಪಾಲನೆಯ ದೃಶ್ಯವೊಂದನ್ನು ಗ್ರಹಿಸಬಹುದು. ವ್ಯಕ್ತಿಯೊಬ್ಬ ಕೈಯಲ್ಲಿ ಉದ್ದವಾದ ಕೋಲನ್ನು ಹಿಡಿದಿದ್ದು ಅವನ ಸುತ್ತಲೂ ಪಶುಗಳ ಚಿತ್ರಗಳಿವೆ. ಇದೊಂದು ವಿಶೇಷ ಚಿತ್ರ ಹಾಗೇ ೧೧ನೇ ಕಲ್ಲಾಸರೆಯಲ್ಲಿ ಸ್ತ್ರೀ ಪುರುಷರ ಸಂಭೋಗದ ಚಿತ್ರಗಳು ಗಮನೀಯ. ನೆಲೆ ೫ ರಲ್ಲಿ ಬಳ್ಳಿಯಂತಹ ವಿಶಿಷ್ಟ ಆಕೃತಿ ಹಾಗೂ ನೆಲೆ ೮ರಲ್ಲಿ ಐದು ವಜ್ರಾಕೃತಿಯ ಚಿತ್ರವೊಂದಿದೆ. ಸದ್ಯ ಇವು ಏನೆಂದು ಗುರುತಿಸಲಾಗುವುದಿಲ್ಲ.



ಇತಿಹಾಸ ಕಾಲದ ಬಿಳಿಬಣ್ಣದ ಚಿತ್ರಗಳು (೧೩ನೆ ಕಲ್ಲಾಸರೆ)

ಕೊರೆದ ಚಿತ್ರಗಳಲ್ಲಿ ೧೫ನೇ ನೆಲೆಯಲ್ಲಿ ವರ್ಣಚಿತ್ರಿತ ಕಲ್ಲಾಸರೆಗಳ ಸುತ್ತಲಿನ ಬಂಡೆಗಳಲ್ಲಿ ಹಲವು ರೀತಿಯ ಚೌಕ, ಆಯತ ಹಾಗೂ ವೃತ್ತಾಕಾರದ ಅಂಕಣಾ ಕೃತಿಗಳು ಗಮನ ಸೆಳೆಯುತ್ತವೆ. ಇಂದಿಗೂ ಗ್ರಾಮೀಣ ಜನತೆ ಮನರಂಜನೆಗಾಗಿ ಆಡುವ ಹುಲಿಮನೆ, ಪಗಡೆಯಂತಹ ಆಟಗಳ ಅಂಕಣಗಳನ್ನು ಇವು ಹೋಲುತ್ತವೆ. ಇಂಥ ಆಟಗಳು ಮಧ್ಯಕಾಲೀನ ಹಾಗೂ ನಂತರದ ಇತಿಹಾಸ ಕಾಲದಲ್ಲೂ ಪ್ರಚಲಿತದಲ್ಲಿದ್ದ ಬಗ್ಗೆ ಕುರುಗೋಡಿನ ಸಂಗಮೇಶ್ವರ ದೇವಾಲಯದ ನೆಲದ ಹಾಸು ಬಂಡೆ ಹಾಗೂ ಕಕ್ಷಾಸನದ ಬಂಡೆಗಳಲ್ಲಿ ಕೆತ್ತಲಾಗಿರುವ ಅಂಕಣಾಕೃತಿಗಳಿಂದ ಗ್ರಹಿಸಬಹುದು. ಪ್ರಾಗಿತಿಹಾಸಕಾಲದ ನೆಲೆಗಳಲ್ಲಿ ಇಂಥ ಅಂಕಣಾಕೃತಿಗಳು ಹೆಚ್ಚಾಗಿ ಕಂಡುಬರುತ್ತವೆ. ವಿಶೇಷವಾಗಿ ಗಂಗಾವತಿ ತಾಲ್ಲೂಕಿನ ಹಿರೇಬೆಣಕಲ್, ಆಗೋಲಿ, ಸಿದ್ದಿಕೇರಿ, ಹೊಸಪೇಟೆ ತಾಲ್ಲೂಕಿನ ನಾಗೇನಹಳ್ಳಿಗಳಲ್ಲಿ ಇವೆ. ಈ ಹಿನ್ನೆಯಲ್ಲಿ ಇವು ಒಂದು ರೀತಿಯ ಆಟಕ್ಕೆ ಸಂಬಂಧಿಸಿರಬೇಕೆಂದು ಹೇಳಬಹುದು ಇವುಗಳ ಕುರಿತ ಹೆಚ್ಚಿನ ಅಧ್ಯಯನ ಅವಶ್ಯ.

**ತಾಂತ್ರಿಕಾಂಶಗಳು**

ಕುರುಗೋಡು ಪರಿಸರದ ಪ್ರಾಕ್ಚಾರಿತ್ರಿಕ ಚಿತ್ರಕಲೆಗಳ ನೆಲೆಗಳನ್ನು ಅನುಲಕ್ಷಿಸಿದಾಗ ಬಹುಮಟ್ಟಿಗೆ ಅವು ವಾಸದ ಸ್ಥಾನಗಳಿಗಿಂತ ತಾತ್ಕಾಲಿಕ ಆಶ್ರಯ ಪಡೆದಿದ್ದ ನೆಲೆಗಳಲ್ಲಿ ರಚಿತವಾಗಿರುವುದು ಕಂಡುಬರುತ್ತವೆ. ೧,೨ ಹಾಗೂ ೯ನೇ ಕಲ್ಲಾಸರೆಗಳು ಚಿತ್ರ ರಚನೆಗೆ ಪ್ರಶಸ್ಥವಾದ ಸ್ಥಳವಾಗಿವೆ. ಆದರೆ ೩,೪,೭ ಹಾಗೂ ೧೨ನೇ ನೆಲೆಗಳು ತಲುಪಲು ಕಠಿಣವಾದ ಬೆಟ್ಟದ ಭಾಗದಲ್ಲಿವೆ. ೩ನೆಯ ಕಲ್ಲಾಸರೆಯಂತೂ ನೆಲದಿಂದ ಸುಮಾರು ೨೦ ಅಡಿ ಎತ್ತರದಲ್ಲಿದೆ. ಇಲ್ಲಿ ಹಾಗೂ ೪ನೇ ಕಲ್ಲಾಸರೆಯಲ್ಲಿ ಅಂಗಾತವಾಗಿ ಮಲಗಿ ಪ್ರಯಾಸದಿಂದ ಮಾತ್ರ ಚಿತ್ರಗಳನ್ನು ಬಿಡಿಸಲು ಸಾಧ್ಯ. ಅದೇ ರೀತಿ ೫ ಹಾಗೂ ೮ನೇ ಕಲ್ಲಾಸರೆಗಳು ಬೆಟ್ಟದ ತೀರ

ಮೇಲ್ಭಾಗದಲ್ಲಿವೆ. ತಾತ್ಕಾಲಿಕ ಆಶ್ರಯಕ್ಕೂ ಇವು ಯೋಗ್ಯವಾಗಿಲ್ಲ. ಸಾಮಾನ್ಯವಾಗಿ ಪ್ರಾಗಿತಿಹಾಸಕಾಲದ ಮಾನವ ತನ್ನ ಜೀವನ ಚಟುವಟಿಕೆಗೆ ಪೂರಕವಾಗಿದ್ದ ಸ್ಥಳಗಳಲ್ಲಿ ಚಿತ್ರಗಳನ್ನು ಬಿಡಿಸಿರುವುದು ಕಂಡುಬರುತ್ತವಾದರೂ ಕುರುಗೋಡು ಪ್ರದೇಶದಲ್ಲಿ ಭಿನ್ನ ನೆಲೆಗಳಲ್ಲಿ ಚಿತ್ರಗಳಿರುವುದು ವಿಶೇಷ. ಚಿತ್ರದ ನೆಲೆಗಳು, ಗಬ್ಬದ ಜಿಂಕೆ, ನಗ್ನ ಪುರುಷ - ಸ್ತ್ರೀ ಮುಂತಾದ ಚಿತ್ರಗಳನ್ನು ಅನುಲಕ್ಷಿಸಿದಾಗ ಇಲ್ಲಿ ಮಾಂತ್ರಿಕ ಕಟ್ಟಳೆಯ ಉದ್ದೇಶದಿಂದ ರಚಿತವಾಗಿರುವ ಸಾಧ್ಯತೆಯನ್ನು ಗ್ರಹಿಸಬಹುದು.

ಚಿತ್ರಗಳ ರಚನೆಗಾಗಿ ಮರದ ರೆಂಬೆಗಳ ತುದಿಯನ್ನು ಜಜ್ಜಿ ಮಾಡಿದ ಕುಂಚಗಳನ್ನು ಬಳಸಲಾಗಿದೆ. ಮನುಷ್ಯರ ಕಡ್ಡಿರೂಪದ ಚಿತ್ರಗಳನ್ನು ಬೆರಳಿನಿಂದ ಮೂಡಿಸಲಾಗಿದೆ. ಕೆಂಪು ಬಣ್ಣಕ್ಕಾಗಿ ಸುರಮ ಎಂಬ ಖನಿಜವನ್ನು, ಬಿಳಿ ಬಣ್ಣಕ್ಕಾಗಿ ಸುಣ್ಣವನ್ನು ಬಳಸಲಾಗಿದೆ. ಇಲ್ಲಿ ಚಿತ್ರಗಳು ಪ್ರಮಾಣದಲ್ಲಿ ಗಮನಾರ್ಹವಾಗಿಲ್ಲ. ೨ ಸೆಂ.ಮೀ. ನಿಂದ ಹಿಡಿದು. ೧.೬೦ ಮೀ. ಉದ್ದದ, ೦.೩೦ ಮೀ. ಎತ್ತರದ ಚಿತ್ರಗಳಿವೆ. ೨ನೆ ನೆಲೆಯ ಜಿಂಕೆ, ಕಾಡುಕೋಣ, ಗೂಳಿ, ೫ನೇ ನೆಲೆಯ ಜಿಂಕೆ, ೮ನೆ ನೆಲೆಯ ಉಡ, ೯ನೇ ನೆಲೆಯ ಹುಲಿ, ಕತ್ತೆಕಿರುಬ ಚಿತ್ರಗಳು ಶೈಲಿಯಲ್ಲಿ, ರಚನಾವಿನ್ಯಾಸದಲ್ಲಿ ಸಹಜ ಸುಂದರವಾಗಿದೆ.

**ಕಾಲಮಾನ**

ಪ್ರಾಗಿತಿಹಾಸಕಾಲದ ಚಿತ್ರಗಳ ಕಾಲನಿರ್ಣಯ ಸ್ವಲ್ಪ ಕ್ಲಿಷ್ಟಕರವಾದ ಸಂಗತಿ ಎನ್ನಬಹುದು ಆದಾಗ್ಯೂ ಚಿತ್ರಿತ ನೆಲೆಗಳ ಸಾಂಸ್ಕೃತಿಕ ಪರಿಸರ, ಬೇರೆಡೆಯಲ್ಲಿನ ಕಾಲ ನಿರ್ಧರಿತ ವಸ್ತು ಚಿತ್ರಗಳೊಡನೆ ಹೋಲಿಕೆ ಹಾಗೂ ಚಿತ್ರಗಳ ತಾಂತ್ರಿಕ ಅಂಶಗಳಿಂದ ಸ್ಥೂಲವಾಗಿ ಚಿತ್ರಗಳ ಕಾಲವನ್ನು ನಿರ್ಧರಿಸಬಹುದು.

ಕುರುಗೋಡು ಬೆಟ್ಟ ಪರಿಸರದಲ್ಲಿ ಈ ಮೊದಲೇ ನೂತನ ಶಿಲಾತಾಮ್ರಯುಗದಿಂದ ಹಿಡಿದು ಬೃಹತ್‌ಶಿಲಾಯುಗ, ಆದಿ ಇತಿಹಾಸ ಕಾಲದ ಅನೇಕ ಸಾಂಸ್ಕೃತಿಕ ಅವಶೇಷಗಳು ದೊರೆತಿರುವುದರಿಂದ ಆ ಕಾಲ ಘಟ್ಟಗಳೆಲ್ಲಲ್ಲ ಇಲ್ಲಿ ಮಾನವ ವಾಸ್ತವ್ಯದ ಸಂಗತಿ ಸ್ಪಷ್ಟವಾಗುತ್ತದೆ. ಇಲ್ಲಿಯ ಕೆಲವು ಚಿತ್ರಗಳು ಗಂಗಾವತಿ ತಾಲ್ಲೂಕಿನ ಶಿಲಾತಾಮ್ರಯುಗದ ನೆಲೆಗಳ, ಹಿರೇಬೆಣಕಲ್‌ನ ಬೃಹತ್‌ಶಿಲಾಯುಗದ ನೆಲೆಗಳ ಚಿತ್ರಗಳನ್ನು ಹೋಲುತ್ತಿರುವುದನ್ನು ಗುರುತಿಸಬಹುದು. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಚಿತ್ರಗಳ ಶೈಲಿ, ವರ್ಣ ಹಾಗೂ ತಂತ್ರಗಾರಿಕೆಯನ್ನು ಅನುಲಕ್ಷಿಸಲಾಗಿ ಇಲ್ಲಿಯ ಚಿತ್ರಗಳು ಬಹುಶಃ ಶಿಲಾತಾಮ್ರಯುಗದ ಕೊನೆಯ ಹಂತ (ಕ್ರಿ.ಪೂ. ಸುಮಾರು ೧೪೦೦-೮೦೦), ಬೃಹತ್ ಶಿಲಾಯುಗದ ಆದಿಮಧ್ಯಭಾಗದ (ಕ್ರಿ.ಪೂ. ಸುಮಾರು ೧೦೦೦-೫೦೦) ಕಾಲದ್ದೆಂದು, ಕೊರೆದ ಅಂಕಣಾಕೃತಿಗಳು ಬೃಹತ್‌ಶಿಲಾಯುಗ ಕಾಲದ, ಬಿಳಿವರ್ಣದ ಮತ್ತು ಕಟ್ಟಿ ಮೂಡಿಸಿದ ಚಿತ್ರಗಳು ಆದಿಚಾರಿತ್ರಿಕ ಕಾಲದ್ದವೆಂದು ನಿರ್ಣಯಿಸಬಹುದು.

**ಸಮಾರೋಪ**

ಕುರುಗೋಡು ಪ್ರದೇಶದ ಪ್ರಾಕ್ಚಾರಿತ್ರಿಕ ಚಿತ್ರಗಳ ಅಧ್ಯಯನದಿಂದ ಆ ಪರಿಸರದಲ್ಲಿ ವಾಸವಿದ್ದ ಪ್ರಾಚೀನ ಮಾನವ ತನ್ನ ಭಾವನೆಗಳ ಅಭಿವ್ಯಕ್ತಿಯ ಕಲಾಪ್ರಜ್ಞೆಯನ್ನು ಹೊಂದಿದ್ದನೆಂದು ತಿಳಿಯುತ್ತದೆ. ಸುಮಾರು ೧೫ಕ್ಕೂ ಹೆಚ್ಚಿನ ನೆಲೆಗಳಲ್ಲಿ ಚಿತ್ರಗಳು ಕಂಡುಬರುತ್ತಿರುವುದು ಗಮನಾರ್ಹವೇ ಸರಿ. ಇಲ್ಲಿಯ ಚಿತ್ರಗಳಲ್ಲಿ ಮನುಷ್ಯ ಚಿತ್ರಗಳಿಗಿಂತ ಪಶು ಪ್ರಾಣಿಗಳ ವೈವಿಧ್ಯತೆ ಇದೆ. ಚಿತ್ರಗಳ ವಿಷಯ ವಸ್ತು ವೈವಿಧ್ಯವಾಗಿಲ್ಲ. ಪ್ರಮಾಣದ ದೃಷ್ಟಿಯಿಂದ (ಅಳತೆ) ಚಿಕ್ಕ ಮತ್ತು ಮಧ್ಯಮ ಪ್ರಮಾಣದಲ್ಲಿವೆ. ಶೈಲಿ ಭಂಗಿಯಲ್ಲಿ ಕೆಲವು ಚಿತ್ರಗಳು ಕಲಾವಂತಿಕೆಯಿಂದ ಪರಿಪೂರ್ಣವೆನಿಸುತ್ತವೆ. ಕುಟ್ಟಿ/ಕೊರೆದ ಚಿತ್ರಗಳಿಗಿಂತ ವರ್ಣಚಿತ್ರಗಳು ಸಂಖ್ಯೆಯಲ್ಲಿ ಅಧಿಕವಾಗಿದೆ. ವರ್ಣಚಿತ್ರಕ್ಕೆ ಸಾಮಾನ್ಯವಾಗಿ ಕೆಮ್ಮಣ್ಣು ಬಳಸಲಾಗಿದೆ. ಬಿಳಿಬಣ್ಣವನ್ನು ತೀರ ವಿರಳವಾಗಿ ಬಳಸಲಾಗಿದೆ.

ಚಿತ್ರಗಳು ಆಯಾ ಕಾಲದ ಜೀವನ ವಿಧಾನ ಹಾಗೂ ನಂಬಿಕೆಗಳ ಸುತ್ತ ಕೇಂದ್ರಿಕೃತವಾಗಿರುವುದನ್ನು ಗುರುತಿಸಬಹುದು. ಪ್ರಾಚೀನ ಮಾನವ ತನಗೆ ಆಹಾರವಾಗಿರಬಹುದಾದ ಪ್ರಾಣಿಗಳ ಅಭಿವೃದ್ಧಿ, ಬೇಟೆ ಹಾಗೂ ತನ್ನ ಸಂತಾನಾಭಿವೃದ್ಧಿಯ ಮೂಲನೆಲೆಯಲ್ಲಿ ಚಿತ್ರಗಳು ರಚಿತವಾಗಿರುವುದು ಸ್ಪಷ್ಟ. ಚಿತ್ರಗಳ ಉದ್ದೇಶ ಈ ರೀತಿಯಲ್ಲಿ ಮಾಂತ್ರಿಕ ಹಿನ್ನೆಲೆಯನ್ನು ಹೊಂದಿದ್ದರೂ ಆ ಮೂಲಕ ಅವು

ಕಟ್ಟಿಕೊಡುವ ಪ್ರಾಗಿತಿಹಾಸಕಾಲದ ಮಾನವನ ಜೀವನ ಚಟುವಟಿಕೆ ಅಪೂರ್ವ. ಅವನ ಪಶುಪಾಲನೆ, ಬೇಟೆಗಾರಿಕೆ, ಮನರಂಜನೆ ಸಮೂಹ ಕುಣಿತ, ಮಾಂತ್ರಿಕ ಆರಾಧನೆ. ಅವನು ಬಳಸುತ್ತಿದ್ದ ಆಯುಧಗಳು ಮುಂತಾದ ಸಂಗತಿಗಳು ಚಿತ್ರಗಳ ಮೂಲಕ ಅನಾವರಣಗೊಳ್ಳುತ್ತವೆ. ಹಾಗೇ ಚಿತ್ರಗಳು ಅವನ ಕಲಾ ಪ್ರಜ್ಞೆಗೆ ಸಾಕ್ಷಿಯಾಗಿವೆ.

ಚಿತ್ರಗಳು ಸಾಂಕೇತಿಕವಾಗಿದ್ದರೂ ಆ ಸಾಂಕೇತಿಕ ವಿನ್ಯಾಸ ಸತ್ವಶಾಲಿಯಾಗಿದೆ. ಭಾವಾಭಿ ವ್ಯಕ್ತಿಯಲ್ಲಿ ಪರಿಣಾಮಕಾರಿಯಾಗಿವೆ. ಪ್ರಾಗಿತಿಹಾಸಕಾಲದ ಈ ಕಲಾತ್ಮಕ ಅಂಶಗಳ ಪ್ರೇರಣೆಯ ಹಿನ್ನೆಲೆಯಲ್ಲಿ ಮುಂದೆ ಚರಿತ್ರೆಯುದ್ದಕ್ಕೂ ಸುಂದರ ದೇಗುಲದ ಕಲಾಕೃತಿಗಳು, ಶಿಲ್ಪಕಲಾಕೃತಿಗಳು ಕುರುಗೋಡು ಪ್ರದೇಶದಲ್ಲಿ ಸೃಷ್ಟಿಗೊಳ್ಳಲು ಕಾರಣವಾಯಿತೆನ್ನಬಹುದು.

[1] ಸುಂದರ ಅ., ೧೯೯೪, ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

[2] ಫೂಟ್, ಆರ್.ಬಿ,; ೧೯೧೬, "ದಿ ಫೂಟ್ ಕಲೆಕ್ಷನ್ ಆಫ್ ದಿ ಇಂಡಿಯನ್ ಪ್ರಿ ಹಿಸ್ಟಾರಿಕ್ ಆಂಡ್ ಪ್ರೋಟೊ ಹಿಸ್ಟಾರಿಕ್ ಆಂಟಿಕ್ವಟಿಸ್, ನೋಟ್ಸ್ ಆನ್ ದೇರ್ ಏಜಸ್ ಆಂಡ್ ಡಿಸ್ಟ್ರಿಬ್ಯೂಷನ್" ಪುಟ ೮೭-೮೯, ಮದ್ರಾಸ್

[3] ಕೃಷ್ಣಮೂರ್ತಿ ಎಂ.ಎಸ್., ೧೯೭೭ಮ, "ಕುರುಗೋಡು ಆನ್ ಆರ್ಕಿಯಾಲಾಜಿಕಲ್ ನೋಟ್" ಆರ್ಕಿಯಾಲಾಜಿಕಲ್ ಸ್ಟಡೀಸ್, ಸಂ.೨, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪುಟ : ೧೦೬-೧೧೦.

[4] ಸುಂದರ ಅ., ಪೂರ್ವೋಕ್ತ

[5] ನರಸಿಂಹಮ್ ಡಬ್ಲ್ಯೂ.ವಿ.ಎಸ್., ೧೯೯೮ರಲ್ಲಿ ರಾಸಿ ಸಮ್ಮೇಳನದಲ್ಲಿ ಮಂಡಿಸಿದ ಕುರುಗೋಡು ಕಲೆಗೆ ಸಂಬಂಧಿಸಿದ ಪ್ರಬಂಧ (ಅನಾನುಕೂಲತೆಯಿಂದಾಗಿ ಈ ಪ್ರಬಂಧವನ್ನು ಗಮನಿಸಲು ಸಾಧ್ಯವಾಗಲಿಲ್ಲ).

[6] ಶರಣಬಸಪ್ಪ ಪಿ.ಕೋಲ್ಕಾರ., ೨೦೦೨ : ಕೊಪ್ಪಳ-ಹಂಪಿ ಪ್ರದೇಶದ ಪ್ರಾಗಿತಿಹಾಸ ಕಾಲದ ಕಲೆ, ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆಸಲ್ಲಿಸಿದ ಪಿಎಚ್.ಡಿ.ಪ್ರಬಂಧ (ಅಪ್ರಕಟಿತ)

[7] ಅದೇ.

# ೩. ಚರಿತ್ರೆ

ಬಳ್ಳಾರಿ ಜಿಲ್ಲೆಯಲ್ಲಿ ಪ್ರಾಗಿತಿಹಾಸ ಕಾಲದಿಂದಲೂ ಮಾನವನ ಅಸ್ತಿತ್ವದ ಕುರುಹುಗಳನ್ನು ನಿರಂತರವಾಗಿ ಕಾಣಬಹುದು. ಜಿಲ್ಲೆಯ ವಿವಿಧೆಡೆಗಳಲ್ಲಿ ಅವನು ಬಳಸಿದ ಶಿಲಾಯುಧಗಳು ಹಾಗೂ ರಚಿಸಿದ ಗವಿವರ್ಣಚಿತ್ರಗಳು ಕಂಡುಬಂದಿವೆ. ಅದೇ ರೀತಿ ಬೃಹತ್ ಶಿಲಾಯುಗದ ಅವಶೇಷಗಳು ದೊರೆತಿವೆ. ನಿಟ್ಟೂರು ಮತ್ತು ಉದೇಗೋಳಗಳಲ್ಲಿ ದೊರೆತ ಅಶೋಕನ ಶಾಸನಗಳಿಂದಾಗಿ ಚಾರಿತ್ರಿಕಯುಗ ಆರಂಭವಾಗುತ್ತದೆ. ಈ ಶಾಸನಗಳು ಅಶೋಕನ ಹೆಸರನ್ನು ನೇರವಾಗಿ ಪ್ರಸ್ತಾಪಿಸುವುದರಿಂದ ಇನ್ನೂ ಹೆಚ್ಚಿನ ಮಹತ್ವ ಪಡೆದಿವೆ. ನಿಟ್ಟೂರು ಮತ್ತು ನೆರೆಯ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ ಸಮೀಪದಲ್ಲಿದ್ದು, ನಡುವೆ ಕುರುಗೋಡು ಪ್ರದೇಶವಿದೆ. ಇದರಿಂದ ಈ ಪ್ರದೇಶ ಮೌರ್ಯರ ಆಡಳಿತಕ್ಕೆ ಒಳಪಟ್ಟಿತ್ತೆಂಬುದು ಸುಸ್ಪಷ್ಟ. ಬ್ರಹ್ಮಗಿರಿಯ ಅಶೋಕನ ಶಾಸನದಲ್ಲಿ ಸುವರ್ಣಗಿರಿಯ ಉಲ್ಲೇಖವಿದ್ದು, ಈ ಪ್ರದೇಶ ಸುವರ್ಣಗಿರಿ ಪ್ರಾಂತ್ಯಕ್ಕೆ ಸೇರಿತ್ತು. ಆದರೆ ಸುವರ್ಣಗಿರಿ ಯಾವುದೆಂಬುದು ಇನ್ನೂ ಚರ್ಚೆಯಾಗಿಯೇ ಉಳಿದಿದೆ. ಕುರುಗೋಡು ಸಹ ಇದೇ ಪರಿಸರದಲ್ಲಿರುವುದರಿಂದ, ಇದರ ರಾಜಕೀಯ ಚರಿತ್ರೆಯನ್ನು ಇತಿಹಾಸ ಆರಂಭಕಾಲದಿಂದಲೂ ಗುರುತಿಸಬಹುದಾಗಿದೆ. ಅಂದರೆ ಕರ್ನಾಟಕದ ಆದಿಚಾರಿತ್ರಿಕ ನೆಲೆಗಳಾದ ಬ್ರಹ್ಮಗಿರಿ, ಚಂದ್ರವಳ್ಳಿ, ವಡಗಾಂವ-ಮಾಧವಪುರ, ಬನವಾಸಿ, ತಲಕಾಡು ಮತ್ತು ಹಂಪೆಗಳಂತೆ ಕುರುಗೋಡು ಸಹ ಪ್ರಾಚೀನ ನೆಲೆ.

ಬಳ್ಳಾರಿ ಜಿಲ್ಲೆಯ ಕೋಳೂರಿನ ಶಾಸನವೊಂದು ನಂದರನ್ನು, ಮೌರ್ಯರನ್ನು ಮತ್ತು ಕುಂತಲದೇಶವನ್ನು ಉಲ್ಲೇಖಿಸಿದೆ.

[1] ಬಳ್ಳಾರಿ ಪ್ರದೇಶವು ಕುಂತಲದೇಶಕ್ಕೆ ಸೇರಿತ್ತು. ಕುಂತಲದೇಶ ಪಾಂಡವರ ಕಾಲದಲ್ಲಿ ಪ್ರಸಿದ್ಧವಾಗಿದ್ದು, ಅದನ್ನು ಈಗ ಕುರುಗೋಡು ಎಂದು ಕರೆಯುತ್ತಾರೆ ಎನ್ನಲಾಗಿದೆ. [2]ಈ ಪ್ರಸಿದ್ಧ ಕುಂತಲದೇಶವನ್ನು ನಂದರು ಆಳಿದರೆಂದು ಶಿಕಾರಿಪುರದ ಶಾಸನವೊಂದು ಉಲ್ಲೇಖಿಸಿದೆ. [3]

ಕುರುಗೋಡಿನಲ್ಲಿ ಶಾತವಾಹನರ ಕಾಲಕ್ಕೆ ಸೇರುವ ಮಡಿಕೆ ಮತ್ತಿತರ ಅವಶೇಷಗಳು ಬೆಳಕಿಗೆ ಬಂದಿವೆ. ಕುರುಗೋಡು ಬೆಟ್ಟದ ಮುದ್ದುಗನ ಮೂಲೆ ಎಂಬಲ್ಲಿ ಶಾತವಾಹನರ ಕಾಲದ ನಾಲ್ಕು ಅಕ್ಷರಗಳ ಬಣ್ಣದ ಶಾಸನವೊಂದು ಬೆಳಕಿಗೆ ಬಂದಿದ್ದು, ಪ್ರಕಟಗೊಂಡಿದೆ.[4] ಇದು ಕಪ್ಪು ಬಣ್ಣದಲ್ಲಿ ಬರೆಯಲ್ಪಟ್ಟಿದ್ದು, ಮಳೆಗಾಳಿಗಳಿಂದಾಗಿ ಮಾಸಿದೆ. ಈ ಶಾಸನದ ಅಕ್ಷರವೊಂದನ್ನು "ಮ" ಎಂದು ಓದಲಾಗಿದೆ. ಅಕ್ಷರಗಳು ತ್ರಿಕೋನ ತಲೆಯನ್ನು ಹೊಂದಿದ್ದು, ಬ್ರಾಹ್ಮಿಲಿಪಿಯಲ್ಲಿವೆ. ಶಾಸನದ ಕಾಲವನ್ನು ಕ್ರಿ.ಶ. ೧ನೆಯ ಶತಮಾನ ಎಂದು ಹೇಳಲಾಗಿದೆ. ಕುರುಗೋಡು ಬೌದ್ಧಧರ್ಮದ ನೆಲೆಯಾಗಿತ್ತು.[5] ಸಮೀಪದ ಹಂಪೆಯಲ್ಲೂ ಕ್ರಿ.ಶ. ೧-೨ನೆಯ ಶತಮಾನಕ್ಕೆ ಸೇರಬಹುದಾದ ಶಾಸನೋಕ್ತ ಶಿಲ್ಪಫಲಕಗಳು ಉತ್ಖನನದಲ್ಲಿ ದೊರೆತಿವೆ.[6] ಪ್ರಾಕೃತ ಭಾಷೆ ಮತ್ತು ಬ್ರಾಹ್ಮಿ ಲಿಪಿಯ ಈ ಶಾಸನಗಳು ಬೌದ್ಧ ಸ್ತೂಪವೊಂದರ ಶಿಲ್ಪಫಲಕಗಳ ಮೇಲೆ ಬರೆಯಲ್ಪಟ್ಟಿವೆ. ಇವು ಹಂಪೆಯಲ್ಲಿದ್ದ ಬೌದ್ಧಸ್ತೂಪದ ಬಗೆಗೆ ಸೂಚನೆ ನೀಡುತ್ತವೆ. ಹಾಗೂ ಹಂಪೆ ಮೊದಲಿಗೆ ಬೌದ್ಧಕೇಂದ್ರವಾಗಿತ್ತೆಂಬುದು ಗಮನಾರ್ಹ. ಈ ಶಾಸನಗಳು ಶಾತವಾಹನರ ಕಾಲಕ್ಕೆ ಸೇರಿವೆ. ಕರ್ನಾಟಕದಲ್ಲಿ ಮೌರ್ಯರ ನಂತರ ಅವರ ಉತ್ತರಾಧಿಕಾರಿಗಳಾಗಿ ಶಾತವಾಹನರ ಕಾಲಕ್ಕೆ ಸೇರಿವೆ. ಕರ್ನಾಟಕದಲ್ಲಿ ಮೌರ್ಯರ ನಂತರ ಅವರ ಉತ್ತರಾಧಿಕಾರಿಗಳಾಗಿ ಶಾತವಾಹನರು ಆಡಳಿತ ನಡೆಸಿದರೆಂದು ಸ್ಪಷ್ಟವಾಗುವುದು. ಇದನ್ನು ನಂತರದ ಕಾಲದ ಶಾಸನಗಳು ಸಹ ಸಮರ್ಥಿಸುತ್ತವೆ. ಪಲ್ಲವ ಶಿವಸ್ಕಂದವರ್ಮನ ಹಿರೇಹಡಗಲಿಯ ಪ್ರಾಕೃತ ಶಾಸನದಲ್ಲಿ 'ಶತವಾಹನೀರಠ'ಎಂಬ ಉಲ್ಲೇಖವಿದೆ. [7] ಪಲ್ಲವರು, ತಮ್ಮ ರಾಜ್ಯಕ್ಕೆ ಸೇರ್ಪಡೆಗೊಂಡ ಹೊಸ ಪ್ರದೇಶಗಳನ್ನು ಗುರುತಿಸುವಾಗ ಈ ಮೊದಲು ಆಳ್ವಿಕೆ ನಡೆಸಿದ ಮನೆತನದ ಹೆಸರಿನಿಂದ ಕರೆದಿದ್ದಾರೆ. ಬಳ್ಳಾರಿಯನ್ನು 'ಶಾತವಾಹನೀರಠ' ಎಂದು ಕರೆಯುವುದರ ಮೂಲಕ, ಇದು ಮೊದಲಿಗೆ ಶಾತವಾಹನರ ವಶದಲ್ಲಿದ್ದು, ನಂತರ ಪಲ್ಲವರ ಆಳ್ವಿಕೆಗೆ ಸೇರಿತ್ತೆಂಬುದನ್ನು ಸೂಚಿಸುತ್ತದೆ.

ಹಳೆಯ ಬಳ್ಳಾರಿ ಜಿಲ್ಲೆಯಲ್ಲಿದ್ದ ಆಲೂರು ತಾಲ್ಲೂಕಿನ (ಈಗ ಕರ್ನೂಲ್ ಜಿಲ್ಲೆ) ಮ್ಯಾಕದೋಣಿ ಶಾಸನವು ಸಹ ಪಲ್ಲವರಿಗೆ ಸೇರಿದ್ದು, ಬಳ್ಳಾರಿ ಪ್ರದೇಶ ಪಲ್ಲವರ ವಶದಲ್ಲಿತ್ತೆಂಬುದನ್ನು ಸೂಚಿಸುತ್ತದೆ.[8] ಪಲ್ಲವರ ನಂತರ ಈ ಪ್ರದೇಶ ಬನವಾಸಿಯ ಕದಂಬರ ವಶವಾಯಿತು. ಕುರುಗೋಡು ಬೆಟ್ಟದ ಮುದ್ದುಗನ ಮೂಲೆ ಎಂಬಲ್ಲಿ (ಕಪ್ಪು ಬಣ್ಣದ ಶಾಸನವಿರುವಲ್ಲಿ) ಕದಂಬರ ಕಾಲಕ್ಕೆ ಸೇರುವ ಪೆಟ್ಟಿಗೆ ತಲೆಯ ಆರು ಅಕ್ಷರಗಳ ಶಾಸನ ಕಂಡುಬಂದಿದೆ. ಇದರ ಕಾಲ ಕ್ರಿ.ಶ. ೪-೫ನೆಯ ಶತಮಾನವೆನ್ನಲಾಗಿದೆ. ಈ ಶಾಸನವನ್ನು ಕಾವಿ ಬಣ್ಣದಲ್ಲಿ ಬರೆದಿದೆ. ಮಳೆಗಾಳಿಗಳಿಂದಾಗಿ ಅಕ್ಷರಗಳು ಮಾಸಿದ್ದು, ಅದನ್ನು ನಮಧೆಯಸ್ಯ? ಎಂದು ಓದಲಾಗಿದೆ.[9] ಕ್ರಿ.ಶ. ೭ನೆಯ ಶತಮಾನದ ವೇಳೆಗೆ ಈ ಪ್ರದೇಶ ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತು.[10] ಕ್ರಿ.ಶ. ೬೮೯ರ ವಿನಯಾದಿತ್ಯನ ತಾಮ್ರಶಾಸನವು ಹಂಪೆಯನ್ನು ಪಂಪಾತೀರ್ಥವೆಂದು ಕರೆದು, ಭೂಮಿಯನ್ನು ದತ್ತಿಬಿಟ್ಟ ಬಗ್ಗೆ ತಿಳಿಸುತ್ತದೆ. ವಿನಯಾದಿತ್ಯ ತನ್ನ ಸೈನ್ಯದೊಂದಿಗೆ ಪಂಪಾತೀರ್ಥದಲ್ಲಿ ಬೀಡುಬಿಟ್ಟಿದ್ದನು. ಕುರುಗೋಡಿನ ಶಾಸನವೊಂದರಲ್ಲಿ ಸತ್ಯಾಶ್ರಯದ ಉಲ್ಲೇಖವಿದೆ. ಇದರ ಕಾಲವನ್ನು ಲಿಪಿ ದೃಷ್ಟಿಯಿಂದ ಎಂಟನೆಯ ಶತಮಾನಕ್ಕೆ ನಿರ್ದೇಶಿಸಿದ್ದಾರೆ.[11] ಇದು ಚಾಲುಕ್ಯ ಕೀರ್ತಿವರ್ಮನ ಕಾಲದ್ದಿರಬಹುದೆಂಬ ಅಭಿಪ್ರಾಯವನ್ನೂ ವ್ಯಕ್ತಪಡಿಸಿದ್ದಾರೆ.[12] ಇದರಲ್ಲಿ, ಕುರುಗೋಡಿನಲ್ಲಿ ಭೂಮಿಯನ್ನು ಅಳೆಯಲು ಹದಿನೆಂಟು ಗೇಣಿನ ಕೋಲು ಮತ್ತು ನವಿಲು ಪೊನ್ನು ನಾಣ್ಯದ ಬಳಕೆಯನ್ನು ಕುರಿತು ತಿಳಿಸುತ್ತದೆ.[13] ಸ್ಥಳೀಯರು ಇದನ್ನು ಕತ್ತೆ ಬಂಡೆ (ಕಟ್ಟೆಬಂಡೆ)ಶಾಸನ ಎಂದು ಕರೆಯುತ್ತಾರೆ. ಕುರುಗೋಡು ಬೆಟ್ಟದ ಮುದ್ದುಗನ ಮೂಲೆ ಹತ್ತಿರ ಬಂಡೆಯೊಂದರ ಮೇಲೆ ಬಾದಾಮಿ ಚಾಲುಕ್ಯರ ಕಾಲಕ್ಕೆ ಸೇರುವ ಶಾಸನವನ್ನು "ಗುಣಹಿತರು" ಎಂದು ಓದಲಾಗಿದ್ದು, ಇದು ವ್ಯಕ್ತಿಯೊಬ್ಬನನ್ನು ಉಲ್ಲೇಖಿಸುವುದೆನ್ನಲಾಗಿದೆ.[14] ಸಮೀಪದಲ್ಲಿರುವ ಕುಮಾರಸ್ವಾಮಿ ಬೆಟ್ಟದ ದೇವಾಲಯಗಳು ಮತ್ತು ಶಾಸನಗಳು ಈ ಪ್ರದೇಶ ಬಾದಾಮಿ ಚಾಲುಕ್ಯರ ಅಧೀನದಲ್ಲಿದ್ದ ಬಗ್ಗೆ ಸ್ಪಷ್ಟೀಕರಿಸುತ್ತವೆ. ನಂತರ ಬಂದ ರಾಷ್ಟ್ರಕೂಟರು ಈ ಪ್ರದೇಶದಲ್ಲಿ ದೇವಾಲಯಗಳನ್ನು ನಿರ್ಮಿಸಿ ಶಾಸನಗಳನ್ನು ಹಾಕಿಸುತ್ತಾರೆ.

ರಾಷ್ಟ್ರಕೂಟರ ಮೂರನೆಯ ಕೃಷ್ಣನ ಕ್ರಿ.ಶ. ೯೪೭ರ ಶಾಸನದಲ್ಲಿ ಕುರುಗೋಡಿನ ಮಹಾಜನರು ಕೊಟ್ಟಿತ್ತೊಣೆಯ (ಕುಡುತಿನಿ) ದೇಕಮ್ಮನ ದೇವಾಲಯಕ್ಕೆ ದಾನ ನೀಡಿದ ಉಲ್ಲೇಖವುಂಟು.[15] ಕುರುಗೋಡು ಅಗ್ರಹಾರವಾಗಿದ್ದು, ಮಹಾಜನರ ಆಡಳಿತದಲ್ಲಿತ್ತೆಂಬುದು ಗಮನಾರ್ಹ ಸಂಗತಿ. ಇಲ್ಲಿನ ಮಹಾಜನರು ದೇವಾಲಯವೊಂದಕ್ಕೆ ದಾನದತ್ತಿಗಳನ್ನು ನೀಡುವುದರ ಮೂಲಕ

ತಮ್ಮ ಆರ್ಥಿಕ ಸುಸ್ಥಿತಿಯನ್ನು ಪ್ರಕಟಿಸಿದ್ದಾರೆ. ಗೌಡ ದೇಶದಲ್ಲಿ ವರೇಂದ್ರಿ ಪ್ರದೇಶಕ್ಕೆ ಸೇರಿದ ತಡ ಗ್ರಾಮದ ಲೋಹಾಸನಿ ಬ್ರಹ್ಮಚಾರಿ ಗಧಾದರ ಎಂಬುವನು ಸಮೀಪದ ಕೊಳಗಲ್ಲಿನಲ್ಲಿ ಕಾರ್ತಿಕೇಯ ಮುಂತಾದ ದೇವರುಗಳನ್ನು ಪ್ರತಿಷ್ಠಾಪಿಸಿಸದ ವಿಷಯ ಶಾಸನಗಳಿಂದ ತಿಳಿದು ಬರುತ್ತದೆ.[16] ಲೋಹ ಆಯುಧ ಕೆಲಸಗಾರರಾದ ಇವರು ಯುದ್ಧ ದೇವತೆಯಾದ ಕಾರ್ತಿಕೇಯನನ್ನು ಆರಾಧಿಸುವದರ ಮೂಲಕ, ಈ ಭಾಗದಲ್ಲಿ ಕಬ್ಬಿಣದ ಅದಿರು ಸಂಸ್ಕರಿಸಿ ಆಯುಧಗಳನ್ನು ತಯಾರಿಸುತ್ತಿದ್ದರು. ಸಮೀಪದ ಕುಮಾರ ಸ್ವಾಮಿ ಬೆಟ್ಟದಲ್ಲಿ ರಾಷ್ಟ್ರಕೂಟರ ಕಾಲದ ಕುಮಾರಸ್ವಾಮಿ ಅಥವಾ ಕಾರ್ತಿಕೇಯನ ದೇವಾಲಯವಿರುವುದು ಗಮನಾರ್ಹ. ದೇವಾಲಯವಿರುವ ಪರ್ವತ ಸಾಲು ಸಂಪೂರ್ಣವಾಗಿ ಲೋಹದ ಅದಿರಿನಿಂದ ಕೂಡಿದ್ದು, ಗಣಿಗಾರಿಕೆಯಲ್ಲಿ ಸಾವಿರಾರು ವರ್ಷಗಳ ಚರಿತ್ರೆಯನ್ನು ನಮ್ಮ ಮುಂದಿಡುತ್ತದೆ. ಪ್ರಾಚೀನ ಗಣಿಗಾರಿಕೆಗೆ ಸಂಬಂಧಿಸಿದ ಮಣ್ಣಿನ ಮೂಸೆ, ಕಿಟ್ಟ ಮತ್ತಿತರ ಅವಶೇಷಗಳು ಬೆಳಕಿಗೆ ಬಂದಿವೆ. ಈ ಲೋಹ ಸಂಪತ್ತಿನಿಂದಾಗಿ ಬಳ್ಳಾರಿ ಪ್ರದೇಶವು ಸಹಜವಾಗಿ ಅಶೋಕನ ಕಾಲದಿಂದಲೂ ಪ್ರಾಶಸ್ತ್ಯ ಪಡೆದು ವಿವಿಧ ರಾಜಮನೆತನಗಳ ಆಳ್ವಿಕೆಗೆ ಒಳಗಾಯಿತು.

ರಾಷ್ಟ್ರಕೂಟರ ನಂತರ ಆಳ್ವಿಕೆ ನಡೆಸಿದ ಕಲ್ಯಾಣ ಚಾಲುಕ್ಯರು ಈ ಪ್ರದೇಶದಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಿ ದಾನದತ್ತಿಗಳನ್ನು ನೀಡಿದರು. ಸಮೀಪದ ಕುಡುತಿನಿ ಗ್ರಾಮದಲ್ಲಿ ಮೊದಲ ದೊರೆ ಇಮ್ಮಡಿ ತೈಲಪನ (ಅಹವಮಲ್ಲ)ಕ್ರಿ.ಶ. ೯೭೩ರ ಶಾಸನ ಕಂಡುಬರುತ್ತದೆ.[17] ಈ ಶಾಸನದ ಲಭ್ಯತೆಯಿಂದಾಗಿ ಇಡೀ ರಾಷ್ಟ್ರಕೂಟರ ಸಾಮ್ರಾಜ್ಯ ಒಮ್ಮೆಲೆ ಕಲ್ಯಾಣ ಚಾಲುಕ್ಯರ ಅಧೀನಕ್ಕೆ ಒಳಗಾಗಿರಬಹುದಾದ ಸಾಧ್ಯತೆಯನ್ನು ಚರಿತ್ರೆಕಾರರು ಗುರುತಿಸಿದ್ದಾರೆ. ಇವರ ಸಾಮಂತರಾಗಿ ನೊಳಂಬರು, ನೊಳಂಬವಾಡಿ ೩೨,೦೦೦, ಕದಂಬಳಿಗೆ ೧೦೦೦, ಕೋಗಳಿ ೫೦೦, ಬಲ್ಲಕುಂದೆ ೩೦೦, ಕುದಿಯಹರವಿ ೭೦ ಮತ್ತು ಕರಿವಿಡಿ ೩೦ನ್ನು ಆಳುತ್ತಿದ್ದರು.[18] ಕ್ರಿ.ಶ. ೧೦೫೦ರಲ್ಲಿ ನೊಳಂಬ ನರಸಿಂಹನು ಬಲ್ಲಕುಂದೆ ಜೊತೆಗೆ ಕೋಗಳಿ, ಕದಂಬಳಿಗೆ ಮತ್ತು ಸಿಂದವಾಡಿಗಳನ್ನು ಆಳುತ್ತಿದ್ದ.[19] ಆದರೆ ಕ್ರಿ.ಶ. ೧೦೬೪ರ ನಂತರ ನೊಳಂಬವಾಡಿ, ಬಲ್ಲಕುಂದೆ ಸೇರಿದಂತೆ ಈ ಪ್ರದೇಶದ ಆಡಳಿತವನ್ನು ಚಾಲುಕ್ಯ ರಾಜಕುಮಾರರು ನಿರ್ವಹಿಸಿದರು.[20] ಕ್ರಿ.ಶ. ೧೦೭೨ರಲ್ಲಿ ಜಯಸಿಂಹನು ಕೋಗಳಿ, ಬಲ್ಲಕುಂದೆ ಮತ್ತು ನೊಳಂಬವಾಡಿಗಳನ್ನು ನೋಡಿಕೊಂಡಿದ್ದನು. ಹೀಗೆ ಕುರುಗೋಡು ಪ್ರದೇಶವನ್ನೊಳಗೊಂಡ ಬಲ್ಲಕುಂದೆ ೩೦೦ ಮತ್ತು ನೊಳಂಬವಾಡಿಗಳು ಕಲ್ಯಾಣ ಚಾಲುಕ್ಯರ ನೇರ ಆಡಳಿತಕ್ಕೆ ಒಳಗಾಗಿದ್ದವು. ಕ್ರಿ.ಶ. ೧೦೭೯ರ ನಂತರ ನೊಳಂಬವಾಡಿಯ ಆಡಳಿತವನ್ನು ಸಾಮಂತರಾದ ಪಾಂಡ್ಯರು ನಿರ್ವಹಿಸುತ್ತಾರೆ.[21] ಕ್ರಿ.ಶ. ೧೦೯೧ರಲ್ಲಿ ವಿಕ್ರಮಾದಿತ್ಯನ ರಾಣಿಯಾದ ಪಿರಿಯಕೇತಲದೇವಿ ಸಮೀಪದ ಸಿರಗುಪ್ಪೆಯನ್ನು ಆಳುತ್ತಿದ್ದಳು.[22] ಆಗ ಸಿಂದಕುಲದ ಮಹಾಸಾಮಂತ ಮನ್ನೆಯ ಚೊಕರಸನು ಕೇತಲೇಶ್ವರ ದೇವರಿಗೆ ಹಾಗೂ ಬ್ರಾಹ್ಮಣರಿಗೆ ಭೋಜನಕ್ಕಾಗಿ ಧಾನ್ಯವನ್ನು ನೀಡಿದನು. ಕ್ರಿ.ಶ. ೧೧೨೨ರ ಯರಬಾಳು ಶಾಸನವು ಸಿಂದರ ಅರಸ ಸೋವಿದೇವ, ವೀರಪಾಂಡ್ಯ ಮುಂತಾದವರು ವಿಕ್ರಮಾದಿತ್ಯನ ಮಾಂಡಲೀಕರಾಗಿದ್ದರೆಂದು ತಿಳಿಸುತ್ತದೆ.[23] ಇದರಿಂದ ಕುರುಗೋಡಿನ ಸಿಂದರು ಕಲ್ಯಾಣ ಚಾಲುಕ್ಯರ ನಿಷ್ಠಾವಂತ ಸಾಮಂತರಾಗಿದ್ದರು ಎಂದು ತಿಳಿಯುವುದು. ಕ್ರಿ.ಶ. ೧೧೬೨ರಲ್ಲಿ ಕಳಚುರ್ಯರಿಂದ ಅಧಿಕಾರ ವಂಚಿತರಾದ ಕಲ್ಯಾಣ ಚಾಲುಕ್ಯರ ಕೆಲಕಾಲ ಕಂಪಿಲಿಯಲ್ಲಿ ನೆಲಸಿದರು.[24] ಇಲ್ಲಿ ಅವರಿಗೆ ಉಚ್ಚಂಗಿ ಪಾಂಡ್ಯರು, ನಿಡುಗಲ್ಲಿನ ಚೋಳರು ಮತ್ತು ಸಿಂದರ ಬೆಂಬಲವಿತ್ತು. ಆದರೆ ಬಿಜ್ಜಳನ ದಾಳಿಯಿಂದಾಗಿ ಪಾಂಡ್ಯರು ಮತ್ತು ಸಿಂದರು ಕಳಚುರ್ಯರ ಸಾಮಂತರಾಗಿ ಮುಂದುವರೆಯುತ್ತಾರೆ. ಎಂದಿನಂತೆ ನೊಳಂಬವಾಡಿಯನ್ನು ಉಚ್ಚಂಗಿ ಪಾಂಡ್ಯರು ಆಳಿದರು.

ಸಮೀಪದ ತೆಕ್ಕಲಕೋಟೆಯಲ್ಲಿ ದೊರೆತ ಶಾಸನವೊಂದರಲ್ಲಿ ಬಿಜ್ಜಳನ ಉಲ್ಲೇಖವಿದ್ದು, ಸಿಂದ ಇಮ್ಮಡಿ ರಾಚಮಲ್ಲನು ಇವನ ಸಾಮಂತನಾಗಿದ್ದ ಎನ್ನಲಾಗಿದೆ.[25] ಕ್ರಿ.ಶ. ೧೧೭೩ರ ಕುರುಗೋಡಿನ ಶಾಸನವು, ಇಮ್ಮಡಿ ರಾಚಮಲ್ಲನು ಕಳಚುರ್ಯರ ರಾಯ ಮುರಾರಿಸೋವಿ ದೇವನ ಮಾಂಡಲಿಕನೆಂದಿದೆ.[26] ಕ್ರಿ.ಶ. ೧೧೭೭ರ ಕುರುಗೋಡಿನ ಇನ್ನೊಂದು ಶಾಸನ, ಕಲ್ಯಾಣದಿಂದ ಆಳುತ್ತಿದ್ದ ಕಳಚೂರಿ ಸಂಕಮದೇವ ಹಾಗೂ ಅವನ ಸಾಮಂತನಾದ ಸಿಂದ ವಂಶದ ಎರಡನೆಯ ರಾಚಮಲ್ಲನನ್ನು ಉಲ್ಲೇಖಿಸುತ್ತದೆ.[27] ಈ ಮೇಲಿನ ಶಾಸನಗಳು ಸಿಂದರು ಕಳಚುರ್ಯರ ಸಾಮಂತರಾಗಿ ಮುಂದುವರೆದರೆಂಬುದನ್ನು ಸ್ಪಷ್ಟಪಡಿಸುತ್ತವೆ. ಕ್ರಿ.ಶ. ೧೧೮೧-೮೨ರ ಕುರುಗೋಡಿನ ಮತ್ತೊಂದು ಶಾಸನವು, ಕಲ್ಯಾಣ ಚಾಲುಕ್ಯರ ನಾಲ್ಕನೆಯ ಸೋಮೇಶ್ವರನು ಕಲ್ಯಾಣದಲ್ಲಿ ಸಿಂಹಾಸನದಲ್ಲಿದ್ದನೆಂದು, ಈತನ ಸಾಮಂತನಾಗಿ ಸಿಂದರ ಎರಡನೆಯ ರಾಚಮಲ್ಲನು

ಬಲ್ಲಕುಂದೆಯನ್ನು ಕುರುಗೋಡು ನೆಲೆಯಿಂದ ಆಳಿದನೆಂದು ತಿಳಿಸುತ್ತದೆ.[28] ಈ ವೇಳೆಗಾಗಲೇ ಹೊಯ್ಸಳರು ಮತ್ತು ಸೇವುಣರು ಪ್ರಬಲರಾಗಿದ್ದು, ಸ್ವತಂತ್ರಗೊಂಡಿದ್ದರು. ತುಂಗಭದ್ರ ಹೊಯ್ಸಳ ಮ ತ್ತು ಸೇವುಣರ ನಡುವೆ ತೀವ್ರ ಹೋರಾಟಗಳು ಆರಂಭಗೊಂಡವು, ಈ ಸ್ಥಿತಿಯಲ್ಲಿ ಸಿಂದರು ತಮ್ಮ ಅಸ್ತಿತ್ವವನ್ನು ಕಳೆದುಕೊಂಡರು.

ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದ ನೊಳಂಬರ ಮೊದಲ ರಾಜಧಾನಿ ಹೆಂಜೇರು (ಈಗಿನ ಅನಂತಪುರ ಜಿಲ್ಲೆಯ ಮಡಕಶಿರ ತಾಲ್ಲೂಕಿನ ಹೇಮಾವತಿ ಗ್ರಾಮ). ತಲಕಾಡಿನ ಗಂಗರ ದಾಳಿಯಿಂದಾಗಿ ಕಂಫಲಿಗೆ ಬಂದು ಆಳ್ವಿಕೆ ನಡೆಸಿದರು.[29] ಇವರು ಆಳುತ್ತಿದ್ದ ಪ್ರದೇಶವನ್ನು ನೊಳಂಬವಾಡಿ, ೩೨,೦೦೦ ಎಂದು ಶಾಸನಗಳು ಕರೆದಿವೆ. ಕಲ್ಯಾಣ ಚಾಲುಕ್ಯರೊಂದಿಗೆ ಉತ್ತಮ ರಾಜಕೀಯ ಸಂಬಂಧಗಳನ್ನು ಬೆಳಸಿಕೊಂಡರು. ಇವರು ಸಿಂದರ ಮೇಲೆ ಯುದ್ಧ ಮಾಡಿದರು.[30] ಇವರ ಆಳ್ವಿಕೆಯಲ್ಲಿ ಕೆಲವರು ಬಲ್ಲಕುಂದೆಯಲ್ಲಿ ಬಸದಿಯನ್ನು ನಿರ್ಮಿಸಿದರು. ಜಗದೇಕಮಲ್ಲ ನೊಳಂಬನು, ನೊಳಂಬವಾಡಿ ಸೇರಿದಂತೆ ಬಲ್ಲಕುಂದೆಯನ್ನು ಆಳುತ್ತಿದ್ದನು.[31] ನನ್ನಿನೊಳಂಬ ಪಲ್ಲವ ಪೆರ್ಮಾಡಿದೇವನ ಕ್ರಿ.ಶ. ೧೦೪೫ರ ಶಾಸನದಲ್ಲಿ, ಉದಯಾದಿತ್ಯ ಸಿಂದರಸನ ಉಲ್ಲೇಖವಿದ್ದು, ದಾನದ ಭೂಮಿಯನ್ನು ಸಿಂದರ ದತ್ತಿ ಎಂದಿದೆ.[32] ಕ್ರಿ.ಶ. ೧೦೫೮ರಲ್ಲಿ ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿಯು ಕಂಪಲಿಯಲ್ಲಿ ರಾಜ್ಯಭಾರ ಮಾಡುತ್ತಿರುವಾಗ ಉದಯಾದಿತ್ಯನು ಉತ್ತಮರಾಶಿ ಪಂಡಿತನಿಗೆ ದಾನ ನೀಡಿದನು.[33] ಈ ಉದಯಾದಿತ್ಯನು ಕ್ರಿ.ಶ. ೧೦೪೫ರ ಶಾಸನದಲ್ಲಿ ಉಲ್ಲೇಖಗೊಂಡಿರುವ ಉದಯಾದಿತ್ಯ ಸಿಂದರಸನಿರಬೇಕು. ಹೀಗೆ ನೊಳಂಬರು ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಕಂಪಲಿಯಿಂದ ಆಳ್ವಿಕೆ ನಡೆಸಿದರು. ಇದರಲ್ಲಿ ಬಲ್ಲಕುಂದೆಯು ಸೇರಿರುವುದರಿಂದ ಕುರುಗೋಡು ನೊಳಂಬರ ಆಳ್ವಿಕೆಗೆ ಒಳಪಟ್ಟಿತ್ತು. ನೊಳಂಬವಾಡಿಯಲ್ಲಿ ಬಲ್ಲಕುಂದೆ, ಕೋಗಳಿ, ಕದಂಬಳಿಗೆ, ಮಾಸವಾಡಿ, ಸಿಂದವಾಡಿ ಮೊದಲಾದ ಪ್ರಾಂತ್ಯಗಳು ಅಂತರ್ಗತವಾಗಿದ್ದವು. ನೊಳಂಬರು ವಾಸ್ತು ಮತ್ತು ಮೂರ್ತಿಶಿಲ್ಪದಲ್ಲಿ ತಮ್ಮದೇ ಶೈಲಿಯನ್ನು ಹುಟ್ಟುಹಾಕಿದರು. ಕಂಪ್ಲಿ ಮತ್ತು ಹಂಪೆಯಲ್ಲಿ ನೊಳಂಬರ ಶೈಲಿಯ ದೇವಾಲಯ ಮತ್ತು ಮೂರ್ತಿ ಶಿಲ್ಪಗಳನ್ನು ಕಾಣಬಹುದು. ಇವರ ನಂತರ ನೊಳಂಬ ವಾಡಿಯನ್ನು ಪಾಂಡ್ಯರು ಆಳಿದರು. ಉಚ್ಚಂಗಿ ಇವರ ರಾಜಧಾನಿ. ಸಿಂದರ ಚೋಕರಸ ಎಂಬುವನು ಪಾಂಡ್ಯರ ಸಾಮಂತರಾಗಿದ್ದನು.

ಮತ್ತೊಂದು ಪ್ರಮುಖ ಸಾಮಂತ ಮನೆತನವೆಂದರೆ ಕುರುಗೋಡು ಸಿಂದರು. ಸಿಂದರು ತಮ್ಮನ್ನು ನಾಗವಂಶದವರೆಂದು ಕರೆದುಕೊಂಡಿದ್ದಾರೆ. ಪ್ರಾಚೀನ ಅರಸು ಮನೆತನವಾದ ಸೇಂದ್ರಕರನ್ನು ಸಹ ನಾಗವಂಶದವರೆನ್ನಲಾಗಿದೆ. ಹೀಗಾಗಿ ನಾಗವಂಶದವರು ಕನ್ನಡ ನಾಡಿ ಮೂಲನಿವಾಸಿಗಳಾಗಿದ್ದಾರೆಂದು ಗುರುತಿಸಿದ್ದಾರೆ. ಬಾ.ರಾ.ಗೋಪಾಲ ಅವರು, ಸೇಂದ್ರಕರೆ ೧೦-೧೧ನೆಯ ಶತಮಾನಗಳಲ್ಲಿ ಸಿಂದರೆಂದು ವರ್ಣಿಸಲ್ಪಟ್ಟಿದ್ದಾರೆಂದು ತಿಳಿಸುತ್ತಾರೆ.[34] ಮಧ್ಯಪ್ರದೇಶದ ಬಸ್ತಾರ್ ಪ್ರದೇಶದ ಸಿಂದರ ನಡುವೆ ಸಂಬಂಧವನ್ನು ಗುರುತಿಸಲಾಗಿದೆ. ಸಿಂದರ ಪ್ರದೇಶವನ್ನು ಸಿಂದವಾಡಿ ಎಂದು ಕರೆಯಲಾಗಿದೆ.[35] ಕ್ರಿ.ಶ. ೭ನೆಯ ಶತಮಾನದ ಕುಕನೂರು ಶಾಸನದಲ್ಲಿ ಸಿಂದರ ಅತ್ಯಂತ ಪ್ರಾಚೀನ ಉಲ್ಲೇಖವಿದೆ. ಗಂಗರ ಶಾಸನಗಳಲ್ಲಿ ಸಿಂದನಾಡು ೮೦೦೦ ಎಂದು, ರಾಷ್ಟ್ರಕೂಟರ ಕ್ರಿ.ಶ. ೮೦೭ರ ನೇಸರಿ ತಾಮ್ರ ಶಾಸನದಲ್ಲಿ ಸಿಂದಮಂಡಲವೆಂದು, ಅಕಾಲವರ್ಷನ ಮಂತ್ರಾಲಯ ಶಾಸನದಲ್ಲಿ ಸಿಂದವಾಡಿ ೧೦೦೦ ಎಂದು ಭೂ ಪ್ರದೇಶಗಳ ಉಲ್ಲೇಖಗಳಿವೆ.[36] ಸಿಂದ ಎಂಬ ಪದಕ್ಕೆ ಪತಾಕೆ, ಧ್ವಜ ಹೊಂದಿದ ಅರಸ, ಜಯಿಸಿದ, ವಿಜಯಿಯಾದ ಎಂಬ ಅರ್ಥಗಳನ್ನು ನೀಡಲಾಗಿದೆ. ಸಿಂದರಲ್ಲಿ ಅನೇಕ ಶಾಖೆಗಳಿವೆ. ಇವರೆಲ್ಲರು, ತಮ್ಮ ಮೂಲಪುರುಷ ನಿಡುದೋಳ ಸಿಂದನೆಂದು ಹೇಳಿಕೊಂಡಿದ್ದಾರೆ. ಇವನು ಸಿಂದವಿಷಯವನ್ನು ಆಳುತ್ತಿದ್ದು, ಕದಂಬ ಮಯೂರವರ್ಮನ ಮಗಳು ಲಕ್ಷ್ಮಿಮತಿಯನ್ನು ವಿವಾಹವಾಗಿದ್ದನು ಎನ್ನಲಾಗಿದೆ.[37] ಈತನ ನಾಲ್ಕು ಮಕ್ಕಳಲ್ಲಿ ಬುಧಸೇವ್ಯ ಎಂಬುವನು ಬಳ್ಳರೆನಾಡಿನ (ಬಳ್ಳಾರಿ) ಅಧಿಪತಿಯಾಗಿದ್ದನು. ಇವನೇ ಕುರುಗೋಡು ಸಿಂದರ ಮೊದಲ ಅರಸನೆಂದು ಗುರುತಿಸಿದ್ದಾರೆ.[38] ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ ಮತ್ತು ಕಳಚುರ್ಯರ ಮಾಂಡಲಿಕರಾಗಿ ಕುರುಗೋಡನ್ನು ರಾಜಧಾನಿ ಮಾಡಿಕೊಂಡು ಆಳ್ವಿಕೆ ನಡೆಸಿದ ಸಿಂದರನ್ನು ಚರಿತ್ರೆಕಾರರು, ಕುರುಗೋಡು ಸಿಂದರು ಎಂದೆ ಗುರುತಿಸಿದ್ದಾರೆ. ಆರಂಭದಲ್ಲಿ[39] ಸಣ್ಣ ಮಾಂಡಲೀಕರಾಗಿದ್ದರು ಬಳ್ಳಾರಿ ಜಿಲ್ಲೆಯಲ್ಲಿ, ಕ್ರಿ.ಶ. ೯೪೭ರ ಕುಡುತಿನಿ ಶಾಸನದಲ್ಲಿ ಇವರ ಮೊದಲ ಉಲ್ಲೇಖವನ್ನು ಕಾಣಬಹುದು.[40] ಇದರಲ್ಲಿ "ಭೋಗವತಿಪುರವರೇಶ್ವನ ಮಕರಧ್ವಜಂ ಫಣೀಂದ್ರ ಕುಲಸಂಭವಂ ವ್ಯಾಘ್ರ ಮೃಗ ಲಾಂಚನಂ" ಎಂದು ವಿಶೇಷಣಗಳನ್ನುಳ್ಳ ಶ್ರೀ ಮಱಬಲ್ಲದಾಗ್ರ (ಅರಿಬಲ್ಲದ)? ಎಂಬುವನನ್ನು ಹೆಸರಿಸಿದೆ. ಕ್ರಿ.ಶ. ೯೬೨ರ ಬಲ್ಲಕುಂದೆ ಶಾಸನದಲ್ಲಿ ನನ್ನಿನೊಳಂಬನ ಅಣತಿಯಂತೆ ಸಿಂದರ ಮೇಲೆ ಯುದ್ಧ

ಮಾಡಿದ ಉಲ್ಲೇಖವಿದೆ. ಇದರಿಂದ ಬಲ್ಲಕುಂದೆ ಪ್ರದೇಶದಲ್ಲಿ ಸಿಂದರ ಅಸ್ತಿತ್ವದ ಪ್ರಾಚೀನತೆ ತಿಳಿದುಬರುವುದು. ಹಾಗೂ ಬಲ್ಲಕುಂದೆ ನಾಡಿನಲ್ಲಿ ಆಳ್ವಿಕೆ ನಡೆಸಿರುವುದು ಸುಸ್ಪಷ್ಟ. ಅರಿಬಲ್ಲದಾಗ್ರನು ಬಲ್ಲಕುಂದೆ ನಾಡನ್ನು ಮಹಾಸಾಮಂತನಾಗಿ ಆಳಿದ್ದಾನೆ. ಇವನ ನಂತರ ಸುಮಾರು ೭೮ ವರ್ಷಗಳ ಕಾಲ ಈ ಮನೆತನದ ಚರಿತ್ರೆ ಅಸ್ಪಷ್ಟವೆನ್ನಲಾಗಿದೆ.[41] ಕ್ರಿ.ಶ. ೧೦೪೫ರ ಶಾಸನದಲ್ಲಿ ನೊಳಂಬರ ಸಾಮಂತನಾಗಿದ್ದ ಉದಯಾದಿತ್ಯ ಸಿಂದರಸನ ಉಲ್ಲೇಖವುಂಟು.[42]ಕ್ರಿ.ಶ. ೧೦೫೨ರ ತಳಕಲ್ಲು ಶಾಸನದಲ್ಲಿ ಸಿಂದಕುಲದ ಬರ್ಮರಸನ ಉಲ್ಲೇಖವಿದ್ದು. ನೊಳಂಬರ ಅಧೀನದಲ್ಲಿದ್ದನೆಂದು ತಿಳಿಸುತ್ತದೆ.[43]ಕ್ರಿ.ಶ. ೧೦೯೧ರ ಸಿರುಗುಪ್ಪ ಶಾಸನದಲ್ಲಿ ಸಿಂದಕುಲದ ಮನ್ನೆಯ ಚೋಕರಸನ ಉಲ್ಲೇಖವಿದೆ.[44] ಕ್ರಿ.ಶ. ೧೧೨೦ರ ಕೊಂಚಗೆರೆ ಶಾಸನದಲ್ಲಿ, ಭೀಮನ ಮಗ ಸೋವಿದೇವನು ಆಳುತ್ತಿದ್ದನೆಂದಿದೆ.[45] ಕ್ರಿ.ಶ. ೧೧೩೭ರ ಶಾಸನವೊಂದರಲ್ಲಿ ಸೋವಿದೇವನಿಗೆ ಐದು ಜನ ಮಕ್ಕಳಿದ್ದ ಸೂಚನೆ ದೊರೆಯುವುದು.[46] ಇದರಲ್ಲಿ ಎರಡನೆಯ ಭೀಮ, ರಾಚಮಲ್ಲ, ಫಣಿರಾಜ ಎಂಬ ಹೆಸರುಗಳು ದೊರೆಯುತ್ತವೆ. ಉಳಿದ ಹೆಸರುಗಳಿಂದ ಶಾಸನ ಭಾಗ ಸವೆದಿದೆ. ಇವರಲ್ಲಿ ರಾಚಮಲ್ಲನು ಮೊದಲನೆಯ ರಾಚಮಲ್ಲನೆಂದು ಪ್ರಸಿದ್ಧನಾಗಿದ್ದು, ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿದ್ದಾನೆ.[47]

ಕ್ರಿ.ಶ. ೧೧೪೯ರ ಶಾಸನವೊಂದು ರಾಚಮಲ್ಲನು ಕಲ್ಯಾಣದ ಚಾಲುಕ್ಯರ ಮಾಂಡಲಿಕನಾಗಿದ್ದನೆಂದು ತಿಳಿಸುತ್ತದೆ.[48] ಬಲ್ಲಕುಂದೆ ಪ್ರದೇಶದ ಶಾಸನಗಳಲ್ಲಿ ಬಳ್ಳರೆಯ ರಾಚಮಲ್ಲ, ರಾಜಮಲ್ಲ, ಪಿರಿಯರಾಚಮಲ್ಲ ಹಾಗೂ ರಾಚಮಲ್ಲ ಎಂದು ಉಲ್ಲೇಖಗೊಂಡಿದ್ದಾನೆ.[49] ಇವನು ಕ್ರಿ.ಶ. ೧೧೩೯ರಿಂದ ೧೧೭೩ರ ವರೆಗೆ ಬಲ್ಲಕುಂದೆ ನಾಡನ್ನು ಆಳಿದನೆಂದು ಶಾಸನಗಳಿಂದ ತಿಳಿಯುವುದು.[50] ಅಪ್ರತಿಮ ಶಿವಭಕ್ತನಾಗಿದ್ದ ಇವನನ್ನು ಶಾಸನಗಳು ಹಾಡಹೊಗಳಿವೆ. ಇವನಿಗೆ ಮಾಕಲದೇವಿ ಮತ್ತು ಸೋವಲದೇವಿ ಎಂಬ ಇಬ್ಬರು ಪತ್ನಿಯರಿದ್ದರು. ಇವರಲ್ಲಿ ಮಾಕಲದೇವಿ ಹಿರಯ ರಾಣಿ. ಮಕ್ಕಳಿರಲಿಲ್ಲ. ಹಾಗಾಗಿ ಕಿರಿಯ ರಾಣಿ, ಸೋವಲದೇವಿಯ ಮಗನಾದ ಇರುಂಗೋಳನು ಬಲ್ಲಕುಂದೆ ನಾಡಿನ ಅಧಿಪತ್ಯ ವಹಿಸುತ್ತಾನೆ. ಇವನ ಮೊದಲ ಕ್ರಿ.ಶ. ೧೧೭೩ರ ಕುರುಗೋಡು ಶಾಸನದಲ್ಲಿದೆ.[51] ಇವನ ಹೆಂಡತಿ ಬಲದೇವಿ. ಇವಳಲ್ಲಿ ಹುಟ್ಟಿದ ಎರಡನೆಯ ರಾಚಮಲ್ಲ ಸಮರ್ಥ ಆಡಳಿತಗಾರನಾಗಿದ್ದು, ಬಲ್ಲಕುಂದೆ ನಾಡಿನ ಘನತೆ ಗೌರವಗಳನ್ನು ಎತ್ತಿಹಿಡಿದ. ಇವನು ಕಳಚುರ್ಯರ ರಾಯ ಮುರಾರಿಸೋವಿದೇವ ಮತ್ತು ಸಂಕಮದೇವರಿಗೆ ಮಾಂಡಲಿಕನಾಗಿದ್ದನು.[52] ಕ್ರಿ.ಶ. ೧೧೮೨ರಲ್ಲಿ ಕಲ್ಯಾಣ ಚಾಲುಕ್ಯ ದೊರೆ ತ್ರಿಭುವನಮಲ್ಲ ವೀರ ಸೋಮೇಶ್ವರನ ಸಾಮಂತನಾಗಿದ್ದನು.[53] ಕ್ರಿ.ಶ. ೧೧೮೬-೮೭ರಲ್ಲಿ ಸೇವುಣರ ಐದನೆಯ ಭಿಲ್ಲಮನು, ಸ್ವತಂತ್ರ ಅರಸನೆಂದು ಘೋಷಿಸಿಕೊಂಡರೂ ಕುರುಗೋಡಿನ ಸಿಂದರು ಮಾನ್ಯತೆ ನೀಡಲು ಒಪ್ಪಲಿಲ್ಲ.[54] ಎರಡನೆಯ ರಾಚಮಲ್ಲನು ಸಹ ಪರಮ ಶಿವಭಕ್ತನಾಗಿದ್ದನು. ಕುರುಗೋಡಿನ ಶಾಸನಗಳು ಇವನ ಶಿವಭಕ್ತಿಯನ್ನು ಕೊಂಡಾಡಿವೆ. ಕ್ರಿ.ಶ. ೧೧೯೫ರ ವೇಳೆಗೆ ಇಮ್ಮಡಿ ರಾಚಮಲ್ಲನು ಸ್ವತಂತ್ರವಾಗಿ ಬಲ್ಲಕುಂದೆ ನಾಡನ್ನು ಆಳುತ್ತಿದ್ದಂತೆ ಕಂಡುಬರುತ್ತದೆ.

ಕ್ರಿ.ಶ. ೧೧೯೯ರ ಹಂಪೆಯ ಶಾಸನವು ಕುರುಗೋಡಿನ ಇಮ್ಮಡಿ ರಾಚಮಲ್ಲನ ಮಗನಾದ ವೀರಕಲಿದೇವರಸನನ್ನು ಉಲ್ಲೇಖಿಸುತ್ತದೆ. ಬಲ್ಲಕುಂದೆಯ ಭಾಗವಾದ ದೊರವದಿ ನಾಡಿನಲ್ಲಿ ಪಂಪಾತೀರ್ಥವಿತ್ತೆಂದು (ಹಂಪೆ), ವೀರ ಕಲಿದೇವರಸನ ಸಾಮಂತನಾದ ಮಾದೆಯ ನಾಯಕನು ಅದರ ರಕ್ಷಣಾರ್ಥವಾಗಿ ಇಲ್ಲಿನ ಮತಂಗ ಪರ್ವತವನ್ನು ಆಳುತ್ತಿದ್ದನೆಂದು ತಿಳಿಸುತ್ತದೆ.[55] ಈ ವೇಳೆಗೆ ಹಂಪೆಯಲ್ಲಿ ಬ್ರಹ್ಮಪುರಿ ಇತ್ತು. ಅಂದರೆ ಹನ್ನೆರಡನೆಯ ಶತಮಾನಕ್ಕಾಗಲೇ ಹಂಪೆಯು ಪಟ್ಟಣದ ಸ್ವರೂಪವನ್ನು ಪಡೆದುಕೊಂಡಿತ್ತು. ಕಲಿದೇವರಸನು ತನ್ನ ತಂದೆಯ ಹೆಸರಿನಲ್ಲಿ ಹಂಪೆಯ ಹೇಮಕೂಟದಲ್ಲಿ ಇಮ್ಮಡಿ ರಾಚಮಲ್ಲೇಶ್ವರ ದೇವಾಲಯವನ್ನು ಕಟ್ಟಿಸಿದನು. ಹಂಪೆ ಸೇರಿದಂತೆ ಹೊಸಪೇಟೆ ತಾಲ್ಲೂಕಿನ ಬಹುಭಾಗಗಳು ಬಲ್ಲಕುಂದೆ ೩೦೦ರಲ್ಲಿ ಸೇರಿದ್ದವು ಹಾಗೂ ಕುರುಗೋಡಿನ ಸಿಂದರ ಆಡಳಿತಕ್ಕೆ ಒಳಗಾಗಿದ್ದವು. ಇಲ್ಲಿಂದ ಮುಂದೆ ಕುರುಗೋಡು ಸಿಂದರ ಶಾಸನಗಳು ದೊರೆಯುವುದಿಲ್ಲ.[56] ಬಹುಶಃ ಹೊಯ್ಸಳ ಮತ್ತು ಸೇವುಣರ ಪ್ರಾಬಲ್ಯದಿಂದಾಗಿ ಕುರುಗೋಡು ಸಿಂದರು ಮೂಲೆಗುಂಪಾಗಿರಬೇಕು. ಸಿಂದರು, ಈ ಮೊದಲೆ ತಿಳಿಸಿದಂತೆ ಶಿವನ ಅಪ್ರತಿಮ ಭಕ್ತರಾಗಿದ್ದರು. ಇಮ್ಮಡಿ ರಾಚನಮಲ್ಲನ ಶಾಸನವೊಂದು ಇದಕ್ಕೆ ಉತ್ತಮ ಉದಾಹರಣೆ. ಇದರಲ್ಲಿ ಇಮ್ಮಡಿ ರಾಚಮಲ್ಲನ ತಾತ ಮೊದಲನೆಯ ರಾಚಮಲ್ಲನು ಶರೀರ ಸಮೇತನಾಗಿ ಶಿವಗಣನಾಗಿ ಕೈಲಾಸಕ್ಕೆ ಹೋದನಂತೆ. ಹಾಗೂ ಉದ್ಭವ ರಾಚಮಲ್ಲೇಶ್ವರ ಲಿಂಗವಾಗಿ ನಿಂತನೆಂಬ ಕಥೆಯನ್ನು ಹೇಳಲಾಗಿದೆ.[57] ಇವರ ಕಾಲದಲ್ಲಿ ಕುರುಗೋಡು ಪಟ್ಟಣದಲ್ಲಿ ಶಿವಾಲಯಗಳು ನಿರ್ಮಾಣಗೊಂಡವು. ಕುರುಗೋಡು ರಾಜಧಾನಿಯೊಂದಿಗೆ ಸಾಂಸ್ಕೃತಿಕವಾಗಿಯೂ ಯಶಸ್ಸನ್ನು ಸಾಧಿಸಿತು. ಇಲ್ಲಿನ

ಭಗ್ನ ಅವಶೇಷಗಳು ಚರಿತ್ರೆಯನ್ನು ಕಟ್ಟಿಕೊಡುತ್ತವೆ. ಕುರುಗೋಡಿನ ಪ್ರಾಕೃತಿಕ ಲಕ್ಷಣವೇ ಅದರ ಮಹತ್ವವನ್ನು ಎಲ್ಲ ಕಾಲಕ್ಕೂ ಎತ್ತಿ ಹಿಡಿದಿವೆ. ಗಿರಿದುರ್ಗವಿರುವ ಕುರುಗೋಡು ಮುಂದಿನ ಶತಮಾನಗಳಲ್ಲಿ ತಲೆ ಎತ್ತಿದ ಕುಮ್ಮಟ ಹಾಗೂ ವಿಜಯನಗರ ರಾಜಧಾನಿ ಪಟ್ಟಣಗಳ ನೆಲೆಯ ಆಯ್ಕೆಗೆ ಸ್ಫೂರ್ತಿಯನ್ನು ನೀಡಿತು.

ಕಳಚುರ್ಯರು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಹೊಯ್ಸಳರು ಸ್ವತಂತ್ರರಾಗಲು ಉತ್ಸುಕರಾದರು. ಆದರೂ ಈ ಪ್ರದೇಶ ಕಳಚುರ್ಯರ ವಶದಲ್ಲಿಯೇ ಇತ್ತು. ಕ್ರಿ.ಶ. ೧೧೮೯ರ ಶಾಸನವೊಂದು, ಉಚ್ಚಂಗಿ ಪಾಂಡ್ಯರು ಹೊಯ್ಸಳರು ಸಾಮಂತರಾಗಿದ್ದರೆಂದು ತಿಳಿಸುವುದು.[58] ಈ ವೇಳೆಗೆ ಬಳ್ಳಾರಿ ಪ್ರದೇಶ ಹೊಯ್ಸಳರ ವಶಕ್ಕೆ ಬಂದಿತ್ತು. ಏಕೆಂದರೆ ಕ್ರಿ.ಶ. ೧೧೮೩ರ ನಂತರ ಕಲ್ಯಾಣದಲ್ಲಿ ಚಾಲುಕ್ಯರು ಪುನಃ ಅಧಿಕಾರಕ್ಕೆ ಬಂದರೂ ತುಂಗಭದ್ರೆಯ ದಕ್ಷಿಣ ಭಾಗದ ಮೇಲೆ ಅಧಿಕಾರವನ್ನು ಸ್ಥಾಪಿಸಲಾಗಲಿಲ್ಲ. ಕ್ರಿ.ಶ. ೧೨೦೬ರಲ್ಲಿ ಕುಮಾರ ಸ್ವಾಮಿ ದೇವಾಲಯದ ದಾನವನ್ನು (ಸೊಂಡೂರು)ಹೊಯ್ಸಳರ ಮಹದೇವ ದಂಡನಾಯಕನು ನವೀಕರಿಸುತ್ತಾನೆ. ಕ್ರಿ.ಶ. ೧೨೦೯ರ ವೇಳೆಗೆ ಹೊಯ್ಸಳ ರಾಜ್ಯವು ಗಂಗವಾಡಿ, ನೊಳಂಬವಾಡಿ ಸೇರಿದಂತೆ ಹೆದ್ದೊರೆಯವರೆಗೆ (ಕೃಷ್ಣಾನದಿ) ವ್ಯಾಪಿಸಿತು.[59] ಆದರೂ ಬಳ್ಳಾರಿ ಪ್ರದೇಶದ ಮೇಲಿನ ಹಿಡಿತಕ್ಕಾಗಿ ಹೊಯ್ಸಳರಿಗೂ ಮತ್ತು ದೇವಗಿರಿ ಸೇವುಣರಿಗೂ ಆಗಾಗ್ಗೆ ಯುದ್ಧಗಳು ನಡೆಯುತ್ತಿದ್ದವು. ಇಮ್ಮಡಿ ಬಲ್ಲಾಳನು ಗೆದ್ದ ಮಾರ್ಗದಲ್ಲಿ ಕುರುಗೋಡು ಸಹ ಒಂದಾಗಿತ್ತು.[60] ಕ್ರಿ.ಶ. ೧೨೨೪ರ ನೀಲಗುಂದ ಶಾಸನದಲ್ಲಿ, ಬಲ್ಲಾಳನು ಸೇವುಣ ಸೇನೆಯನ್ನು ಬೆನ್ನಟ್ಟಿದ ಉಲ್ಲೇಖವಿದೆ.[61]

ಕ್ರಿ.ಶ. ೧೨೦೦ರ ಈಚೆಗೆ ಸೇವುಣರ ಶಾಸನಗಳು ಈ ಭಾಗದಲ್ಲಿ ದೊರೆಯುತ್ತವೆ. ಈ ಶಾಸನಗಳು ಹೆಚ್ಚಾಗಿ ದಾನದತ್ತಿಗಳನ್ನು ಒಳಗೊಂಡಿವೆ. ಸೇವುಣರು ಈ ಭಾಗದಲ್ಲಿ ಯಾವುದೇ ಅಧಿಕಾರವನ್ನು ಸ್ಥಾಪಿಸಿದಂತೆ ಕಂಡುಬರುವುದಿಲ್ಲ. ಈ ನಡುವೆ ಕ್ರಿ.ಶ. ೧೨೮೦ರ ಸುಮಾರಿಗೆ ಈ ಭಾಗದಲ್ಲಿ ಮುಮ್ಮಡಿ ಸಿಂಗೇಯ ನಾಯಕನು ಪ್ರಾಬಲ್ಯಗಳಿಸಿ ಕುಮ್ಮಟದುರ್ಗದಿಂದ ಆಳ್ವಿಕೆ ನಡೆಸುತ್ತಾನೆ. ಇವನು ಕ್ರಿ.ಶ. ೧೨೮೦ರ ಕುರುಗೋಡಿನ ಕದನದಲ್ಲಿ ಹೊಯ್ಸಳರ ಪರವಾಗಿ ಹೋರಾಡಿ ಸೇವುಣ ಸೇನಾನಿಯನ್ನು ಕೊಂದನು.[62] ಹೊಸಮಲೆದುರ್ಗ (ರಾಮನ ಮಲೆ, ಸೊಂಡೂರು ತಾ.) ಮತ್ತು ಕುಮ್ಮಟದುರ್ಗ ರಾಜಧಾನಿಗಳಾಗಿದ್ದವು. ಕುಮ್ಮಟರಾಜ್ಯದಲ್ಲಿ ಬಳ್ಳಾರಿ, ರಾಯಚೂರು, ಅನಂತಪುರ, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಗದಗ ಜಿಲ್ಲೆಯ ಭಾಗಗಳು ಸೇರಿದ್ದವು.[63] ಈ ಮನೆತನದ ಕಂಪಿಲದೇವ ಮತ್ತು ಅವನ ಮಗ ಕುಮಾರರಾಮನಾಥ ಮೂರುಬಾರಿ ದೆಹಲಿ ಸುಲ್ತಾನರ ಸೈನ್ಯವನ್ನು ಸೋಲಿಸಿದರು. ಕ್ರಿ.ಶ. ೧೩೨೦ರಲ್ಲಿ ಮೂರನೆ ಬಲ್ಲಾಳನು ದೊರವಡಿಯಲ್ಲಿ (ದರೋಜಿ) ಕಂಪಿಲದೇವನನ್ನು ಸೋಲಿಸಿ, ದೊರವಡಿ ಮತ್ತು ಕಂಪಿಲಿಗಳನ್ನು ವಶಪಡಿಸಿಕೊಂಡನು.[64] ಕ್ರಿ.ಶ. ೧೩೨೭ರಲ್ಲಿ ದೆಹಲಿ ಸುಲ್ತಾನರ ನಾಲ್ಕನೆಯ ದಾಳಿಯಲ್ಲಿ ಕುಮ್ಮಟ ರಾಜ್ಯ ನಾಶವಾಯಿತು. ಇದು ಮುಂದೆ ವಿಜಯನಗರ ಸ್ಥಾಪನೆಗೆ ಬುನಾದಿಯಾಯಿತು.

ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹರಿಹರ ಮತ್ತು ಬುಕ್ಕರು ಹೊಯ್ಸಳರ ಸಾಮಂತರಾಗಿ ಆನೆಗೊಂದಿಯಿಂದ ಈ ಪ್ರದೇಶವನ್ನಾಳಿದರು. ಉತ್ತರ ಮುಸ್ಲಿಂ ದಾಳಿಗಳನ್ನು ತಡೆಯಲೆಂಬ ಉದ್ದೇಶದಿಂದ ಮೂರನೆಯ ಬಲ್ಲಾಳನು ಹರಿಹರ ಸಹೋದರರಿಗೆ ಹೆಚ್ಚಿನ ಸ್ವಾತಂತ್ರ ಮತ್ತು ಪ್ರೋತ್ಸಾಹ ನೀಡಿದನು. ದಕ್ಷಿಣದ ಎಲ್ಲ ರಾಜ್ಯಗಳು ನಾಶಗೊಂಡಿದ್ದರಿಂದ ವಿಜಯನಗರವು ಹೆಚ್ಚಿನ ಮಹತ್ವ ಪಡೆದುಕೊಂಡಿತು. ಪ್ರಸ್ತುತ ಕುರುಗೋಡು ಹಂಪೆಯ ಪರಿಸರದಲ್ಲಿದ್ದು, ವಿಜಯನಗರವನ್ನಾಳಿದ ಸಂಗಮ ಮನೆತನದ ಮೂಲನೆಲೆ ಎಂದು ಇದೇ ಲೇಖಕ ಗುರುತಿಸುವ ಪ್ರಯತ್ನ ಮಾಡಿದ್ದಾನೆ.[65] ಸಂಗಮನು ಕಂಪಿಲನ ಅಳಿಯನಾಗಿದ್ದು, ಭಾವಸಂಗಮ ಎಂದು ಕುಮಾರರಾಮನ ಸಾಂಗತ್ಯಗಳಲ್ಲಿ ಉಲ್ಲೇಖಿತನಾಗಿದ್ದಾನೆ.[66] ಎಡತೊರೆಯ ಶಾಸನವೊಂದು "ಪಂಪಾಪುರೀ ಪರಿಸರೇ ಭವಸಂಗಮಾಖ್ಯಃ" ಎಂದಿದೆ.[67] ಅಂದರೆ ಭಾವಸಂಗಮ ಹಂಪೆಯ ಪ್ರದೇಶದವನು ಎಂದರ್ಥವಾಗುವುದು, ಹೀಗೆ ಸಾಂಗತ್ಯಗಳಲ್ಲಿ ಮತ್ತು ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಭಾವಸಂಗಮ ಒಬ್ಬನೇ ಆಗಿದ್ದಾನೆ. ಇದನ್ನು ಬೆಂಬಲಿಸುವಂತೆ ಕೈಫಿಯತ್ತೊಂದರಲ್ಲಿ ಕುಮಾರರಾಮನಿಗೆ ಕಪ್ಪಕಾಣಿಕೆ ಸಲ್ಲಿಸುತ್ತಿದ್ದವರ ಪಟ್ಟಿಯಲ್ಲಿ ಕುರುಗೋಡು ಸಂಗಮನ ಪ್ರಸ್ತಾಪವಿದೆ.[68] ಇದರಿಂದ ಮೇಲೆ ಹೇಳಿದ ಭಾವಸಂಗಮ ಮತ್ತು ಕುರುಗೋಡು ಸಂಗಮ ಒಬ್ಬನೇ ಆಗಿರಬಹುದು. ಅಲ್ಲದೆ ಕುರುಗೋಡಿನಲ್ಲಿ ವಿಜಯನಗರ ಆರಂಭಕಾಲದ ಸಂಗಮೇಶ್ವರ ದೇವಾಲಯವಿದ್ದು, ಬಹುಶಃ ಇದನ್ನು ಸಂಗಮನು ನಿರ್ಮಿಸಿರಬೇಕು? ಈ ಕುರಿತು ಹೆಚ್ಚಿನ ಶೋಧನೆ ನಡೆಯಬೇಕಿದೆ.

ಕುರುಗೋಡಿನ ಸಂಗಮೇಶ್ವರ ದೇವಾಲಯಕ್ಕೆ ಕೃಷ್ಣದೇವರಾಯನು ಗ್ರಾಮವನ್ನು ದತ್ತಿ ನೀಡಿರುವುದು ಈ ನಿಟ್ಟಿನಲ್ಲಿ ಗಮನಾರ್ಹ ಸಂಗತಿ.[69] ಕ್ರಿ.ಶ. ೧೫೨೮ರಲ್ಲಿ ಬಾಗಿಲ ಕೃಷ್ಣರಾಯ ಎಂಬುವನು, ಕುರುಗೋಡಿನ ದೊಡ್ಡಬಸವಣ್ಣದೇವರ ಅಮೃತಪಡಿಗೆ ಭೂಮಿಯನ್ನು ದಾನ ನೀಡಿದ್ದಾನೆ.[70] ಅಖಂಡ ಬಂಡೆಗಳಲ್ಲಿ ಶಿಲ್ಪ ಬಿಡಿಸುವ ಕಲಾ ಸಂಪ್ರದಾಯ ಹಂಪೆಯಿಂದ ಸಮೀಪದ ಕುರುಗೋಡಿಗೂ ವ್ಯಾಪಿಸಿತು. ತತ್ಫಲವಾಗಿ ಅಲ್ಲಿನ ದೊಡ್ಡಬಸವೇಶ್ವರ ಶಿಲ್ಪ ರೂಪುಗೊಂಡಿತು. ಹಂಪೆಗೆ ಅಭಿಮುಖವಾಗಿರುವ ದೊಡ್ಡ ಬಸವೇಶ್ವರ ಶಿಲ್ಪದಿಂದಾಗಿ ಕುರುಗೋಡಿನವರೆಗೂ ಹಂಪೆಯ ವ್ಯಾಪ್ತಿ ವಿಸ್ತರಿಸಿತ್ತೆಂದು ಸ್ಥಳೀಯ ಜನಪದರ ನಂಬಿಕೆ. ಅಂದರೆ ಕುರುಗೋಡಿನಿಂದಲೇ ಪಂಪಾಕ್ಷೇತ್ರವು ಆರಂಭಗೊಳ್ಳುವುದೆಂದು ಹಾಗೂ ಈ ಬೃಹತ್ ನಂದಿ ಹಂಪೆಯ ವಿರೂಪಾಕ್ಷದೇವರಿಗೆ ಸಂಬಂಧಿಸಿದ್ದು, ಅಭಿಮುಖವಾಗಿದೆ ಎಂದು ಜನರು ನಂಬಿದ್ದಾರೆ. ಕ್ರಿ.ಶ. ೧೫೪೩ರ ಹಲುಗೋಡು ಶಾಸನದಲ್ಲಿ, ಕುರುಗೋಡಿನ ಸಂಗಮೇಶ್ವರ ದೇವರಿಗೆ ಹಿಂದೆ ಕೃಷ್ಣದೇವ ರಾಯನು ದಾನವಾಗಿ ನೀಡಿದ್ದ ಚೆನಕುಂಟೆ ಗ್ರಾಮದಾನವು ಖಿಲವಾಗಿದ್ದಾಗ ಸದಾಶಿವ ದೇವರಾಯರಿಗೆ ಪುಣ್ಯವಾಗಲೆಂದು ಅದನ್ನು ಪುನರ್‌ದತ್ತಿ ನೀಡಿದ ಉಲ್ಲೇಖವಿದೆ.[71] ವಿಜಯನಗರ ಕಾಲದಲ್ಲಿ ಕುರುಗೋಡನ್ನು ಸೀಮೆಯನ್ನಾಗಿ ಪರಿಗಣಿಸಲಾಗಿತ್ತು.

ವಿಜಯನಗರದ ಪತನಾನಂತರ ಈ ಪ್ರದೇಶ ಬಿಜಾಪುರದ ಅದಿಲ್‌ಶಾಹಿಗಳ ವಶವಾಯಿತು. ಅನೇಕ ಪಾಳೆಯಪಟ್ಟುಗಳಲ್ಲಿ ಈ ಪ್ರದೇಶ ಹಂಚಿಹೋದರೂ ಅರವೀಡು ಸಂತತಿಯವರು ಕೆಲಕಾಲ ಹಿಡಿತ ಹೊಂದಿದ್ದರು. ಇದನ್ನು ಅವರು ನೀಡಿದ ದಾನಶಾಸನಗಳಿಂದ ಗ್ರಹಿಸಬಹುದು. ಮುಖ್ಯವಾಗಿ ಬಳ್ಳಾರಿ-ಕುರುಗೋಡು ಪ್ರದೇಶವು ಹಂಡೆ ಪಾಳೆಯಗಾರರ ಆಳ್ವಿಕೆಗೆ ಒಳಗಾಯಿತು. ಈ ವಂಶದ ಬಾಲದ ಹನುಮಪ್ಪ ನಾಯಕ ಮೊದಲಿಗೆ ಬಿಜಾಪುರದ ಸುಲ್ತಾನನ ಬಳಿ ಸರದಾರನಾಗಿದ್ದನೆಂದು, ನಂತರ ಕ್ರಿ.ಶ. ೧೫೮೮ರ ಸುಮಾರಿಗೆ ಬಂಕಾಪುರದ ಜಹಗೀರನ್ನು ನೀಡಿ ದಕ್ಷಿಣದ ರಾಜ್ಯವಿಸ್ತರಣೆಗೆ ಕಳುಹಿಸಿಲಾಯಿತೆಂದು ಕೈಫಿಯತ್ತು ಉಲ್ಲೇಖಿಸಿದೆ.[72] ಹಂಡೆ ಪಾಳೆಯಗಾರರು ಅನಂತಪುರದಿಂದ ಆಳ್ವಿಕೆ ಆರಂಭಿಸಿ, ಬಳ್ಳಾರಿ ಪ್ರದೇಶಕ್ಕೆ ವಿಸ್ತರಿಸಿದರು ಎನ್ನಲಾಗಿದೆ.[73] ಸಿರಗುಪ್ಪ ತಾಲ್ಲೂಕಿನ ಎಸ್.ಮಣೂರು ಶಾಸನದಲ್ಲಿ ಹಂಡೆ ಹನುಮಿನಾಯಕ ಅಂಕುಸರಾಯನು ಪೆನುಗೊಂಡೆಯ ವೆಂಕಟಪತಿ ದೇವರಾಯನ ಸಾಮಂತನಾಗಿದ್ದು, ಈತನಿಗೆ ರಾಮಪ್ಪ ಎಂಬ ಮಗನಿದ್ದನೆಂದು ತಿಳಿಸುವುದು.[74] ಹೀಗೆ ಇವರ ಮೂಲವನ್ನು ಕುರಿತಂತೆ, ವಿವಿಧ ಅಭಿಪ್ರಾಯಗಳಿವೆ.

ಹಂಡೆ ಮನೆತನದ ಆಳ್ವಿಕೆ ಕುರಿತಂತೆ ಕುರುಗೋಡು ಕೈಫಿಯತ್ತು ಹೆಚ್ಚಿನ ಮಾಹಿತಿ ನೀಡುತ್ತದೆ. ಬಾಲದ ಹನುಮಪ್ಪನಾಯಕನಿಗೆ ಐದುಜನ ಮಕ್ಕಳಿದ್ದು, ಅವರಲ್ಲಿ ಎರಡನೆಯ ಮಗ ದ್ಯಾಮಣ್ಣ ಎಂಬುವನು ಬಳ್ಳಾರಿ, ಕುರುಗೋಡು ಸೀಮೆಯನ್ನು ಆಳಿದನು.[75] ದ್ಯಾಮಣ್ಣನ ನಂತರ ಮಗನಾದ ರಾಮಪ್ಪನಾಯಕ ಕುರುಗೋಡಿನಲ್ಲಿ ಆಳ್ವಿಕೆ ನಡೆಸಿದನೆಂದಿದೆ. ಈ ನಡುವೆ ಕುರುಗೋಡು ಇವರ ಕೈತಪ್ಪಿ ದೊಡ್ಡಯಲ್ಲಪ್ಪನಾಯಕ ಎಂಬುವವನ ಕೈಸೇರುತ್ತದೆ. ಕ್ರಿ.ಶ. ೧೬೭೭-೭೮ರಲ್ಲಿ ಈ ಪ್ರದೇಶ ಮರಾಠರ ವಶವಾಯಿತು. ಪಾಳೆಯಗಾರರು ಚೌತ ಎಂಬ ಕಪ್ಪಕಾಣಿಕೆಯನ್ನು ಸಲ್ಲಿಸುತ್ತಿದ್ದರು. ಕುರುಗೋಡು ಆದವಾನಿ ಸುಭಾಕ್ಕೆ ಸೇರಿತ್ತು. ಕ್ರಿ.ಶ. ೧೬೯೮ರ ಸುಮಾರಿಗೆ ಕುರುಗೋಡು ಪುನಃ ಹಂಡೆ ವಂಶದವರ ಆಳ್ವಿಕೆ ಒಳಗಾಯಿತು. ಈ ವಂಶದ ಚಿಕ್ಕನಾಯಕನ ಮಗ ದ್ಯಾವಪ್ಪನಾಯಕ ಎಂಬುವನು ಬಳ್ಳಾರಿ, ಕುರುಗೋಡು ಮತ್ತು ತೆಕ್ಕಲಕೋಟೆಗಳನ್ನು ಆಳುತ್ತಾನೆ. ಇವನು ಕುರುಗೋಡಿನ ಯ್ಗುಡ್ಡದ (ಹನುಮಂತನ ಗುಡ್ಡ) ಮೇಲೆ ಕ್ರಿ.ಶ. ೧೭೦೧ರಲ್ಲಿ ಕೋಟೆ ಕಟ್ಟಿಸುತ್ತಾನೆ. ಈ ನಡುವೆ ನಾಡಕುಲಕರ್ಣಿ ತಿಮ್ಮಪ್ಪ ಎಂಬುವನು ಗುಡೇಕೋಟೆಯವರೊಡನೆ ಷಾಮೀಲಾಗಿ ಕುರುಗೋಡನ್ನು ಲೂಟಿ ಮಾಡಿಸಿದ. ಅನಂತರ ದೇಸಾಯಿ ವೆಂಕಪ್ಪ ಎಂಬುವನು ಸಹ ಗುಡೇಕೋಟೆಯವರ ಸಹಾಯದಿಂದ ಕುರುಗೋಡನ್ನು ಹಿಡಿಯುತ್ತಾನೆ. ಹೀಗೆ ಈ ಪ್ರದೇಶದಲ್ಲಿ ನಾಡಕುಲಕರ್ಣಿ, ಸರದೇಸಾಯಿ ಮತ್ತು ಸರನಾಡಗೌಡರು ಕ್ಷೋಭೆಯನ್ನು ಉಂಟುಮಾಡಿ ಅರಾಜಕತೆಯನ್ನು ಸೃಷ್ಟಿಸುತ್ತಿದ್ದರೆಂದು ತಿಳಿದುಬರುತ್ತದೆ. ಇಂತಹ ಸಂಗತಿಗಳು ಕೈಫಿಯತ್ತಿನಲ್ಲಿ ಹೇರಳವಾಗಿವೆ. ಈ ಒಳಶತ್ರುಗಳಿಂದಾಗಿ ಹಮಡೆ ಪಾಳೆಯಗಾರರು ಗುಡೇಕೋಟೆ ಮತ್ತು ಆನೆಗೊಂದಿ ಸಂಸ್ಥಾನಿಕರೊಂದಿಗೆ ಆಗಾಗ್ಗೆ ಯುದ್ಧ ಮಾಡಬೇಕಾಗಿತ್ತು. ಬಳ್ಳಾರಿಯಿಂದ ಸೈನ್ಯಸಮೇತನಾಗಿ ಬಂದ ದ್ಯಾವಪ್ಪನಾಯಕ ಕುರುಗೋಡನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ. ಯ್ಗುಡ್ಡದ ಕೆಳಗಿರುವ ಈಗಿನ ಕುರುಗೋಡು ಪಟ್ಟಣವನ್ನು ಮತ್ತು ಪೇಟೆಯನ್ನು ನಿರ್ಮಿಸುತ್ತಾನೆ.[76] ಇವನು ಕ್ರಿ.ಶ. ೧೭೦೩ರಲ್ಲಿ ತೀರಿಕೊಂಡನು. ಈತನ ಮೊದಲ ಹೆಂಡತಿ ಪದ್ಮಮ್ಮನಿಗೆ ಹಿರೇರಾಮಪ್ಪನಾಯಕ, ಹನುಮಪ್ಪನಾಯಕ ಮತ್ತು ಚಿಕ್ಕರಾಮಪ್ಪನಾಯಕ ಎಂಬ ಮೂರು ಮಕ್ಕಳಿದ್ದರು. ಎರಡನೆಯ ಹೆಂಡತಿ ನೀಲಮ್ಮನಿಗೆ ಮಕ್ಕಳಿರಲಿಲ್ಲ.

ಇವರಲ್ಲಿ ಹನುಮಪ್ಪ ನಾಯಕ ಕುರುಗೋಡು ಸೀಮೆಯನ್ನು ಆಳಿದನು. ಇವರು ಮೊಗಲರಿಗೆ ಮತ್ತು ಮರಾಠರಿಗೆ ಕಪ್ಪಕಾಣಿಕೆ ಸಲ್ಲಿಸಿದರು. ಇವರಿಗೆ ಮಕ್ಕಳಿರಲಿಲ್ಲ. ಹಾಗಾಗಿ ದ್ಯಾವಪ್ಪನಾಯಕನ ಚಿಕ್ಕಹೆಂಡತಿ ನೀಲಮ್ಮ ನಂದ್ಯಾಲ ಹಂಡೆ ವಂಶದ ರಾಮಪ್ಪನಾಯಕನನ್ನು ಅಧಿಕಾರಕ್ಕೆ ತಂದಳು. ಇವಳು, ತನ್ನ ಹಿಡಿತಕ್ಕಾಗಿ ರಾಮಪ್ಪನಾಯಕನ ತಂದೆ ಸಿದ್ದಪ್ಪನಾಯಕ ಮತ್ತು ಚಿಕ್ಕಪ್ಪ ಪ್ರಸನ್ನನಾಯಕರ ಶಿರಚ್ಛೇದ ಮಾಡಿಸಿದಳು. ನೀಲಮ್ಮನ ದುರ್ವರ್ತನೆಯಿಂದ ಬೇಸತ್ತ ಸಂಬಂಧಿಕರು ಬಳ್ಳಾರಿಯಲ್ಲಿ ಅವಳ ಶಿರಚ್ಛೇದ ಮಾಡಿದರು. ಇವೆಲ್ಲ ಮಾಹಿತಿಗಳು ಕೈಫಿಯತ್ತಿನ ಹೇಳಿಕೆಗಳಾದರೂ, ಘಟನೆ ನಡೆದ ಕಾಲ ಸಮೀಪವಾಗಿರುವುದರಿಂದ ನಂಗಲರ್ಹವಾಗಿವೆ. ಹಂಡೆ ವಂಶದವರು ಈ ಭಾಗದ ಮಠ ಮಾನ್ಯಗಳಿಗೆ ದಾನದತ್ತಿಗಳನ್ನು ನೀಡಿದ್ದಾರೆ.[77] ಇವು ಅವರ ಔದಾರ್ಯವನ್ನು ಪ್ರಕಟ ಮಾಡುತ್ತವೆ.


ಕ್ರಿ.ಶ. ೧೭೭೫ರಲ್ಲಿ ಈ ಪ್ರದೇಶ ಹೈದರಾಲಿಯ ವಶವಾಯಿತು.[78] ಇವನ ಕಾಲದಲ್ಲಿ ಕುರುಗೋಡಿನ ಗುಡ್ಡದ ಮೇಲೆ ಹನುಮಂತನ ದೇವಾಲಯ ನಿರ್ಮಾಣಗೊಂಡಿತು.[79] ಭಕ್ಷಿ ಎಂಬುವನು ಬಳ್ಳಾರಿಯ ಸುಭೇದಾರನಾಗಿ ನೇಮಕಗೊಂಡನು. ಟಿಪ್ಪುವಿನ ಕಾಲದಲ್ಲಿ ಈ ಭಾಗಕ್ಕೆ ಸಿದ್ದಿಮೊಹಿದಿನ್‌ಖಾನ್ ಎಂಬುವನು ಸುಭೇದಾರನಾದನು. ಕ್ರಿ.ಶ. ೧೭೯೯ರಲ್ಲಿ ಶ್ರೀರಂಗಪಟ್ಟಣದ ಪತನವಾದ ನಂತರ ಈ ಭಾಗ ಹೈದರಾಬಾದಿನ ನಿಜಾಮನಿಗೆ ಸೇರಿತು. ಆದರೆ ನಿಜಾಮನು ಸ್ವಹಿತದೃಷ್ಟಿಯಿಂದ ಕ್ರಿ.ಶ. ೧೮೦೦ರಲ್ಲಿ ಬಳ್ಳಾರಿ ಪ್ರದೇಶವನ್ನು ದತ್ತ ಜಿಲ್ಲೆಯಾಗಿ ಬ್ರಿಟಿಷರಿಗೆ ನೀಡಿದನು. ಆಗ ಬಳ್ಳಾರಿ, ಮದ್ರಾಸ್ ಸಂಸ್ಥಾನದಲ್ಲಿ ಸೇರಿತು.

ಈ ಭಾಗದ ಮೊದಲ ಕಲೆಕ್ಟರ್ ಆಗಿ ಸರ್ ಥಾಮಸ್ ಮನ್ರೊ ಎಂಬುವನು ನೇಮಕಗೊಂಡನು. ಇವನು ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಂಡು, ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದನು. ಈ ಪ್ರದೇಶದಲ್ಲಿ ಬೇರೂರಿದ್ದ ಪುಂಡಾಟಿಕೆಯನ್ನು ಬಗ್ಗು ಬಡಿದನು. ಇದರಿಂದ ಈಸ್ಟ್ ಇಂಡಿಯ ಕಂಪನಿಯ ಟೀಕೆಗೂ ಒಳಗಾದನು. ಇದಕ್ಕೆ ೧೮೦೫ರಲ್ಲಿ ದೀರ್ಘವಾದ ಉತ್ತರವನ್ನು ನೀಡಿ, ತನ್ನ ಕ್ರಮಗಳನ್ನು ಸಮರ್ಥಿಸಿಕೊಂಡನು. ಅದೇನೆಂದರೆ, ಪಾಳೆಯಗಾರನ ಪ್ರಾಚೀನ ಹಕ್ಕುಗಳಾಗಲಿ ಅಥವಾ ಅವರು ತೋರಿದ ನಡತೆಯಾಗಲಿ ಮೃದು ಕ್ರಮಕೈಗೊಳ್ಳಲು ಅರ್ಹತೆ ಹೊಂದಿರಲಿಲ್ಲವೆಂದು, ಅವರ ಚರಿತ್ರೆ ಮತ್ತು ನಡತೆಗಳು ಹಿಂಸೆ, ಅಪರಾದ ಮತ್ತು ದಬ್ಬಾಳಿಕೆಗಳಿಂದ ಕೂಡಿದ್ದು, ನ್ಯಾಯವಾದ ಸರ್ಕಾರವನ್ನು ದಿಕ್ಕರಿಸುವಂತೆ ಇದ್ದವೆಂದು ಬರೆದಿದ್ದಾನೆ.[80] ಈ ವೇಳೆಗೆ ಬಳ್ಳಾರಿ ಜಿಲ್ಲೆಯಲ್ಲಿ ೨೩ ಪಾಳೆಯಗಾರ ಮನೆತನಗಳಿದ್ದವು. ಸ್ವಾತಂತ್ರ್ಯದವರೆಗೆ ಒಟ್ಟು ೧೧೨ ಕಲೆಕ್ಟರ್‌ಗಳು ಆಡಳಿತ ನಡೆಸಿದ್ದಾರೆ. ಇವರಲ್ಲಿ ಮನ್ರೋ, ಹ್ಯಾಥ್‌ವೇ, ಸಿವೆಲ್ ಮತ್ತು ಮೆಕಾರ್ಡಿ ಪ್ರಮುಖರಾಗಿದ್ದಾರೆ. ಕಂದಾಯ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲಾಯಿತು. ರೈತರಿಗೆ ಪಟ್ಟಾವನ್ನು ನೀಡಿ, ಕಂದಾಯವನ್ನು ನಿಗದಿಗೊಳಿಸಿದರು, ವ್ಯವಸ್ಥಿತವಾದ ಭೂಮಾಪನ ಕಾರ್ಯಗಳು ನಡೆದವು.

ಸ್ವಾತಂತ್ರ ಹೋರಾಟಕ್ಕೆ ಕುರುಗೋಡು ತನ್ನದೇ ಆದ ಕಾಣಿಕೆ ನೀಡಿದೆ. ಬಾದನಹಟ್ಟಿ ವೆಂಕೋಬರಾವ್ ಎಂಬುವರು ಈ ಭಾಗದಲ್ಲಿ ಸ್ವಾತಂತ್ರ ಹೋರಾಟದ ಮುಂಚೂಣಿಯಲ್ಲಿದ್ದರು. ಇವರು ರಾಜಾಜಿಯವರ ಜೊತೆ ಬಳ್ಳಾರಿ ಜೈಲಿನಲ್ಲಿದ್ದರು. ಇವರ ಮಗ ಬಿ.ವಿ. ಶೇಷಗಿರಿರಾವ್, ಮಗಳು ತುಂಗಮ್ಮ ಅವರುಗಳ ಸಹ ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿದರು. ಇಡೀ ಕುಟುಂಬವೇ ಸ್ವಾತಂತ್ರ ಹೋರಾಟದಲ್ಲಿ ಪಾಲ್ಗೊಂಡಿತು. ಇವರಲ್ಲದೆ ಸರನಾಡಗೌಡ ದೊಡ್ಡನಗೌಡ, ಕೆ.ರಾಮಚಂದ್ರಗುಪ್ತ, ಅಕ್ಕಸಾಲಿ ಚಂದ್ರ ಶೇಖರಪ್ಪ ಮುಂತಾದವರು ಈ ಭಾಗದ ಪ್ರಮುಖ ಸ್ವಾತಂತ್ರ ಹೋರಾಟಗಾರರಾಗಿದ್ದರು. ಈ ಸಂದರ್ಭದಲ್ಲಿ ಜೆ.ಬಿ.ಕೃಪಲಾನಿಯವರು ಕುರುಗೋಡಿಗೆ ಭೇಟಿ ನೀಡಿದ್ದರು. ಸ್ವಾತಂತ್ರ ನಂತರ ಬಳ್ಳಾರಿ ಪ್ರದೇಶವು ಮದ್ರಾಸ್ ಸಂಸ್ಥಾನದಲ್ಲೆ ಮುಂದುವರೆಯಿತು. ಆಗ ಕಂದಾಯ ಕಟ್ಟುವವರಿಗೆ ಮಾತ್ರ ಮತದಾನ ಮಾಡುವ ಹಕ್ಕಿದ್ದು, ಅದರ ಪ್ರಕಾರ ಕುರುಗೋಡಿನ ತಂಗಿ ಮಲ್ಲೇಶಪ್ಪನವರು ಮದ್ರಾಸ್ ಸಂಸ್ಥಾನಕ್ಕೆ ಎಂ.ಎಲ್.ಸಿ ಆಗಿ ನಾಮನಿರ್ದೇಶನಗೊಂಡರು. ಕರ್ನಾಟಕ ಏಕೀಕರಣ ಚಳುವಳಿಯಲ್ಲೂ ಕುರುಗೋಡಿನ ಜನರು ಅಪಾರವಾಗಿ ಶ್ರಮಿಸಿದ್ದಾರೆ. ಕುರುಗೋಡು, ಬಾದನಹಟ್ಟಿ, ಗೆಣಿಕಿಹಾಳ ಗ್ರಾಮಗಳ ೬೬ ಜನರು, ಅಳವಂಡಿ ಶಿವಮೂರ್ತಿ ಸ್ವಾಮಿಯವರ ನೇತೃತ್ವದಲ್ಲಿ ಅಖಂಡ ಕರ್ನಾಟಕ ನಿರ್ಮಾಣದ ಪರಿಷತ್ತಿನ ಆಶ್ರಯದಲ್ಲಿ ಸತ್ಯಾಗ್ರಹ ನಡೆಸಿದರು. ಈ ಸಂಬಂಧವಾಗಿ ದಿನಾಂಕ ೨೧.೧೧.೧೯೫೫ರಲ್ಲಿ ಸತ್ಯಾಗ್ರಹಿಗಳನ್ನು ಬಂಧಿಸಿ ಬಳ್ಳಾರಿ ಜೈಲಿಗೆ ಕಳುಹಿಸಲಾಯಿತು. ಅಮರಗೌಡರು ಮತ್ತು ತಂಗಿ ಸೋಮಶೇಖರಪ್ಪನವರು ಕುರುಗೋಡಿನ ತಂಡದ ಮುಖ್ಯಸ್ಥರಾಗಿದ್ದರು.[81]

ಪ್ರಸ್ತುತ ಕುರುಗೋಡು ವಿಧಾನಸಭಾ ಕ್ಷೇತ್ರವಾಗಿದ್ದು, ಪ್ರತ್ಯೇಕ ತಾಲ್ಲೂಕು ಕೇಂದ್ರವಾಗುವ ಎಲ್ಲಾ ಅರ್ಹತೆಗಳನ್ನು ಪಡೆದುಕೊಂಡಿದೆ. ಈ ಸಂಬಂಧವಾಗಿ ಸಾರ್ವಜನಿಕರು ಮೊದಲುಗೊಂಡು ವಿವಿಧ ಸಂಘಟನೆಗಳು ಹೋರಾಟ ನಡೆಸಿವೆ. ತಾಲ್ಲೂಕು ರಚನೆಗೆ ಸರ್ಕಾರ ಒಪ್ಪಿದೆ. ಕುರುಗೋಡು ಪಟ್ಟಣ ಕೈಮಗ್ಗದ ಬಟ್ಟೆಗಳಿಗೆ ಪ್ರಸಿದ್ಧಿ. ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದು, ದೂರದ ಊರುಗಳೊಂದಿಗೆ ಸಂಪರ್ಕವನ್ನು ಹೊಂದಿದೆ. ಈ ಪ್ರದೇಶದಲ್ಲಿ ಕಡಲೆ, ತೊಗರಿ, ಹೆಸರು, ಉದ್ದು, ಅಲಸಂದಿ. ಮೇಣಸಿನಕಾಯಿ, ಧನಿಯ, ನವಣೆ, ಸಜ್ಜೆ, ಜೋಳ, ರಾಗಿ, ಭತ್ತ. ಕಬ್ಬು, ಕುಸುಬಿ, ಗುರೆಳ್ಳು, ಎಳ್ಳು, ಹರಳು, ಶೇಂಗಾ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಇತ್ತೀಚೆಗೆ ತರಕಾರಿ, ಹಣ್ಣು ಮತ್ತಿತರ ತೋಟದ ಬೆಳೆಗಳನ್ನು ಸಹ ವಿಪುಲವಾಗಿ ಬೆಳೆಯಲಾಗುತ್ತಿದೆ. ಕುರುಗೋಡು ಪಟ್ಟಣ ಧಾರ್ಮಿಕ ಸಾಮರಸ್ಯಕ್ಕೆ ಹೆಸರಾಗಿದ್ದು. ಹಿಂದು-ಮುಸ್ಲಿಮರು ಸೋದರರಂತೆ ಸಹಬಾಳ್ವೆ ನಡೆಸುತ್ತಿದ್ದಾರೆ. ಅದೇ ರೀತಿ ಕನ್ನಡ -ತೆಲುಗು ಭಾಷಿಕರು ಭಾಷಾಸೌಹಾರ್ದತೆಗೆ ಹೆಸರಾಗಿದ್ದಾರೆ. ಈ ಎಲ್ಲ ಗುಣಗಳು ಕುರುಗೋಡಿನ ಜನಸಂಸ್ಕೃತಿಯ ಅಳತೆಗೋಲುಗಳಾಗಿವೆ. ಹೀಗೆ ಕುರುಗೋಡು ಶತಮಾನಗಳುದ್ದಕ್ಕೂ ಚರಿತ್ರೆಯಲ್ಲಿ ತನ್ನ ಗುರುತನ್ನು ಮೂಡಿಸಿಕೊಂಡು ಬಂದಿದೆ. ಇಂತಹ ಸಾಂಸ್ಕೃತಿಕ ನೆಲೆಗಳು ವಿರಳ. ಇಲ್ಲಿನ ಸ್ಮಾರಕಗಳನ್ನು ಸಂರಕ್ಷಿಸಿ, ಪ್ರವಾಸಿ ತಾಣವನ್ನಾಗಿ ಮಾಡಬೇಕು. ದೊಡ್ಡ ದೊಡ್ಡ ಪ್ರವಾಸಿ ಕೇಂದ್ರಗಳ ಅಬ್ಬರದಿಂದಾಗಿ ಕುರುಗೋಡಿನಂತಹ ಪ್ರಾಚೀನ ನೆಲೆಗಳು ಅಜ್ಞಾತ ಸ್ಥಿತಿಯಲ್ಲಿವೆ. ಅವು ಬೆಳಕಿಗೆ ಬರಲೆಂಬುದೇ ಪ್ರಸ್ತುತ ಲೇಖನದ ಆಶಯ.

**ಸಿಂದರ ವಂಶಾವಳಿ**[82]




[1] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಬಳ್ಳಾರಿ ಜಿಲ್ಲೆ, ಬಳ್ಳಾರಿ ೩

[2] ಬೆನಗಲ್ ರಾಮರಾವ್ ಮತ್ತು ವಾನ್ಯಂ ಸುಂದರಶಾಸ್ತ್ರಿ (ಸಂ) ೧೯೪೧, ಪುರಾಣನಾಮ ಚೂಡಾಮಣಿ, ಮೈಸೂರು ವಿಶ್ವವಿದ್ಯಾನಿಲಯ, ಪು.೧೧೨. ಈ ಮಾಹಿತಿಯನ್ನು ಕುರುಗೋಡಿನ ಶ್ರೀ ತಿಪ್ಪೆರುದ್ರಗೌಡ ಅವರು ಒದಗಿಸಿದ್ದಾರೆ.

[3] ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ ೭-೮, ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ೨೨೫

[4] ರಾಜಶೇಖರ ಎಸ್., ೧೯೭೬ : ಪೆಯಿಂಟೆಡ್ ಇನ್‌ಸ್ಕ್ರಿಪ್ಷನ್ಸ್ ಅಟ್ ಕುರುಗೋಡು, ಸಮ್ಮರಿಸ್ ಆಫ್ ಪೇಪರ್ಸ್, ಆಲ್ ಇಂಡಿಯಾ ಓರಿಯಂಟಲ್ ಕಾನ್ಫರೆನ್ಸ್, 28 ಸೆಷನ್, ಕರ್ನಾಟಕ ಯುನಿವರ್ಸಿಟಿ, ಧಾರವಾಡ, xvi-೧೦, ಪು. ೨೨೨.

ಇದೇ ಲೇಖಕರು, ೧೭.೩.೦೩ರಂದು ನಡೆದ ಕುರುಗೋಡು ವಿಚಾರ ಸಂಕಿರಣದ ಅಧ್ಯಕ್ಷೀಯ ಭಾಷಣದಲ್ಲಿ ಈ ಶಾಸನದ ಕಾಲವನ್ನು ಕ್ರಿ.ಪೂ. ೩ನೆಯ ಶತಮಾನ ಎಂದಿದ್ದಾರೆ.

[5] ಸುಂದರ ಅ., ೧೯೯೭ : ಕರ್ನಾಟಕ ಚರಿತ್ರೆ ಸಂಪುಟ-೧, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು.೪೭೩

[6] ಮಹದೇವ ಸಿ., ಮತ್ತು ಇತರರು, ೨೦೦೨; ಹೊಸಪೇಟೆ ತಾಲ್ಲೂಕು ದರ್ಶನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೪

[7] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಬಳ್ಳಾರಿ ಜಿಲ್ಲೆ, ಹಡಗಲಿ ೩೭.

[8] ಅದೇ ಪು. xviii

[9] ಬಳ್ಳಾಇ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್, ಪು.೫೧ : ಗ್ಯಾಸೆಟಿಯರ್ ಆಫ್ ಇಂಡಿಯಾ ೧೯೭೨ : ಮೈಸೂರು ಸ್ಟೇಟ್, ಬಳ್ಳಾರಿ ಡಿಸ್ಟ್ರಿಕ್ಟ್, ಪು.೬೯೬

[10] ರಾಜಶೇಖರ್ ಎಸ್., ೧೯೭೬ : ಪೂರ್ವೋಕ್ತ

[11] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ-೧, ಬಳ್ಳಾರಿ ಜಿಲ್ಲೆ, ಬಳ್ಳಾರಿ ೧೨

[12] ಅದೇ ಪು. xviii

[13] ರಾಜಶೇಖರ್ ಎಸ್., ೧೯೭೬ : ಪೂರ್ವೋಕ್ತ

[14] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ-೧, ಬಳ್ಳಾರಿ ಜಿಲ್ಲೆ, ಬಳ್ಳಾರಿ ೧೨.

[15] ಅದೇ.ಬಳ್ಳಾರಿ ೩೯

[16] ಅದೇ, ಬಳ್ಳಾರಿ ೫೪; ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಡಾ.ವಾಸುದೇವ ಬಡಿಗೇರ ಅವರ "ಸೊಂಡೂರು ಪರಿಸರದ ಕಾರ್ತಿಕೇಯ ತಪೋವನ" ಕೃತಿಯನ್ನು ನೋಡಿ

[17] ಅದೇ, ಬಳ್ಳಾರಿ ೩೨

[18] ಅದೇ, ಸಿರಗುಪ್ಪ ೫೯

[19] ಅದೇ, ಹರಪನಹಳ್ಳಿ ೫೨

[20] ಅದೇ, ಪುಟ xx-xxi

[21] ಅದೇ, ಪುಟ xxii

[22] ಅದೇ, ಸಿರಗುಪ್ಪ ೧

[23] ಅದೇ, ಹರಪನಹಳ್ಳಿ ೫೦

[24] ಮಹದೇವ ಸಿ. ಮತ್ತು ಇತರರು, ೨೦೦೨ ; ಪೂರ್ವೋಕ್ತ, ಪು ೧೯

[25] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ-೧, ಬಳ್ಳಾರಿ ಜಿಲ್ಲೆ, ಸಿರಗುಪ್ಪ ೫೬

[26] ಅದೇ, ಬಳ್ಳಾರಿ ೭

[27] ಅದೇ, ಬಳ್ಳಾರಿ ೮

[28] ಅದೇ, ಬಳ್ಳಾರಿ ೧೮

[29] ಅದೇ, ಪು. xxv

[30] ಅದೇ. ಸಿರಗುಪ್ಪ ೨೯

[31] ಅದೇ, ಪು. xxv; ಸಿರಗುಪ್ಪ ೩೦

[32] ಅದೇ, ಬಳ್ಳಾರಿ ೪೫

[33] ಅದೇ, ಪು. xxvi

[34] ಗೋಪಾಲ ಬಾ.ರಾ., ಮೈನರ್ ಡೈನಾಸ್ಟೀಸ್ ಆಫ್ ಕರ್ನಾಟಕ, ಪು ೯೧

[35] ಮಜುಂದಾರ್ ಆರ್.ಸಿ (ಸಂ) : ದಿ ಸ್ಟ್ರಗಲ್ ಫಾರ್ ಎಂಪೈರ್, ಭಾರತೀಯ ವಿದ್ಯಾಭವನ

[36] ಚನ್ನಬಸಯ್ಯ ಹಿರೇಮಠ, ೧೯೯೫ : ಕುರುಗೋಡು ಸಿಂದರು - ಒಂದು ಅಧ್ಯಯನ, ಅಗಡಿ ಸಂಸ್ಕೃತಿ ಪ್ರತಿಷ್ಠಾನ, ಕೊಪ್ಪಳ, ಪು. ೧೩-೧೪

[37] ಅದೇ, ಪು.೧೬

[38] ಅದೇ, ಪು. ೭೦

[39] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ೧, ಬಳ್ಳಾರಿ ಜಿಲ್ಲೆ, ಪು xxviii

[40] ಅದೇ ಬಳ್ಳಾರಿ ೩೯

[41] ಚನ್ನಬಸಯ್ಯ ಹಿರೇಮಠ, ಪೂರ್ವೋಕ್ತ ಪು. ೭೧

[42] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ-೧, ಬಳ್ಳಾರಿ ಜಿಲ್ಲೆ, ಬಳ್ಳಾರಿ ೪೫

[43] ಅದೇ ಹಗರಿಬೊಮ್ಮನಹಳ್ಳಿ ೪೧

[44] ಅದೇ ಸಿರಗುಪ್ಪ ೧

[45] ಅದೇ ಸಿರಗುಪ್ಪ ೪೧

[46] ಅದೇ ಸಿರಗುಪ್ಪ ೪೨

[47] ಅದೇ, ಬಳ್ಳಾರಿ ೬೧, ಸಿರಗುಪ್ಪ ೪೦

[48] ಅದೇ, ಬಳ್ಳಾರಿ ೪೦

[49] ಚನ್ನಬಸಯ್ಯ ಹಿರೇಮಠ, ಪೂರ್ವೋಕ್ತ, ಪು. ೭೪

[50] ಅದೇ

[51] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧, ಬಳ್ಳಾರಿ ಜಿಲ್ಲೆ, ಬಳ್ಳಾರಿ ೧೮

[52] ಅದೇ, ಬಳ್ಳಾರಿ ೭-೮

[53] ಅದೇ, ಬಳ್ಳಾರಿ ೧೮

[54] ಸುರೇಂದ್ರರಾವ್ ಬಿ. (ಸಂ). ೧೯೯೭ : ಕರ್ನಾಟಕ ಚರಿತ್ರೆ ಸಂ-೨, ಕನ್ನಡ ವಿಶ್ವವಿದ್ಯಾಲಯ ಪು. ೮ ೩

[55] ಮಹದೇವ ಸಿ ಮತ್ತು ಇತರರು, ೨೦೦೨ : ಪೂರ್ವೋಕ್ತ, ಪು.೨೦

[56] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ-೧, ಬಳ್ಳಾರಿ ಜಿಲ್ಲೆ, ಬಳ್ಳಾರಿ ಪು. xxix

[57] ಅದೇ, ಬಳ್ಳಾರಿ ೧೯

[58] ಅದೇ, ಪು xxxi

[59] ಅದೇ, ಹಡಗಲಿ ೬೭

[60] ವೆಲ್‌ಕಮ್ ಬಳ್ಳಾರಿ; ೧೯೫೧-೫೨, ಸ್ಮರಣಸಂಚಿಕೆ ೧೯೫೩, ಪೂರ್ಣಿಮ ಅಡ್ವರ್ಟೈಸಿಂಗ್, ಅವೆನ್ಯೂರಸ್ತೆ, ಬೆಂಗಳೂರು, ಪು.೨೩೩

[61] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಬಳ್ಳಾರಿ ಜಿಲ್ಲೆ, ಹರಪನಹಳ್ಳಿ ೮೦

[62] ಎಸಿಗ್ರಾಫಿಯಾ ಕರ್ನಾಟಿಕ VII, ಚನ್ನಗಿರಿ ೨೪

[63] ದೇಸಾಯಿ ಪಿ.ಬಿ. ಮತ್ತು ಇತರರು ೧೯೭೦ : ಎ ಹಿಸ್ಟರಿ ಆಫ್ ಕರ್ನಾಟಕ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಪು.೨೮೬

[64] ವಸುಂಧರಾ ಫಿಲಿಯೋಜಾ, ೧೯೮೦ : ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಕಸಾಪ, ಬೆಂಗಳೂರು ಪು. ೪೬

[65] ಮಹದೇವ ಸಿ., ೨೦೦೧ : ಕರ್ನಾಟಕ ಪುರಾತತ್ವ ಶೋಧ, ಶ್ರೀಲಕ್ಷ್ಮಿ ಪ್ರಕಾಶನ, ಶ್ರೀರಂಗಪಟ್ಟಣ, ಪು.೮೬

[66] ವರದರಾಜರಾವ್ ಜಿ., ೧೯೬೩ : ಕುಮ್ಮಟ ಕೇಸರಿ, ಉಷಾ ಸಾಹಿತ್ಯಮಾಲೆ, ಮೈಸೂರು ಪು.೮೭

[67] ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ-೫, ಕೃಷ್ಣರಾಜನಗರ ೭೭

[68] ಕಲಬುರ್ಗಿ ಎಂ.ಎಂ. (ಸಂ). ೧೯೯೪ : ಕರ್ನಾಟಕದ ಕೈಫಿಯತ್ತುಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ ಪು. ೪೬೬

[69] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ-೧, ಬಳ್ಳಾರಿ ಜಿಲ್ಲೆ, ಬಳ್ಳಾರಿ ೧೬

[70] ಅದೇ, ಬಳ್ಳಾರಿ ೯

[71] ಅದೇ, ಬಳ್ಳಾರಿ ೧೬

[72] ಕಲಬುರ್ಗಿ ಎಂ.ಎಂ., ಪೂರ್ವೋಕ್ತ, ಪು. ೪೫೦

[73] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ-೧, ಬಳ್ಳಾರಿ ಜಿಲ್ಲೆ, ಪು.xxxvi

[74] ಅದೇ, ಸಿರಗುಪ್ಪ ೬೩

[75] ಕಲಬುರ್ಗಿ ಎಂ.ಎಂ., ಪೂರ್ವೋಕ್ತ, ಪು.೪೫೨

[76] ಅದೇ, ಪು. ೪೫೫

[77] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ-೧, ಬಳ್ಳಾರಿ ಜಿಲ್ಲೆ, ಸಿರಗುಪ್ಪ ೬೩, ಹೊಸಪೇಟೆ ೫-೭ ಕಲೆಕ್ಟರುಗಳ ಆಳ್ವಿಕೆ (೧೮೦೦-೧೯೪೭) : ಒಂದು ಸಮೀಕ್ಷೆ, ಎಂ.ಫಿಲ್ ಪ್ರಬಂಧ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೮

[78] [79] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಬಳ್ಳಾರಿ ಜಿಲ್ಲೆ, ಬಳ್ಳಾರಿ ೧೧

[80] ಬಳ್ಳಾರಿ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್, ೧೯೦೪ : ಪು. ೪೯

[81] ಕುರುಗೋಡಿನ ಶ್ರೀ ಕುನಾಸಿದ್ದಪ್ಪ ಎಂಬುವರು ಮಾಹಿತಿ ನೀಡಿದ್ದಾರೆ.

[82] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಬಳ್ಳಾರಿ ಜಿಲ್ಲೆ, ಪು.XXIX.

## ೪. ಶಾಸನಗಳು (೧)

ನಾಡಿನ ಇತಿಹಾಸವನ್ನು ನಿರ್ಮಿಸುವಲ್ಲಿ ಶಾಸನಗಳ ಪಾತ್ರ ಮಹತ್ವದ್ದು. ಈ ಶಾಸನಗಳನ್ನು ಶಿಲೆ, ಲೋಹ, ಕಟ್ಟಿಗೆ, ಮಡಿಕೆ ಮೊದಲಾದ ವಸ್ತುಗಳ ಮೇಲೆ ರಚಿಸಲಾಗಿದೆ. ಸಾಮಾನ್ಯವಾಗಿ ಶಾಸನವೆಂದರೆ ರಾಜಾಜ್ಞೆ. ಅದನ್ನು ಎಲ್ಲಾ ಪ್ರಜೆಗಳು ಪಾಲಿಸಬೇಕಾಗುತ್ತಿತ್ತು. ಇವುಗಳನ್ನು ರಾಜ ಇಲ್ಲವೆ ಅವನ ಹೆಸರಿನಲ್ಲಿ ಮಾಂಡಳಿಕ, ಪ್ರಧಾನಿ, ಗೌಡ, ಮುಖಂಡ ಮುಂತಾದ ವ್ಯಕ್ತಿಗಳು ಹಾಕಿಸುತ್ತಿದ್ದರು. ಇವುಗಳಲ್ಲಿ ದಾನ-ದತ್ತಿಗೆ ಸಂಬಂಧಿಸಿದ ಶಾಸನಗಳೇ ಹೆಚ್ಚಾಗಿ ಕಂಡುಬಂದರೂ ರಾಜ್ಯವಾಳುತ್ತಿದ್ದ ಅರಸ, ಮಾಂಡಳಿಕ, ಪ್ರಧಾನ, ಗೌಡ ಹೀಗೆ ಕೇಂದ್ರದಿಂದ ಮೊದಲ್ಗೊಂಡು ಚಿಕ್ಕ ಘಟಕ-ಹಳ್ಳಿಯವರೆಗೂ ಮಾಹಿತಿ ದೊರೆಯುತ್ತವೆ.

ಶಾಸನಗಳಲ್ಲಿ ಬರುವ ವಿಷಯವನ್ನು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಕಲೆ ಮತ್ತು ವಾಸ್ತುಶಿಲ್ಪ, ಸಾಹಿತ್ಯ ಮೊದಲಾದ ಭಾಗಗಳಲ್ಲಿ ವಿಂಗಡಿಸಬಹುದು. ಚರಿತ್ರೆಗೆ ಶಾಸನಗಳ ಮುಖ್ಯ ಆಕರಗಳೆಂದು ಪರಿಗಣಿಸಿ ವಿಸ್ತೃತವಾದ ಅಧ್ಯಯನಗಳು ನಡೆದವು. ಆರಂಭದಲ್ಲಿ ಇಂಥ ಅಧ್ಯಯನಗಳು ಇಡೀ ರಾಜ್ಯ ಇಲ್ಲವೇ ಆಳ್ವಿಕೆಯ ಭೌಗೋಳಿಕ ಪ್ರದೇಶಕ್ಕೆ ಸಂಬಂಧಿಸಿದ್ದಾಗಿತ್ತು. ಕ್ರಮೇಣ ಇದು ಒಂದು ಸಂಕೀರ್ಣ ಪ್ರದೇಶ, ಘಟಕ ಹಳ್ಳಿಗಳಿಗೂ ಸೀಮಿತವಾಗಿ ಇವುಗಳೊಂದಿಗೆ ಅಲ್ಲಿ ಕಂಡುಬರುವ ವಿವಿಧ ಆಕರಗಳನ್ನು ಬಳಸಿ ಪರಿಪೂರ್ಣ ಚರಿತ್ರೆ ನಿರ್ಮಿಸಲು ಸಾಧ್ಯವಾಯಿತು. ಇಂಥ ಅಧ್ಯಯನ ಹೆಚ್ಚು ಮಾನ್ಯತೆ ಪಡೆದುಕೊಂಡಿತು.

ಕುರುಗೋಡು ಚರಿತ್ರೆಯನ್ನು ಬಿಂಬಿಸುವ ಹಲವು ಶಾಸನಗಳು ಸ್ಥಳೀಯವಾಗಿ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಲಭ್ಯ ಇವೆ. ಗ್ರಾಮದ ನೆರೆಹೊರೆಯಲ್ಲಿ ಕಂಡುಬರುವ ಬೆಟ್ಟ ಹಾಗೂ ನಿಸರ್ಗನಿರ್ಮಿತ ಗುಹೆಗಳು ಪ್ರಾಚೀನ ಮಾನವನಿಗೆ ವಾಸಸ್ಥಾನಗಳಾಗಿದ್ದವು. ಅವರು ಕಲ್ಲಾಶ್ರಯಗಳಲ್ಲಿ ಬಿಡಿಸಿದ ಚಿತ್ರಗಳಿಗೆ ಬಳಸಿದ ಬಣ್ಣದಿಂದಲೆ ಮುಂದಿನ ಜನಾಂಗ ಶಾಸನ ಬರೆಯುವ ಶಕ್ತಿ ಪಡೆದು ಕೊಂಡರೆಂದು ಅಲ್ಲಿ ಲಭ್ಯ ಇರುವ ಶಾಸನದಿಂದ ತಿಳಿಯುತ್ತದೆ. ಮುದ್ದುಗನ ಮೂಲೆ ಎಂದು ಕರೆಯಲ್ಪಡುವ ಕಲ್ಲಾಶ್ರಯದಲ್ಲಿ ಚಿತ್ರಿತ ಶಾಸನಗಳು ಕಂಡು ಬಂದಿವೆ. ಇವುಗಳ ಬಗ್ಗೆ ೧೯೭೬ರಲ್ಲಿ ಡಾ.ಎಸ್. ರಾಜಶೇಖರ ಮತ್ತು ಇತರರು “ಇಂಡಿಯನ್ ಓರಿಯಂಟಲ್ ಕಾನ್ಫರನ್ಸ”ದಲ್ಲಿ ಮಂಡಿಸಿದ್ದಾರೆ. ಕಪ್ಪು-ಕೆಂಪು ಬಣ್ಣಗಳಲ್ಲಿರುವ ಇವುಗಳು ‘ಮಾ’ ಎಂಬ ಅಕ್ಷರ ಶಾತವಾಹನರ, ‘ನಮದೆವಸ್ಯ’

ಕದಂಬರ ಮತ್ತು 'ಗುಣಹಿತರ್ಯ' ಎಂಬುವುದು ಬಾದಾಮಿ ಚಾಲುಕ್ಯರ ಕಾಲದ್ದೆಂದು ಸಂಶೋಧಕರ ಅಭಿಮತವಾಗಿತ್ತು. ಇತ್ತೀಚೆಗೆ ಇವುಗಳ ಕುರಿತ ಅಧ್ಯಯನ ಮಾಡಿದ ರಾಜಾಶೇಖರ ಅವರು 'ಮಾ' ಎಂಬುವುದು ಮೌರ್ಯರ ಕಾಳಕ್ಕೆ ಸೇರಿದ್ದೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಇದರ ನಂತರ ಈ ಪ್ರದೇಶದಲ್ಲಿ ಕಂಡುಬಂದಿರುವ ಮೌರ್ಯ ಅಶೋಕನ ಬಂಡೆಗಲ್ಲು ಜಟ್ಟಿಂಗರಾಮೇಶ್ವರ, ಬ್ರಹ್ಮಗಿರಿಗಳಲ್ಲಿರುವ ಈ ಶಾಸನಗಳನ್ನು ಗಮನಿಸಿದರೆ ಮಧ್ಯದಲ್ಲಿರುವ ಕುರುಗೋಡು ಅದರ ಭೌಗೋಳಿಕ ಲಕ್ಷಣದಿಂದ ಇಲ್ಲಿಯೂ ಅಶೋಕನ ಶಾಸನ ನಿರ್ಮಾಣವಾಗಿರುವುದಕ್ಕೆ ಸಾಧ್ಯತೆಗಳಿವೆ. ಈ ಹಿನ್ನೆಲೆಯಲ್ಲಿ ಹೆಚ್ಚಿನ ಸಂಶೋಧನೆಯಾಗಬೇಕಾಗಿದೆ.

ಕುರುಗೋಡು ಗ್ರಾಮದ ಕತ್ತೆಬಂಡೆ ಶಿಲಾಶಾಸನ ಬಾದಾಮಿ ಚಾಳುಕ್ಯ ಅರಸ ಸತ್ಯಾಶ್ರಯನ ಕಾಲಕ್ಕೆ ಸೇರಿದುದು. ಇದರಲ್ಲಿ ಸತ್ಯಾಶ್ರಯ ಪಡೆದು ಕುರುಗೋಡು ವ್ಯವಸ್ತೆ ಎನ್ತೆನ್ಡೊಡೆ "ಪದಿನೆಣ್ಬುಗೇಣ ೧೮ ಕೋಲು ಪೊನ್ನು ನವಿಲ ಪೊನ್ನು" ಎಂದಿದೆ.

[1] ಹದಿನೆಂಟು ಗೇಣ ಕೋಲನ್ನು ಹೊಲ ಅಳೆಯಲು ಉಪಯೋಗಿಸಲಾಗುತ್ತಿತ್ತು. ಆಗಿನ ಕಾಲದಲ್ಲಿ ಎಂಟು ಮೊಳ, ಹದಿನೆಂಟುಗೇಣ ಹಿರೆಕೋಲ, ನವಿಲಕೋಲುಗಳ ಬಳಕೆ ಈ ಪ್ರದೇಶದಲ್ಲಿ ಸಾಮಾನ್ಯವಾಗಿತ್ತು.

**ನವಿಲಪೊನ್ನ**

ಈ ಪ್ರದೇಶದಲ್ಲಿ ಬಾದಾಮಿ ಚಾಲುಕ್ಯರ ಕಾಲದಲ್ಲಿಯೇ ನವಿಲಪೊನ್ನಿನ ಬಳಕೆ ಇದ್ದುದು ಮತ್ತು ಇದು ಕಾರ್ತಿಕೇಯನ ವಾಹನ ನವಿಲಿನ ಸಂಬಂಧವನ್ನು ಸೂಚಿಸುತ್ತದೆ. ಕುಡುತಿನಿ, ಕೊಳಗಲ್ಲು, ಸಂಡೂರು ಕುಮಾರಸ್ವಾಮಿ ಬೆಟ್ಟದಲ್ಲಿ ಪ್ರಾಚೀನ ಕಾಲದಿಂದಲೂ ಕಾರ್ತಿಕೇಯನ ಆರಾಧನೆ ನಡೆದುಬಂದಿತ್ತು. ಕುಡುತಿನಿಗೆ ಹತ್ತಿರವಿರುವ ಕುರುಗೋಡು ಕೂಡಾ ನಿಕಟ ಸಂಬಂಧ ಪಡೆದಿತ್ತು. ಕುಡುತಿನಿಯ ಕ್ರಿ.ಶ. ೯೪೭ರ ರಾಷ್ಟ್ರಕೂಟ ಅರಸ ಕೊಟ್ಟಿಗನಕಾಲದ ಶಾಸನ ಸಿಂದವಂಶದ ಅರಿಬಲ್ಲದಾಗ್ರನೆಂಬುವನು ಮಹಾದಂಡನಾಯಕನಾಗಿದ್ದುದನ್ನು ಉಲ್ಲೇಖಿಸುತ್ತದೆ.[2] ಕುರುಗೋಡಿನ ಮುನ್ನೂರ್ವಮಹಾಜನರು ಕುಡುತಿನಿಯ ದೇಕಮ್ಮನ ದೇಗುಲಕ್ಕೆ ಭೂದಾನ ಕೊಟ್ಟಿದ್ದರು. ಬಹುಶ ಇದನ್ನು ಬಾದಾಮಿ ಚಾಲುಕ್ಯರ ಕಾಲದಲ್ಲಿಯೇ ನೀಡಿರಬೇಕು. ರಾಷ್ಟ್ರಕೂಟರು ಅಧಿಕಾರಕ್ಕೆ ಬರುವ ವೇಳೆಗಾಗಲೇ ಇದನ್ನು ಅಧ್ಯನಯ್ಯನ ಮಗ ಅಪಹರಿಸಿದ್ದರಿಂದ ರುದ್ರರಾಶಿಭಟಾರರು ಅರಸನಲ್ಲಿಗೆ ಬಂದು ಈ ವಿಷಯವನ್ನು ತಿಳಿಸಿದಾಗ, ಅರಸನು ಮೊದಲಿನಂತೆ ನಡೆದುಬರುವಂತೆ ಆಜ್ಞೆ ಹೊರಡಿಸುತ್ತಾನೆ.

ಕುರುಗೋಡು ರಾಜಧಾನಿಯಾಗುವ ಪೂರ್ವದಲ್ಲಿ ಕುಡುತಿನಿಯ ಆಡಳಿತ ವಿಭಾಗಕ್ಕೆ ಸೇರಿದಂತೆ ಕಾಣುತ್ತದೆ. ಕುಡತಿನಿಯ ಶಾಸನದಲ್ಲಿ ಬರುವ ಸಬಾಲ ಎಳ್ಪತ್ತರ ಉಲ್ಲೇಖವನ್ನು ಗಮನಿಸಿದರೆ,[3] ಇದು ೭೦ ಹಳ್ಳಿಗಳ ಆಡಳೀತ ಕೇಂದ್ರವಾಗಿರಬಹುದು. ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ (ಕ್ರಿ.ಶ. ೧೦೯೮)ಏರಣಿಗೆ ಮಾದೋಜನ ಮಗ ಸಾವಿಮೋಜ ಮತ್ತು ಬೇಚೋಜನ ಮಗ ಚಿಕ್ಕ ಮಾದೋಜರು ಲೊಕ್ಕಿ ಪೊನ್ನದ ಬದಲಾಗಿ ನವಿಲಚ್ಚಿನ ಪೊನ್ನ ಎಂಬ ಬಂಗಾರದ ನಾಣ್ಯಗಳನ್ನು ಅಚ್ಚು ಹಾಕಿ ಕಾರ್ತಿಕೇಯ ದೇವಾಲಯಕ್ಕೆ ವರ್ಷಕ್ಕೆ ೧೨ ನಾಣ್ಯಗಳನ್ನು ಕೊಡುತ್ತಿದ್ದರು.[4] ಆದರೆ ಇದಕ್ಕಿಂತ ಪೂರ್ವದಲ್ಲಿಯೇ ಈ ನವಿಲ ಪೊನ್ನು ನಾಣ್ಯ ಬಳಕೆಯಲ್ಲಿದ್ದ ಬಗ್ಗೆ ಕುರುಗೋಡು ಶಾಸನ ಸ್ಪಷ್ಟಪಡಿಸುತ್ತದೆ. ಈಗ ಈ ನಾಣ್ಯದ ತೂಕದಲ್ಲಿ ವ್ಯತ್ಯಾಸವಾಗಿರಬಹುದು. ಸಿಂದರ ಪ್ರಾಚೀನ ವ್ಯಕ್ತಿ ಅರಿಬಲ್ಲದಾಗ್ರ ಕುಡತಿನಿಯಲ್ಲಿ ಮಹಾಮಂಡಳೇಶ್ವರನಾಗಿದ್ದುದು, ಮುಂದೆ ಕುರುಗೋಡು ಸಿಂದರ ರಾಜಧಾನಿಯಾಗಿ ಅಂದರೆ ಕ್ರಿ.ಶ. ೧೧೧೩ರ ವೇಳೆಯಲ್ಲಿ ಭೀಮದೇವ ಮಾಕನಾಂಬಿಕೆಯರ ಮಗ ಸೋವಿದೇವ "ಕಾರ್ತಿಕೇಯ ಲಬ್ದವರ ಪ್ರಸಾದಕ"ನೆಂದು ಕರೆದುಕೊಂಡಿರುವುದನ್ನು ಗಮನಿಸಿದರೆ ಸುತ್ತ ಮುತ್ತಲಿನ ಪ್ರದೇಶದಲ್ಲಿ ಕಾರ್ತಿಕೇಯನ ಪ್ರಭಾವವಿದ್ದುದಲ್ಲದೆ, ಸಿಂದರೂ ಕೂಡಾ ಕಾರ್ತೀಕೇಯನ ಭಕ್ತರಾಗಿದ್ದರು.

ಬಾದಾಮಿ ಚಾಲುಕ್ಯ, ರಾಷ್ಟ್ರಕೂಟರ ನಂತರದಲ್ಲಿ ಕಲ್ಯಾಣದ ಚಾಲುಕ್ಯ ಮತ್ತು ಕಲಚುರಿಗಳ ಕಾಲದಲ್ಲಿ ಈ ಗ್ರಾಮದಲ್ಲಿ ಹೆಚ್ಚಿನ ಶಾಸನಗಳು ಲಭ್ಯವಿರುವುದರಿಂದ ಅವುಗಳಲ್ಲಿರುವ ವಿಷಯಗಳನ್ನು ದೇವತಾಸ್ತುತಿ, ಸ್ಥಳ ಪರಿಸರ, ರಾಜಕೀಯ, ಆಡಳಿತ, ಸಾಮಾಜಿಕ, ಆರ್ಥಿಕ, ದಾನ-ದತ್ತಿ, ಕಲೆ ಮತ್ತು ವಾಸ್ತುಶಿಲ್ಪ, ಸಾಹಿತ್ಯವೆಂಬ ವಿಭಾಗಗಳಲ್ಲಿ ವಿಂಗಡಿಸಬಹುದು.

**ದೇವತಾಸ್ತುತಿ**

ಕ್ರಿ.ಶ. ೧೧೭೩ರ ಶಾಸನದಲ್ಲಿ ಮೊದಲಿಗೆ “ಶ್ರೀ ಸ್ವಯಂಭುನಾಥಾಯ ನಮಃ” ಎಂದು ಆರಂಭವಾಗುತ್ತದೆ.[5] ಇದರಲ್ಲಿರುವ ಸಂಸ್ಕೃತ ಶ್ಲೋಕದಲ್ಲಿ ಶಿವನನ್ನು ಗೌರೀ ಪಿನಸ್ತರಸ್ಥ ಸ್ಥಗಿತ ಘಷ್ಯಿಣದತ್ತೈಕವರ್ಷೋದ್ಭಕವಕ್ಷಾಃ ಕಂದರ್ಪೋರ್ವರ್ಪ ವಿಷ್ಟಾಲನ ನಿಜ ನಿಪುಣೋವಿಚ್ಛುರತ್ಯಕ್ಷೋ | ಗೀರ್ವಾಣೋತ್ಕಾರ್ಯರಕ್ಷ ಸ್ತ್ರೀ ಭುವನಭವನಾರಂಭ ಸಂಬ್ರಾನ್ತಸ್ಕಂಭೋ ಲಕ್ಷ್ಮೀ ನಾಥಪ್ರಿಯಃ ಸಜಯತಿ ಸತಿಜಯೆನರ್ಮ ಶಂಭುಃ ಸ್ವಯಂಭೂ” ಎಂದು ವರ್ಣಿಸಲಾಗಿದೆ. ರಾಚಮಲ್ಲ ಶಿವಸನ್ನಿಧಿಯನ್ನು ಪಡೆದ ಮೇಲೆ ಆತನು ಲಿಂಗರೂಪದಲ್ಲಿ ಉದ್ಭವಿಸಿದನೆಂದು ಹೇಳುವ ಶಾಸನ “ಶ್ರೀಮದುದ್ಭವ ರಾಚಮಲ್ಲೇಶ್ವರಾಯನಮಃ” ಎಂದು ಪ್ರಾರಂಭವಾಗುತ್ತದೆ.[6] ಕಲ್ಲೇಶ್ವರ ದೇವಾಲಯದಲ್ಲಿರುವ ಶಾಸನ ‘ಶ್ರೀ ಕಲಿದೇವ’, “ಶ್ರೀ ರಾಮಾರಮಣಪ್ರಣುತಮಹಿಮಂ ಬೃಂದಾರ ಕೋದಾರಬೃನ್ದಾರಾಧ್ಯಂ ತ್ರಿದಶಾಧಿನಾಥನ ಗಜಾಚಂಚತ್ಕುಚಾಲೋಲ ಕಾಶ್ಮೀರೋರ ಸ್ಥಳನಬ್ಜಸಂಭವನತಂ ತ್ರೈಳೋಕ್ಯ ನಿಸ್ತಾರವಿಸ್ತಾರಂ ಶ್ರೀ ಕಲಿದೇವನೊಲ್ದು ನಮಗೀಗಿಷ್ಟಾರ್ತ್ಥಸಂಸಿದ್ಧಿಯಂ” ಎಂದೂ[7] ಕ್ರಿ.ಶ. ೧೧೭೭ರ ಶಾಸನ “ಓಂ ನಮಶ್ಶಿವಾಯ” ಎಂದು ಆರಂಭವಾಗುತ್ತವೆ.[8]

**ಸ್ಥಳ ಪರಿಸರದ ವರ್ಣನೆ**

ಶಾಸನಗಳಲ್ಲಿ ಊರು ಮತ್ತು ಸುತ್ತಮುತ್ತಲಿನ ಪ್ರದೇಶದ ವರ್ಣನೆ ಸಾಮಾನ್ಯವಾಗಿರುತ್ತದೆ. ಒಂದು ಗ್ರಾಮದ ಹೆಸರನ್ನು ಪರಿಶೀಲಿಸಿದರೆ ಸುತ್ತಮುತ್ತಲಿನ ನಿಸರ್ಗ, ಪೌರಾಣಿಕ ಹಿನ್ನೆಲೆ, ಐತಿಹಾಸಿಕ, ಪ್ರಮುಖ ದೇವತೆ ಮೊದಲಾದವು ಗ್ರಾಮ ನಾಮವಾಗಲು ಕಾರಣಗಳಾಗಿರುತ್ತವೆ. ಈ ಗ್ರಾಮಕ್ಕೆ ಕುರುಗೋಡು ಎಂದು ಹೆಸರು ಬರಲು ಅನೇಕ ಕುರುಹುಗಳು ಪುಷ್ಠಿ ನೀಡುತ್ತವೆ. ಜನಪದರ ನಂಬಿಕೆಯಲ್ಲಿ ಕುರುಗೋಡು ಎಂಬ ಹೆಸರು ಗ್ರಾಮನಾಮವಾಗಲು ದೊಡ್ಡಬಸಪ್ಪನ ಶಿಲ್ಪ ಕಾರಣವಾಗುತ್ತದೆ. ಇಲ್ಲಿಯ ಪ್ರಸಿದ್ಧ ದೇವತೆಯಾದ ದೊಡ್ಡಬಸಪ್ಪನ ಶಿಲ್ಪ ಏಕಶಿಲಾನಂದಿ ಮೂರ್ತಿ. ಸುಮಾರು ೧೫ ಅಡಿ ಎತ್ತರದ ಈ ನಂದಿಗೆ ಸಣ್ಣ ಕೊಡುಗಳಿವೆ. ಆದ್ದರಿಂದ ಕಿರಿಕೋಡು, ಕಿರಿಗೋಡು ಎಂದು ಕರೆಯುತ್ತಿದ್ದ ಗ್ರಾಮಕ್ಕೆ ಕ್ರಮೇಣ ಕುರುಗೋಡು ಎಂಬ ಹೆಸರು ಪ್ರಾಪ್ತವಾಯಿತೆಂಬ ನಂಬಿಕೆಯಿದೆ.

ಶಾಸನಗಳ ಆಧಾರಗಳನ್ನು ಗಮನಿಸಿದರೆ ಇದು ಸಮಂಜಸವೆನಿಸುವುದಿಲ್ಲ. ಈ ನಂದಿಶಿಲ್ಪದ ಲಕ್ಷಣಗಳು ವಿಜಯನಗರ ಕಾಲಕ್ಕೆ ಸೇರಿದವು. ಇಲ್ಲಿ ಕಂಡು ಬಂದಿರುವ ಕಲ್ಯಾಣದ ಚಾಲುಕ್ಯರ ಆದಿಯಾಗಿ ಗ್ರಾಮಕ್ಕೆ ‘ಕುಱುಂಗೋಡು’[9], ‘ಕುಱುಗೋಡು’[10]ಕುರುಗೋಡು’[11] ಎಂದು ಕರೆಯಲಾಗುತ್ತಿತ್ತು. ಇಲ್ಲಿಯ ಸೀಮೆ, ದೇವಾಲಯ, ಕೋಟೆಯನ್ನು ಉಲ್ಲೇಖಿಸುವಾಗ ‘ಕುಱುಗೋಡು ಸೀಮೆ’, ‘ಕುಱುಗೋಡು ಬಸ್ತಿ’, ‘ಕುಱುಗೋಡು ಕೋಟೆ’, ‘ಕುಱುಗೋಡದ ಗಿರಿದುರ್ಗ’, ‘ಕುಱುಗೋಡು ಪಟ್ಟಸ್ವಾಮಿ’ ಮುಂತಾಗಿ ಕರೆಯಲಾಗಿದೆ.

ಈ ನಾಮ ಪ್ರಾಪ್ತವಾಗಲು ಭೌಗೋಳಿಕ ಹಿನ್ನೆಲೆ ಕಾರಣವಾಗಿರಬೇಕು. ಕುರು=ಚಿಕ್ಕದು, ಕುರು=ಬೆಟ್ಟ (DEP pp. 1548), ಕುಱಂ, ಕುರಮ್, ಕುರಸ್ಸಿ=ಬೆಟ್ಟದ ಬುಡದಲ್ಲಿರುವ ಗ್ರಾಮ ಎಂದಾಗುತ್ತದೆ. ಉದಾ : ಕುರುಭತ್ತೂರು ಹಾಸನ ಜಿಲ್ಲೆಯಲ್ಲಿರುವ ಈ ಗ್ರಾಮ ಸಣ್ಣಕ್ಕಿಗೆ ಹೆಸರು ವಾಸಿಯಾಗಿದೆ. ಕೋಡು=ಬೆಟ್ಟ, ಕೋಡೆಂಬ ವಾರ್ಗಿಕ ಬೆಟ್ಟ, ಗುಡ್ಡವೆಂಬ ಅರ್ಥ ಕೊಡುತ್ತದೆ. ಉದಾ : ಬೆಳಗೋಡು-ಬೆಳ್(ಜಲ)+ಕೋಡು (ಬೆಟ್ಟ)= ಜಲವೇ ಅಧಿಕವಾಗಿರುವ ಬೆಟ್ಟ ಪ್ರದೇಶದ ಗ್ರಾಮ.[12] ಕುರು+ಗೋಡು=ಎರಡರ ಅರ್ಥವೂ ಬೆಟ್ಟವಾಗುತ್ತದೆ. (ಉನ್ನತ ಶಿಖರಗಳನ್ನು ಹೊಂದಿದ ಬೆಟ್ಟಗಳು). ಕುಱುಂಗೋಡು ಎನ್ನುವುದು ಇಲ್ಲಿಯ ಪ್ರಾಚೀನ ಗ್ರಾಮದ ಸುತ್ತಲೂ ಇರುವ ಎತ್ತರದ ಶಿಖರಗಳನ್ನು ಹೊಂದಿದ ಬೆಟ್ಟಗಳಿಂದ ಬಂದಿರಬೇಕು.

ಕುರುಗೋಡು ಪಟ್ಟಣ ಬಲ್ಲಕುಂದೆ-೩೦೦ ಅಥವಾ ಬಲ್ಲಕುಂದೆ ನಾಡಿನ ರಾಜಧಾನಿಯಾಗಿತ್ತು. ಇಲ್ಲಿಯ ಹೆಚ್ಚಿನ ಶಾಸನಗಳಲ್ಲಿ ಜಂಬುದ್ವೀಪದಲ್ಲಿ ಭರತಕಾಂತೆ, ಅದರಲ್ಲಿ ಕುಂತಳದೇಶ, ಅದರಲ್ಲಿ ತುಂಗಭದ್ರಾ ನದಿ ದಕ್ಷಿಣಕ್ಕೆ ಬಲ್ಲಕುಂದೆ ಮಧ್ಯ ಕುರುಗೋಡು ಪಟ್ಟಣದ ವರ್ಣನೆ ಬರುತ್ತದೆ. “ಭಾರತಮಹೀಮಹಿಳಾ ಮಹನೀಯ ಭಾಳದೊಳು ಕುಂತಳ (ದನ್ತೆ) ಶೋಭಿಸುವ ಕಂಣಡಿಯನ್ನೆಮೆ

ಚೆನ್ನನಾಗಿವೋರನ್ತಿರೆ ಬಲ್ಲಕುಂದೆ ನಾಡುನ್ನಾಳ್ಕರವೊಪ್ಪುಗುಮೆತ್ತ ನೋಳ್ಪಡಂ | ಅನ್ತಾನಾಡ ನಡುವೆ ರಾಜದ್ರಾಜ ನಗರ ರಮಣೀ ರಮಗಿಣೀಯ ಮಣಿದರ್ಪಣಾಯಮಾನಮೆನಿಸೆಭರ್ಗ್ಗಾದ್ರಿಯಂತಾರ್ಗ್ಗ ವರೀದುರ್ಗ್ಗಮವಾದ ಕುಱುಗೋಡ ಗಿರಿದುರ್ಗ್ಗದ ಪೊಱವೊಳಲ ವಿಳಾಸಮೆಂತೆಂದಡೆ ನಾರದನ ತೋಱಿದೆ ಸರದಿಂತಾರಾಪಥದಂತೆ ರಾಜಹಂಸಾನ್ವಿತದಿಂ ಕ್ಷೀರಾಬ್ಧಿಶಯನನುರದ ವೊಲಾರಮೆಯಿನ್ತು ಱುಗಿ ಪೊಱಮೊಳಲು ಸಾ(ಸೊ)ಗಯಿಸುಂ" ಎಂಬ ವರ್ಣನೆಗಳು, ಬಲ್ಲಕುಂದೆ ವಿಷಯದಲ್ಲಿ ಬರುವ ಈ ಕುರುಗೋಡು ರಾಜದ್ರಾಜನಗರವಾಗಿ ಸುತ್ತಲೂ ಗಿರಿದುರ್ಗಗಳಿಂದ ಕಂಗೊಳಿಸುತ್ತಿತ್ತು.[13] ಪಟ್ಟಣದ ಸುತ್ತಮುತ್ತ ಫಲವತ್ತಾದ ಭೂಮಿಯಲ್ಲಿ ಬೆಳೆಯುತ್ತಿದ್ದ ದವಸಧಾನ್ಯಗಳ ಪರಿಚಯ ಶಾಸನಗಳಿಂದ ಸಿಗುತ್ತದೆ. ಮಡುವಿನಲ್ಲಿ ಬೆಳೆದು ನಿಂತ ಭತ್ತದ ಬೆಳೆ, ಬೆಳೆದು ನಿಂತ ಹೊಲಗಳಲ್ಲಿ ಗಿಳಿಹಿಂಡುಗಳು, ಮುಗಿಲುದ್ದವಾಗಿ ಮೂವಳಿಸಿದ ಕೋಟೆ ಇಲ್ಲಿಯ ಒಕ್ಕಲು ಮಕ್ಕಳು ಧನದ ಧಾನ್ಯದ ಸೊಮ್ಮಿನ ಸೊಕ್ಕಿನಿಂದ ನಮಗಾರು ಸರಿ ಎಂದು ಉರ್ಜಿತ ಸ್ಥಿತಿಯಲ್ಲಿದ್ದರು. ಇದಕ್ಕೆ ಹತ್ತಿರದಲ್ಲಿರುವ ಕೋಳೂರು ಶಾಸನದಲ್ಲಿ ಪರಿಸರದ ಮಾಹಿತಿ ಬರುತ್ತದೆ. ಬೆಳೆಯುವ ಹೊಲ-ಗದ್ದೆ ಬಂಗಾರದ ಕಣಿ, ಹಗರೆ (ನದಿ) ಕಾಲುವೆ ಇತ್ಯಾದಿಗಳಿಂದ ಬಲ್ಲಕುಂದೆ ನಾಡಿನ ಸಿರಿ ಎಂದೂ ಕುಂದುತ್ತಿರಲಿಲ್ಲ. ಈ ನಾಡೆಂಬ ಕಲ್ಪವೃಕ್ಷಕ್ಕೆ ಕೋಳೂರು ಹಣ್ಣು ಬಿಟ್ಟು ಟೊಂಗೆಯಾಗಿತ್ತು. ಜೋಳದ ಹೊಲದಲ್ಲಿ ಪೈರಿಗೆ ಎರಗುವ ಗಿಳಿಗಳನ್ನು ಓಡಿಸುವ ಸುಂದರ ಹೆಣ್ಣು ಮಕ್ಕಳ ಮೈಗಪ್ಪಿನಲ್ಲಿ ಕಣ್ಣು ಬಿಳುಪು ಎದ್ದು ತೋರುತ್ತಿದ್ದ ಇವರನ್ನು 'ಧವಳೇಕ್ಷಣೆಯ'ರೆಂದು ವರ್ಣಿಸಲಾಗಿದೆ.[14] ಶಾಸನಗಳಲ್ಲಿ ಬರುವ ಉಲ್ಲೇಖಗಳಿಂದ ಇಲ್ಲಿಯ ಗಿಡಮರಗಳ ಪರಿಚಯವಾಗುತ್ತದೆ. "ಬಾಳೆಸುನಿಂಬೆ ಮಾದುಫಲಮೀಳೆ ಬೆಡಂಗೆನಿಸರ್ದ್ದ ಮಾವು ಕಂಚೀಳೆ ಕವುಂಗ ತೆಂಗು ಪಲಸುರ್ಬ್ಬಿದ ಕರ್ಬ್ಬಿನ ತೋಂಟಮಂಗ ಜಂಗಾಳಯಮಪ್ಪ ತಾವರೆಗೊಳಂ ಕೆಱೆ ಬಾವಿಗಳಿಂ ಬಹಿರ್ವ್ವನಂ ಲೀಲೆಯನ್ನುಂಟು ಮಾಡುವುದು ನೋಳ್ಪರ ಚಿತ್ತದೊಳಾವ ಕಾಲಮುಂ" ಎಂದೂ "ತಿಳಿಕ ತಮಾಳ ತಾಳ ಕದಳೀ ವಕುಳಾವಳಿ ಪಾಟಳಾಳಿ ಪಿಪ್ಪಳದಶಮತುಳುಂಗ ಘನಸಾರಕ ಕೇಸಂಕರ್ಣ್ಣಿಕಾರ ಶಾಲ್ಮಲಿ (ಳಿ) ಲವಳೀಲವಂಗ ಸಹಕಾರ ಕಕಿಂಶುಕನಾಳಿಕೇರ ಸಂಕುಲ ಸಕಳರ್ತ್ತು ನಂದನದಿನೊಪ್ಪುಗು ಮೀ ಕುಱುಗೋಡು ಸುತ್ತಲುಂ ಮತ್ತವ ಪಟ್ಟಣದೊಳ್"[15] "ಅಲ್ಲಲ್ಲಿಗೆ ತಿಳಿಗೊಳನುಂ ಮಲ್ಲಿಗೆಯುಂ ಮಾಧವೀಲತಾಮಣ್ಡಮುಂ ಪಲ್ಲವಿತಚೂ ತನಮುಂ ಸಲ್ಲಲಿತಂ ನೋಡಚಿತ್ತಲುಂ ಪೊಱವೊಳಲ್[16] ಎನ್ನುವುದರಿಂದ ಹೊಂಗೆ, ಕೇದಿಗೆ, ಬಾಳೆ ವಕುಳ, ಪಾಟಳಿ, ಪಿಪ್ಪಳ, ಶಾಲ್ಮಲಿ, ಲವಂಗ, ತೆಂಗ, ಕಬ್ಬು ಮತ್ತು ಅನೇಕ ಬಗೆಯ ಹೂವುಗಳಿಂದ ಕೂಡಿದ ವನಗಳು ಈ ಪರಿಸರದಲ್ಲಿದ್ದವು.

ಈ ಊರಿನಲ್ಲಿ ಅಮೂಲ್ಯ ತನ್ನ ಮತ್ತು ವಸ್ತ್ರಗಳನ್ನೊಳಗೊಂಡ ಅಂಗಡಿ ಸಾಲುಗಳಿಂದ ಕೂಡಿದ ವ್ಯಾಪಾರಿಗಳ ಪೇಟೆ, ತರ್ಕಶಾಸ್ತ್ರ, ಹೋಮ ಧೂಮಗಳಿಂದ ಕೂಡಿದ ಬ್ರಾಹ್ಮಣರ ಕೇರಿ, ಸೂಳೆಗೇರಿ ಮೊದಲಾದವುಗಳಿಂದ ಸ್ಮರರಾಜಧಾನಿಯೋ ಸುರವಣಿತಾ ಜನ್ಮಭೂಮಿಯೋ ಎಂಬಂತೆ ಚೆಲ್ವಾಗಿ ಕಾಣುತ್ತಿತ್ತು. ಗಂಗರಿಂದ, ಕುಡಿಯರಿಂದ, ಶ್ರೀಮಂತರಿಂದ ಕೂಡಿದ ಇಲ್ಲಿ ಭಕ್ತಿಯ ನೆಲೆ, ಭಕ್ತಿಯ ಮನೆ, ಭಕ್ತಿಯ ರಾಜ್ಯವಾಗಿ ಭಕ್ತಿಭಂಡಾರ ಶಿವಭಕ್ತ ಶಿರಿಬಂದು ನೆಲೆಸಿತು.

ಕುರುಗೋಡು ರಾಜಧಾನಿಯ ಸುತ್ತಮುತ್ತಲಿರುವ ಹಳ್ಳಿಗಳಿಗೆ ಮಾರ್ಗ ಕಲ್ಪಿಸಲಾಗಿತ್ತು. ಇಂಥ ಮಾರ್ಗಗಳನ್ನು ಭೂದಾನ ಬಿಡುವಾಗ ಉಲ್ಲೇಖಿಸಲಾಗಿದೆ. ಅಲ್ಲಿಯ ಕೆರೆ, ಹಳ್ಳ, ನದಿ, ತೋಟ-ಗದ್ದೆ, ತೀರ್ಥ, ದಾರಿ, ಮೊದಲಾದವುಗಳ ಹೆಸರು ಕಾಣಸಿಗುತ್ತದೆ. "ಕುರುಗೋಡು ಹೊಲದಲು ಸಿರಿಗೆರೆಯ ದಾರಿಯ ಪೂರ್ವದ ಮಲ್ಲಿಕಾರ್ಜುನ ದೇವರ ಕೆಯಿ ಪಶ್ಚಿಮಕ್ಕೆ ಪರಂಜೋತಿದೇವರ ಕೆಯಿ ದಕ್ಷಿಣಕ್ಕೆ ಅಭಿನವ ಸಿದ್ಧನಾಥದೇವರ ಕೆಯಿ ಪಶ್ಚಿಮಕ್ಕೆ ಕಟಿಕೂರದಾರಿ"[17] ಎಂದೂ " ತೆಕ್ಕಕಲ ಹೊಲಮೇರಿಯಂ ಮೂಡಲ್ ಅರಳಿಹಾಳ ಸೀಮೆಯಿಂ ತೆಂಕ ಹಂಗವೆಯಿಂ ಪಡುವಲ್ ಗೋಱನಹಾಳ ಸೀಮೆಯಿಂ ಬಡಗಲ್ ಬಲ್ಲಕುಂದೆ ನಾಡ ಬಳಿಯ ಪೂರ್ವ್ವಸಿಮಾನ್ವಿತವಾಗಿ ಕೊಟ್ಟಲಜಿನ್ತೆಗ್ರಾಮ"[18] ಎಂದು ಕರೆಯಲಾಗಿದೆ. ಬಾಡನಹಟ್ಟಿ, ಬೀಯನಹಟ್ಟಿ, ಅರಕೆರೆಯ ದೊಂಡವಟ್ಟ, ಹುಜೆಹಾಳ, ಹಾವಿನಾಳ, ಕೊಂಚಗೆರೆ, ಕರಿವೂರ, ಕಟಹಳ್ಳಿ, ಚಿಯನಪಟ್ಟೆ, ಶ್ರೀಪುರ, ಶಿರಿಗೆರೆ, ಮಣಿವೂರ ಓರವಾಯಿ, ಕಂಪಿಲೆ, ಕುರುಗೋಡು ಕ್ಷೇತ್ರ, ಮೊದಲಾದ ಗ್ರಾಮಗಳ ಉಲ್ಲೇಖಗಳಿವೆ.

**ರಾಜಕೀಯ**

ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚುರಿಗಳು ಹೊಯ್ಸಳರು, ವಿಜಯನಗರ ಅರಸರು ಮತ್ತು ಪಾಳೆಯಗಾರರ ಆಳ್ವಿಕೆಗೆ ಈ ಗ್ರಾಮ ಒಳಪಟ್ಟಿತ್ತು. ರಾಷ್ಟ್ರಕೂಟರ ನಂತರ ಅಧಿಕಾರಕ್ಕೆ ಬಂದ ಕಲ್ಯಾಣದ ಚಾಲುಕ್ಯರ ಆಳ್ವಿಕೆಯ

ಕಾಲದಲ್ಲಿ ಬಲ್ಲಕುಂದೆ-೩೦೦ರ ರಾಜಧಾನಿಯಾಗಿ ಅಭಿವೃದ್ಧಿ ಪಡೆಯಿತು. ಇಲ್ಲಿಯ ಹೆಚ್ಚಿನ ಶಾಸನಗಳು ಸಿಂದರ ಆಡಳಿತಕ್ಕೆ ಸೇರಿದವು. ಸಿಂದವಂಶದ ಪ್ರಾಚೀನ ಅರಸನಾದ ಅರಿಬಲ್ಲದಾಗ್ರನನ್ನು ಕುಡತಿನಿ ಶಾಸನ ಉಲ್ಲೇಖಿಸುತ್ತದೆ. ಕ್ರಿ.ಶ. ೧೧೪೯ರ ಕಲ್ಯಾಣ ಚಾಲುಕ್ಯ ಅರಸ ಜಗದೇಕಮಲ್ಲನ ಕಾಲದಲ್ಲಿ ರಾಚಮಲ್ಲ ಮಹಾಮಂಡಳೇಶ್ವರನಾಗಿದ್ದ. ಇಂದಿನ ದರೋಜಿ ಆಗಿನ ದೊರವದಿ-೭೦ನ್ನು ಕಾಚರಸ, ಲೋಕರಸ, ಗಂಗರಸರು ನೋಡಿಕೊಳ್ಳುತ್ತಿದ್ದರು. ಈ ಶಾಸನದಲ್ಲಿ ಇಮ್ಮಡಿ ರಾಚಮಲ್ಲನನ್ನು "ಕೃತಯುಗದ ಚರಿತ್ರೋದ್ಧರಣಂ ಕಪ್ಪೆಯರಾಹಾರದಾನ ವಿನೋದಕೃತ" ಎಂದು ಕರೆಯಲಾಗಿದೆ. [19]

ಕಪ್ಪೆಯರನ್ನು ಕುರಿತು ಕೆಲವರು ಕಾಳಾಮುಖರೆಂದರೆ, ಇನ್ನೂ ಕೆಲವರು ಈ ಪರಂಪರೆಯನ್ನು ಕಪ್ಪಡಿ ಸಂಗಮ (ಕೂಡಲ ಸಂಗಮ)ಕ್ಕೆ ತೆಗೆದುಕೊಂಡು ಹೋಗುತ್ತಾರೆ. ಕ್ರಿ.ಶ. ೧೧೪೮ರ ಕುಡತಿನಿ ಶಾಸನ ಕಾರ್ತಿಕೇಯನ ಉತ್ಸವ ಹೇಳುವಾಗ ಅಲ್ಲಿಗೆ ಬರುತ್ತಿದ್ದ ಕಪ್ಪಡಿಗಳ ಸತ್ರಕ್ಕೆ ದಾನ ಬಿಟ್ಟಿರುವುದನ್ನು ಉಲ್ಲೇಖಿಸಲಾಗಿದೆ. ಇಂದಿಗೂ ತಮಿಳು ನಾಡಿನಲ್ಲಿ ಶೈವ ಭಕ್ತರಾದ ಕೆಲವರು ಕೌಪಿನ, ಕವಡೆಗಳನ್ನು ಧರಿಸಿ, ಮುಖಕ್ಕೆ ಮಸಿ ಬಳಿದುಕೊಂಡು ಸಿಂಗರಿಸಿದ ಕೋಲನ್ನು ಕೈಯಲ್ಲಿ ಹಿಡಿದು 'ಹರಹರ' ಎಂದು ಕುಣಿಯುತ್ತ ಮುರುಗನ ಗುಡಿಗೆ ಬರುತ್ತಾರೆ. ಅವರಿಗೆ ದಾನ ನೀಡುವ ಮೂಲಕ ಮಹಾಶಿವಭಕ್ತನಾದ ರಾಚಮಲ್ಲ ಕಪ್ಪೆಯರಾಹಾರದಾನ ವಿನೋದಕೃತನೆಂದು ಕರೆದುಕೊಂಡಂತೆ ಕಾಣುತ್ತದೆ.

ಅರಸನೊಂದಿಗೆ ಅವರ ರಾಣಿಯರು ಕೆಲವು ಅಗ್ರಹಾರ ಭತ್ತಗ್ರಾಮಗಳಲ್ಲಿ ಆಳ್ವಿಕೆ ಮಾಡುತ್ತ ದೇವಾಲಯಗಳನ್ನು ಕಟ್ಟಿಸಿ ದಾನ-ದತ್ತಿ ಬಿಡುತ್ತಿದ್ದರು. ಕುರುಗೋಡು ಬೆಟ್ಟದ ಆಚೆಗಿರುವ ಉಜ್ಜಾಳೇಶ್ವರ ದೇವಾಲಯದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಚಾಮರ ಧಾರೆಯರ ಶಿಲ್ಪಗಳಿವೆ. ಒಂದರ ಕೆಳಗೆ ಲೋಕಾಹುರದ ಜೊ-ಲದೇವಿ ಎಂದು ಇನ್ನೊಂದರ ಕೆಳಗೆ ಲೋಕಾಹುರದ ದೇವಲದೇವಿ ಎಂಬ ಬರಹಗಳಿವೆ.[20] ಒಂದನೆಯ ರಾಚಮಲ್ಲನ ಪತ್ನಿ ಸೋಮಲದೇವಿ ಮತ್ತು ಆತನ ಸೊಸೆ ಏಚಲದೇವಿಯರ ಶಿಲ್ಪಗಳಿರಬಹುದೆಂದು ವಿದ್ವಾಂಸರ ಅಭಿಮತ. ಈ ಗ್ರಾಮದ ದೊಡ್ಡಬಸಪ್ಪ ದೇವಾಲಯದಲ್ಲಿರುವ ಕ್ರಿ.ಶ. ೧೫೧೨ರ ಶಾಸನದಲ್ಲಿ ಕುರುಗೋಡು ಬಸವಣ್ಣನಾಯಕರ ಮಕ್ಕಳು ಮಲ್ಲಪ್ಪನಾಯಕರ ಧರ್ಮಪತ್ನಿಯರಾದ ಮಲ್ಲಮ್ಮ ಎಂಬುವಳು ಕುರುಗೋಡು ಸೀಮೆಕ್ಕೆ ಯಿಶಾನ್ಯ ದಿಕ್ಕಿನ ಹೂಜೆಹಾಳ ಶಾಂತಮಲ್ಲಿಕಾರ್ಜುನ ದೇವರ ದೇವಾಲಯ ಬಾವಿನು ಜೀರ್ಣೋದ್ಧಾರ ಮಾಡಿ ಎಂಬ ಉಲ್ಲೇಖ ಬರುತ್ತದೆ. ಈ ದೇವಾಲಯದ ಸುತ್ತ ಮುತ್ತ ಹಾಳುಗ್ರಾಮದ ಅವಶೇಷಗಳು ಹರಡಿರುವುದರಿಂದ ಹೂಜೆಹಾಳ ಗ್ರಾಮ ಇದೆಯಾಗಿರಬೇಕು. ಗ್ರಾಮ ಹಾಳಾದಾಗ ಅದರ ನೆನಪು ಈ ದೇವಾಲಯದ ಮುಖಾಂತರ ಮುಂದುವರೆದಿದೆ.

**ಸಾಮಾಜಿಕವಾಗಿ**

ಶಾಸನಗಳು ಅಂದಿನ ಸಮಾಜದ ಚಿತ್ರಣ ನೀಡುತ್ತವೆ. ಗ್ರಾಮದಲ್ಲಿ ಮಹಾಜನರು, ಸ್ಥಾನಾಚಾರ್ಯರು, ಮಹಾಪ್ರಧಾನ, ಸೇನಾಪತಿ, ಕುಶಲ ಕರ್ಮಿಗಳು, ಕೃಷಿಕರು, ವ್ಯಾಪಾರಸ್ಥರು ಮೊದಲಾದವರು ಪ್ರತ್ಯೇಕ ಕೇರಿಗಳಲ್ಲಿ ವಾಸಿಸುತ್ತಿದ್ದರು. ಇಲ್ಲಿಯ ಶಾಸನಗಳು ಬ್ರಾಹ್ಮಣರ ಓಣಿ, ಸೊಳೆಗೇರಿಗಳನ್ನು ಹೆಸರಿಸುತ್ತವೆ.

ಜಾತಿ-ಪಂಥವನ್ನು ಮರೆತು ಹಬ್ಬಹರಿದಿನಗಳನ್ನು ಒಟ್ಟಾಗಿ ಆಚರಿಸುತ್ತಿದ್ದರು. ಆ ವೇಳೆಯಲ್ಲಿ ಅನೇಕ ದಾನದತ್ತಿಗಳನ್ನು ಬಿಡುವ ಪದ್ಧತಿ ರೂಢಿಯಲ್ಲಿತ್ತು. ಶಾಸನಗಳು ಉಲ್ಲೇಖಿಸುವಂತೆ ಉತ್ತರಾಯಣ ಸಂಕ್ರಮಣ, ಕೃಷ್ಣಂಗಾರ ಚತುರ್ದಶಿ, ಸೋಮಪರಾಗ ಪುಣ್ಯಕಾಲ, ದ್ವಿತಿಯ ಶ್ರವಣ ಮಾರ್ಗಶಿರ, ಅಮವಾಸ್ಯೆ, ಸೂರ್ಯಗ್ರಹಣ, ದೀಪಾವಳಿ, ಯುಗಾದಿ, ಮಕರಸಂಕ್ರಾಂತಿ ಮೊದಲಾದ ಹಬ್ಬಗಳನ್ನು ಆಚರಿಸಲಾಗುತ್ತಿತ್ತು.

ಮಹಾಮಂಡಳೇಶ್ವರ ಎರಡನೆಯ ರಾಚಮಲ್ಲನು ಮಾರ್ಗ್ಗಶಿರದಮವಾಸ್ಯೆ ಸೂರ್ಯ ಗ್ರಹಣದಂದು ಕುರುಗೋಡಿನ ಶ್ರೀಸ್ವಯಂಭುದೇವರಿಗೆ ದಾನಕೊಟ್ಟಿದ್ದಾನೆ. ಇದೆ ಅರಸ ಕಾರ್ತ್ತಿಕ ಪುಣ್ಯಮಿ ಸೋಮವಾರ ಸೋಮಗ್ರಹಣದ ದಿನ ಶ್ರಿಪುರವನ್ನು ಅಗ್ರಹಾರವನ್ನಾಗಿ ಮಾಡುವ ಕಾಲದಲ್ಲಿ ಬಾಲಶಿವದೇವರ ಕಾಲುತೊಳೆದು ಸ್ವಯಂಭುದೇವರಿಗೆ ಮತ್ತೆ ಭೂದಾನ ಬಿಡುತ್ತಾನೆ.[21] ಬಸವರಾಜಯ್ಯ ಮಠದ ಅವರು ಇದನ್ನು ತಪ್ಪಾಗಿ ಅರ್ಥೈಯಿಸಿಕೊಂಡಂತೆ ಕಾಣುತ್ತದೆ. ಅವರು ಹೇಳುವಂತೆ ಅಗ್ರಹಾರಗಳನ್ನು

ಕೇವಲ ಬ್ರಾಹ್ಮಣರಿಗಷ್ಟೆ ದಾನ ಕೊಟ್ಟಿಲ್ಲ. ಎರಡನೆಯ ರಾಚಮಲ್ಲ ಕೊಟ್ಟಲಜಿಂತೆ ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿ ಬಾಲಶಿವಾಚಾರ್ಯನಿಗೆ ಕೊಟ್ಟಿದ್ದನೆಂದು ಹೇಳಿದ್ದಾರೆ.[22] ಇಲ್ಲಿ ಅಗ್ರಹಾರವನ್ನಾಗಿ ಮಾಡಿದ್ದು ಶ್ರೀಪುರವನ್ನು. ಆ ವೇಳೆಯಲ್ಲಿ ಕೊಟ್ಟಲಜಿನ್ತೆ ಗ್ರಾಮವನ್ನು ಸ್ವಯಂಭುದೇವರಿಗೆ ಕೊಡಲಾಗಿದೆ.

ಸಮಾಜದಲ್ಲಿ ಸಂಪ್ರದಾಯ ನಂಬಿಕೆಗಳು ಗಾಢವಾಗಿ ಬೇರೂರಿದ್ದವು. ರಾಚಮಲ್ಲನ ಮಹಾಪ್ರಧಾನನಾದ ಹಡಪವಳ ಬೇಚೆಯನು ಶಿವಸನ್ನಿಧಿ ಪಡೆದಾಗ, ಅವನ ಪತ್ನಿಯರಾದ ಬೈಳಿಯಕ್ಕ ಮೇಳ್ಪಾಣಿಯಕ್ಕರು ಅಗ್ನಿ ಪ್ರವೇಶ ಮಾಡಿದರು. ಆ ವೇಳೆಯಲ್ಲಿ ಮಣಿಯಾರು ಸ್ಥಳದಲ್ಲಿ ತುಂಗಭದ್ರೆ ಸ್ಥಳದಲ್ಲಿ ಸೂಗುರು ಮೇರೆಯಲ್ಲಿ ಅರಸನಲ್ಲಿ ವಿನಂತಿ ಮಾಡಿಕೊಂಡು ಭೂದಾನ ಕೊಟ್ಟರು. ಕುರುಗೋಡಕ್ಕೆ ಹತ್ತಿರವಿರುವ ಮಣ್ಣೂರು ಗ್ರಾಮ ತುಂಗಭದ್ರ ನದಿದಂಡೆಯಮೇಲಿದೆ. ಇವರಿಬ್ಬರು ತುಂಗಭದ್ರನ ನದಿ ದಂಡೆಗೆ ಬಂದು ಅಗ್ನಿ ಪ್ರವೇಶಮಾಡಿ ಅದೇ ಸ್ಥಳದಲ್ಲಿ ಭೂದಾನ ಬಿಟ್ಟಿದ್ದಾರೆ.[23]

ಅಂದಿನ ಜನರು ವಿವಿಧ ಸಾರ್ವಜನಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು. ಇದರಿಂದಾಗಿಯೇ ಸಾಮಾಜಿಕವಾಗಿ ಅನೇಕ ಕ್ರಾಂತಿಕಾರಿ ಬದಲಾವಣೇಗಳಾಗುತ್ತ ಬಂದಿವೆ. ಇದಕ್ಕೆ ಧರ್ಮವೂ ಕೂಡ ಪ್ರೇರಣೆ ನೀಡಿದೆ. ದೇವಾಲಯ ಮಠ, ಕೆರೆ-ಬಾವಿ, ಸತ್ರಗಳನ್ನು ನಿರ್ಮಿಸಿ ಅವುಗಳಿಗೆ ದಾನದತ್ತಿಗಳನ್ನು ಬಿಡುವ ಮೂಲಕ ತಮ್ಮ ಔದಾರ್ಯವನ್ನು ಮೆರೆದಿದ್ದಾರೆ. ದೇವಾಲಯ, ಮಠ, ಸತ್ರ, ಛತ್ರಗಳ ಮೂಲಕ ವಿದ್ಯಾದಾನಕ್ಕೆ ಪ್ರಚೋದನೆ ನೀಡಿದರೆ, ಕೆರೆ-ಬಾವಿಗಳ ಮೂಲಕ ನಾಡಿನ ಸಾಮಾಜಿಕ, ಆರ್ಥಿಕ ಪ್ರಗತಿಯುಂಟಾಗಿದೆ. ಕೋಳೂರಿನ ಚೌಡಯ್ಯನ ಕೆರೆ, ಕುರುಗೋಡಿನ ಪುಂಡರಿಕನ ಕೆರೆ, ಮಂಚಿಮರಸನಕೆರೆ, ಬಡಗಣರಳಿಯ ಕೆರೆ, ಕುಡತಿನಿಯ ಸೆಟ್ಟಿಯಕೆರೆ, ಗಂಜಿಗೆರೆ ಮೊದಲಾದವುಗಳನ್ನು ಶಾಸನಗಳು ಉಲ್ಲೇಖಿಸುತ್ತವೆ. ಕೋಳೂರಿನಲ್ಲಿ ರೇವಗಾವುಂಡನು ಚಾರು ಶಿವಗೃಹವಿರುವ ಸ್ಥಳದ ಕೆಲದಲ್ಲಿ ತಣ್ಣೀಳಲ್ಗಳಿಂ ತಿಳಿನೀರಿಂದೊಡವಿದ ತಟಾಕವೊಂದಂ ಮುದದಿಂದ ಕಟ್ಟಿಸಿದನು.[24] ಅವನು ಒಂದು ಬಾವಿ, ನಾಲ್ಕು ಶಿವಗೃಹಗಳನ್ನು ಕಟ್ಟಿಸಿದ್ದಾನೆ. ಕುರುಗೋಡು ಪಟ್ಟದಲ್ಲಿ ಕಲ್ಲಿಸೇಟ್ಟಿ ಶೀತಳಬಾವಿಯನ್ನು ಅಗೆಸಿದ್ದ.[25] ಇವನು ನಿರ್ಮಿಸಿದ ಅರವಟ್ಟಿಗೆಗೆ ಬಳ್ಳಾರೆಯ ಅಜ್ಜರಸ ದತ್ತಿಬಿಟ್ಟಿದ್ದಾನೆ. ಈ ರೀತಿಯಾಗಿ ಸಾರ್ವಜನಿಕರಿಗೆ ಉಪಯುಕ್ತವಾಗಿ ಕೈಗೊಂಡ ಅನೇಕ ಕಾರ್ಯಗಳನ್ನು ಶಾಸನಗಳು ಹೊಗುಳುತ್ತವೆ.

**ಆರ್ಥಿಕವಾಗಿ**

ಸಮಾಜದ ಪ್ರಮುಖ ಅಂಗವಾದ ಆರ್ಥಿಕ ವ್ಯವಸ್ಥೆ ಪ್ರಾಚೀನ ಕಾಲದಲ್ಲಿ ಸೈನ್ಯದಷ್ಟೆ ಪ್ರಮುಖವಾಗಿತ್ತು. ಉಳಿದ ಕ್ಷೇತ್ರಗಳ ಸ್ಥಿತಿಗತಿ ಆರ್ಥಿಕತೆಯನ್ನು ಅವಲಂಭಿಸಿ ವ್ಯವಸ್ಥೆಗೊಂಡಿದ್ದವು. ಇದರಲ್ಲಿ ನೈಸರ್ಗಿಕ ಸಂಪನ್ಮೂಲಗಳಲ್ಲದೆ, ಅದರಿಂದ ಸದುಪಯೋಗ ಪಡಿಸಿಕೊಳ್ಳುವ ಕೃಷಿ ಮೊದಲ್ಗೊಂಡು ಅನೇಕ ವೃತ್ತಿಗಳ ಉತ್ಪಾದನೆಯನ್ನು ಒಳಗೊಂಡಿದೆ.


ಭೌಗೋಳಿಕ ಹಿನ್ನೆಲೆಯಲ್ಲಿ ಬೆಟ್ಟ, ಖನಿಜ, ಕಾಡು ಮತ್ತು ವಿವಿಧ ಮಣ್ಣಿನ ಸ್ವರೂಪಗಳನ್ನೊಳಗೊಂಡ ಭೂಮಿಯನ್ನು ಅನೇಕ ಬಗೆಯಾಗಿ ವಿಂಗಡಿಸಲಾಗಿದೆ. ಪ್ರಾಚೀನ ಶಾಸನಗಳು ಭೂಮಿಯನ್ನು ಸಾಮಾನ್ಯವಾಗಿ ಕೆಯಿ ಎಂದು ಕರೆದಿವೆ. ಮಣ್ಣಿನ ಸ್ವರೂಪವನ್ನು ಗಮನಿಸಿ ಇಲ್ಲಿಯ ಶಾಸನಗಳಲ್ಲಿ ತಕ್ಕಿಲ ಮತ್ತರು, ಸೌಳ್‌ಭೂಮಿ, ಏರಿಯಹೊಲ, ಕರಿಯಭೂಮಿ, ಕೆಂಗಾಡು, ಹರಳು ಮತ್ತರು. ಮುಂತಾಗಿ ಕರೆಯಲಾಗಿದೆ. ಭೂಮಿ ಉಳುವ ರೈತಾಪಿ ವರ್ಗವನ್ನು ಒಕ್ಕಲು ಮಕ್ಕಳೆಂದು ಹೆಸರಿಸಿದ್ದು, ಅವರನ್ನು ಧನದ ಧಾನ್ಯದ ಸೊಮ್ಮಿನ ಸೊಕ್ಕಿನಿಂದ ಮಾರ್ಗ್ಗಳದೊರೆ ನಮ್ಮೊಳೆಂಬ ಕುಡಿಯೊಕ್ಕಲ ಮಕ್ಕಳಿನೂರ್ಗ್ಗಳೊಪ್ಪುಗಂ ಎಂದು ವರ್ಣಿಸಲಾಗಿದೆ.[26]

ಭೂ ಒಡೆತನ ಸರಕಾರ, ಸಂಘಸಂಸ್ಥೆ, ದೇವಸ್ಥಾನ, ವ್ಯಕ್ತಿಗಳಿಗೆ ಸೇರಿತ್ತು. ಶಾಸನಗಳಲ್ಲಿ ಬರುವ ದೇವರ ಕೆಯ್, ಮುದ್ದೇಶ್ವರ ದೇವರ ತೋಟ, ಮಂಜೇಶ್ವರ ಕೆಯಿ, ಪರಂಜೋತಿ ದೇವರ ಕೆಯಿ-ತೋಟ, ಬೆಣಕನ ತೋಟ, ಮಲ್ಲಿಕಾರ್ಜುನ ದೇವರ ಕೆಯಿ-ಹೂದೋಟ, ಶಾಂತಮಲ್ಲಿಕಾರ್ಜುನ ದೇವರ ಬಾವಿ-ಹೂವಿನ ತೋಟ, ಸೂರ್ಯದೇವರ ಕೆಯ್, ತ್ರೈಪುರುಷದೇವರ ತೊಂಟ ಮುಂತಾಗಿ ಉಲ್ಲೇಖಗಳು ಬರುತ್ತವೆ.


ಕುಶಲಕರ್ಮಿಗಳಲ್ಲಿ ಬಡಗಿ, ಕಮ್ಮಾರ, ಶಿಲ್ಪಿ, ಕಂಚುಗಾರ, ಅರ್ಕಸಾಲಿ, ತೆಲ್ಲಿಗ, ನೇಕಾರ, ಚಮ್ಮಾರ ವಿವಿಧ ವರ್ಗಗಳು ಉತ್ಪಾದನೆಯಲ್ಲಿ ತೊಡಗಿಕೊಂಡಿದ್ದವು. ಉತ್ಪಾದನಾ ವಸ್ತುಗಳನ್ನು ವ್ಯಾಪಾರ ವೃತ್ತಿಯಾಗಿಸಿಕೊಂಡವರನ್ನು ಸೆಟ್ಟಿಗಳೆಂದುದ ಕರೆಯಲಾಗಿದೆ. ಇವರಲ್ಲಿ ಬಣಜಿಗ, ನಕರ, ಮುಮ್ಮರಿದಂಡ, ವಡ್ಡವ್ಯವಹಾರಿ, ನಾನಾದೇಶಿ, ಉಭಯನಾನಾದೇಶಿ, ಗವರೆ, ಗಾತ್ರಿಗ ಮೊದಲಾದ ಹೆಸರಿನಿಂದ ಗುರುತಸಿಕೊಂಡಿದ್ದಾರೆ. ಈ ವರ್ತಕರು ತಮ್ಮದೆ ಆದ ಸಂಘಗಳನ್ನು ಕಟ್ಟಿಕೊಂಡಿದ್ದರು. ಇದರಲ್ಲಿ ಅಯ್ಯಾವಳೆಯಯ್ನೂರ್ವರ ಸಂಘ ಪ್ರಮುಖವಾದದು. ಕುರುಗೋಡು ಪಟ್ಟಣ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಶ್ರೀಮಂತ ವರ್ಗಕ್ಕೆ ಸೇರಿದ ಇಲ್ಲಿಯ ಸೆಟ್ಟಿಗಳು ಶೈವ ಭಕ್ತರಾಗಿದ್ದರು. ಯಾರೊಬ್ಬರ ಪಂಗೆಗಂಜುತ್ತಿರಲಿಲ್ಲವಂತೆ ತೋಟಿಯಂದಡೆ ಕೋಟಿ ಲಾಭವೆಂದುಲಿಯುತ್ತಿದ್ದ ಇವರು ಭುವನದೊಳು ಕುಷ್ವರಿಪು ಕುಳ ಸೈನ್ಯಸಾಧಕರಾಗಿದ್ದರು. ಗವರೇಶ್ವರನ ಆರಾಧಕರು, ವ್ಯವಹಾರ ಪ್ರವೀಣರು, ಪರಾಕ್ರಮಿಗಳು, ಪರೋಪಕಾರಶೀಲರು, ಸರ್ವಧರ್ಮ ಸಮಾನಬುದ್ಧಿಯುಳ್ಳವರು ಆಗಿದ್ದರು. ಇವರನ್ನು ಕುರಿತು ಶಾಸನ "ತತ್ಪುರವಾಸಿಗಳಪ್ಪ ಮುಂಮುರಿದಂಡಗಳು ಗವಟೇಶ್ವರ ಪದ ಪದ್ಮಷಟ್ಚರಣರುಂ ವಿಸ್ತೀರ್ಣ ವಸ್ತುಗುಣ ವಿನಿಹಿತಾ ಪಂಚಶತ ವೀರಶಾಸನಗುಣೋದ್ಧರಣರುಂ ನವರತ್ನವಾಹನಪರೀಕ್ಷಾನವದ್ಯರುಂ ಶರಣೆಂದು ಕಂಡರಂ ಕರುಣದಿಂ ಕಾವರಂ ಬಿರುದಿಂಗೆ ಬೀಗುವರ ಹರಣವಂ ಸೋವರಂ ತೋಟಿಯೆಂದೆಡೆ ಕೋಟಿ ಲಾಭವೆಂದುಲಿವರುಂ ಆಟಂದಬವರಕ್ಕೆ ನಾಟಕಂ ನಲಿವರುಂ ಅಯ್ಯಾವೊಳೆಯ ತಳದಿನಿದುವೆನ್ರ್ಗಿಟುದೆನಿಪರಯ್ಯ ಮಾದ್ವಾರಾವತೀಪುರಕೆ ಕುಱುವೆನಿಪ ಕುಱುಗೋಡು ತಳದೊಳಗೆ ತಳರದಯ್ನೂರ್ವರುಂ ಎಂದು ವರ್ಣಿಸಿದೆ.[27]

ಹಾವಿನಾಳ ಕಲ್ಲಿಸೆಟ್ಟಿ ಅಥವಾ ಕಲಿದೇವ ಸೆಟ್ಟಿ ಪರಮ ಶಿವಭಕ್ತನಾಗಿದ್ದ ಇವನ ಪೂರ್ವಿಕ ಕೇತಿಸಿಟ್ಟಿ ಸಿಂದವಾಡಿ ನಾಡಿನ ಮುದಿನೂರಿನವನಾಗಿದ್ದು "ಮುಗುಳ ಬುದ್ದಿ" ಎಂಬ ಅಡ್ಡ ಹೆಸರನ್ನು ಪಡೆದಿದ್ದ. ಇಂದಿನ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮುದನೂರು ಆಗಿರಬೇಕು. ಕಲ್ಲಿಸೆಟ್ಟಿಯ ಅನುಪಮ ವ್ಯಕ್ತಿತ್ವ ವ್ಯವಹಾರ ಧರ್ಮವನ್ನು ಶಾಸನ "ಸತ್ಯದ ಬಿತ್ತು ಸಾಹಸದ ಸಾಗರವೊಳ್ಗುಣದಾಗರಂ ಜನಸ್ತುತ್ಯತೆಯೊಳ್ಪು ಧರ್ಮದ ತವರ್ಮ್ಮನೆ ಮಾಂತನದಿರ್ಕ್ಕೆದಾಣವೌಚಿತ್ಯದ xxxಜನದ ಸಯ್ಪುನೆಗಳ್ತೆಯ ಲೋಕದೇಳ್ಗೆ ಯೌನ್ನತ್ಯದ ಗೊತ್ತೆನ್ನುತ್ತೆಧರೆ ಬಣ್ಣಪುದೀ ಕಲಿದೇವಸೆಟ್ಟಿಯಂ ಭಕ್ತಿಯ ಬಂಡ ಮೊದಲ್ ನಿಜ ಭಕ್ತಿಯೆ ಕೋಟಾನುಕೋಟಿಲಾಭಂ ಶಿವಸದ್ಭಕ್ತಿಯ ಬೆಳಸಿ ಭಕ್ತ ಕಲಿದೇವ ಸೆಟ್ಟಿ ನೆಗಳ್ದಂ ಧರೆಯೊಳ್ ಚಿನ್ತಾಮಣಿಲಿಂಗುಂ ಹೃದಯಾನ್ತರದೊಳ್ಶಿನ್ದು ಕಲ್ಲಿಸೆಟ್ಟಿಗೆ ದಯೆಯಿಂದಿನ್ತು ನಡೆಯಿನ್ತು ನುಡಿಯೆಂದಿತು ಸದಾ ಶಿಕ್ಷಿಸುತ್ತೆ ರಕ್ಷಿಸುತ್ತಿರ್ಪ್ಪಂ".[28]

ಮೇಲಿನ ಮಾತುಗಳಿಂದ ೧೨ನೆಯ ಶತಮಾನದಲ್ಲಿ ಪ್ರಭಾವ ಪ್ರಚಾರ ಬೀರುತ್ತಿದ್ದ ಶರಣಧರ್ಮ ಕಲ್ಲಿಸೆಟ್ಟಿಯ ಮೇಲೆ ಆದದ್ದು ತಿಳಿಯುತ್ತದೆ. ಈ ವರ್ಣನೆಯನ್ನು ಗಮನಿಸಿದ ಡಾ. ಎಂ.ಎಂ.ಕಲಬುರ್ಗಿಯವರು ಈ ವ್ಯಕ್ತಿ ಹಾವಿನಾಳ ಕಲ್ಲಯ್ಯನಾಗಿರಬಹುದೆಂಬ ಭಾವನೆ ಮೂಡುತ್ತದೆಂದು ಹೇಳಿದ್ದಾರೆ.[29] ಆದರೂ ಸೊಲ್ಲಾಪುರದ ಹಾವಿನಾಳ ಕಲ್ಲಯ್ಯ ಕುರುಗೋಡದ ಹಾವಿನಾಳ ಕಲ್ಲಿಯ್ಯಗಳಲ್ಲಿ ಸಂಬಂಧ ಕಲ್ಪಿಸಲು ಆಧಾರಗಳಿಲ್ಲವೆಂದು ಹೇಳಿದ್ದಾರೆ. ಮಹಾಶಿವಶರಣ ಕಲ್ಲಯ್ಯ ಸೊಲ್ಲಾಪುರದ ನೆರೆಯಲ್ಲಿರುವ ಹಾವಿನಾಳದವನೆಂದು ಆ ಪ್ರದೇಶದಲ್ಲಿ ಪ್ರಬಲವಾಗಿ ಬೇರೂರಿದೆ. ವಿಪ್ಲವದ ಮೂಲಕ ಕಲ್ಯಾಣವನ್ನು ತ್ಯಜಿಸಿ ಕುರುಗೋಡು ಅರಸರ ಆಶ್ರಮಕ್ಕೆ ಬಂದಿರಬಹುದೆಂದು ಊಹಿಸಲು ಅವಕಾಶಗಳಿಲ್ಲ. ಕಾರಣ ಇವನ ಪೂರ್ವಿಕರು ಮುದಿನೂರಿನವರೆಂದು ಹೇಳಿಕೊಂಡಿದ್ದಾನೆ. ಇಲ್ಲಿ ಕರೆಯಲಾದ ಹಾವಿನಾಳವೂ ಕೂಡ ಹಾವಿನಾಳ-ವೀರಾಪುರ ಎಂಬ ಗ್ರಾಮ ಕುರುಗೋಡು ಪಕ್ಕದಲ್ಲಿಯೇ ಇದೆ. ಹೀಗಾಗಿ ಅಂದಿನ ಕಾಲದಲ್ಲಿ ಪ್ರಮುಖ ಪಟ್ಟಣವಾದ ಕುರುಗೋಡ ಹತ್ತಿರದ ಹಾವಿನಾಳಕ್ಕೆ ಆಂಧ್ರದಿಂದ ಬಂದು ನೆಲಸಿದಂತೆ ಕಾಣುತ್ತದೆ. ಇದರಿಂದ ಹಾವಿನಾಳ ಕಲ್ಲಯ್ಯ ಮತ್ತು ಕಲ್ಲಿಸೆಟ್ಟಿಯರು ಬೇರೆ ಬೇರೆಯಾಗಿದ್ದರೆಂದು ಸ್ಪಷ್ಟವಾಗುತ್ತದೆ. ಕುರುಗೋಡು ಕಲ್ಲಿಸೆಟ್ಟಿಯ ವಂಶಾವಳಿ ಈ ರೀತಿಯಾಗಿದೆ.



ಕುರುಗೋಡಿನ ಮುದ್ದರಸ ಗೌಡಸ್ವಾಮಿಯೂ, ವಡ್ಡಾಚಾರ ಗುಡ್ಡಶಾಸ್ತ್ರನ್ವಿತನಾದ ವಡ್ಡ ವ್ಯವಹಾರಿಯಾಗಿದ್ದ. ಕೌಂಡಿಲ್ಯ ಗೋತ್ರಕ್ಕೆ ಸೇರಿದ ಮುದ್ದರಾಜನು ಪರಮ ಶಿವಭಕ್ತ ಹಿರಿಯ ಅಣ್ಣ ಸಾಯಿದೇವನಿಗೆ ವಿಧೇಯನಾಗಿದ್ದ. ಕುರುಗೋಡಿನಲ್ಲಿ ತನ್ನ ಹೆಸರಿನ ಶಿವ ದೇವಾಲಯವನ್ನು ಕಟ್ಟಿಸಿದ. ಅವನನ್ನು ಕುರಿತು "ಹರಶರಣೆಂಬಂ ಭಕ್ತರ ಕರುಣವೆ ಶರಣೆಂಬ ಶಿವನಡಿಂಗರನೆಂಬಂ ಹಿರಿಯಣ್ಣ ಸಾಯಿದೇವನ ಪರಮಾಜ್ಞೆಯನೆ ತಾಳ್ದಿದನಂ ಮುದ್ದರಸ" ಎಂದಿದೆ.[30] ಮುದ್ದರಸನ ವಂಶಾವಳಿ ಇಂತಿದೆ.




[1] ಸೌ.ಇ.ಇ., IX-i, ೫೩, ೯ನೇ, ಶ. ಕುರುಗೋಡು (ಬಳ್ಳಾರಿ ತಾ.)

[2] ಅದೆ, ೬೭, ೯೪೭, ಕುಡುತಿನಿ (ಬಳ್ಳಾರಿ ತಾ.)

[3] ಅದೆ, ೧೫೯, ಕುಡುತಿನಿ (ಬಳ್ಳಾರಿ ತಾ.)

[4] ಅದೆ, ೧೬೪, ೧೦೯೮, ಕುಡುತಿನಿ (ಬಳ್ಳಾರಿ ತಾ.)

[5] ಎ.ಇ., XIV, ಪು. ೨೬೫

[6] ಅದೆ, ಪು. ೨೭೦

[7] ಸೌ.ಇ.ಇ., IX-i, ೨೯೬, ೧೧೭೬, ಕುರುಗೋಡು (ಬಳ್ಳಾರಿ ತಾ.)

[8] ಅದೆ, ೨೯೭, ೧೧೭೭, ಕುರುಗೋಡು (ಬಳ್ಳಾರಿ ತಾ.)

[9] ಅದೆ

[10] ಅದೆ, ೨೯೬, ೧೧೭೬, ಕುರುಗೋಡು (ಬಳ್ಳಾರಿ ತಾ.)

[11] ಅದೆ

[12] ವಿಶ್ವನಾಥ್, ೧೯೯೬, ಸಕಲೇಶಪುರ ಪರಿಸರದ ಸ್ಥಳನಾಮಗಳು, ಪು.೧೧೫, ಮೈಸೂರು

[13] ಎ.ಇ., XIV, ಪು. ೨೭೯

[14] ಸೌ.ಇ.ಇ., IX-i, ೨೪೯, ೧೧೪೭, ಕೋಳೂರು (ಬಳ್ಳಾರಿ ತಾ.)

[15] ಎ.ಇ., XIV, ಪು. ೨೬೫

[16] ಸೌ.ಇ.ಇ., IX-i, ೨೯೭, ೧೧೭೭, ಕುರುಗೋಡು (ಬಳ್ಳಾರಿ ತಾ.)

[17] ಅದೇ

[18] ಎ.ಇ., XIV, ಪು. ೨೬೫

[19] ಸೌ.ಇ.ಇ., IX-i, ೨೫೩, ೧೧೪೯, ಓರವಾಯಿ (ಬಳ್ಳಾರಿ ತಾ.)

[20] ಕ.ವಿ.ವಿ.ಶಾ.ಸಂ.೧, ಶಾ.ಸಂ. ೧೩, ೧೪, ಕುರುಗೋಡು (ಬಳ್ಳಾರಿ ತಾ.)

[21] ಎ.ಇ., XIV, ಪು.೨೬೫

[22] ಚನ್ನಬಸವಯ್ಯ ಹಿರೇಮಠ, ೧೯೯೫, ಕುರುಗೋಡು ಸಿಂದರು ಒಂದು ಅಧ್ಯಯನ ಪು.೧೫೩, ಕೊಪ್ಪಳ

[23] ಎ.ಇ., XIV, ಪು.೨೬೫

[24] ಸೌ.ಇ.ಇ., IX-i, ೨೪೯, ೧೧೪೭, ಕೋಳೂರು (ಬಳ್ಳಾರಿ ತಾ.)

[25] ಅದೇ, ೨೯೬, ೧೧೭೬, ಕುರುಗೋಡು (ಬಳ್ಳಾರಿ ತಾ.)

[26] ಅದೇ, ೨೯೭, ೧೧೭೭, ಕುರುಗೋಡು (ಬಳ್ಳಾರಿ ತಾ.)

[27] ಅದೆ, ೨೯೬, ೧೧೭೬, ಕುರುಗೋಡು (ಬಳ್ಳಾರಿ ತಾ.)

[28] ಅದೆ

[29] ಕಲಬುರ್ಗಿ ಎಂ.ಎಂ., ೧೯೭೦, ಶಾಸನಗಳಲ್ಲಿ ಶಿವಶರಣರು ಪು. ೮೯-೯೦, ಧಾರವಾಡ


[30] ಸೌ.ಇ.ಇ., IX-i, ೨೯೭, ೧೧೭೭, ಕುರುಗೋಡು (ಬಳ್ಳಾರಿ ತಾ.)

## ೪. ಶಾಸನಗಳು (೨)

ಅಲ್ಲಿಯ ಇನ್ನೊಬ್ಬ ವರ್ತಕ ಮಲ್ಲಿಸೆಟ್ಟಿಯನ್ನು ಮಹಾವಡ್ಡ ವ್ಯವಹಾರಿಯೆಂದು ಕರೆಯಲಾಗಿದೆ. ಇಲ್ಲಿ ಬರುವ ವಡ್ಡವ್ಯವಹಾರಿ, ಮಹಾವಡ್ಡವ್ಯವಹಾರಿ ಅವರ ಸ್ಥಾನಮಾನವನ್ನು ನಿರ್ಧರಿಸುತ್ತಿರಬಹುದು. ಇವನು ವಿಭೂತ ಕುಲಜಾತ, ಉದಾರಿ ಭಾಸುರ ಮಣಿಯೆನಿಸಿದ್ದ. ಬಾಗಿಸೆಟ್ಟಿಯ ಹಿರಿಯಮಗ ಮಣಿಸೆಟ್ಟಿ ಕುರುಗೋಡು ಪಟ್ಟಣದಲ್ಲಿ ತನ್ನ ಹೆಸರಿನ ಶಿವದೇವಾಲಯವನ್ನು ಕಟ್ಟಿಸಿ ಭೂದಾನ ಮಾಡಿದ್ದಾನೆ.

ಕುರುಗೋಡಿಗೆ ಹತ್ತಿರವಿರುವ ಓರವಾಯಿಯಲ್ಲಿ ಅಂಬಲಿಯ್ಯೆಚ ಎಂಬ ವ್ಯಾಪಾರಸ್ತನಿದ್ದ.

[1] ಅವನು ಕುಂತುನಿಭ ರೂಪಗುಣವಂತನೆನಿಸಿದ್ದ ಈತನ ಮಗ ಏಚನು ಓರವಾಯಿಯಲ್ಲಿ "ಕನಕಾದ್ರಿಯನಲ್ಲಿಗಡದು ಕಂಡರಿಸಿದವೊಲ್ ವಿಘ್ನೇಶ್ವರ"ನ ಪ್ರತಿಷ್ಠೆ ಮಾಡಿ ಅದಕ್ಕೆ ಸಮಸ್ತ ಧನವನ್ನು ನೀಡಿದ್ದಾನೆ. ದೇವಬ್ರಾಹ್ಮಣರ ಪಾದಾರಾಧಕರೆಂದು ಕರೆದುಕೊಂಡಿರುವ ಇವರ ವಂಶಾವಳಿ ಇಂತಿದೆ.




ಹೇಗೆ ಇವರು ವ್ಯಾಪಾರಸ್ತರಾಗಿ ವಿಭಾಗದ ಆಡಳಿತಾಧಿಕಾರಿಗಳಾಗಿ ದಾನ ಧರ್ಮ ಮಾಡುವ ಮೂಲಕ ಸಮಾಜದಲ್ಲಿ ಪ್ರಭಾವ ಬೀರಿದ್ದರು.

**ಧಾರ್ಮಿಕವಾಗಿ**

ಕುರುಗೋಡು ಪಟ್ಟಣದಲ್ಲಿ ಕಂಡುಬಂದಿರುವ ಅವಶೇಷಗಳನ್ನು ಗಮನಿಸಿದರೆ ಶೈವ ಧರ್ಮ ಮುಂಚೂಣಿಯಲ್ಲಿತ್ತು. ೧೨ನೆಯ ಶತಮಾನದಲ್ಲಿ ಉಗಮಗೊಂಡ ಶರಣಧರ್ಮ ಇಲ್ಲಿ ಹೆಚ್ಚು ಪ್ರಚಾರ ಪಡೆದುಕೊಂಡಿತ್ತು. ಅನೇಕ ವರ್ಷಗಳವರೆಗೆ ಆಳ್ವಿಕೆಮಾಡಿದ ಸಿಂದರು, ಅವರ ಅಧಿಕಾರಿಗಳು, ವ್ಯಾಪಾರಸ್ತರು ಇದನ್ನು ಬೆಳೆಸಿ ಪೋಷಿಸುವುದಕ್ಕೆ ಕಾರಣಕರ್ತರಾಗಿದ್ದಾರೆ. ಬಳ್ಳಾರಿ ಪ್ರದೇಶದಲ್ಲಿ ಮಹಾಮಂಡಳೇಶ್ವರರಾಗಿದ್ದ ನೊಳಂಬರ ನಂತರ ಪಾಂಡ್ಯರು ಆಳ್ವಿಕೆ ಮಾಡಿದರು. ಮಹಾಮಂಡಳೇಶ್ವರರಾಗಿದ್ದ ನೊಳಂಬರ ನಂತರ ಪಾಂಡ್ಯರು ಆಳ್ವಿಕೆ ಮಾಡಿದರು. ಚಾಲುಕ್ಯರ ಸಾಮ್ರಾಜ್ಯವನ್ನು ಕಲಚುರಿಗಳು ಹಿಡಿದುಕೊಂಡಾಗ ಪಾಂಡ್ಯರು ತಮ್ಮ ಅಧಿಕಾರವನ್ನು ಕಳೆದುಕೊಳ್ಳಬೇಕಾಯಿತು. ಆದರೆ ಇದೇ ಸಾಲಿಗೆ ಸೇರಿದ ಸಿಂದರು ಮಹಾಮಂಡಳೇಶ್ವರರಾಗಿ ಮುಂದುವರೆದರು. ಇದಕ್ಕೆ ಕಲಚುರಿಗಳಿಗೆ ನಿಷ್ಠರಾಗಿದ್ದುದು ಒಂದು ಕಾರಣವಾದರೆ, ಇನ್ನೊಂದು ಕಾಯಕ ಜೀವಿಗಳ ಪರವಾಗಿ ಸ್ಥಾಪನೆಗೊಂಡ ಶರಣಧರ್ಮದ ಕಡೆಗೆ ವಾಲಿ ಸಾಮಾನ್ಯ ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾದರು. ಇದೂ ಕೂಡಾ ಬಹಳ ದಿವಸ ನಿಲ್ಲಲಿಲ್ಲ. ಕಳಚುರಿಗಳ ಆಡಳಿತ ಕೊನೆಗೊಂಡು ಹೊಯ್ಸಳರು ಅಧಿಕಾರವನ್ನು ಸ್ಥಾಪಿಸಿದಾಗ ಸಿಂದರು ತಮ್ಮ ಸ್ಥಾನ ಕಳೆದುಕೊಳ್ಳಬೇಕಾಯಿತು.

**ಶೈವಧರ್ಮ**

ಈ ಗ್ರಾಮದಲ್ಲಿ ಶೈವ ಧರ್ಮಕ್ಕೆ ಸಂಬಂಧಿಸಿದ ದೇವಾಲಯಗಳು ಹೆಚ್ಚಿನ ಪ್ರಮಾಣದಲ್ಲಿವೆ. ಇವುಗಳ ಶೈಲಿ ಒಂದೇ ರೀತಿಯಾಗಿರುವುದನ್ನು ಗಮನಿಸಿದರೆ ಇವೆಲ್ಲವೂ ಸಿಂದರ ಆಳ್ವಿಕೆಯ ಕಾಲದಲ್ಲಿಯೇ ರಚನೆಯಾಗಿರಬೇಕು. ದೇವಾಲಯಗಳನ್ನು ಕಟ್ಟಿಸಿ ಅವುಗಳ ವ್ಯವಸ್ಥೆಯನ್ನು ನೋಡಿಕೊಳ್ಳಲು ಕಾಳಾಮುಖ ಯತಿಗಳನ್ನು ನೇಮಕ ಮಾಡಲಾಗುತ್ತಿತ್ತು. ಬಳ್ಳಾರಿ ಪ್ರದೇಶದಲ್ಲಿ ಈ ಕಾಳಾಮುಖರನ್ನು ಉಲ್ಲೇಖಿಸುವ ಕ್ರಿ.ಶ. ೧೦೩೩ರ ದಮ್ಮೂರು. ಕಗ್ಗಲ್ಲು ಶಾಸನ ಪ್ರಾಚೀನವಾದುದು. ಇದರಲ್ಲಿ ಮಹಾದೇವ ದೇವರ ಸ್ಥಾನಾಚಾರ್ಯ ಉತ್ತಮರಾಶಿ ಪಂಡಿತರಿಗೆ ದಾನ ಕೊಡಲಾಗಿದೆ. ಇದರ ನಂತರ ಕುರುಗೋಡು ಪಕ್ಕದಲ್ಲಿರುವ ಓರವಾಯಿಯ ಕ್ರಿ.ಶ. ೧೦೩೬ರ ಶಾಸನದಲ್ಲಿ ತ್ರಿಲೋಕ ಪಂಡಿತರ ಸಿದ್ಧಯ್ಯನ ಉಲ್ಲೇಖವಿದೆ.[2] ಕ್ರಿ.ಶ. ೧೧೪೯ರ ವೇಳೆಯಲ್ಲಿ ಓರವಾಯಿಯ ಕಲಿದೇವ ದೇವಾಲಯದ ಸ್ಥಾನಚಾರ್ಯನಾಗಿ ಭೀವರಾಶಿ ಪಂಡಿತನಿದ್ದ.[3] ಇವನು ಚಳೇಶ್ವರ ಪಂಡಿತರ ಮಕ್ಕಳೆಂದು ಹೇಳಿಕೊಂಡಿದ್ದಾನೆ. ಶಾಸನ ಇವನನ್ನು ಕುರಿತು "ಯಮನಿಯಮಧ್ಯಾನಧಾರಣ ಮೋನಾನುಷ್ಠಾಣ ಜಪಸಮಾಧಿಶೀಲ ಸಂಪನರುಂ ಗುರದೇವದ್ವಿಜಪೂಜಾಗುಣೋತ್ಪಂನರುಂ ಲಾಕುಳಾಗಮಸಮಯ ಸಮುದ್ಧರಣರುಂ ಯಂತ್ರಮಂತ್ರೋದ್ಧರಣ ಪ್ರವೀಣರುಂ ಸಕಲದರುಶನಾಗಮಾನಗಮಾರ್ತ್ಥಕೋವಿದರುಂ ಶ್ರೀಯೋರುವಾಯ ಕಲಿದೇವ ಲಬ್ಧವರ ಪ್ರಸಾದರಪ್ಪ" ಎಂದು ಹೇಳಿದೆ. ಓರವಾಯಿಯ ಕಲಿದೇವ ದೇವಾಲಯದೊಂದಿಗೆ ಕುತನೂರ ವಿರೂಪಾಕ್ಷ ದೇವರ (ದೋ) ನೂರxx ಳ ದೇವರ ಮತ್ತು ಕುರುಗೋಡು ಭೋಗೇಶ್ವರ ದೇವರ ಸ್ಥಾನವನ್ನೂ ನೋಡಿಕೊಳ್ಳುತ್ತಿದ್ದ.

ಕುರುಗೋಡು ಶ್ರೀ ಸ್ವಯಂಭುದೇವರ ಸ್ಥಾನಾಚಾರ್ಯನಾಗಿ ಬಾಲಶಿವಾಚಾರ್ಯನಿದ್ದ.[4] ಅವನನ್ನು ಕುರಿತು ಶಾಸನ ಶಿವಪೂಜಾ ತತ್ಪರನಾದ ಇವನು "ಆ ಲಕುಳೀಶ್ವರಾಗಮ ಕಾಳಾ (ಲಾ) ಮುಖ ದರ್ಶನಂಗಳನ್ತಾಳ್ದಿ ತಪೋಲೀಲೆಗೆ ಮೈವಾಂತಿತರ್ಪ್ವಂ ಬಾಲಶಿವಾಚಾರ್ಯ ವರ್ಯ್ಯನಗಣಿತ ಧೈರ್ಯನ್" ಎಂದಿದೆ. ಕ್ರಿ.ಶ. ೧೧೭೬ರಲ್ಲಿ ಕಲ್ಲಿಸೆಟ್ಟಿ ಎಂಬುವನು ಕುರುಗೋಡಿನಲ್ಲಿ ಪ್ರತಿಷ್ಠಾಪಿಸಿದ ಕಲ್ಲೇಶ್ವರ ದೇವಾಲಯಕ್ಕೆ ಅಮೃತರಾಶಿ ದೇವರು ಸ್ಥಾನಾಚಾರ್ಯನಾಗಿದ್ದ.[5] ಅವನನ್ನು "ಶಿವಶಕ್ತಿಸುತಂ ಕಲಿದೇವರಾಂಘ್ರಿಸರೋಜ ಪೂಜಕಂ ಸಕಲಗುಣೋದ್ಭವ ಕಾಳಾಮುಖತಿಳಕಂ ಭುವನಸ್ತುತನೆನಿಪನಮೃತರಾಶಿ ಮುನಿಂದ್ರಂ ಅಮೃತಗುಣನಮೃತಮಾನಸ ಮೃತೋತ್ತಮವಾಣಿಯ ಮೃತಹಸ್ತಾಂಬು ಜನನ್ತಮ್ರಿತಮತಿಯ ಮೃತಹಿಮಾಪ್ರಮಿತ ನೆನಿಪ್ಪಮೃತರಾಶಿಮುನಿಕ್ರಿತಕೃತ್ಯಂ" ಎಂದು ವರ್ಣಿಸಲಾಗಿದೆ.

ಕುರುಗೋಡು ಸಿಂದ ಅರಸರಲ್ಲಿ ಮೊದಲನೆಯ ರಾಜಮಲ್ಲ ಮತ್ತು ಎರಡನೆಯ ರಾಜಮಲ್ಲರು ಮಹಾಶಿವಭಕ್ತರು. ಮೊದಲನೆಯ ರಾಚಮಲ್ಲನನ್ನು ಶಾಸನಗಳು ಶಿವಪಾದ ಶಿಖಾಮಣಿ, ಶಿವೈಕ್ಯ ಚೂಡಾಮಣಿ, ಅರ್ಚಿತ ಶಿವಪಾದನೆಂದಿವೆ. ವಚನಕಾರ ಉಳಿಯಮೇಶ್ವರ ಚಿಕ್ಕಯ್ಯನಿಗೆ ದಾನ ಬಿಡುವಾಗ ಶಿವಪಾದ ಶೇಖರ ಮಹೇಶ್ವರಂ ಎಂದು ವರ್ಣಿತನಾಗಿದ್ದಾನೆ. ಬಕ್ತರ ಪಿರಿದು ಮನ್ನಿಸುತ್ತ ಅನೇಕ ದಾನದತ್ತಿಗಳನ್ನು ಬಿಡುವ ಮೂಲಕ ಅವರನ್ನು ಸಂತೃಪ್ತಿ ಪಡಿಸುತ್ತಿದ್ದನು. ಈ ರಾಚಮಲ್ಲನನ್ನು ಮೆಚ್ಚಿಕೊಂಡ ಶಿವನ್ನು ತನ್ನ ಪರಿವಾರದೊಂದಿಗೆ ಬಂದು ಪ್ರತ್ಯಕ್ಷನಾದನಂತೆ. ಆಗ ರಾಚಮಲ್ಲನು ಮಹಾವಿಭೂತಿಯಿಂದ ಗಣಾಡಂಬರವಂ ಮಾಡಿ ಶಿವಾರ್ಚನೆಯನಾಡಿ ಶಿವನಲ್ಲಿ ತನ್ನ ಶರೀರವನ್ನು ಬೆರಸಿ ಕುರುಗೋಡು ಪಟ್ಟಣದ ಸ್ವಯಂಭುದೇವರ ಪಶ್ಚಿಮಾಭಿಮುಖದೊಳ್ ಬಂದುನಿಂದು ಸಕಳ ಲೋಕಕ್ಕೆ ಕೌತುಕಮಾಗಿ ಲಿಂಗಮೂರ್ತಿಯಿಂದುದ್ಭವಿಸಲು ಶ್ರೀಮದುದ್ಭವರಾಚಮಲ್ಲೇಶ್ವರನೆಂದು ಪೆಸರಂ ಪಡೆದನಂತೆ.[6] ಇಂದಿಗೂ ಈ ದೇವಾಲಯವು ರಾಚಮಲ್ಲ ದೇವಾಲಯವೆಂದು ಪ್ರಸಿದ್ಧಿ ಪಡೆದಿದೆ.

ಈತನ ಮೊಮ್ಮಗ ರಾಚಮಲ್ಲನಂತೆ ಶಿವಭಕ್ತನಾಗಿದ್ದ ಶಾಂತಲಿಂಗ ದೇಶಿಕ ತನ್ನ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರದ ರತ್ನಾಕರದಲ್ಲಿ ಗಂಡಗತ್ತರಿ ನಾಕಯ್ಯ ಚಿಕ್ಕರಾಚಮಲ್ಲ ಆ ರಾಚಮಲ್ಲಯ್ಯಗಳು ಕೂಡಿಕೊಂಡು ಪ್ರಚುರಾನಂದಾಬ್ದಿ ವೀಚಿಯಿಂದ ಗಂಡಗತ್ತರಿ ಕಾರ್ಯಕ್ಕೆ ಹೋಗುತ್ತಿದ್ದುನ್ನು ಪ್ರಸ್ತಾಪಿಸಿದ್ದಾನೆ.[7] ಇಮ್ಮಡಿ ರಾಮಮಲ್ಲನನ್ನು ಶಾಸನ "ಪೊಡವಿಯ ಸಮಸ್ತ ಭಕ್ತರ ನಡುವೆ ಮೃಡಂ ಮೆಚ್ಚಿ ನಿಚ್ಚವರವಂ ಕುಡಲಿಮ್ಮಡಿ ರಾಚಮಲ್ಲದೇವಂ ಪಡೆದ ನಿತ್ಯ ಪ್ರಸಾದ ರಾಜ್ಯಶ್ರೀಯಂ" ಎಂದಿದೆ.[8]

ಇಮ್ಮಡಿ ರಾಚಮಲ್ಲನ ಪಾದಪದ್ಮೋಪಜೀವಿಯಾದ ಮಹಾಪ್ರಧಾನ ಬೇಚಿರಾಜನು ಅಚ್ಚರಸನ ಪುತ್ರ. ಶಿವೈಕ್ಯಭಾವಿ ಕಾಶ್ಯಪಗೋತ್ರದವನಾದ ಇವನ ಮಹಿಮೆಯನ್ನು ಶಾಸನ "ಒಡೆಯನೋಡಲಂ ದೇವರ್ಗ್ಗೋಡನೆಡನೆ ನಿವೇದಿಸು(ತ್ತು) ಶಿವಸನ್ನಿಧಿಯಂ ಪಡೆದಂ ಲೋಕದೊಳೂರ್ವ್ವನೆ ಹಡಪವಳ ದಂಡನಾಯಕಂ ಬೇಚರಸಂ" ಎಂದಿದೆ.[೯] ಈ ರೀತಿಯಾಗಿ ಶೈವಧರ್ಮವನ್ನು ಪೊಷಿಸುವಲ್ಲಿ ಸಿಂದ ಅರಸರು, ಪ್ರಧಾನರು, ವ್ಯಾಪಾರಸ್ತರು ಪ್ರಮುಖರಾಗಿ ಕಾಣಿಸುತ್ತಾರೆ.

೧೨ನೇಯ ಶತಮಾನದಲ್ಲಿ ನಿರ್ಮಾಣವಾದ ಏಕೈಕ ಜೈನ ಬಸದಿ ಗ್ರಾಮದಲ್ಲಿದೆ. ಶೈವಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದುದರಿಂದ ಇದರ ಉಲ್ಲೇಖ ಸಮಕಾಲೀನ ಶಾಸನಗಳಲ್ಲಿಲ್ಲ. ಮುಂದೆ ವಿಜಯನಗರ ಅರಸರ ಕಾಲದಲ್ಲಿ ಈ ಬಸದಿಯನ್ನು ಜೀರ್ಣೋದ್ಧಾರ ಮಾಡಿ ದಾನ ಬಿಟ್ಟ ಮಾಹಿತಿ ಲಭ್ಯವಾಗುತ್ತದೆ.

**ದಾನ-ದತ್ತಿ**

ದೇವಾಲಯ, ಮಠ, ಛತ್ರ, ಕೆರೆ, ಕಟ್ಟೆ, ಬಾವಿಗಳನ್ನು ಕಟ್ಟಿಸಿ ಅವುಗಳಿಗೆ ದಾನ ದತ್ತಿ ಬಿಡುವುದಕ್ಕೆ ಧಾರ್ಮಿಕ ಹಿನ್ನೆಲೆ ಕಾರಣ. ಇವುಗಳ ಮೂಲಕ ಪುಣ್ಯಗಿಟ್ಟಿಸಿ ಕೊಳ್ಳುವುದು, ಮೋಕ್ಷಸಂಪಾದಿಸುವುದು ಮಾನವನ ಮುಖ್ಯ ಗುರಿಯಾಗಿತ್ತು. ರಾಜ್ಯದ ಆರ್ಥಿಕ ಭದ್ರತೆಗೆ ತೆರಿಗೆ ಪ್ರಮುಖ ಆದಾಯವಾಗಿತ್ತು. ತೆರಿಗೆ ಸಂಗ್ರಹಕ್ಕಾಗಿ ಅನೇಕ ಅಧಿಕಾರಿಗಳನ್ನು ನೇಮಕ ಮಾಡಲಾಗುತ್ತಿತ್ತು. ಇವರು ಜನರಿಂದ ತೆರಿಗೆ ಸಂಗ್ರಹಿಸುವಾಗ ಅಲ್ಲಿಯ ದೇವಾಲಯಕ್ಕೂ ವಿದ್ಯೆಗೂ ದತ್ತಿಗಳನ್ನು ಕೊಡುತ್ತಿದ್ದರು. ಇತರರು ತಮ್ಮ ಆದಾಯದಲ್ಲಿ ಕೆಲವು ಪಾಲು ದತ್ತಿಕೊಡುವ ಮೂಲಕ ತೆರಿಗೆಯಿಂದ ವಿನಾಯತಿ ಪಡೆಯುತ್ತಿದ್ದರೆಂದು ತೋರುತ್ತದೆ.

ಮುಂಮುರಿದಂಡರಲ್ಲಿ ಒಬ್ಬನಾದ ಕಲ್ಲಿಸೆಟ್ಟಿ ಕಲಿದೇವರಿಗೆ ದೇವಾಲಯಕಟ್ಟಿಸಿ, ಅಂಗಭೋಗ-ರಂಗಭೋಗ, ಜೀರ್ಣೋದ್ಧಾರಕ್ಕೆ ಮತ್ತು ದೇವರ ಹಾಡುವಾತಂಗೆ ಭೂದಾನ ಮಾಡುತ್ತಾನೆ. ಬಳ್ಳಾರೆಯ ಅಜ್ಜರಸ ದೇವಾಲಯಕ್ಕೆ, ಅರವಟ್ಟಿಗೆಗೆ ಮತ್ತು ಪ್ರಾಣಿಗಳಿಗೆ ದಾನ ಕೊಟ್ಟಿದ್ದಾನೆ. ಇದೇ ದೇವಾಲಯಕ್ಕೆ ನಖರಂಗಳು ಹೊಂಗಳದಲ್ಲಿ ಕೊಟ್ಟಲ್ಲಿ ಭತ್ತ ಸೊಳಸೆ-೨ ಕೊಂಡಲ್ಲಿ ಸೊಳಸೆ -೨, ಮುಂಮುರಿದಂಡಗಳು ಹೊಂಗೆ ಕೊಟ್ಟಲ್ಲಿ ಕಾಣಿ-೧, ಕೊಂಡಲ್ಲಿ, ಕಾಣಿ-೧ನ್ನೂ, ತಂಬುಲಿಗೆ ಸಾಸಿರ್ವರು ಹೇರುಂಗೆಲೆ-೧೦೦, ಹೊರಗೆಲೆ-೫೦ ಕೊಟ್ಟಿದ್ದಾರೆ. ನಾಲ್ಕು ನಾಡುಗಳುಂ ನೆರೆದಾವನಾಡಲು ಹೇಱುದಡಂ ಕೋಣ-೧೦, ಎತ್ತು-೧೦, ಕತ್ತೆ-೧೦ ಅನ್ತು-೩೦ಕ್ಕೆ ಹಾರಿಕಾಯ ಸುಂಕವನ್ನು ಶ್ರೀಕಲಿದೇವರಿಗೆ ಕೊಡಲಾಗಿದೆ.

ಕುರುಗೋಡು ಪಟ್ಟಣ ಸ್ವಾಮಿಗಳೆಲ್ಲರೂ ಕೂಡಿ ತ್ರಿಕೂಟಾಲಯ ಕಟ್ಟಿಸಿ ಗವರೇಶ್ವರನನ್ನು ಪ್ರತಿಷ್ಠೆ ಮಾಡುತ್ತಾರೆ. ಇದಕ್ಕೆ ಗವರೆಗೆಳೆಲ್ಲರೂ ಕೂಡಿ ರಾಚಮಲ್ಲ ಮೊದಲಾದವರು ನಿತ್ಯ ನೈವೇದ್ಯ, ನಂದಾದೀಪಕ್ಕೆ ಭೂದಾನ ಬಿಟ್ಟಿದ್ದಾರೆ. ಇವರಲ್ಲಿ ಪರದೇಶಿಗಳು ಅಳವ ತೂಗುವಯಂಬರಂಗಳಲುಂ ಎಣಿಸುವ ದವಸಂ ಮಾರಿದಲ್ಲಿ ಕೊಟ್ಟ ಹೊಂಗೆ-೧, ಮುಂಮುರಿದಂಡಗಳು ಭಂಡ ತೂಗಿಸಿ ಕೊಟ್ಟಬೇಳೆ ಹೊಂಗೆ-೧, ನಾನಾದೇಶಿಗಳು ಸಮಸ್ತ ದಿವಸ ಮಾರಿದಲ್ಲಿ ಹೊಂಗೆ ಕೊಟ್ಟ ಕಾಣಿ-೨, ಮಾರಿದ ದವಸದಲು ಕೊಟ್ಟಲ್ಲಿ ಹೊಂಗೆ ಕೊಟ್ಟ ಕಾಣಿ-೨ ಪಟ್ಟಣದ ನಖರಂಗಳು ಕೊಂಡಲ್ಲಿ ವ-೨೧, ಅಂಗಡಿಯಲು ಹಾಸಿಯಲುಂ ಸಟ್ಟುಗ ಭತ್ತ, ಸಾಸಿರ್ವರು ಹೇರಿಂಗೆಲೆ-೧೦೦, ಹೊರಗೆ-ಲೆ-೫೦, ಲಾಡ, ಚೋಳ, ಮಳೆಯಾಳ, ತೆಲಂಗು, ಕ(೦)ನ್ನಡ ಸಮಸ್ತ ನಾನಾ ದೇಶಿಗಳು ಪೇಳಾವಿಗಸೆಟ್ಟಿ ಕೊಟ್ಟಾಯ ಕುದುರೆ ಹಾಗ-೧, ದೇವರಪುರದೊಳಗೆ ನಂದಾದೀವಿಗೆಗೆ ನಾಡುಗಳು ಕೊಟ್ಟ ಗಾಣ-೨, ಭೈರವದೇವರ ದೀವಿಗೆಗೆ ಗಾಣ-೧, ಕಮ್ಮಟದಲು ಹೊವ ಹೊಂಗೆದಳಕ್ಕೆ ಪೆ-೨, ಕಾ xxx ಕೊಂಬುಬೆಲ್ಲಕೆ ನೂರು ಕೊಂಡು ಬಿಟ್ಟರು. ಈ ತ್ರಿಕೂಟದಲ್ಲಿ ಮಲ್ಲಿಕಾರ್ಜುನ ದೇವರ ಪ್ರತಿಷ್ಠೆ ಮಾಡಿದ ಮಹಾವಡ್ಡ ವ್ಯವಹಾರಿ ಮಲ್ಲಿಸೆಟ್ಟಿ ಕೆಲವು ಭೂಮಿಗಳನ್ನು ದಾನ ಕೊಟ್ಟನು. ಅಲ್ಲದೆ ದೇವರ ನಂದಾದೀವಿಗೆಗೆ ಗಾಣ-೧, ಸಮಸ್ತ ನಾನಾದೇಶಿಗಳು ಕಟ್ಟಾಯ ಕುದುರೆಗೆ ವೀಸ-೨, ಕಾಣಿ-೨ನ್ನು ಮತ್ತು ಕೊಟ್ಟಲ್ಲಿ ಹೊಂಗ ಸೊಳಸ-೨, ಕೊಂಡಲ್ಲಿ ಸೊಳಸೆ-೨ನ್ನು ಕೊಟ್ಟರು. ಈ ದೇವಾಲಯದಲ್ಲಿ ಶ್ರೀಮತ್ಕೌಂಡಿನ್ಯ ಗೋತ್ರದ ಮುದ್ದರಾಜನು ಮುದ್ದೇಶ್ವರ ದೇವರ ಪ್ರತಿಷ್ಠೆಮಾಡಿ ಒಂದು ಹೂದೋಟವೂ ಸೇರಿ ಕೆಲವು ಭೂಮಿ ದಾನಕೊಟ್ಟನು. ೨ ಗಾಣ ಮತ್ತು ಕೊಟ್ಟಲ್ಲಿ ಹೊಂಗೆ ಸೊಳಸ-೨, ಕೊಟ್ಟಲ್ಲಿ ಸೊಳಸ-೨ನ್ನು ದಾನ ಮಾಡುತ್ತಾರೆ. ಈ ಮೂರು ದೇವರ ಪಾತ್ರ ಪಾವುಳಕ್ಕಾಗಿ ಪ್ರತ್ಯೇಕ ಭೂದಾನ ಮಾಡಿದ್ದಾರೆ.

ಕುರುಗೋಡು ಗ್ರಾಮದಲ್ಲಿ ಇನ್ನೊಂದು ಪ್ರಮುಖವಾದ ಸ್ವಯಂಭುದೇವರ ದೇವಾಲಯ. ಇದನ್ನು ಎರಡನೆಯ ರಾಚಮಲ್ಲನ ಪ್ರಧಾನ ಹಡಪವಳ ಬೇಚಿರಾಜ ಕಟ್ಟಿಸಿದನು. ಮೊದಲನೆಯ ರಾಚಮಲ್ಲನ ಕಾಲದಲ್ಲಿಯೇ ಕಟ್ಟಿದ ಈ ದೇವಾಲಯಕ್ಕೆ ಮೊಮ್ಮಗ ಎರಡನೆಯ ರಾಚಮಲ್ಲ ರಂಗಭೋಗ ನೈವೇದ್ಯ ಜೀರ್ಣೋದ್ಧಾರ ಚೈತ್ರ ಪವಿತ್ರ ಸ್ವಾಧ್ಯಾಯ ವೈಶೇಷಿಕ ವ್ಯಾಖ್ಯಾನ ಖಣ್ಡಿಕ ಶಿವಧರ್ಮಪುರಾಣ ಪಠಣಕ್ಕೆ ಕೆಲವು ಭೂಮಿಗಳನ್ನು ಮತ್ತು ಹೂದೋಟ, ೨-ಗಾಣಗಳನ್ನು ದಾನ ಕೊಟ್ಟಿದ್ದಾನೆ. ಶ್ರೀಪುರವನ್ನು ಅಗ್ರಹಾರವನ್ನಾಗಿ ಪರಿವರ್ತಿಸುತ್ತಾನೆ. ಈ ಅವಧಿಯಲ್ಲಿ ಸ್ವಯಂಭುದೇವರ ಸ್ಥಾನಚಾರ್ಯ ಬಾಲಶಿವಾ ಚಾರ್ಯನಿಗೆ ಕೊಟ್ಟಲಜಿನ್ತೆ ಗ್ರಾಮ ದಾನಕೊಟ್ಟನು.

ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ನಿರ್ಮಾಣವಾದ ಮತ್ತು ಈ ಮೊದಲೇ ಕಟ್ಟಲ್ಪಟ್ಟ ಕೆಲವು ದೇವಾಲಯಗಳಿಗೆ ದಾನ-ದತ್ತಿ ಬಿಡಲಾಗಿದೆ. ಕ್ರಿ.ಶ. ೧೫೧೨ರಲ್ಲಿ ಕುರುಗೋಡಿನ ಮಲ್ಲಪನಾಯಕರ ಹೆಂಡತಿ ಬಲ್ಲಕುಂದೆ ಮಲ್ಲಮ್ಮಳು ೧೨ನೆಯ ಶತಮಾನದಲ್ಲಿ ನಿರ್ಮಾನವಾದ ಹೂಜೆವಾಳ ಶಾಂತಮಲ್ಲಿಕಾರ್ಜುನ ದೇವಾಲಯ ಮತ್ತು ಬಾವಿಯನ್ನು ಜೀರ್ಣೋದ್ಧಾರ ಮಾಡಿಸಿ ಅದಕ್ಕೆ ತೋಟ ದಾನ ಮಾಡುತ್ತಾಳೆ.

ಕ್ರಿ.ಶ. ೧೫೨೮ರಲ್ಲಿ ಬಾಗಿಲು ಕೃಷ್ಣನಾಯಕನೆಂಬುವನು ಕೃಷ್ಣದೇವಮಹಾರಾಯರಿಗೆ ಪುಣ್ಯವಾಗಬೇಕೆಂದು ದೊಡ್ಡ ಬಸವಣ್ಣನ ಅಮೃತಪಡಿಗೆ ಭೂದಾನ ಕೊಡುತ್ತಾನೆ. ಇಲ್ಲಿಯ ಸಂಗಮೇಶ್ವರ ದೇವರಿಗೆ ಕೃಷ್ಣದೇವರಾಯನು ಚಿನಕುಂಟೆ ಗ್ರಾಮವನ್ನು ದಾನ ಕೊಟ್ಟಿದ್ದನು. ಇದು ಮುಂದೆ ಅಚ್ಚುತರಾಯನ ಕಾಲದಲ್ಲಿ ಹಾಳಾಗುತ್ತದೆ. ಸದಾಶಿವಮಹಾರಾಯರ ಕಾಲದಲ್ಲಿ ಅರಸನಿಗೆ ಪುಣ್ಯವಾಗಲೆಂದು ಗುಂಡಯಮಹಾರಾಯನ ಅಳಿಯನಾದ ಲಿಂಗರಾಜನು ಈ ಗ್ರಾಮವನ್ನು ಪುನರ್ ದತ್ತಿಯಾಗಿ ಬಿಟ್ಟಿದುದಲ್ಲದೆ ಅಲ್ಲಿಯ ತೋಟವನ್ನು ಮಾನ್ಯ ಮಾಡುತ್ತಾನೆ. ಸಂಗಮೇಶ್ವರ ದೇವರಿಗೆ ಜೂಜಾಡುವವರೂ ಕೂಡಾ ಹಣ ದಾನಕೊಟ್ಟಿದ್ದಾರೆ.

ಈ ಗ್ರಾಮದಲ್ಲಿರುವ ಜೈನ ಬಸದಿಗೆ (ಈಗ ಈಶ್ವರ ದೇವಾಲಯವಾಗಿ ಪರಿವರ್ತನೆಗೊಂಡಿದೆ) ರಾಮರಾಜಯ್ಯ ಎಂಬುವವನು ತನ್ನ ತಂದೆ ಮಲ್ಲಿರಾಜ ಒಡೆಯರಿಗೆ ಪುಣ್ಯವಾಗಬೇಕೆಂದು ಜಿನದೇವರ ಅಮೃತಪಡಿ ನೈವೇದ್ಯಕ್ಕೆ ಗೌಡ, ಸೇನಭೋನ ಹಾಗೂ ಪಟ್ಟಣಸ್ವಾಮಿಯರು ಸೇರಿಕೊಂಡು ಭೂ ದಾನ ಕೊಟ್ಟಿದ್ದಾರೆ. ಇದೆ ಬಸದಿಗೆ ಮೂಲಸಂಘ ಬಲತ್ಕಾರಗಣಕ್ಕೆ ಸೇರಿದ ಸೂರಿಯಪ್ಪ ಸೆಟ್ಟಿಯ ಮಗ ಹಾಗೂ ಪದ್ಮರಸ ಪಂಡಿತರು ಸೇರಿ ಭೂದಾನ ಬಿಟ್ಟಿದ್ದಾರೆ. ಅರಸರಾದಿಯಾಗಿ ಜನಸಾಮಾನ್ಯರವರೆಗೂ ಹಣ, ದವಸ, ಧಾನ್ಯ, ಎಣ್ಣೆ, ಭೂಮಿ ಮೊದಲಾದವುಗಳನ್ನು ದಾನ ಕೊಡುತ್ತಿದ್ದುದರಿಂದ ದೇವಾಲಯಗಳು ಶ್ರೀಮಂತಿಕೆಯಿಂದ ಕೂಡಿದ್ದುದು ಸ್ಪಷ್ಟವಾಗುತ್ತದೆ.

**ಸಾಹಿತ್ಯ**

ಪ್ರಾಚೀನ ಕಾಲದಿಂದಲೂ ಆಯಾ ಪ್ರದೇಶದಲ್ಲಿ ಆಳ್ವಿಕೆ ಮಾಡುತ್ತಿದ್ದ ಅರಸರು, ಮಾಂಡಳಿಕರು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಅಭಿವೃದ್ಧಿಗಾಗಿ ಶ್ರಮವಹಿಸಿದಂತೆ ಸಾಹಿತ್ಯ ಕ್ಷೇತ್ರದಲ್ಲೂ ಗಮನಾರ್ಹ ಬೆಳವಣಿಗೆಯನ್ನು ಕಾಣಬಹುದು. ಶಾಸನಗಳಲ್ಲಿಯ ಸಾಹಿತ್ಯವನ್ನು ಗಮನಿಸಿದರೆ ನಾಡಿನಾದ್ಯಂತೆ ಅನೇಕ ಕವಿಶ್ರೇಷ್ಠರು ವಾಸವಾಗಿದ್ದುದು ತಿಳಿಯುತ್ತದೆ. ಈ ಶಾಸನಗಳಲ್ಲಿ ಅಡಕವಾಗಿರುವ ದೇಶ-ನಾಡು, ಪ್ರದೇಶ ಪ್ರೇಮ, ವೀರರ ಪ್ರತಾಪ, ಮಹಾಜನರ ವಿದ್ವತ್ತು, ಸ್ಥಾನಾಚಾರ್ಯರ ಪ್ರಭಾವ ದೇವಾಲಯಗಳ ಘನತೆ ಮೊದಲಾದವುಗಳ ವರ್ಣಿತವಾಗಿದ್ದರೂ ಒಂದೊಂದರಲ್ಲಿ ವಿಭಿನ್ನ ವಿಶೇಷಣಗಳನ್ನು ಕಾಣುತ್ತೇವೆ.

ಶಾಸನ ಕವಿಗಳು, ಆಳುವ ಅರಸ, ಅಧಿಕಾರಿಗಳೊಂದಿಗೆ ದೇಶ, ನಾಡು ಊರುಗಳ ಪ್ರೇಮವನ್ನು ಮೆರೆದಿದ್ದಾರೆ. ಕುರುಗೋಡಿಗೆ ಹತ್ತಿರವಿರುವ ಕೆಳೂರು ಶಾಸನ ಕುಂತಳ ದೇಶವನ್ನು ಕುರಿತು ಹೇಳುವಾಗ ಅದು ಏಳುವರೆ ಲಕ್ಷ ಹಳ್ಳಿಗಳುಳ್ಳದ್ದಾಗಿತ್ತೆಂದು ಅದನ್ನು ಮ.ವಿ॥ ವಸುಧಾಕಾಂತೆಯ ಕುಂತಳಪ್ರತಿಮಮಾದೀ ಕುಂತಳಕ್ಷೋಣಿಯಂ ವಸುಧಾನಂದನನಂದುಪ್ತಕುಲ ಮೌರ್ಯ್ಯಕ್ಷ್ಮಾ ಪರಾಳ್ದರ್ಬ್ಬಳಿಕ್ಕೆಸೆಯಲ್ ರಾಷ್ಟ್ರ ನೃಪಾಳರಾಳ್ದರವರಿಂದ ಮತ್ತೆ ಚಾಳುಕ್ಯ ವಂಶಸಮುದ್ಭೂತರನೇಕರಾಳ್ದರ ವರೊಳ್ತಾಂ ಚಕ್ರಿ ಸೋಮೇಶ್ವರಂ

ವ॥ ಚಾಳುಕ್ಯ ರಾಜ್ಯಾಂಭೋನಿಧಿಪ್ರವರ್ಧನಚಂದ್ರನಪ್ಪ ಶ್ರೀಮಚ್ಚಾಳುಕ್ಯ ಚಕ್ರವರ್ತಿ ಜಗದೇಕಮಲ್ಲಂ ಕುಂತಳ ಸಪ್ತಾರ್ಧಲಕ್ಷಮಂ ದುಷ್ಟನಿಗ್ರಹ ಶಿಷ್ಟ ಪರಿಪಾಳನಾರ್ಥಂ ಪಾಳಿಸುತ್ತಂ ಸುಖಸಂಕಥಾವಿನೋದದಿಂ ಕಲ್ಯಾಣದೊಳು ನೆಲೆವೀಡಾಗಿ ರಾಜ್ಯಂಗೆಯ್ಯುತ್ತಮಿರೆ.

ಅದರ ಉಪವಿಭಾಗಗಳಾದ ಬಲ್ಲಕುಂದೆ ನಾಡು ಮತ್ತು ಕೋಳೂರು ಪ್ರದೇಶದ ಬೆಳೆಯುವ ಹೊಲ, ಬಂಗಾರದ ಕಣಿ, ಹಗರೆ ನದಿ ಕಾಲುವೆ ಮೊದಲಾದವುಗಳಿಂದ ಬಲ್ಲಕುಂದೆ ನಾಡಿನ ಸಿರಿ ಎಂದೂ ಕುಂದುತ್ತಿರಲಿಲ್ಲ. ಈ ನಾಡೆಂಬ ಕಲ್ಪವೃಕ್ಷದ ಕೋಳೂರು ಹಣ್ಣುಬಿಟ್ಟ ಟೊಂಗೆಯಾಗಿತ್ತು. ತೆನೆ ಮಾಗಿನಿಂದ ತುಂಬಿದ ಜೋಳದ ಹೊಲ, ಪೈರಿಗೆ ಎರಗುವ ಗಿಳಿಗಳು ಅವುಗಳನ್ನು ಓಡಿಸುವ ಹೆಣ್ಣು ಮಕ್ಕಳನ್ನು "ಧವಳೇಕ್ಷಣೆಯರೆಂದು" ಮುಂತಾಗಿ ಬಣ್ಣಿಸಿದ್ದು ಸುಂದರವಾಗಿದೆ.

*ಕಂ॥ ಬೆಳೆಗೆಯ್ಯಿಂ ಪೊಂಗಣಿಯಿಂ*
*ಫಲತರುವಿಂದೊಳ್ಪಯಂಗಳಿಂ ಕುಸುಮರ ಬಾ*
*ನಿಳಸಿಂ ಪಗರೆಯ ಪರಿಯಿಂ*
*ತಳರದ ಸಿರಿ ಬಲ್ಲಕುಂದೆ ನಾಳ್ಕೆಸೆದಿರ್ಕ್ಕುಂ*
*ಭೀಮನೃಪ ರಾಚಮಲ್ಲ*
*ತ್ರ್ಗಾ ಮುತ್ಸವದಿಂ ಧರಿತ್ರಿಯಿಂ ಪಾಳಿಸುತುಂ*
*ಕ್ಷೇಮದಿನಿರೆ ಜಗಮೆಲ್ಲಂ*
*ಶ್ರೀಮಹಿಮಾಸ್ಪದಕೆ ತಾಂಎ ನೆಲೆಯಾಗಿರ್ಪ್ಪರ್*
*ಸುರಕುಂಜದಂತಿರಲೊಪ್ಪು*
*ತ್ತಿರುಹುದು ತಾಂ ಬಲ್ಲಕುಂದೆ ನಾಡದರೊಳ್ವಿ*
*ಸ್ತರದಿಂ ಪಣ್ತೊಳುಗೊಂಬೆನೆ*
*ವರಸಸ್ಯಸಮೃದ್ಧಫಳದಿ ಕೋಳೂರೆಸೆಗುಂ*
*ಉ.ಮಾ॥ ಬಾಳೆ ಸುನಿಂಬೆ ಮಾದುಫಳಮೀಳೆ ಬೆಡಂಗೆಸಿಸಿರ್ದ್ದ ಮಾವು ಕಂ*
*ಚಿಳೆ ಕವುಂಗು ತೆಂಗು ಪಲಸುಬ್ಬಿದ ಕಬ್ಬಿನ ತೋಂಟಮಂಗಜಂ*
*ಗಾಳಯಮಪ್ಪ ತಾವರೆಗೊಳಂ ಕೆಱೆ ಬಾವಿಗಳಿಂ ಬಹಿರ್ವ್ವನಂ*
*ಲೀಲೆಯನುಂಟುಮಾಡುವುದು ನೋಳ್ಪರ ಚಿತ್ತದೊಳುವ ಕಾಲಮುಂ*

*ಕಂ॥ ಬೆಳೆದು ಫಳಭರದಿನೆಱಗಿ*
*ರ್ದ್ದೆಳೆ ಜೋಳದ ಕೆಯ್ಗಳಂ ಮನೋಹರಿ ಕಾಂತಾ*
*ಕುಳಮೆಳಸುವ ಗಿಳಿ ಸೋವ*
*ಬಳಲುಮುಡಿ ಬೆನ್ನನಲೆಯೆ ಧವಳೇಕ್ಷಣೆಯರ್*

ಕುರುಗೋಡು ಊರ ವರ್ಣನೆಯನ್ನು ಮಾಡುವ ಅಲ್ಲಿಯ ಶಾಸನ ಈ ಊರು ಹರದರ (ವ್ಯಾಪಾರಿಗಳು) ಪೇಟೆ, ಬ್ರಾಹ್ಮಣರ ಕೇರಿ, ಸೂಳೆಗೇರಿಗಳನ್ನು ಬಣ್ಣಿಸುತ್ತದೆ.

*ಕಂ॥ ಆ ನಾಳ್ಗೆ ರಾಜಧಾನಿ ಧ*
*ರಾನಾರೀ ಹಾರಲುಳಿತನಾಯಕಮಣಿವೋ*
*ಲ್ನಾನಾರತ್ನಾಕೀರ್ಣ್ಣನ*
*ಗಾನಿಕದ ಬಳಸಿನಿಂದ ಕುಱುಗೋಡೆಸಗು*

*ಅಲ್ಲಲ್ಲಿಗೆ ತಿಳಿಗೊಳನುಂ*

*ಮಲ್ಲಿಗೆಯುಂ ಮಾಧವೀಲತಾಮಣ್ಣಪಮುಂ*

*ಪಲ್ಲ ವಿತಚೂತವನಮುಂ*

*ಸಲ್ಲಿಲಿತಂ ನೋಡಲೆತ್ತಲುಂ ಪೊಱವೊಳಲೊಳ್*

**ವ್ಯಾಪಾರಿಗಳ ಬೀದಿ**

*ಕಂ// ಧನದಿಂ ಧನದನಿನಗ್ಗಳ*

*ಮೆನಿಸುವ ಪರದರಿನಮೂಲ್ಯ ರತ್ನಂಗಳಿನ*

*ತ್ಯನುಪಮ ವಿಚಿತ್ರವಸ್ತ್ರಾ*

*ದ್ಯನೇಕದಿಂದೊಪ್ಪುಗುಂ ವಣಿಗ್ವಾಟಂಗಳ್*

**ಬ್ರಾಹ್ಮಣರ ಕೇರಿ**

*ಮ.ವಿ// ವಿವಿಧೋತ್ತುಂಗಲಸತ್ಸುಧಾವಳಸಂಕಾಶಾಚ್ಛಸುಚ್ಛಾಯೆಯಿಂ*

*ಭುವನಾಳಂಕೃತಮಪ್ಪ ದೇವಭವನಾನೀಕಂಗಳಿಂ ತರ್ಕ್ಕಶಾ*

*ಸ್ತ್ರವಿವಾದಂಗಳಿನುದ್ಧವೇದರವದಿಂದಂ ಹೋಮಧೂಮಂಗಳಿಂ*

*ದವನೀಶೋಭಿತಮಾಗಿ ಕಣ್ಗೊಳಿಸುಗುಂ ವಿಪ್ರೇಂದ್ರವಾಟಂಗಳು*

**ಸೂಳೆಗೇರಿ**

*ಕಂ // ಸ್ಮರರಾಜಧಾನಿಯೊ*

*ಸುರವನಿತಾಜನ್ಮಭೂಮಿಯೋ ಚೆಲ್ವಿಂಗಾ*

*ಗರಮೋ ಪೇಳೆಂಬಿನೆಗಂ*

*ಕರಮೆಸೆಗುಂ ಸೂಳೆಗೇರಿಗಳು ತತ್ಪುರದೊಳ್*

ಅಲ್ಲಿಯ ಕೋಟೆ ನಾನಾ ಎನ್ನುವ ರಾಜರನ್ನು ಹಣ್ಣು ಮಾಡುವಷ್ಟು ಬಲಿಷ್ಟವಾಗಿತ್ತು ಕಾಳಗ ಎಂದರೆ ಏಳುಮಡಿ ಹೆಚ್ಚುತ್ತಿತ್ತಂತೆ

*ಉ.ಮಾ // ಚೋಳನನಾಳುಮಾಡುವುದು ಗೂರ್ಜ್ಜರರಂ ಸೆಲೆ ತರ್ದ್ದಿಕುಂ ಕರಂ*

*ಲಾಳನನಾಳಿಮಾಡುವುದು ಪಾಂಡ್ಯನನಂಡಲೆಗುಂ ತೆಲುಂಗ ಭೂ*

*ಕಾಳೆಗಮೆಂದಡೇಳು ಮಡಿ ಪೆಚ್ಚುವುದಚ್ಚರಿಯಾರೊ ಕಾದುವರ್*

*ಇಂಥ ಊರಿನಲ್ಲಿ ಕುಡಿಯೊಕ್ಕಲ ಮಕ್ಕಳು ಧನದ ಧಾನ್ಯದ ಸೋಮ್ಮಿನ*

*ಸೊಕ್ಕಿನಿಂದ ನಮಗಾರು ಸರಿ ಎನ್ನುವಂಥ ಊರ್ಜಿತ ಸ್ಥಿತಿಯಲ್ಲಿದ್ದರು.*

*ಚಂ // ತಿಳಿಗೊಳದಿಂ ಮಡಲ್ತು ತಳಿತಾರಮೆಯಿಂ ನೆಜೆಪೂತು ಕಾಯ್ತು ಪ*

*ಣ್ತೆಳೆಗೆ ವಿಳಾಸಮಪ್ಪ ವನದಿಂ ಪಥಿಕರ್ಗ್ಗೆ ತೃಷಾಶ್ರಮಕ್ಷುಧಾ*

*ವಳಿಯನದಾಗಲೀಯವನಾವಾರ್ಗ್ಗವೆನಲ್ಕುಡು ರಯ್ಯಮಾಗಿ ಕ*

*ಣ್ಗೊಳಿಸುವ ಬಲ್ಲಕುಂದೆವೆಸರಿನ್ದೆಸೆವಾ ವಿಷಯಾಂತರಾಳದೊಳ್*

*ಬಳೆದು ಮಡಲ್ತ ಶಾಳಿವನದಿಂ ಬೆಳದಾಗ ಸಮನ್ತುಡುಂಕುತುಂ*

*ಗಿಳಿಗಳ ವಿಣ್ಡೆಸಿನ್ದೆಸೆವ ಕೆಯ್ವೊಲದಿಂ ಮುಗಿಲುದ್ದವಾಗಿ ಮೂ*

*ವಳಿಸಿದ ಕೋಟೆಯಿಂ ಧನದ ಧಾನ್ಯದ ಸೊಮ್ಮಿನ ಸೊಕ್ಕಿನಿಂದಮಾ*
*ರ್ಗ್ಗಳ ದೊರೆ ನಮ್ಮೊಳೆಂಬ ಕುಡಿಯೊಕ್ಕಲ ಮಕ್ಕಳಿನೂರ್ಗ್ಗಳೊಪ್ಪುಗುಂ*
*ಇಲ್ಲಿಯ ಕಲಿದೇವಸೆಟ್ಟಿ ಮುಂಮ್ಮುರಿದಂಡರಲ್ಲೇ ಪರಮ*

*ಧಾರ್ಮಿಕನು. ಮಹಾಶಿವಭಕ್ತರಾದ ಇವನ ಹೃದಯದಲ್ಲಿ ಮಹಾದೇವನೇ ನೆಲೆಸಿ* ಮನು ಪ್ರೇಕರವಾಗಿ ಕಲಿದೇವಸೆಟ್ಟಿಯನ್ನು ನಡೆಸುತ್ತಿದ್ದನೆಂಬ ಪ್ರತೀತಿ ಇತ್ತು. ಈ ಭಕ್ತನು ತನ್ನ ವ್ಯವಹಾರವನ್ನು ನೋಡುವ ದೃಷ್ಟಿಯನ್ನು ಶಾಸನ ಈ ರೀತಿ ಹೇಳುತ್ತದೆ.

*ಉ.ಮಾ. // ಸತ್ಯದ ಬಿತ್ತು ಸಾಹಸದ ಸಾಗರವೊಳ್ಗುದಗರಂ ಜನ*
*ಸ್ತುತ್ಯತೆಯೊಳ್ಪು ಧರ್ಮದ ತವರ್ಮ್ಮನೆ ಮಾಂತನದಿರ್ಕ್ಕೆದಾಣವೌ*
*ಚಿತ್ಯದ... ಜಸದ ಸಯ್ಪು ನೆಗಳ್ತೆಯ ಲೋಕದೇಳ್ಗೆಯೌ*
*ನ್ನತ್ಯದ ಗೊತ್ತೆನುತ್ತೆ ಧರೆ ಬಣ್ಣಿಪುದೀ ಕಲಿದೇವ ಸೆಟ್ಟಿಯಂ*

*ಕಂ// ಭಕ್ತಿಯ ಭಂಡ ಮೊದಲ್ ನಿಜ*
*ಭಕ್ತಿಯೆ ಕೋಟಾನುಕೋಟಿ ಲಾಭಂ ಶಿವಸ*
*ದ್ಭಕ್ತಿಯ ಬೆಳೆಸಿ...*
*ಭಕ್ತಂ ಕಲದೇವಸೆಟ್ಟಿ ನೆಗಳ್ದಂ ಧರೆಯೊಳ್*

ವ// ಆತನ ಹೃದಯಕಮಲದೊಳ್ ಮನಃ ಪ್ರೇರಕ ಮಹಾದೇವಂ ಜೀವನಾಗಿರ್ಪ್ಪನೆನ್ತೆನೆ

*ಚಿನ್ತಾಮಣಿಲಿಂಗಂ ಹೃದ*
*ಯಾನ್ತರದೊಳ್ನಿನ್ದು ಕಲ್ಲಿ ಸೆಟ್ಟಿಗೆ ದಯೆಂಯಿಂ*
*ದಿನ್ತು ನಡೆಯಿನ್ತು ನುಡಿಯೆಂ*
*ದಿನ್ತು ಸದಾಶಿಕ್ಷಿಸುತ್ತೆ ರಕ್ಷಿಸುತ್ತಿರ್ಪ್ಪಂ*

*ಕಂ// ಕಟ್ಟಿಸಿದ ಕೆಱೆ ಮನೋಮುದ*
*ದಿಟ್ಟಾರವೆ ಪಸಿಯಲೀಯದಿಕ್ಕುವ ಸತ್ರ*
*ಬಿಟ್ಟ ಬೆಳೆಗೆಯ್ಗುಳೆಱೆವಱ*
*ವಟ್ಟಿಗೆ ಕಲಿದೇವಸೆಟ್ಟಿ ಮಾಡಿದ ಧರ್ಮಂ*

ಮುಂಮ್ಮುರಿದಂಡಗಳು ಈ ಊರ ಹಿರಿಮೆಯನ್ನು ಅತ್ಯಂತ ಪ್ರಖ್ಯಾತರಾಗಿದ್ದರು. ಇದು ಅಯ್ಯಾವಳೆ (ಐಹೊಳೆ)ಯಿಂದ ಎರಡನೆಯದಾಗಿ ಎಣಿಸಲ್ಪಟ್ಟಿತ್ತು. ಇವರ ಗುಣ ಪಾಂಡಿತ್ಯಗಳಲ್ಲಿ ಶ್ರೇಷ್ಠರು ಮಾತ್ರವಲ್ಲದೆ ತೋಟಿ ಕದನ ಎಂದರೆ ಕೋಟೆ ಲಾಭ ಎಂದು ತಿಳಿದಿದ್ದರು. ಇವರನ್ನು ಕುರಿತು ಕವಿ ಈ ರೀತಿ ವರ್ಣಿಸಿದ್ದಾನೆ.

*ರಗಳೆ// ಸ್ವಸ್ತಿ ಗವರೇಶಪದಪದ್ಮ ಷಟ್ಚರಣರುಂ*
*ವಿಸ್ತೀರ್ಣ್ಣವಸ್ತುಗುಣ ವಿನಿಹಿತಾಚರಣರುಂ*
*ಪಂಚಶತವೀರಶಾಸನಗುಣೋದ್ಧರಣರುಂ*
*ಸಂಚಿತಮಸ್ತಧರ್ಮ್ಮೈಕನಿಸ್ತರಣರುಂ*
*ಬ್ಯವಹಾರನಯವಿನಯ ವಿಜ್ಞಾನವಿದ್ಯರುಂ*

*ನವರತ್ನವಾಹನಪರೀಕ್ಷಾನವದ್ಯರುಂ*
*ತೋಟೆಯೆಂದಡೆ ಕೋಟಿಲಾಭವೆಂದುಲಿವರುಂ*
*ಆಟಂದಬವರಕ್ಕೆ ನಾಟಕಂ ನಲಿವರುಂ*
*ಅಯ್ಯಾವೊಳೆಯ ತಳದಿನಿರುವೆ ನೇರ್ಗ್ಗೀಜಿದೆನಿಪ*
*ರಯ್ಯಾ ಮಾದ್ವಾರಾವತೀಪುರಕೆ ಕುಱುವೆನಿಪ*
*ಕುಱುಗೋಡು ತಳದೊಳಗೆ ತಳರದಯ್ಯೂರ್ವ್ವರುಂ*
*ನೆಜೆನೋಪ್ಪ್ವಡವರೊಳಗೆ ಪಂಗೆಗಂಜರೊರ್ವ್ವರುಂ*

ಮೇಲಿನ ಕೆಲವು ಶಾಸನಗಳ ವರ್ಣನೆಯಿಂದ ಇಲ್ಲಿಯ ಕವಿಗಳ ಪಾಂಡಿತ್ಯ ಸ್ಪಷ್ಟವಾಗುತ್ತದೆ. ಆದರೆ ಇಲ್ಲಿಯ ಶಾಸನಗಳು ಅವುಗಳನ್ನು ಬರೆದ ಮತ್ತು ಕಂಡರಿಸಿದ ವ್ಯಕ್ತಿಗಳ ಹೆಸರನ್ನೊಳಗೊಂಡಿಲ್ಲ. ಪಾಂಡಿತ್ಯ ಮತ್ತು ಕಲಾ ಚಾತುರ್ಯವನ್ನು ಹೊಂದಿದ ಇವರು ತಮ್ಮ ಹೆಸರು ಗೌಣಗೊಳಿಸಿ ಪಾಂಡಿತ್ಯ ಪ್ರಭಾವವನ್ನು ಮೆರೆದಿದ್ದು ಆಶ್ಚರ್ಯವನ್ನುಂಟು ಮಾಡುತ್ತದೆ.

ಕುರುಗೋಡು ಶಾಸನಗಳನ್ನು ಚಾರಿತ್ರಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನದಿಂದ ಅಧ್ಯಯನಕ್ಕೊಳಪಡಿಸಿದಾಗ ಅನೇಕ ವಿಷಯಗಳಲ್ಲಿ ಪ್ರಾವಿಣ್ಯತೆ ಪಡೆದ ಈ ಗ್ರಾಮದ ಹಲವು ಮಗ್ಗುಲಗಳಲ್ಲಿ ತಿರುವು ಪಡೆದುಕೊಂಡಿದೆ. ಕರ್ನಾಟಕದ ಚಾರಿತ್ರಿಕ ಅಧ್ಯಯನದಲ್ಲಿ ವಿಭಿನ್ನ ಆಕರಗಳನ್ನೊಳಗೊಂಡ ಕುರುಗೋಡು ಒಂದು ಅಪರೂಪದ ಕ್ಷೇತ್ರವಾಗಿ ಕಂಡುಬರುತ್ತದೆ.

[1] ಅದೆ, IX-i, ೩೨೨, ೧೧೯೫, ಓರವಾಯಿ (ಬಳ್ಳಾರಿ ತಾ.)
[2] ಅದೆ, IX-i, ೯೧, ೧೦೩೬, ಓರವಾಯಿ (ಬಳ್ಳಾರಿ ತಾ.)
[3] [4] ಎ.ಇ., XIV, ಪು.೨೬೫
[5] ಎ.ಇ., XIV. ಪು. ೨೭೯
[6] ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ, ಭಾಗ ೧, (ಸಂ) ಆರ್.ಸಿ.ಹಿರೇಮಠ ಪು. ೨೪೭. ೨೪೯
[7] ಎ.ಇ., XIV. ಪು. ೨೬೫
[8] ಅದೆ
[9]

# ೪. ಶಾಸನಗಳು (೩)

**ಕುರುಗೋಡು ಶಾಸನಗಳು**

**೧. ಗುಡ್ಡದಲ್ಲಿರುವ ಕತ್ತೆ ಬಂಡೆಯ ಮೇಲೆ**

೨. ಸ್ವಸ್ತಿಶ್ರೀ (||*) ಸತ್ಯಾಶ್ರಯದತ್ತಿಯ ಪಡೆದ ಕುಱು

೩. ಂಗೋಡ ವ್ಯ(ವ)ಸ್ಥೆ ಎನ್ತೆನ್ದೊಡೆ ಪದಿನೆಣ್ಬು ಗೇಣ ೧ಲ

೩. ಕೋಲು ಪೊನ್ನು ನವಿಲಪೊನ್ನು ಈ ದಣ್ಣ...

೪. ದಾತ ಕವಿಲೆಯುಮ ನಾ

೫. ರಣಾಸಿಯಲು ಬ್ರಾಹ್ಮಣರುಮನಱಿದಾತ (॥)

**೨. ಕಲ್ಲೇಶ್ವರ ದೇವಾಲಯದ ಮುಂದಿನ ಮಂಟಪದಲ್ಲಿ ದಕ್ಷಿಣ ಭಾಗದಲ್ಲಿ ಶಾಸನದ ಮುಂಭಾಗ**

೧. ಶ್ರೀ ಕಲಿದೇವ (॥*) ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ । ತ್ರೈಳೋಕ್ಯನಗರಾ

೨. ರಂಭಮೂಲಸ್ತಂಭಾಶಯ ಶಂಭವೇ ॥ ಶ್ರೀರಾಮಾರಮಣಪ್ರಣುತಮಹಿ

೩. ಮಂ ಬೃಂದಾರಕೋದಾರಬೃನ್ದಾರಾಧ್ಯಂ ತ್ರಿದಶಾಧಿನಾಥನಗಜಾಚಂಚತ್ಕುಚಾಲೋಲ ಕಾಶ್ಮೀರೋರಸ್ಥಳ

೪. ನಬ್ಜಸಂಭವನತಂ ತ್ರೈಳೋಕ್ಯನಿಸ್ತಾರವಿಸ್ತಾರಂ ಶ್ರೀಕಲಿದೇವನೊಲ್ದು ನಮಗೀಗಿಷ್ಟಾರ್ತ್ಥ ಸಂಸಿದ್ಧಿಯಂ ॥ವ॥ ಅನ್ತು ಜಗತ್ಕರ್ತ್ತ

೫. ನೆನಿಸಿದ ಮಹಾದೇವನೆಂದುದ್ಭಾವಿತಮಾದಿಳಾವನಿತೆಗೆ ಕಾಂ(ಚೀ) ಮುದ್ರೆಯಂತೆ ಚಕ್ರಮೆನಿಸಿದ ಸಮುದ್ರಮೆನ್ತೆನೆ ॥

೬. ವೃ॥ ಮದವ (ಂ) ನ್ನೀರೇಭನೀರಾಶ್ವಕಕರಿಮಕರೋಚ್ಚಂಡಮಂಡೂಕುಗಂಡೂ (ಷದ) ನಾನಾನಚ್ರಚಕ್ರಕ್ರಕ

೭. ಚ ಕಮಠಲೋಠತ್ಸಪಾಠೀನರಾಜೀವಿದಿ ತಕ್ಷುದ್ರೋದರಾದಿಪ್ರಬಳಜಳಚರಾನೀಕ ಸಂಕ್ಷೋಭ

೮. ಪುಚ್ಛಚ್ಛದವಾತಾಘಾತಭೂತೋದ್ವಹಳಲಹರಿಕಾಸ್ಫಾರಭದ್ರಂ ಸಮುದ್ರಂ ॥ವ॥ ಶ್ರೀ ಮಜ್ಜಂಬೂದ್ವೀಪ

೯. ದೊಳ್ ಭರತಮಹೀಕಾನ್ತೆಯ ಕುಂತಳದಂತೆಸವುತಿರ್ದ್ದ ಕುಂತಳದೇಶದ ತುಂಗಭದ್ರಾ ನದಿಯಿತೆಂಕಲ್ ॥ವೃ॥ ವ

೧೦. ನರುಹಷಂಡಂದಿ ಬೆಳೆದ ಕೆಯ್ವೊಲದಿಂ ಸಹಕಾರಸಾರಸತ್ವನಸ ಲವಂಗ [ಕೌ]ಂಗ ಲವಲೀತಿಳಕಪ್ರತ

೧೧. ಳಪ್ರವಾಳ ನೂತನಕರನಾಗಪೂಗ ಸಕಳರ್ದ್ಧಕನನ್ದನದಿನ್ದವೆಯ್ದೆ ತಾನೆ ನಲಿದು ಬಲ್ಲಕುನ್ದೆ ನಡುವಿಕ್ಕುತ ವೊಪ್ಪುಗು

೧೨. ವೆತ್ತ ನೋಪ್ಪ್ರಡಂ ॥ ಅಲ್ಲಿ ಪಟ್ಟಣಂ ಕುಱುಗೋಡುದುರ್ಗ್ಗಮೆಂತೆನೆ

೧೩. ವೃ॥ ಚೋಳನನಾಳುಮಾಡುವುದು ಗೂರ್ಜ್ಜರರಂ ಸಲೆ ತರ್ದ್ದಿಕುಂ ಕ

೧೪. ರಂ ಲಾಳನನಾಳಿಮಾಡುವುದು ಪಾಂಡ್ಯನನಂಡಲೆಗುಂ ತೆಲುಂಗಭೂಪಾಲನನೇಳಿದಿಕ್ಕೆಯನೆ ಮಾಡುವುದೀ ಕುಱುಗೋಡಕೋ

೧೫. ಟೆ ತಾಂ ಕಾಳೆಗವೆಂದಡೇಳುಮಡಿ ಪೆರ್ಚ್ಚುವುದಚ್ಚರಿ ಯಾರೂ ಕಾದುವರ್ ॥ಕಂ॥ ಆ ಪುರಮಂ ಪ್ರತಿಪಾಳಿಪ ಭೂಪಶಿ

೧೬. ಖಾಮಣಿ ಶಿವೈಕಚೂಡಾಮಣಿ ದಿಗ್ವ್ಯಾಪಿ ಯಶೋದರ್ಪ್ಪಮಣಿ ತಾಪಿತರಿಪು ರಾಚಮಲ್ಲನ ಪ್ರತಿಮಲ್ಲಂ ॥ವ॥ ಸ್ವ

೧೭. ಸ್ತಿ ಸಮಧಿಗತಪಂಚಮಹಾಶಬ್ದ ಮಹಾಮಣ್ಡಳೇಸ್ವರನುಂ ಭೋಗಾವತೀಪುರ ವರಾಧೀಶ್ವರನುಂ ಸಿತಗರಗ

೧೮. ಣ್ಡನುಂ ಸಿಂದಗೋವಿಂದನುಂ ಪಾತಾಳಚಕ್ರವರ್ತ್ತಿಯ ಶ್ರೀವೀರಕಲಿದೇವರ ಪಾದಾರಾಧಕನುಮೆನಿಸಿದ ರಾಚ

೧೯. ಮಲ್ಲದೇವನ ರಾಜ್ಯಮುತ್ತರೋತ್ತರವಾಗುತ್ತಿರಲು ತತ್ಪುರನಿವಾಸಿಗಳಪ್ಪ ಮುಂಮುರಿದಂಡಗಳ ಮಹಿಮೆ

೨೦. ಯೆನ್ತೆಂದೆಡೆ ॥ರಗಳೆ॥ ಸ್ವಸ್ತಿ ಗವಱೇಶ ಪದಪದ್ಮ ಷಟ್ಚರಣರುಂ । ವಿಸ್ತೀರ್ಣವಸ್ತುಗುಣ ವಿನಿಹಿತಾ ಚರಣರುಂ (।)

೧೧. ಪಂಚಶತ ವೀರಶಾಸನಗುಣೋದ್ಧರಣರುಂ । ಸಂಚಿತಮಸ್ತ ಧರ್ಮ್ಮೈಕನಿಸ್ತರ (ಗು)ಣರುಂ । ಬ್ಯವಹಾರನಯವಿ

೧೨. ನಯವಿಜ್ಞಾನವಿದ್ಯರುಂ । ನವರತ್ನವಾಹನಪರೀಕ್ಷಾನವದ್ಯರುಂ । ಶರಣೆಂದುಕಂಡರಂ। ಕರುಣದಿಂ ಕಾವರುಂ।

೧೩. ಬಿರುದಿಂಗೆ ಬೀಗುವರ ಹರಣವಂ ಸೋವರುಂ । ತೋಟಿಯೆಂದಡೆ ಕೋಟಿಲಾಭವೆಂದುಲಿವರುಂ ಆಟಂದಬವರಕ್ಕೆ ನಾ

೧೪. ಟಕಂ ನಲಿವರುಂ । ಅಯ್ಯಾವೊಳೆಯ ತಳದಿನಿದುವೆನೆರ್ಗ್ಗಿಱದೆನಿಪ॥ ರಯ್ಯಮಾದ್ವಾರಾವತೀ ಪುರಕೆ ಕುಱುವೆನಿಪ ।

೧೫. ಕುಱುಗೋಡತಳದೊಳಗೆತಳರದಯ್ನೂರ್ವ್ವರುಂ (।) ನೆಱೆನೋರ್ಪ್ಪಡವರೊಳಗೆ ಪಗೆಗಂಡರೊರ್ವರುಂ ॥ವ॥ ಆ ಮು (ಂ)ಮ್ಮುರಿ

೧೬. ದಂಡಂಗಳೊಳ್ ಮಹಾವಿನಹಾಳ ಕಲ್ಲಿಸೆಟ್ಟಿಯನ್ವಯವೆನ್ತೆನೆ ॥ಕಂ॥ ಎಳೆಯೊಳಗೆ ಸಿಂದವಾಡಿಗೆ ತಿಲಕದವೊಲೆಸೆ

೧೭. ವ ಮುದಿಯನೂರೊಳ್ಪಂಪಗ್ಗಳದ ಬಣಂಜಿಗನೆನೆ ಮೂಗುಳಬುದ್ಧಿಯಕೇತಿಸೆಟ್ಟಿಯ ಪೊಗಳದರಾರ್ ॥ವೃ॥ ಮೂ

೧೮. ಗುಳಬುದ್ಧಿಯೆಂಬ ಪೆಸರಂ ಪಡದೊಪ್ಪುವ ಕೇತಿಸೆಟ್ಟಿಗಂ ಭಾಗಿನಿ ಚಂದಿಕಬ್ಬೆಗೊಗೆದಿರ್ದ್ದ ಸುತರ್ಗ್ಗಣೆಯಾರು ಲೋಕದೊ

೧೯. ಳ್ ನಾಗಮಸೆಟ್ಟಿಗಂ ನೆಗಳ್ದ ಮಾಧವಸೆಟ್ಟಿಗೆ ಬೇಡಿಸೆಟ್ಟಿಗುದ್ಯೋಗದ ರುದ್ರಸೆಟ್ಟಿಗೆ ನೆಗಳ್ತೆ ಪೂಗಳ್ತೆಯ ಚೀಲಿಸೆಟ್ಟಿಗಂ ॥

೨೦. ಕಂ॥ ಅಂತೆನಿಪ ನಾಗಿಸೆಟ್ಟಿಗೆ ಕಾಂತೆಪತಿಬ್ರತೆಗೆ ಮಾಕಣಬ್ಬೆಗೆ ಸುತರತ್ಯಂತಗುಣಿ ಮಾದಿಸೆಟ್ಟಿಯುಮಂತಾ

೨೧. ಕಲಿದೇವಸೆಟ್ಟಿಯುಂ ಪೆಸೆರ್ವ್ವಡೆದರ್ । ಅಂತಿರ್ವ್ವರೊಳಗೆ ಬಿರುದಬಣಂಜಿಗರಯ್ನೂರ್ವ್ವರ ಪುತ್ರಂ ಕಲ್ಲಿಸೆಟ್ಟಿ ಗೋತ್ರಪವಿತ್ರಂ ।

೨೨. ಹರಿಯಳದಪುರದ ಕಲಿದೇವರ ವರಪುತ್ರಂ ಪರಾಂಗನಾಜನಪುತ್ರಂ ॥ವೃ॥ ಹುಸಿಯದ ಮತು ಕೊಟ್ಟಳಿಪ

೨೩. ದಾರ್ಪ್ಪ ಕಳಂಕದೊಳ್ಗುಂದದೊಳ್ಜಸಂ । ಕುಸಿಯದ ಧೈರ್ಯ್ಯಂ ಪೋಱಗಿಡದೊಳ್ಗುಣ ವಂಜದ ಬೀರವೆಗ್ಗಿನಿಂ ಮುಸುಕದ

೨೪. ರೂಪು(ದ)ಣವಣವೆಳ್ಳನಿತಿಲ್ಲದೆ ಶಂಭುಭಕ್ತಿ ಭಾವಿಸೆ ಕಲಿದೇವರೀಯಲಿವು ಸಂದಪುವೀ ಕಲಿದೇವ ಸೆಟ್ಟಿದೊಳ್ ॥

೨೫. ಕಂ ॥ ಕಲಿದೇವಸೆಟ್ಟಿಯುತ್ತಮಕುಲವನಿತೆ ಕುಲೀನೆ ಪತಿಹಿತಾಳಂಕ್ರಿತೆ ತಾಂ ಕಲಿದೇವಪದಾರಾಧಕಿ ಸಲೆ ಕೇ

೨೬. ತಾಂಬಿಕೆಯೆ ಧನ್ಯೆ ಧರಣೀತಳದೊಳ್ ॥ ಕಲಿದೇವಸೆಟ್ಟಿಗಂ ಕೇತಲೆಗುಂ ಮಕ್ಕಳ್ ವಿನೂತ ವಾಗಾಂಬಿಕೆ ಯಾಚಲೆ ಸ

೨೭. ಕಲಗುಣನಿಧಾನಂ ಕಲಿದೇವನೆನಲ್ಕೆ ಧನ್ಯರಾರಿವರಿದಂದಂ ॥ವೃ॥ ಸತ್ಯದ ಬಿತ್ತು ಸಾಹಸದ ಸಾಗರವೊಳ್ಗುಣ

೨೮. ದಾಗರಂ ಜನಸ್ತುತ್ಯತೆಯೊಳ್ಪು ಧರ್ಮ್ಮದ ತವರ್ಮ್ಮನೆ । ಮಾಂತನದಿರ್ಕ್ಕೆದಾಣ ವೌಚಿತ್ಯದ... ಜಸದ ಸಯ್ಪು ನೆ

೨೯. ಗಳ್ತೆಯ ಲೊಕದೇಳ್ಗೆಯೌನ್ನತ್ಯದೆ ಗೊತ್ತೆನುತ್ತೆ ಧರೆ ಬಣ್ಣಿಪುದೀ ಕಲಿದೇವಸೆಟ್ಟಿಯಂ ॥ ಮತ್ತಮಾತನಬ್ಯವಸಾಯ

೪೦. ಬ್ಯವಹಾರವೆನ್ತೆನೆ ॥ಕಂ॥ ಭಕ್ತಿಯ ಭಂಡ ಮೊದಲ್ ನಿಜಭಕ್ತಿಯೆ ಕೋಟಾನು ಕೋಟಿಲಾಭಂ ಶಿವಸದ್ಭಕ್ತಿಯ ಬೆಳಸಿ

೪೧...... ಭಕ್ತ ಕಲಿದೇವಸೆಟ್ಟಿ ನೆಗಳ್ದಂ ಧರೆಯೊಳ್ ॥ವ॥ ಆತನ ಹೃದಯಕಮಳದೊಳ್ ಮನಃಪ್ರೇರಕ ಮಹಾದೇವಂ ಜೀವ

೪೨. ನಾಗಿರ್ಪ್ಪನೆನ್ತೆನೆ ॥ಕಂ॥ ಚಿನ್ತಾಮಣಿಲಿಂಗು ಹೃದಯಾನ್ತರದೊಳ್ನಿನ್ದು ಕಲ್ಲಿಸೆಟ್ಟಿಗೆ ದಯೆಯಿಂದಿನ್ತು ನಡೆಯಿನ್ತು ನುಡಿ

೪೩. ಯೆಂದಿಂತು ಸದಾ ಶಿಕ್ಷಿಸುತ್ತೆ ರಕ್ಷಿಸುತ್ತಿರ್ಪ್ಪಂ ॥ವ॥ ಅಂತು ನಿಜಾಂತರಂಗದೊಳಿರ್ದ್ದು ಭಕ್ತಿಯ್ಮಂ ಶಕ್ತಿಯ್ಮಂಕು

೪೪. ಡೆ ಬಹಿರಂಗಕೆ ವರಪ್ರಸಾದಮ್ಬಳೆದು ಕುಱುಗೋಡ ತೆಂಕಣ ಭಾಗದಲ್ ಮಾಟಕೂಟಪ್ರಸಾದ ದೇಗು

**ಶಾಸನದ ಹಿಂಭಾಗ**

೪೫. ಲಮಂ ಮಾಡಿಸಿ ತಂನಿಷ್ಟವಪ್ಪ ||ಕಂ|| ಕಲಿದೇವರ್ಗ್ಗೆ ಶಿವೋತ್ಸವದೊಲವಿಂದೆ ಕಳಾಪ್ರ

೪೬. ತಿಷ್ಠೆಯಂ ಮಾಡಿದ ದೇಗುಲಮುಮನೆತ್ತಿಸಿದೀ ನಿರ್ಮ್ಮಳಧಾರ್ಮ್ಮಿಕನೆನಿಪ ಕಲ್ಲಿಸೆಟ್ಟಿ ಕೃತಾರ್ತ್ಥಂ ||

೪೭. ಭೂತೇಶನ ಪಡುವಣ ವಿಖ್ಯಾತಿಯ ಕೆಱೆ ಬಡಗಲೆಸೆವ ತೀರ್ತ್ಥಂ ತೆಂಕಲು ಶೀತಳಭಾವಿಯ

೪೮. ನಗಳಿಸಿದಾತಂ ಕಲಿದೇವನಸೆಟ್ಟಿ ಧನ್ಯಂ ಜಗದೊಳ್ ||ಅನ್ತು|| ಕಟ್ಟಿಸಿದ ಕೆಱೆ ಮನೋಮುದ ದಿಟ್ಟಾರವೆ ಪ

೪೯. ಸಿಯಲೀಯದಿಕ್ಕುವ ಸತ್ರ ಬಿಟ್ಟ ಬೆಳಗೆಯ್ಗಳೆಱೆವಱವಟ್ಟಿಗೆ ಕಲಿದೇವಸೆಟ್ಟಿ ಮಾಡಿದ ಧರ್ಮ್ಮಂ ||

೫೦. ವ||ಅನ್ತು ಧರ್ಮ್ಮಮೂರ್ಜ್ಜಿತವಾಗುತ್ತಿರಲ್ ಸಮಸ್ತಭುವನಾಶ್ರಯಂ ಪೃಥ್ವೀವಲ್ಲಭಂ ಮಹಾರಾಜಾ

೫೧. ಧಿರಾಜಂ ಪರಮೇಶ್ವರಂ ಪರಮಭಟ್ಟಾರಕಂ ಕಳಚುರ್ಯ್ಯಕುಳತಿಳಕಂ ಭುಜಬಳಮ

೫೨. ಲ್ಲಂ ಕುಂತಳದೇಶದ ಚಕ್ರವರ್ತ್ತಿ ರಾಯಮುರಾರಿ ಸೋವಿದೇವನ ರಾಜ್ಯಂ ಪ್ರವರ್ತ್ತಿಸುತ್ತ

೫೩. ಮಿರಲು ಸಕವರ್ಷದ ೧೦೯೭ ನೆಯ ಮನುಮಥಸಂವತ್ಸರದ ಪುಷ್ಯ

೫೪. ದಮಾವಾಸ್ಯೆ ಸೋಮವಾರ ಸೂರ್ಯಗ್ರಹಣ ಉತ್ತರಾಯಣಸಂಕ್ರಮ

೫೫. ಣದ ಪುಣ್ಯತಿಥಿಯಲು ಶ್ರೀಮನ್ಮಹಮಂಡಳೇಶ್ವರಂ ಪರಮಮಾಹೇಶ್ವರಂ ರಾಜಮಲ್ಲದೇವರು ಕಲ್ಲಿಸೆ

೫೬. ಟ್ಟಿಯಿಂ ಸುಪ್ರತಿಷ್ಠಿತಮಾದೀ ಶ್ರೀಕಲಿದೇವರ್ಗ್ಗೆ ಭಕ್ತಿಪೂರ್ವ್ವಕವಾಗಿಯಲ್ಲಿಯ ಸ್ಥಾನಾಚಾರ್ಯ್ಯ (||)

೫೭. ರು ||ಕಂ|| ಶಿವಶಕ್ತಿಸುತಂ ಕಲಿದೇವರಾಂಘ್ರಿಸರೋಜ ಪೂಜಕಂ ಸಕಲಗುಣೋದ್ಭವ ಕಾಳಾಮುಖತಿ

೫೮. ಳಕಂ ಭುವನಸ್ತುತನೆನಿಪನಮೃತರಾಶಿಮುನೀಂದ್ರ || ಅಮೃತಗುಣನಮೃತಮಾನಸ ನಮೃತೋತ್ತ

೫೯. ಮವಾಣಿಯಮೃತಹಸ್ತಾಂಬುಜನನ್ತಮ್ರಿತಮತಿಯಮೃತಮಹಿಮಾಪ್ರಮಿತನೆನಿಪ್ಪಮೃತ ರಾಶಿಮುನಿ ಕ್ರಿ

೬೦. ತಕೃತ್ಯಂ ||ವೃ|| ಅನ್ತೆನಿಸಿದಮೃತರಾಶಿದೇವರವರ ಜೀಯರ ಕಾಲಂ ಕರ್ಚ್ಚಿ ಧಾರಾಪೂರ್ವ್ವಕಂ ಕಲ್ಲಿಸೆಟ್ಟಿ ಮು

೬೧. ಖ್ಯವಾಗಿ ಕುಱುಗೋಡ ಬಡಗಣರಳಿಯಕೆಱೆಯಿಂ ಮೂಡಲ್ ನೀರಹಳ್ಳದಿಂ ಗವಱೇ ರೇಶ್ವರದ ಭೋಗದ ಸ್ಥ

೬೨. ಳದಂ ತೆಂಕಲ್ ಪರಂಜ್ಯೋತಿದೇವರ ಕೆಯ್ಯಿಂ ಪಡುವಲ್ ಕಲಿದೇವರಂಗಭೋಗ ರಂಗಭೋಗ ಖಂಡಸ್ಫುಟಿ

೬೩. ತ ಜೀರ್ಣ್ನೋದ್ಧಾರವಿನ್ತಿನಿತಕ್ಕಂ ಬಿಟ್ಟ ತಕ್ಕಿಲಮತ್ತರ್ ೨ ಆ ಸ್ಥಳದ ನಡುವೆ ಸಂಕಿಮೆಯಂಗೆ ಕಂಬ ೨೨೫||

೬೪. ದೇವರ ಹಾಡುವಾತಂಗೆ ಕಂಬ ೨೨೫ ಶ್ರೀಮನ್ಮ ಹಾಮಣ್ಡಳೇಶ್ವರಂ ಬಳ್ಳಾರೆಯಜ್ಜರಸರು ಹಟ್ಟ

೬೫. ಣದ ಹೊಲದೊಳಗೆ ಸಿಂಗದೇವಿಯ ದಾರಿಯಿಂ ಮೂಡಲ್ ಗೌಡೊಕ್ಕಲ ದೇವಗೆಯ್ಯಿಂ ಬಡಗಲ್ ಕೊಪ್ಪೇಶ್ವರದ

೬೬. ಕೆಯ್ಯಿಂ ತೆಂಕಲ್ ಅಱವಟಿಗೆ ಸತ್ರವಂಬಲಿಯಿನಿತಕ್ಕಂ ಬಿಟ್ಟ ತಕ್ಕಿಲಮತ್ತರ್ ೧ ಚೈತ್ರಪವಿತ್ರ ಅತಿಥಿ

೬೭. ಯಭ್ಯಾಗತ ತಪೋಧನರ ಗ್ರಾಸಕ್ಕೆ ಬಿಟ್ಟ ತಕ್ಕಿಲಮತ್ತರ್ ೧ । ಅಲ್ಲಿಂ ಪಡುವಲು ಸಮಸ್ತ ಪ್ರಾಣಿಗಳ್ಗೆ ಬಿಟ್ಟ

೬೮. ಧರ್ಮ್ಮವಣ್ಣಿಗೆಗೆ ಕಂಬ ೪೫೦ ಮತ್ತಮಾ ಹೊಲದ ದೇವರಂಗಭೋಗನೈವೇದ್ಯಕ್ಕೆ ಕುಱುಗೋಡ ಹೊಲವೇರೆಯಿಂ ಮೂ

೬೯. ಡಣ ಕಿಸುಮತ್ತರ್ ೨ ಕುಱುಗೋಡ ತೆಂಕಣ ಹೊದೋಂಟ ೧ ದೇವರ ಪುರದೊಳಗೆ ನಂದಾ ದೀವಿಗೆಗೆ ಗಾಣ ೨ ಮ

೭೦. ತ್ತಂ ನಖರಂಗಳು ಹೊಂಗಳದಲ್ಲಿ ಕೊಟ್ಟಲ್ಲಿ ಭತ್ತ ಸೊಳಸೆ ೨ ಕೊಂಡಲ್ಲಿ ಸೊಳೆಸೆ ೨ ಮುಂಮುರಿ ದಂಡಗಳಯ್ಸಂ

೭೧. ಬರದಲ್ಲಿ ದೇವರ್ಗ್ಗೆ ಹೊಂಗೆ ಕೊಟ್ಟಲ್ಲಿ ಕಾಣಿ ೧ ಕೊಂಡಲ್ಲಿ ಕಾಣಿ ೧ ತಂಬುಲಿಗ ಸಾಸಿರ್ವ್ವರು ದೇವರ್ಗ್ಗೆ ಹೇಱಿಂ

೭೨. ಗೆಲೆ ೧೦೦ ಹೊಱಗೆಲೆ ೫೦ ಸ್ಥಾನಾಚಾರ್ಯರಿಬ್ಬರುಂ ಸೀತಾಳಗದ್ದುಗೆಗೆ ಕೊಡ ೨೦ ವಸುಧಾರೆ ೨

೭೩. ಮಂ ನಡಸುವರ್ ಯಿಂತೀ ಧರ್ಮ್ಮವನರಸುಗಳುಂ ಮುಮ್ಮುರಿದಂಡಂಗಳುಂ ಪ್ರತಿಪಾಳಿಸುವರು

೭೪. ಅವರ್ಗ್ಗೆ ಗಂಗೆ ವಾರಣಾಸಿ ಕುರುಕ್ಷೇತ್ರ ದಿಬ್ಯತೀರ್ಥಂಗಳಲು ಸಾಸಿರ ಕಪಿಲೆಗಳಂ ಸಾಸಿರ ಬ್ರಾಹ್ಮಣ

೭೫. ರ್ಗ್ಗಂ ಸಾಸಿರತಪೋಧನರ್ಗ್ಗಳಂಕಾರಸಹಿತಂ ಕೊಟ್ಟ ಪುಣ್ಯದಫಳಂಗಳಕ್ಕು ॥ ಯಿನ್ತೀ ಧರ್ಮ್ಮಂಗಳಂ ಕಿ

೭೬ ಡಿಸಿದವರಿಗೆ ಗಂಗೆ ವಾರಣಾಸಿ ಕುರುಕ್ಷೇತ್ರ ಪ್ರಯಾಗೆಯಗ್ಘ್ಯತೀರ್ತ್ಥಂಗಳಲು ಸಾಸಿರ

೭೭. ಕಪಿಲೆಗಳಂ ಸಾಸಿರಬ್ರಾಹ್ಮಣರುಮಂ ಸಾಸಿರ ತಪೋಧನರುಮಂ ಕೊನ್ದ ಮಹಾಪಾತಂಕಗಳವರಿಗಕ್ಕು ॥

೭೮. ಮತ್ತಂ ನಾಲ್ಕುಂ ನಾಡುಗಳುಂ ನೆರೆದಾವನಾಡಲು ಹೇಱಿದಡಂ ಕೋಣ ೧೦ ಎತ್ತು ೧೦ ಎತ್ತೆ ೧೦ ಅನ್ತು ೩೦

೭೯. ಕ್ಕಂ ಹಾರಿಕಾಯ ಸುಂಕಮಂ ಶ್ರೀಕಲಿದೇವರಿಗೆಯಂಗಭೋಗ ಪೂಜೆಪುನಸ್ಕಾರಕ್ಕೆ ಮಾನ್ಯವಾಗಿ ಧ

೮೦. ರ್ಮ್ಮಕ್ಕೆ ಕೊಟ್ಟರ್ ॥ಶ್ಲೋಕ॥ ಸಾಮಾನ್ಯೋಯಂ ಧರ್ಮ್ಮಸೇತುರ್ನ್ನೃಪಾಣಾಂ ಕಾಲೇ ಕಾಲೇ ಪಾಲನೀಯೋ

೮೧. ಭವದ್ಭಿಃ । ಸರ್ವ್ವಾನೇತಾನ್ ಭಾವಿನಃ ಪಾರ್ತ್ಥಿವೇನ್ದ್ರಾನ್ ಭೂಯೋ ಭೂಯೋ ಯಾಚತೇ ರಾಮಚಂದ್ರಃ ॥ ಸ್ವದ

೮೨. ತ್ತಾಂ ಪರದತ್ತಾಂ ವಾ ಯೋ ಹರೇತಿ ವಸುನ್ಧರಾಂ ಷಷ್ಟಿರ್ವರ್ಷಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ [॥*]

ಸೌ.ಇ.ಇ IX, ಭಾಗ I, ನಂ. ೨೯೬

**೩. ಬಸವೇಶ್ವರ ದೇವಾಲಯದ ದಕ್ಷಿಣ ಭಾಗದಲ್ಲಿ**

**ಶಾಸನದ ಮುಂಭಾಗ**

೧. ಓಂ ನಮಶ್ಶಿವಾಯ (॥) ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ । ತ್ರೈಳೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ॥

೨. ಜಯಂತಿ ಭುವನಕರ್ತ್ತಾ ದುರ್ಧರಾಘೌಘಹರ್ತ್ತಾ ಸಕಲಸುರವರಿಷ್ಠಃ ಸನ್ತತೌದಾರ್ಯ್ಯನಿಷ್ಠಃ । ಪರಮಸುಖಸುಮೂರ್ತ್ತಿರ್ದ್ದೇವ

೩. ತಾಚಕ್ರವರ್ತ್ತಿಃ। ಇತಿ ಸುರವರಬ್ರಿಂದಸ್ತೋತ್ರಪಾತ್ರಂ ನಮಾಮಿ (॥*) ಶ್ರೀಮದಮನರೇನ್ದ್ರಯಕ್ಷ ಸ್ತೋಮಾರ್ಚ್ಚಿತಚರಣನವನಿವನವಹ್ನಿಮ

೪. ರುದ್ವ್ಯೋಮಾತ್ಮೇಂದ್ವಿನತನುವಿಂಗೀ ಮುಂಮುರಿದಣ್ಡದಿಷ್ಟಮಂ ಗವಟೇಶಂ ॥ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲ್ಲಭಂ ಮಹಾರಾಜಾಧಿರಾಜ

೫. ಕಳಚುರ್ಯ್ಯಕುಟಕಮಳಮಾರ್ತ್ತಣ್ಡಂ ಶ್ರೀಮತ್ಯಂಖವರ್ಮ್ಮದೇವಚಕ್ರವರ್ತ್ತಿ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನಮಾಚನ್ದ್ರಾ

೬. ರ್ಕ್ಕತಾರಂಬರಂ ಸಲುತ್ತಮಿರೆ ಕಲ್ಯಾಣಪುರದ ನೆಲೆವೀಡಿಯೊಳು ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರಲಿತ್ತಲು ॥ ಶ್ರೀಜಂ

೭. ಬೂದ್ವೀಪಲಕ್ಷ್ಮೀವದನ ತಿಳಕಮಿರ್ಪ್ಪಂತೆ ಚೆಲ್ವಾಗಿ ಲಕ್ಷ್ಮೀಭಾಜಂ ಶ್ರೀತುಂಗಭದ್ರಾಹ್ವಯ ಸುರನದಿಯಿನ್ತೆ (೦*) ಕ್ಕಲೊಪ್ಪುತ್ತಮಿರ್ಕ್ಕಂ ರಾ

೮. ಜೀವೋತ್ಕೀರ್ಣ್ಣಷಂಡಪ್ರತತಿಗಳಿನಶೋಕಾಮ್ರ ಪುನ್ನಾಗ ತಾಳೋರ್ವ್ವಿಜಾನೀಕಂಗಳಿಂ ಕಿಕ್ಕಿಱಿಗಿಱಿದು ಜಗತ್ಸೇವ್ಯ ಮತ್ಯನ್ತಭಬ್ಯತಿಳಿಗೊಳದಿಂ ಮಡಲ್ತು ತ

೯. ಳಿತಾರಮೆಯಿಂ ನೆಱೆ ಪೂತು ಕಾಯ್ತು ಪಣ್ತೆಳೆಗೆ ವಿಳಾಸಮಪ್ಪ ವನದಿಂ ಪಥಿಕರ್ಗ್ಗೆ ತೃಷಾಶ್ರಮ ಕ್ಷುಧಾರವಳಿಯನಂದಾಗಲೀಯವನಾವಾರ್ಗ್ಗವೆನಲ್ಕಡುರಂ

೧೦. ಯ್ಯಮಾಗಿ ಕಣ್ಗೊಳಿಸುವ ಬಲ್ಲಕುಂದೆವೆಸರಿನ್ದೆಸೆವಾ ಸೆವಾ ವಿಷಯಾನ್ತರಾಳದೊಳು ॥ ಬಳೆದು ಮಡಲ್ತ ಶಾಳಿವನದಿಂ ಬೆಳದಾಗಸಮನ್ತುಡುಂಕುತುಂ

೧೧. ಗಿಳಿಗಳ ಪಿಣ್ಡಿನಿನ್ದೆಸೆವ ಕೆಯ್ಯ್ಯಲದಿಂ ಮುಗಿಲುದ್ದವಾಗಿ ಮೂವಳಿಸಿದ ಕೋಟೆಯಿಂ ಧನದ ಧಾನ್ಯದ ಸೊಮ್ಮಿನ ಸೊಕ್ಕಿನಿನ್ದಮಾರ್ಗ್ಗಳದೊಮ್ಮ ನಮ್ಮೊ

೧೨. ಳೆಂಬ ಕುಡಿಯೊಕ್ಕಲ ಮಕ್ಕಳಿನೂರ್ಗ್ಗಳೊಪ್ಪುಗು ॥ ಆ ನಾಳ್ಗೆ ರಾಜಧಾನಿ ಧರಾನಾರೀಹಾರಲುಳಿತ ನಾಯಕಮಣಿವೋಲ್ನಾನಾರತ್ನಾಕೀರ್ಣ್ನ

೧೩. ನಗಾನೀಕದ ಬಳಸಿನಿಂದ ಕುರುಗೋಡೆಸಗು ॥ ಮತ್ತ ಮೆನ್ತಿರ್ದ್ದುದೆಂದೆಡೆ ॥ ಕುಲಗಿರಿಗಳ್ಗೆ ಮೇರುಗಿರಿಯಿರ್ಪ್ಪವೊಲಿರ್ದ್ದುದು ತಾಂ ನದೀನದಾವಳಿಗೆ

೧೪. ಪಯಃಪಯೋಧಿ ನೆಗಳ್ದಿರ್ಪ್ಪವೊಲಿರ್ದ್ದುದು ತಾರಕಾಸಮಾಕುಳತೆ ಹಿಮಾಂಶುಬಿಂಬಮೆ ಸದಿರ್ಪ್ಪವೊಲಿರ್ದ್ದುದಾ ವಸುನ್ಧರಾಲಲನೆಗೆ ವಕ್ತ್ರಪಂಕರುಹ

೧೫. ಮಿರ್ಪ್ಪವೊಲಿರ್ದುದು ನೋರ್ಪ್ಪಡಾ ಪುರ ॥ ಆ ಪುರದೆ ॥ ನಳನಳಿಸುತ್ತಮಿರ್ಪ್ಪ ಲತೆಯಿಂ ಪರಿಪಕ್ವಫಳಪ್ರಚಾರದಿಂ ಬಳಬಳ ಬಳ್ಕುವಾಂಬ್ರವನದಿನ್ದತಿನಿರ್ಮ್ಮ

೧೬. ಳ ಪದ್ಮಷಂಡದಿಂ ತಿಳಕ ತಮಾಳ ವಕುಳದ್ರುಮಲೋಧ್ರಲವಂಗಭೂರುಹಾವಳಿಗಳಿ ನೀಕ್ಷಿಪರ್ಗ್ಗತಿ ಮನೋಹರವಲ್ತೆ ಬಹಿಃಪುರಂ ಕರಂ। ಅಲ್ಲಲ್ಲಿಗೆ ತಿಳಿಗೊಳ

೧೭. ನುಂ ಮಲ್ಲಿಗೆಯುಂ ಮಾಧವೀಲತಾಮಣ್ಡಪಮುಂ ಪಲ್ಲವಿತಚೂತವನಮುಂ ಸಲ್ಲಲಿತಂ ನೋಡಲೆತ್ತಲುಂ ಪೊಱವೊಳಲೊಳ್ । ಅಂಚೆಗಳಿಂಚರಮುಂ ಸುತ್ತು ಚೆಲ್ವೆನಿ

೧೮. ಸಿರ್ದ ಗಂಧಶಾಲಿಗಳೇಂ ಮತ್ತಂ ಚಕ್ರವಾಕಹಂಸೀಸಂಚರದಿಂದೆಸೆವ ಬಹುತಟಾಕ ದಿನೆಸೆಗುಂ ॥ ಉರವಣಿಯಿಂದ ಬಂದ ಮಗಧಾಂಧ್ರಕಳಿಂಗ ಚಳುಕ್ಯ ಪಾಂಡ್ಯ ಗೂರ್ಜ್ಜರ

೧೯. ರೆನಿಪಗ್ಗದಣ್ಣಲೆಗಳೆನ್ನೊಳೆ ಭಂಗಮನಾಂತು ಪೋದರಾರ್ದೊರೆಯೆನಗೆಂಬಹಂ ಕೃತಿಯಿನುನ್ನತಿ ವೆತ್ತುದೆನಲ್ಕೆ ಪೆರ್ಚ್ಚಿಯಂಬರಮನದಾದಗಳ್ಳಿಱಿಗುಮೇವೊ

೨೦. ಗಳ್ವಂ ಕುಱುಗೋಡ ಕೋಟೆಯಂ । ಧನದಿಂ ಧನದನಿನಗ್ಗಳಮೆನಿಸುವ ಪರದರಿನಮೂಲ್ಯರತ್ನಂಗಳಿ ನತ್ಯನುಪಮವಿಚಿತ್ರವಸ್ತ್ರಾದ್ಯನೇಕದಿಂದೊಪ್ಪುಗು ವಣಿಗ್ವಾಟಂಗಳ್ ವಿವಿಧೋ

೨೧. ತ್ತುಂಗಲತ್ಸುಧಾಧವಳಸಂಕಾಶಾಚ್ಛ ಸುಚ್ಛಾಯೆಯಿಂ ಭುವನಾಳಂಕೃತಮಪ್ಪ ದೇವಭವನಾನೀಕಂಗಳಿಂ ತರ್ಕ್ಕಶಾಸ್ತ್ರವಿವಾದಂಗಳಿನುದ್ಘವೇದರವದಿಂದಂ ಹೋಮಧೂಮಂ(ಗ)ಳಿಂ

೨೨. ದವನೀಶೋಭಿತಮಾಗಿ ಕಣ್ಗೊಳಿಸುಗುಂ ವಿಪ್ರೇಂದ್ರವಾಟಂಗಳು ॥ ಸ್ಮರರಾಜಧಾನಿಯೊ ಸುರವನಿತಾ ಜನ್ಮಭೂಮಿಯೋ ಚೆಲ್ವಂಗಾಗರಮೋ ಪೇಳೆಂಬಿನೆಗಂ ಕರಮೆ

೨೩. ಸೆಗುಂ ಸೂಳೆಗೇರಿಗಳು ತತ್ಪುರದೊಳ್ ॥ ಆ ಪುರಮನಾಳ್ವನಖಿಳಕಳಾಪರಿಪೂರ್ಣ್ಣಂ ಫಣೀಂದ್ರಕುಲ ಸಂಭವನಾಜ್ಞಾಪರನುದ್ಭಸುಚಾರಿತ್ರೋಪಮಿತಂ ವಿಶದ

೨೪. ಕೀರ್ತ್ತಿವಿಜಯವಿನೋದಂ ॥ ಸ್ವಸ್ತಿ ಶ್ರೀಸಿಂದವಂಶಪ್ರಣುತಕಮಳಮಾರ್ತ್ತಂಡನು ಗ್ರಾರಿಮಸ್ತನ್ಯಸ್ತಾಂಘ್ರಿದ್ವಂದ್ವನಾರಾಧಿತನುಕಲಿದೇವಾಂಪದ್ಮಂ ಧರಿತ್ರೀಪ್ರಸ್ತು

೨೫. ತ್ಯಂ ಶತ್ರುಭೂಭೃಜ್ಜಯಪಟುಪಟಹಾಘೋಷಣ ಬ್ಯಾಘಚಿಹ್ನಂ ವಿಸ್ತೀರ್ಣ್ಣೋರ್ವ್ವೀ ತಳೇಶಂ ನೃಪಕುಳ ತಿಲಕಂ ರಾಚಮಲ್ಲಕ್ಷಿತೀಶಂ ॥ ಸಿತಗರಗಂಡ

೨೬. ನುತ್ಸವಕರಂಡನವಂ ಕದನಪ್ರಚಂಡನಾಶ್ರಿತಸುರಭೂಜನುಜ್ಜಳಿತತೇಜನನೂನ ಸುಖೈಕಭಾಜನರ್ಚ್ಚಿತ ಶಿವಪಾದನಾಹವವಿನೋದನಶೆಷಜನಪ್ರಮೋದನಾನತ

೨೭. ರಿಪುಮಂಡಳೇಶ್ವರನೀಳೇಶ್ವರ ಭೋಗವತೀಪುರೇಶ್ವರ ॥ ಉದ್ವೃತ್ತಮಂಡಲಿಕತಾರ ಕಷಡಾನನಂ ವಿದ್ವಡ್ಬಟಧ್ವಂಸ ಸಬಳಪಂಚಾನನಂ ಅಸದಳಂಕಾರಾ (ಂ)ನ್ಯನಾರೀ ವಿದೂರಂ ಅ

೨೮. ಸದೃಶಮಹಾಘೋರಸಂಗ್ರಾಮಧೀರಂ ವಿಪುಲವಿದ್ವದ್ವಿನುತ ಸಾಹಸೋತ್ತುಂಗಂ ನೃಪತಿಳಕ ಸಾಯಿದೇವನ ವೀರಸಿಂಗಂ ಕಲಿದೇವದಿಬ್ಯಪದಪಂಕಜಾರಾಧಕಂ । ಬಲ

೨೯. ವದರಿಭೂಪಾಳಕುಳಸೈನ್ಯಸಾಧಕಂ ॥ ಇಂತೆನಿಸಿ ನೆಗಳ್ದಧಾತ್ರೀಕಾಂತೋತ್ತಮ ರಾಚಮಲ್ಲನೃಪನನು ಮತದಿಂದ ತತ್ಪುರಮೂಲಸ್ತಂಭಂ ತಾಮೆನಿಸಿರ್ದ್ದರ

೩೦. ಲ್ತೆ ಮು (ಂ) ಮುರಿದಂಡಂ ॥ ಅವರ ಪ್ರತಾಪಮೆಂತೆದಡೆ ॥ ಕಡುಮುಳಿಸಿಂದೆ ಬಯ್ದಡೆ ದಿಟಂ ಬಿಡಿತಾನೆ ಕನಲ್ದುಬಯ್ದು ನಾಳ್ದಡಿದಡೆ ವೋಲೆಯಂ

೩೧. ಜವನುಮಾತನ ಬಾಳ್ಕೆಯ ಲೆಕ್ಕದೋಲೆಯಂ ತೊಡದು ಬಿಸುಟ್ಟನೆಂದೆಱಿವುದೆನ್ದಡವೇಂ ಪೊಗಟ್ಟಿಪ್ಪನೇಂ ಬಣ್ಣಿ ದಿದಪನೇನನಾಪುರದ ವೀರಬಣಿಂಜಗರುಗ್ರತೇಜಮಂ ನೇರಿದರಲ್ಲದು

೩೨. ದ್ಧತರನೀಗಳೆ ಸಿಕ್ಷಿಪೆಮೆಂದು ನಿಂದಾರಭಸಪ್ರಭಾವಮನದೆವೆಸಗೊಂಡಪೆಯಣ್ಣ ಲೋಕಸಂಹಾರಕ ಮೂರ್ತ್ತಿ ರುದ್ರನಿಟಿಳಾಕ್ಷಿಗಮಾಪ್ರಲಯೋಗ್ರವಹ್ನಿಗಂ ಮಾರಿಯ

೩೩. ರಿಗಂ ಜವನಂ ಬಾರಿಗಮಗ್ಗಳಮಾಗಿ ತೋಱುಗುಂ ‖ ರಗಳೆ ‖ ಶ್ರೀಮದಾರ್ಯ್ಯಾನಾಮಪುರ ಮುಖ್ಯ ಭೂತರೆನಿಪಯ್ನೂರ್ವ್ವರಿಂದೊದವಿದನ್ವಯಾಯಾ

೩೪. ತರುಂ ‖ ಭಗವತೀಲಬ್ಧವರದಾನಪ್ರಸಾದರುಂ । ಅಗಣಿತಮಹಾತ್ಸೌಖ್ಯಸಂಪತ್ಪ್ರ ಮೋದರುಂ । ಚಕ್ರಧರದತ್ತಚಕ್ರಧ್ವಜವಿರಾಜರುಂ । ಪ್ರಾರ್ತ್ಥಿತಾರ್ತ್ಥಿಪ್ರಕರ

೩೫. ಸುರರಾಜಭೂಜರುಂ । ಸಾಹಸೋತ್ತುಂಗರುಂ । ಹರಪಾದಭೃಂಗರುಂ । ಚಲದಙ್ಕರಾಮರುಂ ಬಲಗರ್ವ್ವಭೀಮರುಂ । ಅಸಹಾಯಸೌರ್ಯ್ಯರುಂ ಮೇರುಗಿರಿಧೈರ್ಯ್ಯರುಂ । ಏಕೈ

೩೬. ಕವೀರರುಂ ಲೋಕಯ್ಯಸೂರರುಂ ಪರವಧೂದೂರರುಂ ಭುವನನಿಸ್ತಾರರುಂ । ಚಲದರ್ತ್ಥಿಗಣ್ಡರುಂ ಸಂಗ್ರಾಮಶೌಣ್ಡರುಂ ಅಧಿಕಪ್ರಚಣ್ಡರುಂ ನುಡಿದನ್ತೆಗಣ್ಡರುಂ ।

**ಶಾಸನದ ಹಿಂಭಾಗ**

೩೭. ಶರಣಾಗತರಕ್ಷಕರ್ದ್ದುಷ್ಟಜನಶಿಕ್ಷಕರು (ಂ) ಸಿಡಿಲ ನಡಿಗಿಸುವತ್ತ್ರೋಡರ್ದರಂ ಕೊಲಿಸುವರ್ । ಕೀರ್ತ್ತಿ ನಾರಾಯಣರು । ಉದ್ಯಮಪರಾಯಣರ್ದ್ದುಷ್ಟರ್ಗ್ಗೆ ದುಷ್ಟರ್ । ಸಿ

೩೮. ಷ್ಟರ್ಗ್ಗೆ ಸಿಷ್ಟರುಂ ಗವಱೇಶದಿಬ್ಯಚರಣಾಂಬುಜಾರಾಧಕರ್ಭ್ಭುವನದೊಳು ದುಷ್ಟರಿಪುಕುಳಸೈನ್ಯಸಾಧಕರ್ ಅಭಿನವದ್ವಾರಾವತೀಪುರಮಿದೆನಿಸಿರ್ದ್ದ । ಕುಱುಗೋಡ

೩೯. ಪಟ್ಟಣಸ್ವಾಮಿಗಳ್ಕೂಡಿಟ್ಟು ‖ಕ‖ ಅನ್ತೊಸೆದಿರ್ದ್ದು ಮಾಡಿ ಗವಱೇಶ್ವರದೇವರ ಸುಪ್ರತಿಷ್ಠೆಯಂ ಸಂತೋಸದಿಂ ತದೀಶ್ವರನೆ ತಾರನಗೇಂದ್ರಮನರ್ತ್ಥಿಯಿಂದೆ ಮೂಱುಂ ತೆಱನಾಗಿ ನಿ

೪೦. ರ್ಮ್ಮಿಸಿದನೊ ಮುದದಿಂ ನೆಲಸಿಟ್ಟಿನಕ್ಕುಮೆಂಬನ್ತೆಸೆಯಲು ತ್ರಿಕೂಟಮನೆ ಮಾಡಿಸಿದರ್ಪ್ಪರಮಾನು ರಾಗದಿಂ ‖ವ‖ ಅನ್ತಾ ತ್ರಿಕೂಟದ ಪ್ರಥಮಸ್ಥಳದ ಶ್ರೀಮದ್ಗ ವಱೇಶ್ವರದೇವರ್ಗ್ಗೆ

೪೧. ನಿತ್ಯನೈವೇದ್ಯಕ್ಕುಂ ನಂದಾದೀವಿಗೆಗುಂ ಜೀರ್ಣ್ನೋದ್ಧಾರಕುಂ ಶ್ರೀಮದ್ಗವಱೇಗಳೆಲ್ಲ ಕೂಡಿಟ್ಟು ಶ್ರೀಮನ್ಮ ಹಾಮಣ್ಡಳೇಶ್ವರಂ ರಾಚಮಲ್ಲದೇವಪ್ರಮುಖವಾಗಿ ಸಕವರ್ಷ ೧೦೭೯ ನೆಯ

೪೨. ಹೇಮಳಂಬಿಸಂವತ್ಸರದದಾಷಾಢ ಬಹುಳ ಕೃಷ್ಣಾಂಗಾರಚತುರ್ದ್ದಶಿ ಮಹಾತಿಥಿಯಂದು ಶ್ರೀಮಹಾದೇವ ಸನ್ನಿಧಾನದಲು ಧಾರಾಪೂರ್ವ್ವಕಂ ಮಾಡಿ ಕೊಟ್ಟ ಕೆಯಿ ಕುಱು

೪೩. ಗೋಡ ಹೊಲದಲು ಮಂಚಿಮರಸನ ದೇವರ ಕೆಯ್ಯಿಂ ಮೂಡಲು ಹಟ್ಟಣದ ದಾರಿಯಿಂ ತೆಂಕಲು ತಕ್ಕಿಲು ಒಡ್ಡಿಹಟ್ಟಿಯ ಗಡಿಂಬದ ಘಳೆಯಲು ಮತ್ತರು । ಮತ್ತಂ ಮುದ್ದೇಶ್ವರ ದೇವರ ತೋಟ

೪೪. ದಿಂ ತೆಂಕಲು ಭೋಗೇಶ್ವರದ ತೋಂಟದಿಂ ಬಡಗಲು ಕೊಟ್ಟ ಹೂದೋಂಟ ೧ ಅಲ್ಲಿಂ ತೆಂಕಣ ಮೂಡಣ ದೆಸೆಯ ಹೂದೋಂಟ ೧ ಪರದೇಶಿಗಳು ಅಳವ ತೂಗುವಯ್ಸಂಬರಂಗಳಲುಂ ಏಣಿಸುವ ದವ

೪೫. ಸಂ ಮಾಱಿದಲ್ಲಿ ಕೊಟ್ಟ ಹೊಂಗೆ ಹಾಗ ೧ ಮುಮ್ಮರಿದಣ್ಡಂಗಳು ಭಣ್ಡವಂ ತೂಗಿಸಿ ಕೊಂಡಲ್ಲಿ ಕೊಟ್ಟ ಬೆಳೆ ಹೊಂಗೆ ಹಾಗ ೧ ನಾನಾದೇಶಿಗಳು ಸಮಸ್ತದವಸವಂ ಮಾಱಿ ದಲ್ಲಿ ಹೊಂಗೆ ಕೊಟ್ಟ ಕಾಣಿ ೨ ಮತ್ತಂ

೪೬. ಮಾಱಿದ ದವಸದಲು ಕೊಟ್ಟಲ್ಲಿ ಹೊಂಗೆ ಮಾನ ೧ ಪಟ್ಟಣದ ನಖರುಗಳು ಕೊಂಡಲ್ಲಿ ವ ೨೧ ಅಂಗಡಿಯಲು ಹಾನೆಯಲುಂ ಸಟ್ಟುಗ ಭತ್ತ । ಸಾಸಿರ್ವ್ವರುಂ ಹೇಱಿಂಗೆಲೆ ೧೦೦ ಹೊಱಿಗೆ ೫೦ ಕೊಟ್ಟರು

೪೭. ಮತ್ತಂ ಲಾಡ ಚೋಳ ಮಲಯಾಳ ತೆಲುಂಗ ಕ(ಂ)ನ್ನಡ ಸಮಸ್ತನಾನಾದೇಶಿಗಳು ಪೇಳಾವಿಗ ಸೆಟ್ಟಿಯದ್ದೇವರ್ಗ್ಗೆ ಕೊಟ್ಟಾಯ ಕುದುರೆಗೆ ಹಾಗ ೧ ದೇವರ ಪುರದೊಳಗೆ ನನ್ದಾದೀವಿಗೆಗೆ ನಾಡುಗಳ್ಕೊಟ್ಟ

೪೮. ಗಾಣ ೨ ಭೈರವದೇವರ ದೀವಿಗೆಗೆ ಗಾಣ ೧ ಕಮ್ಮಟದಲ್ಲಿ ಹೋವ ಹೊಂಗೆ ದಳಕೆ ಪೆ ೨ ಕಾ.. ಮತ್ತಂ ಮೆಣಸಳದಲ್ಲಿ ಹೊಂಗೆ ಮಾನ ೧ ದಳಕೆ ೪ ಕೊಂಬು ಬೆಲ್ಲಕೆ ನೂಱು ಕೊಂಡು

೪೯. ಮತ್ತಮಾ ತ್ರಿಕೂಟದೊಳು ಶ್ರೀಮನ್ಮಲ್ಲಿಕಾರ್ಜ್ಜುನದೇವರ ಸುಪ್ರತಿಷ್ಠೆಯಂ ಮಾಡಿದ ಶ್ರೀಮನ್ಮಹಾವಡ್ಡಬ್ಯವಹಾರಿ ಮಲ್ಲಿಸೆಟ್ಟಿಯನ್ವಯಮೆಂತೆದೆಡೆ ॥

೫೦. ವ್ರಿತ್ತ ॥ ಸರಧಿಗಭೀರನೂರ್ಜ್ಜಿತವಿಭೂತಿಕುಲಜಾತನುದಾರನಪ್ಪ ಭಾಸುರಮಣಿ ಬಾಗಿಸೆಟ್ಟಿಯ ಸುತಂ ಸುಜನಾಗ್ರಣಿ ಸೂರಿಸೆಟ್ಟಿ ಸೌಂದರತನು

೫೧. ರೇಚಿಸಿಟ್ಟಿಯೆನಿಸಿರ್ದ್ದವರಗ್ರಜನುದ್ಭಸದ್ಗುಣಾಕರನೆನೆ ಮಲ್ಲಿಸೆಟ್ಟಿ ನಿಜವಂಶ ಸುಧಾರ್ಣ್ಣವಪೂರ್ಣ್ಣ ಚಂದ್ರಮಂ ॥ ಭೂವಿನುತ ಮಲ್ಲಿಕಾರ್ಜ್ಜುನದೇವರ ಸಮ್ಯ ಕ್ಪ್ರತಿಷ್ಠೆಯಂ ಮಾಡಿ

೫೨. ಸಿ ಸದ್ಭಾವದಿನೆತ್ತಿಸಿ ವಿನುತಶಿವಾವಸಥಮನುತ್ತರಾಭಿಮುಖದಿನ್ದೆಸೆಯಲ್ ॥ ಆ ಉತ್ತರಾಭಿಮುಖದ ಮಲ್ಲಿಕಾರ್ಜ್ಜುನದೇವರ್ಗ್ಗೆ ನಿತ್ಯನೈವೇದ್ಯಕ್ಕಂ ನನ್ದಾದೀವಿಗೆಗಂ ಜೀರ್ಣ್ನೋದ್ಧಾರಕ್ಕಂ ಶ್ರಿಮನ್ಮಹಾ

೫೩. ಮಂಡಳೇಶ್ವರ ರಾಚಮಲ್ಲಪ್ರಮುಖವಾಗಿ ಮಲ್ಲಿಸೆಟ್ಟಿಯಾ ತಿಥಿಯಲು ದೇವರ್ಗ್ಗೆ ಧಾರಾಪೂರ್ವ್ವಕಂ ಮಾಡಿ ಕೊಟ್ಟ ಕೆಯಿ ಕುಱುಗೋಡ ಹೊಲದಲು ಮಂಚಿಮರಸನ ಕೆಱೆಯ ಹಿಂದೆ ಸಿರಿಗೆಱೆಯ ದಾರಿಯಿಂ

೫೪. ಮೂಡಲು ಮುದ್ದೇಶ್ವರದೇವರ ಕೆಯ್ಯಿಂ ತೆಂಕಲು ಮಂಜೇಶ್ವರದ ಕೆಯ್ಯಿಂದಂ ಹಟ್ಟಣದ ದಾರಿಯಿಂದಂ ಬಡಗಲು ಅಂಡಗೆಱೆಯ ದಾರಿಯಿನ್ತಂಕಲು ಕಿಸುಕಾಡು ಮತ್ತರು ೨ ತಕ್ಕಿಲು ಮತ್ತ್ರ್ ೨ ಪರಂಜ್ಯೋತಿದೇವರ

೫೫. ತೋಂಟದಿಂ ಬೆನಕನ ತೋಂಟದಿಂ ಪಡುವಲು ಹಳ್ಳದಿಂ ಬಡಗಲು ಕೊಟ್ಟ ಹೂದೋಟ ೧ ದೇವರ ಪುರದೊಳಗೆ ನಂದಾದೀವಿಗೆಗೆ ಗಾಣ ೧ ಸಮಸ್ತನಾನಾದೇಶಿ ಪೇಳಾವಿಗ ಸೆಟ್ಟಿಯರ್ದ್ದೇವರ್ಗ್ಗೆ ಕೊಟ್ಟಾ

೫೬. ಯ ಕುದುರೆಗೆ ವೀಸ ೨ ಕಾಣಿ ೨ ಮತ್ತಂ ಮಸ್ತದವಸದಲುಂ ಕೊಟ್ಟಲ್ಲಿ ಹೊಂಗೆ ಸೊಳಸ ೨ ಕೊಂಡಲ್ಲಿಸೊಳಸ ೨

೫೭. ಮತ್ತಮಾ ತ್ರಿಕೂಟದೊಳ್ ॥ ವೃ ॥ ಶ್ರೀಮತ್ಕೌಂಡಿಲ್ಯಗೋತ್ರೋದ್ಭವನೆನಿಸಿದ ಮಾರ್ತ್ತಣ್ಡದೇವಂಗೆ ಲಕ್ಷ್ಮೀಪ್ರೇಮಾಳಂಕಾರ ಚಾಕಾಂಬಿಕೆಗುದಿಯಿಸಿದಗ್ರಾತ್ಮಜಂ ಸಾಯಿದೇವಂ

೫೮. ಶ್ರೀಮನ್ತಂ ರೇಚದೇವಂ ಸಕಳಗುಣಯುತಂ ಕಾಳಿದಾಸಂ ಪ್ರಮುಖ್ಯಂ ಶ್ರೀಮನ್ಮುದ್ದೇಶ್ವರಾಂಘ್ರಿದ್ವಯನುತಸುಮನೋರಂಜಿತಂ ಮುದ್ದರಾಜಂ ॥ ಸ್ವಾಮಿ ವೆಸರೆಸವ ವಣಿಜ

೫೯. ಸ್ವಾಮಿಗಳಯ್ಯೂರ್ವ್ವರೊಸೆದು ಕೊಟ್ಟಣ್ಣಗೆ ಪ್ರಾಮಾಣ್ಯಮಾಗೆ ಗೌಡಸ್ವಾಮಿ ವೆಸರ್ವ್ವಡೆದ ಮುದ್ದರಾಜನೆ ಧನ್ಯಂ ॥ ವಡ್ಡಾಚಾರವ ನುಡಿದಂದೆಡ್ಡವೆ ಪೊಗಳ್ವಂಗೆ ಗುಡ್ಡ ಶಾಸ್ತ್ರಾನ್ವಿತಸಂವಡ್ಡಿಯನೆ

೬೦. ನ್ದು ಪೊಗಳ್ವುದು ವಡ್ಡಬ್ಯವಹಾರಿ ಮುದ್ದನಂ ಧರೆ ಸತತಂ ॥ ಬಲದೇವ ನಿನ್ನ ಕರುಣದ ಬಲವುಂಟೆನಗೆಂದು ಸಾಯಿದೇವನ್ನಂ ಬಲು ಸಲೆ ತೊತ್ತುಗೊಣ್ಡದಯಕೇಂ ಸಲೆವುಂಟೆ ಮುದ್ದುಲಿಂಗ ಸಿರಿಗಳಗೇಶಾ॥

೬೧. ಹರ ಶರಣೆಂಬಂ ಭಕ್ತರ ಕರುಣವೆ ಶರಣೆಂಬ ಶಿವನಡಿಂಗರನೆಂಬಂ ಹಿರಿಯಣ್ಣ ಸಾವಿದೇವನ ಪರಿಮಾನುಜ್ಞೆಯನೆ ತಾಳ್ದಿದಂ ಮುದ್ದರಸಂ ॥ ಕರಮರ್ತ್ಥಿಯಿನ್ದೆ ಮುದ್ದೇಶ್ವರದೇವರ ನಿತ್ಯನೈವೇದ್ಯಕ್ಕಂ ನನ್ದಾದೀವಿಗೆಗಂ ಜೀರ್ಣ್ನೋದ್ಧಾರಕ್ಕಂ ಶ್ರೀಮನ್ಮಹಾಮಂಡಳೇಶ್ವರಂ ರಾಚಮ

೬೩. ಲ್ಲದೇವಪ್ರಮುಖವಾಗಿ ಮುದ್ದರಸನಾ ತಿಥಿಯಲು ಧಾರಾಪೂರ್ವ್ವಕಂ ಮಾಡಿಕೊಟ್ಟ ಕೆಯಿ ಕುಱುಂಗೊಡ ಹೊಲದಲು ಸಿರಿಗೆಱೆಯ ದಾರಿಯಿಂ ಮೂಡಲು ಮಲ್ಲಿಕಾರ್ಜ್ಜುನ ದೇವರ ಕೆಯ್ಯಿಂ ಬಡಗಲು ಪರಂ

೬೪. ಜ್ಯೋತಿದೇವರ ಕೆಯ್ಯಿಂ ತೆಂಕಲು ಅಭಿನವಸಿದ್ಧನಾಥದೇವರ ಕೆಯ್ಯಿಂ ಪಡುವಲು ಕಟಿಕೂರದಾರಿಯಲಿ ಕಿಸುಕಾಡು ಮತ್ತರ್ ೨ ತಕ್ಕಿಲು ಮತ್ತರ್ ೨ ಗವಱೇಶ್ವರದ ತೋಂಟದಿಂ ಬಡಗಲು ಹೂದೋಂಟ ೧ ದೇವ

೬೫. ರಪುರದೊಳಗೆ ನನ್ದಾದೀವಿಗೆಗೆ ಗಾಣ ೨ ಸಮಸ್ತನಾನಾದೇಶಿ ಪೇಳಾವಿಗಸೆಟ್ಟಿಯ ರ್ದ್ದೇವರ್ಗ್ಗೆ ಕೊಟ್ಟಾಯ ಕುದುರೆಗೆ ವೀಸ ೨ ಕಾಣಿ ೨ ಸಮಸ್ತದವಸಗಳಲುಂ ಕೊಟ್ಟಲ್ಲಿ ಹೊಂ

೬೬. ಗೆ ಸೊಳಸ ೨ ಕೊಂಡಲ್ಲಿ ಸೊಳಸ ೨

೬೭. ಮತ್ತಮನ್ತೆಲ್ಲರುಂ ಕೂಡಿರ್ದ್ದಾ ಮೂಱುಂ ಸ್ಥಾನದ ಪಾತ್ರಪಾವುಳಕ್ಕೆ ಶ್ರೀಮನ್ಮಹಾಮಂಡಳೇಶ್ವರಂ ರಾಚಮಲ್ಲದೇವಪ್ರಮುಖವಾಗಿ ಗವಱೇಶ್ವರದೇವರ ಮಲ್ಲಿಕಾರ್ಜುನದೇವರ ಮುದ್ದೇಶ್ವರದೇವರ

೬೮. ಸನ್ನಿಧಾನದಲಾ ತಿಥಿಯೊಳು ಧಾರಪೂರ್ವ್ವಕಂ ಮಾಡಿ ಕೊಟ್ಟಕೆಯಿ ಕುಱುಂಗೋಡ ಹೊಲದಲು ಕೊಂಚಗೆಱೆಯ ದಾರಿಯಿಂ ಮೂಡಲು ಕಲಿದೇವರ ಕೆಯ್ಯಿಂದಂ ಬಡಗಲು ಕೋಣೆಯ ಸಿದ್ಧನಾ

೬೯. ಥದೇವರ ಕೆಯ್ಯಿಂ ತೆಂಕಲು ನಡುವೆ ಕರಿವೂರ ದಾರಿಯಾಗಲು ಹಿರಿಯ ಕೋಲ ಗಡಿಂಬದಲು ಕಿಸುಕಾಡು ಮತ್ತರ್ ೯ ತಕ್ಕಿಲು ಮತ್ತರು ೧೦

೭೦. ಇಂತೀ ತ್ರಿಕೂಟದ ದೇವಸ್ಥಾನದ ಧರ್ಮ್ಮಕಾರ್ಯ್ಯವಂ ಶ್ರೀಮನ್ಮಹಾಮಣ್ಡಳೆಶ್ವರಂ ರಾಚಮಲ್ಲ ದೇವರಸನುಂ ಪಟ್ಟಣದ ಸಮಸ್ತಮುಮ್ಮರಿದಣ್ಡಂಗಳು ಉಭಯನಾನಾದೇಶಿಗಳುಂ ಪ್ರ

೭೧. ಮುಖದೇವಪುತ್ರಕರಾಗಿರ್ದ್ದು ದೇವಕಾರ್ಯ್ಯಂ ಪೂಜೆಪುನಸ್ಕಾರವಂಗಭೋಗ ರಂಗಭೋಗ ನಿತ್ಯನೈಮಿತ್ತಿಕಂಗಳಂ ಭಕ್ತಿಪೂರ್ವ್ವಕಂ ಸ್ವಧರ್ಮ್ಮದಿಂ ಪ್ರತಿಪಾಳಿಸಿ ನಡಸುವರು ॥

ಸೌ. ಇ.ಇ.IX, ಭಾಗ ೧, ನಂ.೨೯೭

# ೪. ಶಾಸನಗಳು (೪)

**೪. ಕಲ್ಕತ್ತಾ ಇಂಡಿಯನ್ ಮ್ಯುಜಿಯಂನಲ್ಲಿರುವ ಶಾಸನ**

೧ ಶ್ರೀಸ್ವಯಂಭುನಾಥಾಯನಮಃ ॥ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ । ತ್ರೈಳೋಕ್ಯ ನಗರಾರಂಭ ಮೂಲಸ್ತಂಭಾಯ ನಮಃ ॥

೨. ಜಯತಿ ವಿಶದಕೀರ್ತಿ ಪ್ರಾರ್ತ್ಥಿತಾರ್ಥ ಪ್ರಪೂರ್ತ್ತಿಃ ಸಕಳಭುವನವರ್ತ್ತಿ ದೇವತಾ ಚಕ್ರವರ್ತ್ತಿ । ವಿಗತ ದಿತಿಜ ದಂಭಃ ಪಾರ್ವ್ವತಿ ಪಾರಿರಂಭಃ

೩. ಪ್ರವಿನತ ವಿಧು (ಡು) ಶಂಭುರ್ದ್ದೇವ ಸ್ವಯಂಭೂಃ ॥ ಯಸ್ಯೋದ್ವೃತ್ತ ಪುರತ್ರಯಸ್ಯ ವಿಜಯೇ ಬಾಳೇಕ್ಷಣಾಗ್ನ್ಯರ್ಚ್ಚಿಷಾಸ್ವಿದ್ಧಚ್ಯಂದ್ರಕಳಾ ಸರ್ವದ್ಭಿರಮೃತೈರುಜ್ಜೀವಿತಃ ಸಸ್ತುವನ್ ॥ (।)

೪. (ಮೋ) ದೇ ದೇವರಶಿರಃ ಕರೋತಿ ನಿಕರಸ್ತಜ್ಜಾತರಾವೋದ್ಭಯುದ್ಗೌರ್ಯ್ಯಾಯಃ ಪರಿರಂಭಾಣೇಸ್ಮಿತ ಮುಖಸ್ತಸ್ಮೈನಮಃಶಂಭವೇ॥ ಗೋರಿ ಪೀಣತ್ಥಣತ್ಥತ್ಥಗಿದ ಘುಸಿಣದಿನ್ನೇಕ ವಣ್ಣೊ (ಣ್ಣು) ಗ್ಘವಚ್ಛೋ

೫. ಕಂದಪ್ಪೊ (ಪ್ಪು)ದ್ದಪ್ಪ ವಿಪ್ಪಾಳಣಣ್ಶೈಣಿವುಣೋ ವಿಚ್ಚುರನ್ತತ್ತೈಚ್ಛೋ । ಗಿಬ್ಬಾಣೊ (ಣು) ಕ್ಕೇರರ ಖೋತಿಹು ವಣಭವಣಾರಂಭ ಸಂಬನ್ತಖಂಭೋಳಚ್ಚೇಣಾಹಪ್ಪಿಯೋ ಸೋ

೬. ಜೇ ಐಸಐಜಏ ನಮ್ಮ ಶಂಭೂಸ್ವಯಂಭೂ ॥ ಶ್ರೀದೇವೀರಮಣ ಪರಂ (ಪ್ರ)ಣೂತ ಮಹಿಮಂ ಭೂಭೃತ್ಸುತಾವಲ್ಲಭಂ ಪಾದಾನಮ್ರ ಸುರಾಸುರೇಂದ್ರ ಮಕು

೭. ಟೋದ್ಯತ್ಯೋಣ ಮಾಣಿಕ್ಯರುಕ್ಪ್ರಾದುರ್ಭ್ಭೂತದಿಶಂ ಮನೋಮುದದೇ ಸದ್ಯೋಜಾತವಕ್ತ್ರಂ ಸ್ವಯಂಭೂದೇವಂ ನಮಗಾಗಳಂ ಕುಡುಗೆ ಭ

೮. ಕ್ರಿ ಶ್ರೀಯುಮಂ ಶ್ರೀಯುಮಂ ॥ಉತ್ಸಾಹಂ। ವಿಳಸದಮರರಾಜಾ ರಾಜರಾಜ ದಿತಿಜ ರಾಜ ಸಂಕುಳ ವಿಶಾಲಮೌಳಿಘೃಷ್ಟ ಚಳನನಳಿನಯುಗ

೯. ಳಕಂ ॥ ಸಳಿಳಧರಣಿ ಪವನ ಗಗನ ದಹನ ತರಣಿ ಶಶಧರಾತ್ಮಲಸದಷ್ಟಮೂರ್ತಿಶಂಭು ಕುಡುಗೆ ನಮಗಭೀಷ್ಟಮಂ ಪದಿನಾಲ್ಕುಂ ಭು

೧೦. ವನಂಗಳಂ ಪಡದು ತನ್ನಿಚ್ಛಾದಿ ಶಕ್ತಿತ್ರಯಾಸ್ಪದದಿಂದಂ ಪರಿಪಾಳಿಸುತ್ತಖಿಳಭೂತಬ್ರಾತದೊಳ್ ಜೀವಿತಾಭ್ಯುದಯಂ ಮಾಡಿದ ಶಂಭು ಭಕ್ತ

೧೧. ಜನತಾ ಚೇತಸ್ತನಾಗಿರ್ದು ಸಮ್ಮದದಿನ್ತಂನನೆ ತೋಱುತಿಕ್ಕೆ ಸತತಂ ಮನ್ಮಾಸಸಾಂ ಬೋಜದೊಳ್ ॥ ಮಹಾಸ್ರಗ್ದರೆ ॥ ಹಿಮವದ್ಧಾತ್ರಿ ಧ

೧೨. ರೇಂದ್ರಾತ್ಮಜೆ ಕಿಱುಪೆಜೆಯಂ ನೋಡೆ ಜೂಟಸ್ತಮಂ ತಾಂ ಕಮನೀಯಾಳೋಕದಿಂ ತನ್ನಯ ಪೆಜೆನೊಸಲೊಳ್ ನೀಳ್ದ ಬೆಳ್ದಿಂಗಳಿಂ ಪೂರ್ಣ್ಣಿಮೆಯಾಗಳ್ ದೇವ । ಬಾಳೇಂದು

೧೩. ವಕಳೆಯತಿಪೂರ್ಣೇಂದುವಿಂದಾದುದೆಂಬುತ್ತಮ ಮುಗ್ಧತ್ವಕ್ಕೆ ಮೆಚ್ಚಿರ್ದತಿಶಯ ಮಹಿಮಂ ಶಂಭು ರಕ್ಷಿಕ್ಕೆ ನಮ್ಮಂ ‖ ಕಡಲೇಳುಂ ದ್ವೀಪವೇಳುಂ ಕುಳನಾಗಚಯವೇಳುಂ ಸಮಾನವೇಷ್ಟಿಸಲ್ ಚೆಲ್ವೆಡೆ ಜಂ

೧೪. ಬೂದ್ವೀಪವಾದ್ವೀಪದ ಭರತಮಹೀಭೋಗದೊಳ್ನಾಡೆಯುಂನೋರ್ಪ್ಪಡೆ ಕ ಣ್ಣತ್ಯಂತ ಶೋಭಾವ ಹಮೆನೆ ನೆಗಳ್ದೀ ಕುಂತಳ ಕ್ಷಮಾತಳ ಶ್ರೀಗೊಡೆಯಂ ಚಾಳುಕ್ಯ ವಂಶೋತ್ಪಳ ವಿಕಸನ ಚಂದ್ರಂ ವಿಳಾ

೧೫. ಳಾಸಮಾರೇಂದ್ರಂ ‖ ಮತ್ತಂ ತತ್ಪ್ರಶಸ್ತಿಯೆಂತೆಂದಡೆ ‖ ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀಪೃಥ್ವೀವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರ ಪರಮಭಟ್ಟಾರಕಂ ಸತ್ಯಾಶ್ರಯ

೧೬. ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ತ್ರಿಭುವನಮಲ್ಲ ವೀರಸೋಮೇಶ್ವರ ದೆವನುತ್ತರೋತ್ತರಾಭಿವೃದ್ಧಿಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂ ಕಲ್ಯಾಣದ ನೆಲೆವೀಡಿಯೊಳ್ ಸುಖಸಂಕಥಾ ವಿನೋದದಿಂ ರಾ

೧೭. ಜ್ಯಂಗೆಯ್ಯುತ್ತಮಿರಲಿತ್ತಲ್ ‖ವೃ‖ ಜಲಧಿಬ್ಯಾವೇಷ್ಟಿತೋರ್ವ್ವೀಮಹಿಳೆಗೆ ವಿಳಸಲ್ಲೋಳಭಾಳಸ್ಥಳೀ ಕುಂತಳದೇಶನ್ತಾನೆನಿಪ್ಪಂತಿರಲೆಸೆವಲಸತ್ಕುಂತಳಕ್ಷೋಣಿ ಗುದ್ಯತ್ತಿಳಕಂ ತಾಂ ಬಲ್ಲಕುಂದಾವಿಷಯ

೧೮. ಮದಿಕ ಲಕ್ಷ್ಮೀಸಮಾಸೇವಿತಂ ಭೂಲಲನಾ ಲೀಲಾವಿಳಾಸಸ್ಫುರಿತ ಕಬರಿಕಾ ಕುಂದದಂತೊಪ್ಪಿ ತೋರ್ಕ್ಕುಂ ‖ಅದೆಂತೆಂದಡೆ‖ ಊರೂರ್ದ್ದಪ್ಪದೆಪೂತಭೂತಲತೆಯಿಂ ಮತ್ತಾಳಿಯಿಂ ಶಾಲಿಯಿಂದ ಊರೂರ್ದ್ದಪ್ಪದೆ ಗಂ

೧೯. ಗರಿಂ ಕುಡಿಯರಿಂ ಶ್ರೀಮಂತರಿಂ ಕಾಂತರಿಂದೂರೂರ್ದ್ದಪ್ಪದೆ ದೇವತಾನಿಳಯದಿಂ ಸದ್ಭಕ್ತರಿಂ ಚೆಲವು ವೆತ್ತೂರೂರ್ದ್ದಪ್ಪದೆ ಬಲ್ಲಕುಂದೆನಡುನಾಳ್ಸಂತಂ ಬಸಂತಂಕರಂ ‖ ಅಂತುನಾಡ ನಡುವೆ ‖ಕಂ‖ ಕೆಲಬಲದ ಜಲ

೨೦. ದ ದುರ್ಗ್ಗಂಗಳನಲೆವುದು ನೆರೆಯ ಹೊರೆಯ ತರುಗಿರಿದುರ್ಗ್ಗಂಗಳನಿಳಿಸಿ ತನ್ನ ಮೆಱವುದು ಕುಲಗಿರಿ ಕುಱುಗೋಡ ದುರ್ಗ್ಗವಾ(ರ್ಗ್ಗ)ಂ ದುರ್ಗ್ಗಂ ‖ವೃ‖ ಚೋಳನನಾಳವಾಡುವುದು ಗುರ್ಜ್ಜರನಂ ಸಲೆ ತರ್ಜ್ಜಿಕುಂ

೨೧. ಕರಂ ಲಾಳನನಾಳಿಮಾಡುವುದು ಪಾಂಡ್ಯನನಣ್ಡಲೆಗುಂ ತೆಲುಂಗಭೂಪಾಳನ ನೇಳಿದಿರ್ಕ್ಕೆಯನೆ ಮಾಡುವುದೀ ಕುಱುಗೋಡಕೋಟೆ ತಾಂ ಕಾಳಗವೆಂದಡೇಳು ಮಡಿ ಪೆರ್ಚ್ಚುವುದಚ್ಚರಿಯಾರೊ ಕಾಡುವರ್ ‖ ಆ

೨೨. ಕೋಟೆಯ ಪೊಱವೊಳಲೆಂತೆಂದಡೆ ‖ ತಿಳಕ ತಮಾಳ ತಾಳ ಕದಳೀ ವಕುಳಾವಳಿ ಪಾಟಳಾಳಿ ಪಿಪ್ಪಳದಳಮಾತುಳಂಗ ಘನಸಾರಕ ಕೇಸರಕರ್ಣ್ಣಿಕಾರ ಶಾಲ್ಮಲಿ (ಳಿ) ಲವಳೀಲವಂಗ ಸಹಕಾರ ಕಕಿಂಶುಕನಾಳಿಕೇರ

೨೩. ಸಂಕುಲ ಸಕಳರ್ತ್ತು ನಂದನದಿನೊಪ್ಪುಗುಮೀ ಕುಱುಗೋಡ ಸುತ್ತಲುಂ ‖ ಮತ್ತವಾ ಪಟ್ಟಣದೊಳ್ ‖ ಕಂ‖ ಧನದನನಿಳಪರ್ದ್ಧನಿಕರ್ವ್ವನಧಿಪನಂ ನಗುವರಲ್ಲಿ ರತ್ನವಿವೇಕಮ್ಮ್ಗನುವಂ ಪೋಲ್ವರ್ಜ್ಜನ ಪರ್ಜ್ಜನನುತವಿದು ಪೋಲ್ಕುವಲ್ತೆ ಭೋ

೨೪. ಗಾವತಿಯಂ ‖ ಭಕ್ತಿಯಂ ಮನೆ ಭಕ್ತಿಯ ನೆಲೆ ಭಕ್ತಿಯಾವತಿ (ತೆ) ಭಕ್ತಿಯೇಳ್ಗೆ ಭಕ್ತಿಯ ರಾಜ್ಯಂ ಭಕ್ತಿಭಂಡಾರಂ ಶಿವಭಕ್ತಿಯಸಿರಿ ಬಂದು ನೆಲಸಿತೀ ಕುಱುಗೋಡೊಳ್ ‖ ಆ ನಗರಕ್ಕದಿನಾಥಂ ಶ್ರೀನಾರೀಕುಚ ವಿಲೋಳ ಕುಂ

೨೫. ಕುಮವಕ್ಷಂ ಭೂನುತನೆಸೆದಂ ನಿಸದನ್ತಾನಿರ್ಮ್ಮಡಿರಾಚಮಲ್ಲನಪ್ರತಿಮಲ್ಲಂ ‖ವ‖ ಆ ನೃಪನನ್ವಯ ಮೆಂತೆಂದಡೆ ‖ಕಂ‖ ಮೃಡನ ನಿಡುದೋಳ ಬಾಳಿನ ಕಡವೊಗರಿನ ಪೊಳಪನುರಗಿ ಗೆತ್ತುರಗೇಂದ್ರನ್ತೊ

೨೬. ಡರ್ದಲ್ಲಿ ಭಾವರತಿಯಿಂದೊಡನೊಗೆದಂ ಸಿಂದನಖಿಳ ಭುವನಾನಂದ (ಂ) ‖ ಅನ್ತನ್ತೆ ಸಿಂದಭೂಪನ ಸಂತತಿಯಡಗುನ್ತಿ ಪೆರ್ಚ್ಚೆ ಪೆರ್ಚ್ಚಿದನತಿ ವಿಕ್ರಾಂತಂ ಜಯಕಾಂತಂ ಶ್ರೀಕಾಂತಂ ಶ್ರೀರಾಚಮಲ್ಲ ಧರಣೀ ಕಾಂತಂ ‖ ಶ್ರೀವನಿತೇ

೧೭. ಶ್ವರಂಗೆ ಶಿವಪಾದಶಿಖಾಮಣಿ ರಾಚಮಲ್ಲದೇವಾನಿಪಾಳಂಕಂಗೆ ಸತಿ ಸೋವಲದೇವಿಗೆ ಪುಟ್ಟಿದಂ ಯಶಃಶ್ರೀ ವರನರ್ತಿಗಳ್ಗೆರೆದ ಪೊಂಗಳನಿಷ್ಟಕರಂಗಳಂ ಸಮಸ್ತಾವನಿ ಭೃತ್ಸಮಂಗಳನಿರುಂಗಳನೀವನು

೧೮. ದಾತ್ತಮಂಗಳಂ ‖ ಮುದದಿಂ ಶ್ರೀಮದಿರುಂಗುಳಕ್ಷಿತಿವಧುನಾಥಂಗವುದ್ಯದ್ಗುಣಾ ಸ್ಪದೆಯಪ್ಪೆ (ಪ್ಪ) ಬಲದೇವಿ ಗನ್ತನಯರಾದಭ್ಭೀಮನುಂ ಪಾರ್ಥನುಂ ತೊಡಲಿಲ್ಲೆಂಬೆನೆಗಂ ಕ್ರಮೋನ್ನತಿಯೊಳಾ

೧೯. ಶಾವರ್ತ್ತಿಸತ್ಕೀರ್ತ್ತಿಸಂಪದನಿನ್ತಿರ್ಮ್ಮಡಿ ರಾಚಮಲ್ಲನೃಪನುಂ ಶ್ರೀ ಸೋಮಭೂಪಾಳನುಂ ‖ ಆ ಯಿರ್ವ್ವರೊಳ್ ತದಗ್ರಜನ ಮಹಿಮೆಯೆಂತೆಂಡದೆ ‖ವೃ‖ ಪುಲಿವಾಲಂ ನಲಿದುಂಡ ಶಕ್ತಿಯಹಿಯೇಕ

೨೦. ಛತ್ರವಾಗಿರ್ದ್ದ ಪೆಂಪಳವಟ್ಟಾ ಚಮರೀಮೃಗಂ ಚಮರಜಂ ತದ್ಭವಜಾತೀಭಸಂಕುಳ ಭದ್ರಾಸನ ರಾಜ್ಯಚಿಹ್ನಸಹಿತಂ ಶ್ರೀ ಸಿಂದಗೋವಿಂದಾನಾರಳವಲ್ಲಿರ್ಮ್ಮಡಿ ರಾಚಮಲ್ಲನದಟಿಂ ಭೋಗೀಂದ್ರ ವಂಶೋದ್ಭವಂ ‖ ದೃಹಿತಮಹಿಮಂ

೨೧. ಮಹಿನುತಸುಖಾಭಿನವಾತಿಶಯಂ ಯಶಃ ಪ್ರಕಾಶಿತಭುವನಂ ನವಾಬ್ಜನಯನಂ ನಯನಂದನ ಸಂನುತಂ ತನುಕೃತ ಕಳಿಕಾಳಿಮಂ ಮಳಿನದೂರಿತನಿರ್ಮ್ಮಡಿ ರಾಚಮಲ್ಲಭೂಪತಿತಿಳಕಂ ಕಳಾ

೨೨. ಕುಶಳನಾಹವಚಕ್ರದೊಳಾ ತ್ರಿವಿಕ್ರಮಂ ‖ಕಂ‖ ಪೊಡವಿಯ ಸಮಸ್ತ ಭಕ್ತರನಡುವೆ ಮೃಡಂ ಮೆಚ್ಚಿ ನಿಚ್ಚವರವಂ ಕುಡಲಿಮ್ಮಡಿರಾಚಮಲ್ಲದೇವಂ ಪಡೆದಂ ನಿತ್ಯ ಪ್ರಾಸದರಾಜ್ಯಶ್ರೀಯಂ ‖ ವ ‖ ಅಂತನಿಸಿ ನೆ

೨೩. ಗಳ್ದ ಶ್ರೀಮನ್ಮಹಾಮಂಡಳೇಶ್ವರನಿರ್ಮ್ಮಡಿರಾಚಮಲ್ಲದೇವನ ರಾಜ್ಯಮುತ್ತರೋತ್ತರಂ ಸುಸ್ತಿರಮಾಗುತ್ತಿರೆ | ತತ್ಪಾದಪದ್ಮೋಪಜೀವಿ ಶಿವೈಕಭಾವಿ ಕಾಶ್ಯಪಗೋತ್ರಪವಿತ್ರಂ ಆಚ್ಚರಸನಪುತ್ರಂ ಸರ್ವ್ವಾಧಿ

೨೪. ಕಾರಿ ತೆಲಗರಮಾರಿ ಪತಿಕಾರ್ಯ್ಯಧುರಂಧರನಭಿನವ ಯುಗಂಧರಂ ವಾಜಸನೇಯಕುಳಾಂಭರ ದ್ಯುಮಣಿ ಮಂತ್ರಿಚೂಡಾಮಣಿ ಸ್ವಯಂಭುದೇವಲಬ್ಧವರ ಪ್ರಸಾದಂ ಶ್ರೀಮನ್ಮಾಹಾ ಪ್ರಧಾನಂ ಹಡಪವ

೨೫. ಳಂ ಬೇಚಿರಾಜನ ಮಹಿಮೆಯೆಂತದಡೆ ‖ಕಂ‖ ಒಡೆಯನೊಡಲಂ ದೇವರ್ಗ್ಗೊಡನೊಡನೆ ನಿವೇದಿಸು (ತ್ತು *) ಶಿವಸನ್ನಿಧಿಯಂ ಪಡೆದಂ ಲೋಕದೊಳೊರ್ವ್ವನಿ ಹಡಪವಳಂ ದಂಡನಾಯಕಂ ಬೇಚರಸಂ ‖ವ‖ ಅಂತಾ ಬೇಚರ

೨೬. ಸಂ ಶ್ರೀಸ್ವಯಂಭುದೇವರ್ಗ್ಗೇ ದೇವಾಲಯಮನೆತ್ತಿಸಿ ನಿಜಪತಿಗೆ ಧರ್ಮ್ಮಕಾರ್ಯಮಂ ವಿಜ್ಞಾಪಿಸಲು ಶ್ರೀಮನ್ಮಹಾಮಂಡಳೇಶ್ವರಂ ಪಿರಿಯರಾಚಮಲ್ಲದೇವರಸರ್ ಶ್ರೀಸ್ವಯಂಭುದೇವರಂಗಭೋಗರಂಗ ಭೋಗಕ್ಕಂ

೨೭. ಅಲ್ಲಿಯ ಸ್ಥಾನ ಆಚಾರ್ಯ್ಯರು ಸ್ವಸ್ತಿ ಯಮನಿಯಮಸ್ವಾಧ್ಯಾಯಧ್ಯಾನಧಾರಣ (ಮೋ) ಮೌನಾನುಷ್ಠಾನ ಶಿವಪೂಜಾ ತತ್ಪರರಪ್ಪವರ ಮಹಿಮೆಂತೆದಡೆ ‖ಕಂ‖ ಆ ಲಕುಳೀಶ್ವರಾಗಮ ಕಾಳಾ (ಲಾ) ಮುಖ

೨೮. ದರ್ಶನಂಗಳನ್ತಾಳ್ದಿ ತಪೋಲೀಲೆಗೆ ಮೈವಾಂತಿರ್ಪ್ಪಂ ಬಾಲಶಿವಾಚಾರ್ಯ್ಯವರ್ಯ್ಯನ ಗಣಿತ ಧೈರ್ಯ್ಯನ್ ‖ವ‖ ಅಂತೆನಿಸಿದ ಬಾಲಶಿವಾಚಾರ್ಯ್ಯರ ಕಾಲಂಕರ್ಚ್ಚಿವಾ (ಧಾ)ರಾ ಪೂರ್ವ್ವಕಂ ಮಾಡಿ ಸ(ಶ)ಕ ವ

೨೯. ರ್ಷ ೧೦೯೫ ನೆಯ ವಿಜೆ(ಜ)ಯ ಸಂವತ್ಸರಧ (ದ) ಮಾರ್ಗ್ಗಶಿರದಮಾವಾಸ್ಯೆ ಸೋಮವಾರ ಸೂರ್ಯಗ್ರಹಣ ತಾ(ತ) ತ್ಕಾಲದಂದು ಶ್ರೀಸ್ವಯಂಭುದೇವರ್ಗ್ಗೆ ಕೊಟ್ಟ ಕೆಯಿ ಕುಙ ಗೋಡಿಂ ಮೂಡವೊಲದಲ್ಲಿ ನೀರ

೩೦. ಹಳ್ಳದಿಂ ಪಡುವಲತಕ್ಕಿಲಮತ್ತರು ೩ ಅರಸರಕಮ್ಮತದಿಂ ಪಡುವಲಸೌಳಮತ್ತರ್ ೧ ಪುಂಡರೀಕನ ಕಟೆಯಿಂ ಮೂಡಣ ಪೂದೋಂಟ ೧ ದೇವರ ಮುಂತಣ ಗಾಣ ೨ ಹಾಹೆಕಲ್ಲ ಮೂ

೪೧. ಡ ವೊಲದ ಬಲ್ಲಕುಂದೆಯ ಹೊಳೊವೇಱಿಯಿಂ ಪಡುವಲು ತಕ್ಕಿಲ ಮತ್ತರ್ ೧೨ ಆ ವೂರ ಎರದ ಕೆಱೆಯಿಂ ತೆಂಕಲು ಕಿಸುವೆತ್ತರ್ ೫ ಭಾಡನಹಟ್ಟಿಯಲು ಧರ್ಮೆತದ ಸ್ಥಳದಿಂ ತೆಂಕಲು ತಕ್ಕಿಲ ಮ ೧

೪೨. ಅಲ್ಲಿ ಬೀಯನಹಟ್ಟಿಯ ದಾರಿಯಿಂ ತೆಂಕಣ ಕಿಸುಕಮ್ಮಂ ೪೫೦ ಬೀಯನಹಟ್ಟಿಯೂರಿಂ ತೆಂಕ ಭೀಮನಾಥದೇವರ ಕೆಯ್ಯಿಂ ಮೂಡಣ ತಕ್ಕಿಲಮತ್ತರ್ ೧ ಕಮ್ಮಂ ೪೫೦ ಅರಕೆ ಱೆಯಲು

೪೩. ದೊಂಡವಟ್ಟಿಯದಾರಿಯಿಂ ಮೂಡಣಸ್ಥಳವೆರಡಕ್ಕಂ ಕಿಸುಕಮ್ಮ ೭೦೦ ಅಲ್ಲಿಯ ಬಾದುಂಬೆಯನಿಂ ಬಡಗಣ ಗದ್ದೆಕಟ್ಟು ೫ ಪುಂಡರೀಕನ ಕೆಱೆಯ ಕೆಳಗೆ ಗದ್ದೆಕಟ್ಟು ೩ ಇಂತಿವಿನಿತುಂ

೪೪. ಹಿರಿಯ ರಾಚಮಲ್ಲದೇವರು ಮುನ್ನಂ ಕೊಟ್ಟಿರ್ದ್ದವು (॥*) ಮತ್ತಂ ಸಿಂದಗೋವಿಂದ ಸಿತ (ಗ*) ರಗಣ್ಡಂ ಪಾತಾಳಚಕ್ರವರ್ತಿ ಭೋಗವತಿಪುರವರಾಧೀಶ್ವರಂ ಶ್ರೀವೀರಕಲಿ ದೇವನಿತ್ಯಪ್ರಸಾದಂ ಶ್ರೀ

೪೫. ಮನ್ಮಹಾಮಂಡಲೇಶ್ವರಂ ಯಿರ್ಮ್ಮಡಿರಾಚಮಲ್ಲದೇವರಸರು ಶಕವರ್ಷ ೧೧೦೩ ನೆಯ ಪ್ಲವಸಂವತ್ಸು (ತ್ಸ)ರದ ಕಾರ್ತ್ತಿಕಪುಣ್ಣಮಿ ಸೋಮವಾರಸೋಮಗ್ರಹಣದಂದು ಶ್ರೀಪುರವನಗ್ರಹಾರವಂ ಮಾಡುವ ಕಾಲದಲು ಬಾಲಶಿವದೇವ

೪೬. ರ ಕಾಲಂಕರ್ಚ್ಚಿಧಾರಾಪೂರ್ವ್ವಕಂ ಶ್ರೀಸ್ವಯಂಭುದೇವರಂಗಭೋಗ ರಂಗಭೋಗ ನೈವೇದ್ಯ ಜೀರ್ಣ್ಣೋದ್ಧಾರ ಚೈತ್ರ ಪವಿತ್ರ ಸ್ವಾಧ್ಯಾಯ ವೈಶೇಷಿಕ ಬ್ಯಾಖ್ಯಾನ ಖಣ್ಡಿಕ ಶಿವಧರ್ಮ್ಮಪುರಾಣ ಪಠನವನ್ನದಾನವಿನ್ತಿನಿತಕ್ಕಂ ತೆಕ್ಕೆಕಲ

೪೭. ಹೊಲವೇರೆಯಿಂ ಮೂಡಲ್ ಅರಳಿಯಹಾಳ ಸೀಮೆಯಿಂ ತೆಂಕಲ್ ಹಂಗವೆಯಿಂ ಪಡುವಲ್ ಗೊಱನಹಾಳ ಸೀಮೆಯಿಂ ಬಡಗಲ್ ಬಲ್ಲಕುಂದೆನಾಡ ಬಳಿಯ ಪೂರ್ವ್ವಸೀಮಾನ್ವಿತವಾಗಿ ಕೊಟ್ಟಲ್ ಜಿನ್ತೆಗ್ರಾಮ ೧ (॥*)

೪೮. ಮತ್ತಂ ಕುಱುಗೋಡ ಹೊಲದಲು ಉಪ್ಪುವಳ್ಳದಿಂ ಮೂಡಣ ಕಿಸುಮತ್ತರ್ ಒರವಾಯಲೂರಿಂ ಮೂಡಲ್ ಅರಕೆಱೆಯ ಹೊಲವೇರಿಯಿಂ ಪಡುವಲ್ ತಕ್ಕಿಲಮ ೧ ಕಮ್ಮ ೩೦೦ (॥*) ಮತ್ತ ೧ ಬೇಚ್ಚೆಯನೊಡಲೆ ಕೈಲಾಸಕ್ಕೆ ಹೋಹ

೪೯. ಸಮೆ(ಮ)ಯದಲಗ್ನಿ ಪ್ರವೇಶವಂ ಮಾಡುವಲ್ಲಿ ಧರ್ಮಪತ್ನಿ ಪತಿಬ್ರತೆ ಬೈಳಿಯಕ್ಕನುಂ ಮಳ್ವಾಣಿಯಕ್ಕುನುಂ ಶ್ರೀಮದರಸರಂ ಬೇಡಿಕೊಂಡು ಮಣಿವೂರ ಸ್ಥಳದಲು ತುಂಗಭದ್ರಾ ದೇವಿಯಂ ತೆಂಕಲ ಸೂಗೂರ ಹೊಲೆವೇರೆ

೫೦. ಯಿಂ ಮೂಡುವಲು ಕೊಟ್ಟ ತಕ್ಕಿಲುಮತ್ತರ ೨ ಚೆನ್ನಗೆಯ್ಯದ ನಖರಂಗಳು ಕೂಡಿ ಅಚ್ಚಿನ ಮೊಳೆಯಲ್ಲಿ ಕೊಟ್ಟ ದಳಕ್ಕೆ ವೀಸ ೨ ಕಾಣಿ ೨ ಮತ್ತವರು ಕೊಂಟ (ಡ)ಲ್ಲಿ ಸೊ ೨ ಕೊಟ್ಟಲ್ಲಿ ಸೊ ೨ ಮತ್ತಂ ಅಂಗಡಿಯಲು ಸಟ್ಟ (ಟ್ಟು) ಗಾಯಂ ೧

ಎ.ಇ., XIV, ಪು. ೨೬೫

**೫. ಅದೇ ಶಾಸನದ ಹಿಂಬದಿಯಲ್ಲಿ**

೧. ಶ್ರೀ ಮದುದ್ಭವರಾಚಮಲ್ಲೇಶ್ವರಾಯ (ನಮಃ॥*) ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ । ತ್ರೈಳೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ॥

೨. ಶ್ರೀಮತ್ ಶೈಲೇಂದ್ರಪುತ್ರೀಪತಿ ನಮಗಭಿವಾಂಛ್ಛಾರ್ತ್ಥಮಂ ಮಾಳ್ಕೆ ತೇಜಸ್ತೋಮಂ ಪ್ರಸ್ತುತ್ಯ ನಿತ್ಯೋದ್ಭವವೆಸರ್ವೆಸವೀ ರಾಚಮಲ್ಲೇಶ್ವರಾ

೩. ಖ್ಯೋದ್ದಾಮಂ ನಿಸ್ಸೀಮನಾಮಂಸ್ತುವದಖಿಳ ಲಸತ್ಸಾಮನಾತ್ಮಾಭಿರಾಮಂಭೀಮಂ ಜೂಟಾಗ್ರಸೋಮಂ ವಿನುತಜನ ಮನಃ ಪ್ರೇನುಧ್ರಿಗುಲಲಾಮಂ ॥ ಜಳಕಲ್ಲೋಳಾಳಿಬಾಹಾ

೪. ಯುಗಳ | ವೆಸವಿ (ವ)ಕೂರ್ಮ್ಮಂ ಪದಂ | ಬಾಳಮಿಂ ಕಣ್ | ಪೊಳೆವುನ್ಮು ಕ್ರಾಫಳಂ ಪಲ್ | ಕುಳಿರಮೆ ನಖ | ವಾ ಕಂಬು ಕಂಠಂ | ಸುನೀಳಂವಿಳಸತ್ಕೇಶಾವಕಾಶಂ | ತೊಳಸುವ ಪವಳಂ ಬಾಯ್ | ಕರಂ

೫. ಪದ್ಮರಾಗಂ ತಳಮಾಗಲ್ | ರೇಜಿ ರತ್ನಾಕರನವೊಲೆಸೆಗುಂ ರಾಜಚಂದ್ರಸಮುದ್ರಂ || ಅಂತೆನಿಸಿದ ಗಂಭೀರರ ರತ್ನಾಕರನಿಂ ಪರಿವೃತವಾದ ಜಂಭೂದ್ವೀಪದ ಭರತಕ್ಷೇತ್ರದೊಳು ||

೬. ಕುಂತಳ ವಿಷಯಮಂಟಪಲ್ಲಿ || ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀಪೃಥ್ವಿವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರಂ ಪರಮಭಟ್ಟಾರಕಂ ಸತ್ಯಾಶ್ರಯ ಕುಟ(ಳ) ತಿಳಕಂ ಚಾಳುಕ್ಯಾಭರಣಂ

೭. ಶ್ರೀಮತ್ರಿಭುವನಮಲ್ಲ ವೀರಸೋಮೇಶ್ವರದೇವನ ರಾಜ್ಯ ಮುತ್ತರೋತ್ತರವಾಗುತ್ತಿರಲಿತ್ತಲ್ || ವೃ || ಅನ್ತೆನಿಸಿರ್ದ್ದ ಭಾರತಮಹೀಮಹಿಳಾ ಮಹನೀಯ ಭಾಳದೊಳು ಕಂತಳ

೮. (ದನ್ತೆ) ಶೋಭಿಸುವ ಕುಂತಳಭೂತಳಭಾಮೆಗೋವಗಂ ಕಾಂತಮುಖಾಂತದೊಳ್ಬಿಡಿದ ಕಂಣಡಿನಯನ್ನಮೆ ಚೆನ್ನನಾಗಿವೋರನ್ತಿರೆ ಬಲ್ಲಕುಂದೆನಾಡುನಾಳ್ಕರಮೊಪ್ಪುಗುಮೆತ್ತ ನೋಳ್ಪೊಡಂ ||ವ|| ಅನ್ತಾನಾ

೯. ಡ ನಡುವೆ ರಾಜದ್ರಾಜನಗರ ರಮಣೀ ರಮಣೀಯಮಣಿದರ್ಪ್ಪಣಾಯಮಾನಮೆನಿಸೆ ಭಗ್ಗಾದ್ರಿಯಂತಾರ್ಗ್ಗ ವರೀದುರ್ಗ್ಗಮಮಾದ ಕುಬುಗೋಡಗಿರಿದುರ್ಗ್ಗದಪೊಱವೊಳಲ ವಿಳಾಸಮೆಂತೆಂದಡೆ ||ಕಂ||

೧೦. ನಾರದನನತೊಱದೆ ಸರದಿಂತಾರಾಪಥದಂತೆ ರಾಜಹಂಸಾನ್ವಿತದಿಂ ಕ್ಷೀರಾಬ್ಧಿಶಯನ ನುರದವೊಲಾರಮೆಯಿನ್ತುಱುಗಿ ಪೊಱವೊಳಲು ಸಾ(ಸೊ) ಗಯಿಸುಗುಂ|| ಮತ್ತಮಾ ಪುರಾಂತರದ್ಭಾಗಮೆಂತೆ

೧೧. (ಂದಡೆ ||ವೃ|| ಭರದಿಂದೌರ್ವ್ವಾನಲಂ ತಂನೊಳಗಣಜಲಮಂಪೀರ್ವ್ವೆನೆಂದಬ್ಧಿನಾಥಂ ಪಿರಿದೊಂದಾಶಂಕೆಯಿಂದೀ ಪುರದೊಳೆ ನವರತ್ನಂಗಳಂ ಬೈತನೆಂಬಂತಿರಲಿರ್ಕ್ಕುಂ ಕ್ಷತ್ರರತ್ನಂ | ಚತುರಯುವತಿ ರತ್ನಂ |ಸ

೧೨ (... ರ)ತ್ನಂ | ವರರತ್ನಂ | ವೀರರತ್ನಂ | ಸುಜನಪುರುಷರತ್ನಂ | ಗಜಾಶ್ವಾದಿರತ್ನಂ || ವ || ಅಂತಾಪುರಕ್ಕಧೀಶ್ವರಂ ಮಹಾಮಂಡಳೇಶ್ವರಂ ಸಿಂದಕುಳಕಮಳಮಾರ್ತ್ತಂಡಂ ಸಿತಗರಗಣ್ಣನುಮೆನಿಸಿ ನೆಗಳ್ದ ಶ್ರೀಮದ್ರಾಚಮಲ್ಲದೇವನ

೧೩. ಮಹಿಮೆಯೆಂತೆಂದಡೆ || ವ್ರಿ(ವೃ) || ವರಮಾರ್ಗ್ಗಂ | ಶ್ರೀನಿಸರ್ಗ್ಗಂ | ವಿನಯ ವಿನತ ಭರ್ಗ್ಗಂ | ಚಿತಾರಾತಿವಗ್ಗಂ | ಸ್ಥಿರಕಾರ್ಯ್ಯಂ | ಮೇರುಧೈರ್ಯ್ಯಂ | ಸುಜನವನಜಸೂರ್ಯ್ಯಂ | ಮಹೀಪಾಳವರ್ಯ್ಯಂ | ಸಮರೂಪಂ | ಸ

೧೪. ಪ್ರತಾಪಂ ಕೃತ ರಿಪುನೃಪತಾಪಂ ಕಾಳಾಳೀ ಕಳಾಪಂ | ಧರೆಗೆಲ್ಲಂ ರಾಚಮಲ್ಲಂ ಕುಡುತವಿರಲೆ ಬಲ್ಲಂ ಯಶಃ ಶ್ರೀಗೆ ನಲ್ಲಂ || ಅಂತಾ ಸುಖಸಂಕಥಾವಿನೋದದಿನಿರುತ್ತಿರೆ ||ವೃ|| ಧರೆಗಾಶ್ಚ

೧೫. ರ್ಯ್ಯದೆ ರಾಚಮಲ್ಲ ಮಹಿಪ (ಂ) ಗೋಭೂಹಿರಣ್ಯಾಂನಪಾನ ರಸಾದ್ಯಾಖಿಳದಾನದಿಂ ತಣಿಪಿಶಿಷ್ಟೇಷ್ಟಾರ್ಥ ಸದುಭಕ್ತರಂ ಪಿರಿದುಂ ಮನ್ನಿಸಲೀಶ್ವರಂ ವರದನಾಗಳ್ ರಾಜ್ಯಮನ್ತಾಳ್ದಿವಿಸ್ತರಿಸುತ್ತೊಪ್ಪಿ

೧೬. ರೆ ದೇವರೊಂದುದಿವಸಂ ಪ್ರತ್ಯಕ್ಷದಿಂ ಬೆ (ಬ) ರ್ಪ್ಪುಧು (ದು)ಂ ||ವ|| ಆಗಳ್ ನಂದಿನಾಥ ನಂದಿ ಮಹಾಕಾಟ (ಳ) ವೀರಭದ್ರ ಪ್ರಮುಖಪ್ರಮಥಯೂಥ ಸಮೇತನುಂಹರಿವಿರಂಚಿ ಸುರಾಸುರೋರಗಾದಿ ಪ್ರಸಿದ್ಧಾ

೧೭. ಮರ ಗಣ ಸೇವಿತನುಮೆನಿಸಿ ಪಾರ್ವ್ವತೀಪತಿಬಂದವತರಿಸಿ ನಿಂದಿರಲ್ ರಾಚಮಲ್ಲರಸಂ ಭೋಂಕನೆ ಕಂಡುಪೊಡವಟ್ಟಾನಂದದಿಂ ಕರಕಮಳಮುಕುಳಿತನಾಗಿರಲ್ ಹರ(ಂ) ದರಹಸಿತವದನಾರವಿಂದಂ ಕೈಲಾಸಾವ

೧೮. ಳೋಕನಾರ್ಥವಭಯ ಹಸ್ತಾವಳಂಬಕನಾಗೆ ಮಹಾಪ್ರಸಾದಮೆಂದು ಮಹಾವಿಭೂತಿಯಿಂ ಗಣಾಡಂಬರವಂ ಮಾಡಿ ಶಿವಾರ್ಚನೆಯನಾಡಿ ॥ವೃ॥ ಧರೆಗಿಂತತತ್ಯಂತಚೋದ್ಯಾವಹಮೆನೆ ಶಿವಲಿಂಗಾರ್ಚನಂ ಮಾಡಿ

೧೯. ಪೃಥ್ವೀಭರ ರಾಜ್ಯಶ್ರೀಯುಮಂ ಸಂತತಿಗೆ ನಿಲಿಸಿದಂ ರಾಚಮಲ್ಲಂ ಶರೀರಂ ಬೆರೆಸುತ್ತುಂಗಾಶ್ವ ಚಂಚಚ್ಚಾಮರರುಹೆ(ಹ) ಶಿ(ಸಿ)ತ ಛತ್ರಚಿಹ್ನಾನ್ವಿತಂ ಶಂಕರನೊಳ್ ಸಾಲೋಕ್ಯಮಂ ಪೊರ್ದ್ದಿಯುಮವಂಗೆ ಸಾಯು

೨೦. ಜ್ಯದಿಂ ಲಿಂಗವಾಡೆ ॥ ಅಂತು ಕುಱುಗೋಡ ಪಟ್ಟಣದ ಶ್ರೀಸ್ವಯಂಭುದೇವರ ಪಶ್ಚಿಮಾಭಿಮುಖದೊಳು ಬಂದು ನಿಂದು ಸಕಳ ಲೋಕಕ್ಕೆ ಕೌತುಕಮಾಗಿ ಲಿಂಗಮೂರ್ತಿಯಿಂದುದ್ಭವಿಸಲು ಶ್ರೀ

೨೧. ಮದುದ್ಭವರಾಚಮಲ್ಲೇಶ್ವರದೇವರೆಂಬ ಪೆಸರಂ ತಾಳ್ದಿ ಸುಪ್ರಸಿದ್ಧಮಾಗಿರೆ ॥ ಮತ್ತಂ ತದೀಯಂಸಂತತಿ ಯಡಗುಂತಿಯೆಂತೆಂದಡೆ ॥ವೃ॥ ಮದವದ್ವೈರಿ ಕರೀಂದ್ರ ಕೇಸರಿಯೆನಿಪ್ಪಾ ರಾಚಮಲ್ಲಂಗವಾಸ್ವ

೨೨. ದದಿಂ ಸೋವಲದೇವಿಗನ್ತುನುಜನಾಗಿರ್ದ್ದಾಂಯಿರುಂಗೋಳ ಭೂವಿದಿತಂಗೇಚಲ ದೇವಿಗಂ ತನಯನಾದಂ ಕ್ಷತ್ರ ಚಾರಿತ್ರ ಸಂಪದನಿಂತಿಮ್ಮಡಿ ರಾಚಮಲ್ಲಮಹಿಪಂ ಶ್ರೀಸಿಂದನಾರಾಯಣಂ

೨೩.॥ವ॥ ಅಂತಾತನೊಳು ಬಲಂಗೊಂಡು ಕಲಿತನಳಬಲುಪಿಂ ಕಾದಿ ಗೆಲಲಾರ್ಗ್ಗಮರಿದೆಂತೆನೆ ॥ ವೃ ॥ ಪುಲಿಮೊಲೆವಾಲನೂಡೆ । ಫಣಿಪಂಪೆಡೆಯಂ ಕೊಡೆಯೆತ್ತೆ ಸಿಂಧೂರಂ ಸಲಲಿತ ಭದ್ರವಿಷ್ಟರಮದಾಗೆ ।ಚ

೨೪. ಮಚ್ಚಮರೀ ಮೃಗಾಳಿಕೋಮಳ ಚಳಚಾರುಚಾಮರಮನಿಕ್ಕೆ । ದಿಟಂಕಲಿದೇವನಾವಗಂ ಕುಲದಧಿದೈವ ವಾಗೆ । ಗೆಲಲಾರ್ದ್ದೊರೆಯಿಮ್ಮಡಿರಾಚಮಲ್ಲನೊಳು ॥ ಮತ್ತಂ ॥ ವೀರಶ್ರೀ

೨೫. ಕಲಿದೇವದೇವನಭವಂ ನಿತ್ಯಪ್ರಸಾದೋದ್ಭವೋದಾದ ಶ್ರಿಯನನಾರತಂ ಕುಡುತಿರಲ್ ಶ್ರೀಚಾರುವಾಕ್ಯೈಲ ಸದ್ವೀರ ಶ್ರೀರುಚಿರೇಂದು ಕುಮುಧ (ದ) ನಿಭಕಿರ್ತ್ತಿ ಶ್ರೀ

೨೬. ಯುಮ (ಂ) ಭಾಗದೊಳ್ । ರಾರಾಜನ್ಮುಖದೊಳ್ । ಭುಜಯುಗಳದೊಳ್ । ದಿಕ್ಚಕ್ರದೊಳ್ । ವರ್ತ್ತಿಸಲ್ ವೀರಂಗಿಮ್ಮಡಿರಾಚಮಲ್ಲಮಹಿಪಂಗಿನ್ನಾರ್ಪ್ಪರೇಂ ಬಂದಪರ್ ॥ ಇಂತು ನೆಗಳ್ತೆಗಂ ಪೊಗಳ್ತೆಗಂ

೨೭. ನೆಲೆಯೆನಿಸಿ । ಸ್ವಸ್ತಿಸಮಧಿಗತ ಪಂಚಮಹಾಶಬ್ಧಮಹಾಮಂಡಳೇಶ್ವರನುಂ ಬಲ್ಲಕುಂದಾ ದೇಶಾಧೀಶ್ವರನುಂ ಭೋಗಾವತೀಪುರವಾದೀಶ್ವರನುಂ ಸಿಂದಕುಳಕಮಟ (ಳ)

ಮಾರ್ತ್ತಾಂಡನುಂ ಸಿತಗರಗಂಡನುಂ ಶಾರ್ದ್ದೂ

೨೮ ಳವಿಜಯಪತಾಕನುಂ ಸಮುದ್ಧಂಡಮಂಡಳಿ (ಳೀ) ಕಭಯಂಕರ ಚತುರಂಗಾನೀಕನುಂ ದಶದಿಶಾವರ್ತ್ತಿತ ಧವಟ (ಳ) ಕೀರ್ತ್ತಿಯಂ ಪಾತಾಳಚಕ್ರವರ್ತ್ತಿಯುಂ ಶ್ರಿವೀರಕಲಿ ದೇವದಿಬ್ಯಶ್ರೀಪಾದ

೨೯. ಪದ್ಮನಿತ್ಯ ಪ್ರಸಾದಾಸಾದಿ ತಾತ್ಮಪ್ರಭಾವನುಂ ಸಂಗಡದಮಂಡಳೀಕರ ತಲೆಯಂಕಾವನುಂ ಬೇಡಿದರ್ಗ್ಗಿಲ್ಲೆನ್ನದೀವನುಮೆನಿಸಿ ನೆಗಳ್ದ ಶ್ರೀಮದಿಮ್ಮಡಿರಾಚಮಲ್ಲದೇವಂ ಕುಱು ಗೋಡು ಪಟ್ಟ

೩೦. ಣದೊಳ್ ಸುಖಸಂಕಥಾವಿನೋದದಿಂ ರಾಜ್ಯಮ್ಗೆಯ್ಯುತ್ತಮಿರೆಯಿರೆ ತತ್ಪಾದಪದ್ಮೋದಜೀವಿ ಮಹಾಪ್ರಧಾನಂ ವಿಬುಧೈಕ ಬಾಂಧವಂ ಶ್ರೀಕರಣಂ ರೇಚಿರಾಜನನ್ವಯವೆಂತೆಂದಡೆ ॥ವೃ॥ ಸ್ವಸ್ತಿಶ್ರೀ

೩೧. ಚಂದ್ರ ವಂಶೋದ್ಭವಹಿರತಕುಳಂ ಕಂಮ್ಮೆಸಕ್ತೀರ್ತಿವಲ್ಲಿ ವಿಸ್ತಾರಾತಾರಾಚಳ ಭುವನತಳಂ ತಾನೆನಲ್ ಸತ್ಕವೀಂದ್ರಪ್ರಸ್ತುತ್ಯಂ ರೇಚಿರಾಜಂಗನುವಶೆಗುಣಿ ರೇಕಾಂಬಿಕಾದೇವಿಗಂ ಸಂತ್ರ

೩೨. ಸ್ತಾರಾತಿಪ್ರಧಾನಂಸುತನುದಯಿಸಿದಂ ಸಾಯಿದೇವಪ್ರಧಾನಂ ‖ ರಾಮಂಗಾರಾಮೆ ಯೆಂತತಮರಪತಿಗೆ ಪೌಳೋಮಿಯೆಂತಂತೆ ಲಕ್ಷ್ಮೀಧಾಮಂಗಾಲಕ್ಷ್ಮೀ (ಕ್ಷ್ಮಿ) ಯೆಂತಂತನುರಿಪುಗು

೩೩. ಮಾದೇವಿಯೆಂತಂತೆ ತಾರಾರಾಮಂಗೆ ರೋಹಿಣೀಪ್ರೇಯಸಿಬ ಸೊಗಯಿಪಳೆಂತಂತಮಾತ್ಯ.... ಓದಾಮಂ ಶ್ರೀಸಾವಿದೇವಂಗತಿಪತಿಹಿತೆ ಸಾವಿತ್ರೆ (ತ್ರಿ) ಯಂತೊಪ್ಪುತಿರ್ದ್ದಳ್ ‖ ಅಂತಾ ಶ್ರೀ

೩೪. ಸ್ವಾಮಿದೇವಂಗಂ ಸಾವಿತ್ರೀದೇವಿಗೆ ‖ ವ್ರಿ (ವೃ) ‖ ರಾಜತ್ ಶ್ರೀಸ್ವಾಮಿದೇವಂಗನುವ ಶಿಗುಣಿ ಸಾವಿತ್ರಿಗಂ ಪುಟ್ಟಿದಂ ಶ್ರೀಭಾಜಂತಿಗ್ಮಾಂಶುತೇಜಂ ಗತಭಯಹೃಧ (ದ) ಯಾಂ ಭೋಜನಾ ಪು

೩೫. ಣ್ಯಬೀಜಂ ಭ್ರಾಜತ್ಕಾಂತಾಮನೋಜಂ ವಿಬುಧವಿಭುಧಭೂಜಂ ಯಶಃಶ್ರೀಸಮಾಜಂ ನೈಜೋನ್ಮಂತ್ರಾಬ್ಧಿರಾಜಂ ಸುವಿಭವ ಸುಮನೋರಾಜನೀ ರೇಚಿರಾಜಂ ‖

ಎ.ಇ. XIV. ಪು. ೨೭೯

**೬. ಶಾಂತಮಲ್ಲಿಕಾರ್ಜುನ (ಉಜ್ಜ್ವಾಳೇಶ್ವರ) ದೇವಾಲಯದ ಗರ್ಭಗೃಹದ ಬಾಗಿಲ ಚಾಮರಧಾರಿಯ ಶಿಲ್ಪದ ಕೆಳಗೆ**

೧. ಲೋಕಾಹುರದ ಜೋ. ಲದೇವಿ

ಕರ್ನಾಟಕ ಭಾರತಿ ಸಂ.೭

**೭. ಅದೇ ಬಾಗಿಲವಾಡದ ಇನ್ನೊಂದು ಬದಿ**

೧. ಲೋಕಾಹುರದ ದೇವಲದೇವಿ

ಕರ್ನಾಟಕ ಭಾರತಿ ಸಂ.೭

**೮. ದೊಡ್ಡ ಬಸಪ್ಪನ ಗುಡಿಯಲ್ಲಿರುವ ಬಸವಣ್ಣನ ಕಂಬದ ಮೇಲೆ**

೧. ಸ್ವಸ್ತಿ ಶ್ರೀ ಜಯಾಭ್ಯುದಯ

೨. ಶಾಲಿವಾಹನ ಶಕ ವ

೩. ರುಸ ೧೪೩೫ ನೆಯ

೪. ಆಂಗೀರಸ ಸಂವಛ

೫. ರದ ಆಸ್ವಿಜ ಶು ೧೪

೬. ಸೋಮಾಪರಾಗ ಪುಂ

೭. ಣ್ಯಕಾಲದಲು ಕುಬು

೮. ಗೋಡ ಬಸವಣ್ಣನಾ

೯. ಯಕರ ಮಕಳು ಮಲ್ಲ

೧೦. ಪನಾಯಕರ ಧರ್ಮ

೧೧. ಪತ್ನಿಯಾದ ಬಲ್ಲಕು

೧೨. ಂದ ಮಾದಪನಾಯಕ

೧೩. ರ ಮಗಳಾದ ಮಲ್ಲಂ

೧೪. ಮನೂ ಕುಋಗೋಡ ಸಿ

೧೫. ಮಕ್ಕೆ ಯಿಶಾಂನ್ಯ ದಿಕಿ

೧೬. ನ ಹೂಜೆಹಾಳ ಶಾ

೧೭. ಂತಮಲ್ಲಿಕಾರ್ಜುನದೇ

೧೮. ವರ ದೇವಾಲಯ ಬಾ

೧೯. ವಿನು ಜೀಂರ್ನ್ನೋದಾರ

೨೦. ವ ಮಾಡಿ ದೇವರ ಹೂ

೨೧. ವಿನ ತೋಟಕ್ಕೆ ಬಿಟದು

೨೨. ದೇವಸ್ಥಾನಕ್ಕೆ ಮೂಡಲ

೨೩. ಬಾವಿಯಿಂ ಇ ಬಡ

೨೪. ಗಲಾದ ತೋಟಸ್ತಳ

೨೫. ವೊಕುಳದ ಹೊಲಂ

೨೬. ನು ತಮಗೆ..

೨೭. ರಗಳಾಗ ಬಿ...

೨೮. ದೇವರಿಗೆ ಸಮರ್ಪಿಸ್ತಾ

೨೯. ರು ಯೀ ಧರ್ಮ್ಮ

೩೦. ವ ಕಾಉ

೩೧. ದು ಆರು ತಪಿದವರು

೩೨. ವಾರಣಾಸಿ.. ತಡಿಯ

೩೩. ಲ್ಲಿ... ಅನಂತ ಕಫಿ

೩೪. ಲೆ ಕೊಂದ ಪಾಪಕ

೩೫. ಹೋಹರು || ಈ ವಿಧಿ

೩೬. ರ್ಮವ ಉದರಿಸಿ ನಡೆ

೩೭. ಸಿದವರಿಗೆ ಅಸಂ

೩೮. ಖ್ಯ ಲೋಕ...ಟ್ಟು

೩೯. ಫಲವ ಪಡೆವರು ಶ್ರೀ

೪೦. ಶ್ರೀ ಶ್ರೀ ಶ್ರೀ ಶ್ರೀ

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧, ಸಂ ೧೦ (ಬಳ್ಳಾರಿ ತಾ)

**೯. ಬಸವೇಶ್ವರ ದೇವಾಲಯದ ದಕ್ಷಿಣಕ್ಕಿರುವ ಬಂಡೆಯ ಮೇಲೆ**

೧. ಸ್ವಸ್ತಿ ಶ್ರೀ (||*) ಜಯಾಬ್ಧುದಯಶಾಲಿವಾಹನಶಕವರುಷ

೨. ೧೪೫೦ ಸರ್ವಧಾರಿಸಂವಛರದ ಭಾದ್ರಪದ ಬ ೧ ಲು

೩. ಶ್ರೀವೀರಪ್ರತಾಪ ಶ್ರೀಕೃಷ್ಣದೇವಮಹಾರಾಯರಿಗೆ ಪುಣ್ಯವಾಗಬೇಕೆಂ

೪. ದು ಬಾಗಿಲ ಕೃಷ್ಣರಾಯನಾಯಕರು ದೊಡ್ಡ ಬಸವಣಂನ ಅಮ್ರುತಪಡಿಗೆ

೫. ಕೊಟ್ಟದು ಕುಱಗೋಡ ಮೂಡಲ ಹುರಿಗಲ....ಡೆ ಹಾಳಿ ಪರಮಗೊಂಡನು ಮಾಡಿ

೬. ದ ಹೊಲ ಬೀಜವರಿ ಖ || ಹತ್ತುಗೊಳಗದ.....

೭. ಬೀಜವರಿ ಖ | ...... ಬಡಗಲು ಗದೆ......

೮......... ಅಳಿದ ಪಾಪದಲಿ ಹೋಹನು (||*)

ಸೌ.ಇ.ಇ., IX, ಭಾಗ II, ನಂ. ೫೨೪

**೧೦. ಉಂಡಲಿ ಸಂಗಮೇಶ್ವರಮ ಗುಡಿಯ ಮುಂದಿನ ಮಂಟಪದಲ್ಲಿ**

೧. ಶುಭಮಸ್ತು (||*) ನಮಸ್ತುಂಗಸಿರಚುಂಬಿತಚಂದ್ರಚಾಮರಚಾರವೇ | ತ್ರೈ

೨. ಯಿಲೋಕ್ಯನಗರರಂಭಮೂಲಸ್ತ(ಂ)ಭಯ ಶಂಭವೇ । ಸ್ವಸ್ತಿ ಶ್ರೀವಿಜಯಾದ್ಭುದ

೩. ಯಶಾಲಿವಾಹನಶಕವರುಷ ೧೪೬೬ನೆಯ ಶೋಭಕೃತಸಂವಛರದ

೪ (ದ್ವಿ)ತೀಯಶ್ರವಣ ಸುದ ೧೦ ಮಿಯಲು ಶ್ರೀಮತು ಶ್ರೀಮನ್ಮ ಹಾಮಂಡ

೫. ಲೇಸ್ವರ ರಾಜಾಧಿರಾಜ ರಜಪರ (ಮೇಶ್ವರ *) ಶ್ರೀ ಸದಶಿವಮಹಾರಯರು । ಪ್ರತ್ವೀ

೬. ರಾಜ್ಯಂಗೈಉತಿರಲು । ಪ್ರಾಕು ಕೃಷ್ಣರಾಯಮಹರಯರು ಕು

೭. ಋಗೋಡ ಸಂಗಮೇಶ್ವರದೇವರಿಗೆ ಸಾಮಾನ್ಯವಾಗಿ ಕೊಟ್ಟ ಚೆನಕುಂಟೆಯ

೮. ಗ್ರಾಮಉ ಅಚುತರಯಮಹರಯರ ಕಲದಲು ಕಿಋಕುಳ ಉಪ…. .

೯. ವ ಗ್ರಾಮ ಹಳಗಿ ಖಿಲಿವಗಿ ಯಿ(ರ*) ಲಾಗಿ ಸದಶಿವರಯರ ಕರ್ಯಕರ್ತ್ತರ ಗು

೧೦. (ಂಡ) ಯಮಹಾರಾಯನ ಅಳಿಯ ಲಿಂಗರಜಗಳು ಸದಾಶಿವರಯ……

೧೧. ವಾಗಬೇಕೆಂದು ಕುರುಗೋಡ ಸಂಗಮೇಶ್ವರ ದೇವರಿಗೆ ಸ……..

೧೨. ಚೆನಕುಂಟೆಯ ಗ್ರಾ ಕ್ಕೆ ಬಿಟಿ ಕೊಟಣ………

೧೩. ಸದಾಸಿವರಾಯರಿಗೆ ಪುನ್ಯವಗಬೇಕೆಂದು

೧೪. ಚೆನಕುಂಟೆ ಗ್ರಾಮ ತೋಟ ಹಸರುಮಾನ್ಯ ಸಹವಾಗಿ

೧೫…… ನೆರೆದು ಕೊಟೆಉ ತನಿಕನು ಮುದ್ಯೆಯನು

೧೬. ಇದಕೆ ಆರೊಂಬರು ತಂಪಿದರು ಮತ್ತುಗಳ ಕೊಂದ ಪಾ

೧೭. ಪಕೆ ಹೋಹರು ಸಿವಾಚರಕೆ ಕುಲಚರಕೆ ಹೋಹರು

೧೮. ಶ್ರೀ ಶ್ರೀ ( । *)

ಸೌ.ಇ.ಇ., IX, ಭಾಗ II, ನಂ. ೬೦೬

**೧೧. ಅದೇ ದೇವಾಲಯದ ಮುಂದೆ**

೧. ಶ್ರೀ ಸಂಗಮೇಶ್ವರದೇವರ ದೇ

೨. ವ ಕಾರ್‍ಯ್ಯಕ್ಕೆ ಸ್ವದೆಸಿ ಪರ

೩. ದೇಸಿಪಾಧೆ ೧ ಪರಿವರ ಬಿ

೪. ಟ್ಟ ಧರ್ಮ್ಮನೇತ ಅಡುವರು ಜೂ

೫. ಜಡುವರು ಕೊಟ್ಟ ಮೊದಲ ವೊ

೬. ಡವೊಂದೊಂದ ಕೊಟ್ಟ ಧರ್ಮವ ಧರ್ಮ

೭. ಕೈ ಕೇಡು

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ.೧, ಸಂ.೧೭, (ಬಳ್ಳಾರಿ ತಾ.)

**೧೨. ಹಲುಗೋಡೆಯ ಪಾಳು ದೇವಾಲಯದ ದಕ್ಷಿಣದ ಗೋಡೆಯಲ್ಲಿ**

೧. ಶುಭಮಸ್ತು [||*] ಸ್ವಸ್ತಿ ಶ್ರೀಜಯಾಭ್ಯುದಯಶಾಲಿವಾಹನಸಕವರುಷ ೧೪೬೩ ನೆಯ ವಿಶ್ವಾವಸು ಸಂ(ವ)ತ್ಸರದ ಪುಷ್ಯ ಬ ೧೦ ಸೋ ಲು ಶ್ರೀಮ (ಂ)ನ್ ಮಹಾದೇವ ದೇವೋತ್ತಮ

೨. ಕುಟೆಗೋಡ ಬಸ್ತಿಯ ಜಿಂನದೇವರಿಗೆ ಧರ್ಮಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀವೀರಾಪ್ರತಾಪ ಶ್ರೀವೀರಸದಾಶಿವರಾಯಮಹಾರಾಯ ಪೃಥ್ವೀರಾಜ್ಯಂ

೩. ಗೆಯುತ ಯಿರಲು ಶ್ರೀಮ(ಂ)ನ್ ಮಹಾಮಂಡಲೇಶ್ವರ ಕೊಟಗಾರಿ ರಾಮರಾಜವೊಡೆಯರ ಮೊಂಮಕ್ಕಳು ಅಳಿಯ ಲಿಂಗರಾಜಯದೇವ ಮಹಾಅರಸುಗ

೪. ಳ ಅಂಣಂದಿರು ರಾಮರಾಜಯಗಳು ತಂಮ ತಂದೆ ಮಲ್ಲರಾಜವೊಡೆಯರಿಗೆ ಪು(ಂ)ಣ್ಯ ವಾಗಬೇಕುಯೆಂದು ದೇವರ ಅಮ್ರುತಪಡಿನೈವೇದ್ಯಕ್ಕೆ

೫. ಕೊಟ ಹೊಲ ಕೆಳಹುಣಸೇಮರದ ಸ್ತಳದಲು ಮಂಗಜೀಯನವರ ಹೋಬಳಿ (ಪ) ಟ್ಟವಳಿಯವರು ಮಾಡುವ ಎರೆಯಸ್ತಳಂ ವ೧ ಇದರ

೬. ಹೊಲವನು ಹೊಂದಿದ ಮಂಗಜೀಯರ ನೀರಸ್ತಳದ... ಬಿತ್ತ ಬೀಜ ವ ೨ ಉಭಯಂ ಹೊಲಬೀಜ ವ ೩ ತೋಟ ಊರಿಗೆ ಮೂಡಲು ಉಪ್ಪಿನ

೭. ಮೋಳೆಯ ಹೊಂದಿದ ಕೊರವರ ಕನಕನ ತೋಟದ ಸ್ತ ೧ ಕ್ಕೆ ಬೀಜ ವ ೧ ಅಂತು ಸ್ತಳ ೩ ಕೆ ಬೀಜ ೪ ಅಕ್ಷಾರದಲು ನಾಗುಳದ ಬೀಜವರಿ

೮. ಯನು ಜಿಂನದೇವರ ಅಮೃತಪಡಿಗೆ ಕುಬುಗೋಡಗೌಡ ಸೇವಬೋವ ಪಟಣಸ್ವಾಮಿಗಳ ಅನುಮತದಿಂದ ಕೊಟೆಉ ಆಗಿ ಆಚಂ

೯. ದ್ರರ್ಕಸ್ತಯವಾಗಿ ದೇವರ ಅಮ್ರುತಪಡಿ ನಯಿವೇದ್ಯಕ್ಕೆ ಅನುಭವಿಸಬಹುದು ಯಿ ಧ(ಂ)ರ್ಮಕ್ಕೆ ಆರೊಬರು ತಪಿದರೂ ತ(ಂ)ಮ್ಮ ತಂದೆ ತಾಯಿ ಕಾಶಿಯ್ಯಲಿ ಕೊಂದ ಪಾತ

೧೦. ಕಕ್ಕೆ ಹೋಹರು ಗೋಬ್ರಾಂಹ್ಮರ ಕೊಂದ ಪಾತಕಕ್ಕೆ ಹೋಹರು ಎಂದು ಕೊಟ ಧರ್ಮ್ಮದ ಶಿಲಾಶಾಸನ ಸರ್ವಮಾನ್ಯ [||] ಶ್ರೀಮೂಲಸಂಘಬಲಾತ್ಕರಗಣದ ಕಂಮೆವೈಸ್ಯ

೧೧. ಕುಲೋತ್ತಮ ಸೂರಿಯಪ್ಪಸೆಟ್ಟಿರ ಮಗ (ಗೋಮಿ) ಸೆಟ್ಟಿ ತತ್ಸಂವತ್ಸಂರದ ಪಾಲ್ಗುಣ ಶುಧ ೨ ಸೋ ಲು ಜೀರ್ಣೋದ್ಧಾರಣೆಯ ಮಾಡಿಸಿ ಸಮಸ್ತಸ್ರಾವಕರಿಗೆ ಪು(ಂ)ಣ್ಯ ವಾಗಬೇಕೆಂ

೧೨. ದು ಮಾಡಿಸಿದ ಜಿನಶಾಸನ ಶ್ರೀ ಶ್ರೀ ಶ್ರೀ

೧೩. ಪದ್ಮರಸಪಂಡಿತ ಅನುಕೂಲವಾಗಿ ಮಾಡಿಸಿದನು ಶ್ರೀ ||

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ.೧, ಸಂ.೧೫, ಬಳ್ಳಾರಿ ಜಿ. (ಬಳ್ಳಾರಿ ತಾ.)

**೧೩. ಗ್ರಾಮದ ಸಮೀಪ ಹನುಮಂತನ ಬೆಟ್ಟದಲ್ಲಿನ ಆಂಜನೇಯ ಗುಡಿಯ ಪೂರ್ವದಿಕ್ಕಿನ ಗೋಡೆಯಲ್ಲಿ**

೧. ಸ್ವಸ್ತಿ [||*] ಶ್ರೀಜಯಾಭ್ಯುದಯಶಾಲಿವಾಹನಶಕವರುಷಂಗ

೨.ಳು ೧೭೦೨ ನೆಯ ಶಾರ್ವರಿನಾಮ ಸಂ|| ದ ಆಶ್ವೀಜ ಶು ||೧

೩. ಯಲ್ಲು ಶ್ರೀಮತು ನವಾಬಹೈದರಲ್ಲಿಖಾನ ಬಾಹದರ

೪. ವರು ರಾಜ್ಯಂಗೈವುತ್ತಿರಲು ಶ್ರೀಹನುಮಂತ್ತ

೫. ದೇವರ ಗುಡಿ ಕಟಿಸಿದ ಶೇವೆ ಸಂಪೂರ್ಣ ಮಂಗ

೬. ಳ ಮಹಾಶ್ರೀ ಶ್ರೀ ||

ಸೌ.ಇ.ಇ., IX, ಭಾಗ II, ನಂ. ೭೦೬

## ೫. ವಾಸ್ತು ಮತ್ತು ಮೂರ್ತಿಶಿಲ್ಪ (೧)

ಪ್ರಾಚೀನ ಮತ್ತು ಮಧ್ಯಕಾಲೀನ ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ದೇವಾಲಯಗಳು ಪರಿಣಾಮಕಾರಿ ಮಾಧ್ಯಮಗಳಾಗಿ ಕಾರ್ಯನಿರ್ವಹಿಸಿದೆ. ದೇವಾಲಯ ಸಂಸ್ಕೃತಿಗೆ ತುಂಬಾ ಪ್ರಾಚೀನ ಇತಿಹಾಸವಿದ್ದರೂ ಕ್ರಿ.ಶ. ೮-೯ನೇ ಶತಮಾನಗಳ ನಂತರವೇ ಸಾರ್ವತ್ರಿಕರಣಗೊಂಡಿತು. ಮಾನವನ ಬದುಕಿನ ಅವಿಭಾಜ್ಯ ಅಂಗವಾಗಿ ಪರಿವರ್ತನೆಯಾದ ದೇವಾಲಯದ ನಿರ್ಮಾಣ ಸಹಜ ಪ್ರಕ್ರಿಯೆಯಾಗಿ ಮಾರ್ಪಟ್ಟಿತ್ತು. ಇವುಗಳ ನಿರ್ಮಾಣಕ್ಕೆ ಸೀಮಾತೀತ ವ್ಯಾಪ್ತಿಯಿದೆ. ರಾಜ್ಯಾಧಿಕಾರವನ್ನು ವಿಸ್ತರಿಸುವ ಹಾಗೂ ಗಟ್ಟಿಗೊಳಿಸುವಲ್ಲಿ ಸಹಾಯಕವಾದ ದೇವಾಲಯಗಳು ಪ್ರಭುತ್ವ ರೂಪಿಸುವ ಪ್ರಮುಖ ಕೇಂದ್ರಗಳಾಗಿದ್ದವು ಎಂದು ಅಭಿಪ್ರಾಯಪಡಬಹುದು. ರಾಜನ ಅಧಿಕಾರವನ್ನು ನಿರ್ಣಯಿಸುವ ಹಾಗೂ ಸಮಾಜದಲ್ಲಿನ ವರ್ಣಶ್ರೇಣಿಕರಣವನ್ನು ಕಾಯ್ದುಕೊಳ್ಳುವ ಪ್ರಬಲಶಕ್ತಿಗಳಾಗಿ ನಿರೂಪಿತವಾಗಿದ್ದವು. ಅಧಿಕಾರವನ್ನು ಬಲಾಢ್ಯಗೊಳಿಸುವಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿರುವ ದೇವಾಲಯಗಳ ತೀವ್ರ ಬೆಳವಣಿಗೆಯಲ್ಲಿ ರಾಜರು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಅರಸರನ್ನು ಅನುಸರಿಸಿದ ಅಧಿಕಾರಿಗಳು ಹಾಗೂ ಪ್ರತಿಷ್ಠಿತ ವರ್ಗ ಸಮುದಾಯಗಳು ದೇವಾಲಯ ಸಂಸ್ಕೃತಿಯ ವಿಸ್ತಾರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದರು.

ಚರಿತ್ರೆಯ ರಚನೆಯಲ್ಲಿ ದೇವಾಲಯಗಳು ಪ್ರಮಾಣಯೋಗ್ಯವಾದ ಆಕರಗಳಾಗಿ ಬಳಕೆಯಾಗಲ್ಪಡುತ್ತವೆ. ಯಾವುದೇ ರಚನಾಕೃತಿಗಳು ಕಲೆಯ ಪ್ರಮುಖ ಭಾಗವೇ ಆಗಿವೆ. ಕಲೆಯೆಂಬುದು ಮಾನವನ ಹುಟ್ಟಿನೊಂದಿಗೆ ಬಂದಿರುವಂತದ್ದು. ಇದು ವಿಕಸನಗೊಳ್ಳುತ್ತಾ ನಾನಾ ರೂಪಗಳನ್ನು ಪಡೆಯಿತು. ಸಾಮಾನ್ಯವಾಗಿ ಕಲೆಯನ್ನು ದೃಶ್ಯ ಹಾಗೂ ಶ್ರವಣ ಮಾಧ್ಯಮಗಳೆಂದು ವಿಭಾಗಿಸುತ್ತಾರೆ. ಇವುಗಳ ಅಂತಿಮ ಫಲಿತಾಂಶವೆಂದರೆ ಮಾನವನ ಸುಖದೇಚ್ಛೆಯನ್ನು ದ್ವಿಗುಣಗೊಳಿಸುವುದು. ದೃಶ್ಯಮಾಧ್ಯಮದಲ್ಲಿ ಬರುವ ದೇವಾಲಯ ಹಾಗೂ ಮೂರ್ತಿಶಿಲ್ಪಗಳು ಒಂದು ಪ್ರದೇಶದ ಸಾಂಸ್ಕೃತಿಕ ಚರಿತ್ರೆಯ ಬರವಣಿಗೆಯಲ್ಲಿ ಪ್ರಧಾನ ಪಾತ್ರವಹಿಸುತ್ತವೆ. ಆದ್ದರಿಂದಲೇ ದೇವಾಲಯಗಳನ್ನು ಆಯಾಕಾಲದ ವರ್ತಮಾನವನ್ನು ಸಾದರಪಡಿಸುವ ಮಾಧ್ಯಮಗಳೆಂದು ಪರಿಗಣಿಸುತ್ತಾರೆ. 'ವಾಸ್ತುಶಿಲ್ಪ' ಎಂಬ ಪರಿಭಾಷೆಗೆ ವಿಶಾಲವಾದ ಅರ್ಥವ್ಯಾಪ್ತಿ ಇದ್ದರೂ ಸಾಮಾನ್ಯವಾಗಿ ದೇವಾಲಯಗಳು ಮಾತ್ರ ವಾಸ್ತುಶಿಲ್ಪಗಳಾಗಿ ಕಣ್ಮುಂದೆ ನಿಲ್ಲುತ್ತವೆ. ಸ್ತೂಪ, ಚೈತ್ಯ ವಿಹಾರ, ಬಸದಿ, ಮಸೀದಿ, ಚರ್ಚು, ಕೆರೆ-ಕಟ್ಟೆ, ಬುರುಜು, ಕೋಟೆ ಹಾಗೂ

ಮನೆಗಳಂಥ ಎಲ್ಲ ರಚನೆಗಳು ವಾಸ್ತುಶಿಲ್ಪಿಗಳೇ ಆಗಿವೆ. ಆದರೆ ಅಧ್ಯಯನದ ಅನುಕೂಲಕ್ಕಾಗಿ 'ವಾಸ್ತು' ಶಿಲ್ಪವನ್ನು ದೇವಾಲಯಕ್ಕೂ ಹಾಗೂ 'ಶಿಲ್ಪ' ಎಂಬುದನ್ನು ಮೂರ್ತಿಗಳಿಗೆ ಅನ್ವಯವಾಗುವಂತೆ ಅನುಕ್ರಮದಲ್ಲಿ ಬಳಸುತ್ತಾರೆ. ಇಂಥ ಸಂವಾದಿ ಕ್ರಮವನ್ನು ಪ್ರಸ್ತುತ ಪ್ರಬಂಧ ರಚನೆಯಲ್ಲಿಯೂ ಸಹ ಬಳಸಿಕೊಳ್ಳಲಾಗಿದೆ.

ಸಾಮಾನ್ಯವಾಗಿ ದೇವಾಲಯಗಳನ್ನು ಗುಹಾಂತರ ದೇವಾಲಯಗಳು ಹಾಗೂ ದೇವಾಲಯಗಳೆಂದು ವಿಭಾಗಿಸುತ್ತಾರೆ. ಗುಹೆಗಳು, ಗುಹಾಂತರಾಲಯಗಳಾಗಿ ಮೊದಲು ನಿರ್ಮಾಣವಾದರೆ ನಂತರ ಪ್ರತ್ಯೇಕವಾಗಿ ದೇವಾಲಯಗಳು ನಿರ್ಮಾಣವಾದವು. ಧರ್ಮ ಹಾಗೂ ದೇವಾಲಯ ಒಂದಕ್ಕೊಂದು ಮೇಳೈಸಿಕೊಂಡಿದ್ದರಿಂದ ಆಯಾ ಧರ್ಮ ಹಾಗೂ ಮತ ಪಂಥಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ದೇವಾಲಯಗಳು ಸಹ ರಚನೆಯಾದವು. ಉದಾಹರಣೆ ಜೈನ, ಶೈವ, ವೈಷ್ಣವ ಹಾಗೂ ಶ್ರೀವೈಷ್ಣವ ಆಚರಣೆಗಳಿಗೆ ಸಂಬಂಧಪಟ್ಟ ದೇವಾಲಯಗಳನ್ನು ಹೆಸರಿಸಬಹುದು. ದೇವಾಲಯಗಳಲ್ಲಿ ಮೂರ್ತಿಶಿಲ್ಪ ಹಾಗೂ ಇತರ ಶಿಲ್ಪಗಳನ್ನು ಕಂಡರಿಸುವುದರಿಂದ ಅಥವಾ ಜೋಡಣೆ ಮಾಡುವುದರ ಮೂಲಕ ಅವುಗಳನ್ನು ಮತ್ತಷ್ಟು ಕಲಾತ್ಮಕವಾಗಿ ಮಾರ್ಪಡಿಸಿದರು.

ದೇವಾಲಯಗಳನ್ನು ಸಾಮಾನ್ಯವಾಗಿ ಶಿಲೆ, ಇಟ್ಟಿಗೆ, ಗಾರೆ, ಗಚ್ಚು, ಕಟ್ಟಿಗೆ ಹಾಗೂ ಲೋಹಗಳಂಥ ಪ್ರಮುಖ ಸಾಧನಗಳಿಂದ ನಿರ್ಮಿಸುತ್ತಾರೆ. (ಇಂಥ ವಸ್ತುಗಳಿಂದ ಕುರುಗೋಡಿನ ದೇವಾಲಯಗಳು ಸಹ ನಿರ್ಮಾಣವಾಗಿವೆ.) ದೇವಾಲಯವು ಪರಿಪೂರ್ಣಗೊಳ್ಳಬೇಕಾದರೆ ಅಧಿಷ್ಠಾನ, ಪಾದ, (ಭಿತ್ತಿ) ಪ್ರಸ್ತರ, ಗ್ರೀವ, ಶಿಖರ ಮತ್ತು ಸ್ತೂಪಿ ಎಂಬ ಪ್ರಮುಖ ಆರು ಭಾಗಗಳನ್ನು ಹೊಂದಿರಬೇಕು. ಇವುಗಳನ್ನು ಷಡಂಗಗಳೆಂತಲೂ ಕರೆಯುತ್ತಾರೆ. ದೇವಾಲಯದ ಭಿತ್ತಿಯ ಮೇಲ್ಭಾವಣಿಯ ಮೇಲಿನ (ಪ್ರಸ್ತರ) ಭಾಗದಲ್ಲಿನ ಮಜಲುಗಳನ್ನು ತಲಗಳಾಗಿ ಗುರುತಿಸುತ್ತಾರೆ, ಉದಾ : ಏಕತಲ, ದ್ವಿತಲ, ತ್ರಿತಲ ಮತ್ತು ಬಹುತಲ ರಚನೆಗಳು. ಶಿಖರ ರಚನಾ ವಿಧಾನಗಳಿಂದ ಅವುಗಳ ಮಾದರಿ ಅಥವಾ ಶೈಲಿಯನ್ನು ಗುರುತಿಸಲಾಗುತ್ತದೆ. ಉದಾಹರಣೆಗೆ ದ್ರಾವಿಡ, ನಾಗರ, ವೇಸರ, ಕದಂಬನಾಗರ, ರೇಖಾನಾಗರ, ಲತೀನ ಹಾಗೂ ಭೂಮಿಜ ಶೈಲಿಗಳು. ಮಾದರಿಗಳ ಗುರುತಿಸುವಿಕೆಯು ಅಧ್ಯಯನ ದೃಷ್ಟಿಯಿಂದ ಅವಶ್ಯಕ ಹಾಗೂ ಔಚಿತ್ಯಪೂರ್ಣವಾಗಿದೆ. ಗುಡಿಗಳ ಪ್ರದೇಶದ ಇಕ್ಕೆಲಗಳಲ್ಲಿ ಆನೆ, ಸಿಂಹ ಮತ್ತು ಯಾಳಿ ಶಿಲ್ಪಗಳನ್ನು ಅಳವಡಿಸಿರುತ್ತಾರೆ. ಕೆಲವೊಮ್ಮೆ ಮೂರ್ತಿ ಶಿಲ್ಪಗಳನ್ನು ಸಹ ದ್ವಾರಶಿಲ್ಪಗಳನ್ನಾಗಿಟ್ಟಿರುತ್ತಾರೆ. ಈ ಶಿಲ್ಪಗಳು ಗುಡಿಕಾಯುವ ಸಂಕೇತಗಳಾಗಿ ಪರಿಗಣಿಸಲ್ಪಡುತ್ತವೆ. ದೇವಾಲಯದಲ್ಲಿ ಮುಖ್ಯವಾದ ಭಾಗವೆಂದರೆ ಗರ್ಭಗೃಹ. ಅಲ್ಲಿನ ಮೂಲದೇವರಿಗೆ ಸಂಬಂಧಿಸಿದಂತೆ ಇಡೀ ದೇವಾಲಯ ನಿರ್ಧರಿತವಾಗಿರುತ್ತದೆ. ಕಲಾವೈಶಿಷ್ಟ್ಯತೆಯನ್ನು ಪಡೆದಿರುವ ದೇವಾಲಯ ಸಂಸ್ಕೃತಿಯನ್ನು ವಿದ್ವಾಂಸರು ಅನೇಕ ಬಗೆಯ ಅಧ್ಯಯನ ಶಿಸ್ತುಗಳಿಗೆ ಅಳವಡಿಸಿದ್ದಾರೆ. ಈ ಹೊತ್ತಿನ ಚರ್ಚೆಯಲ್ಲಿ ದೇವಾಲಯಗಳು ಕೇವಲ 'ಧಾರ್ಮಿಕ ಸಂಕೇತ' (ಸಿಂಬಲ್)ಗಳಾಗಿ ಮಾತ್ರ ಪರಿಗಣಿತವಾಗಿಲ್ಲ. ದೇವಾಲಯಗಳ ರಚನೆಯಲ್ಲಿ ಬಿಂಬಿತವಾಗಿರುವ ಕಲಾಸೌಂದರ್ಯ ಹಾಗೂ ಬಳಕೆಯಾಗಿರುವ ತಂತ್ರಜ್ಞಾನಗಳು ಇಂದು ಹೆಚ್ಚಿನ ಮಹತ್ವ ಪಡೆದಿವೆ. ಅಲ್ಲದೆ ಸ್ಮಾರಕಗಳಿಗೆ ಸಂಬಂಧಿಸಿದ ಪ್ರತಿ ಆಯಾಮಗಳನ್ನು ಚರ್ಚಿಸಿ ವಿಸ್ತರಿಸುವುದು ಇತಿಹಾಸ-ಪುರಾತತ್ವ ಅಧ್ಯಯನಗಳ ಪ್ರಮುಖ ಕಾರ್ಯವಾಗಿದೆ.

ದೇವಾಲಯಗಳ ಹುಟ್ಟಿನ ನಿರ್ದಿಷ್ಟ ಕಾಲಾವಧಿಯ ಬಗೆಗೆ ಅನೇಕ ಜಿಜ್ಞಾಸೆಗಳಿದ್ದರೂ ಕರ್ನಾಟಕದಲ್ಲಿ ದೇವಾಲಯ ಸಂಸ್ಕೃತಿ ಹುಟ್ಟು ಹಾಗೂ ಬೆಳವಣಿಗೆ ಕದಂಬ - ಶಾತವಾಹನರ ಆಡಳಿತಾವಧಿಯ ಕಾಲದಲ್ಲಿಯೇ ಎಂದು ಗುರುತಿಸಲಾಗುತ್ತದೆ. ತಾಳಗುಂದದ (ಶಿಕಾರಿಪುರ ತಾಲೂಕು) ಪ್ರಣವೇಶ್ವರ ದೇವಾಲಯವೇ ಅಸ್ತಿತ್ವದಲ್ಲಿರುವ ಕರ್ನಾಟಕದ ಅತೀ ಪ್ರಾಚೀನ ದೇವಾಲಯವಾಗಿದೆ. ಆದರೆ ದೇವಾಲಯಗಳ ನಿರ್ಮಾಣ ಸಂಸ್ಕೃತಿ ನೈಜವಾಗಿ ಪ್ರಾರಂಭವಾದುದು ಬಾದಾಮಿ ಚಾಲುಕ್ಯರ ಆಡಳಿತಾವಧಿಯಲ್ಲಿ. ಕ್ರಿ.ಶ. ೭-೮ನೇ ಶತಮಾನದಲ್ಲಿ ರಚಿಸಲಾದ ಅನೇಕ ದೇವಾಲಯಗಳನ್ನು ಐಹೊಳೆ, ಬಾದಾಮಿ ಹಾಗೂ ಮಹಾಕೂಟಗಳಲ್ಲಿ ಕಾಣುತ್ತೇವೆ. ಇಂದಿನ ಕರ್ನಾಟಕದ ಭೌಗೋಳಿಕ ಸೀಮೆಯ ಆಚೆಗೂ ಹಲವು ದೇವಾಲಯಗಳನ್ನು ಬಾದಾಮಿ ಚಾಲುಕ್ಯರು ನಿರ್ಮಿಸಿದ್ದಾರೆ. ಆದರೆ ಇವರು ದೇವಾಲಯಗಳನ್ನು ಕೆಲವು ಕೇಂದ್ರಸ್ಥಾನಗಳಲ್ಲಿ ಮಾತ್ರ ಕಟ್ಟಿದರು. ಇವರ ನಿರ್ಮಿತಿಗಳು ಪ್ರಾರಂಭ ಕಾಲದವುಗಳಾಗಿದ್ದರೂ ಹೆಚ್ಚಿನ ಕಲಾನೈಪುಣ್ಯತೆಯಿಂದ ಕೂಡಿವೆ. ಕೆಲವೇ ಕೇಂದ್ರಸ್ಥಾನಗಳಲ್ಲಿ ಮಾತ್ರ ರಚನೆಯಾಗುತ್ತಿದ್ದ ದೇವಾಲಯಗಳನ್ನು ರಾಷ್ಟ್ರಕೂಟರು ನಗರ ಹಾಗೂ ಗ್ರಾಮಗಳಲ್ಲಿ ವಿಸ್ತರಿಸಿದರು. ಆದರೆ ವ್ಯವಸ್ಥಿತವಾಗಿ ಹಾಗೂ ವ್ಯಾಪಕವಾಗಿ ಪ್ರತಿ ಗ್ರಾಮದಲ್ಲಿಯೂ ದೇವಾಲಯಗಳು ನಿರ್ಮಾಣವಾದದ್ದು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ. ಇದೇ ಕಾಲದಲ್ಲಿದ್ದ, ಧಾರ್ಮಿಕವಾಗಿ ಬಲಿಷ್ಠರಾದ ಪಾಶುಪತ ಹಾಗೂ

ಕಾಳಾಮುಖರು ಕರ್ನಾಟಕದಲ್ಲಿನ "ಗುಡಿ ಸಂಪ್ರದಾಯಕ್ಕೆ" ಹೆಚ್ಚಿನ ಪ್ರೋತ್ಸಾಹ ನೀಡಿ ಬೆಳೆಸಿದರು. ಕಾಪಾಲಿಕರ ವಾಮಾಚಾರವನ್ನು ತಿರಸ್ಕರಿಸಿದ ಕಾಳಮುಖರು ತಂತ್ರ ಹಾಗೂ ಮಂತ್ರಶಕ್ತಿಗಳಂಥ ನಂಬಿಕೆಗಳನ್ನು ಪ್ರತಿಪಾದಿಸಿದರು. ಹಾಗೂ ಇಂಥ ನಂಬಿಕೆಗಳ ಜಾರಿಗೆ ದೇವಾಲಯಗಳನ್ನು ಬಳಸಿಕೊಂಡರು. ಉತ್ತರ ಕರ್ನಾಟಕ ಭಾಗದಲ್ಲಿ ಕಲಚೂರಿ ಹಾಗೂ ಸೇವುಣ ಅರಸರು ಹಲವು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಕರ್ನಾಟಕದ ದಕ್ಷಿಣ ಪ್ರದೇಶದಲ್ಲಿ ಹೊಯ್ಸಳ ಹಾಗೂ ಗಂಗರು ತಮ್ಮ ಕಲಾವೈಶಿಷ್ಟ್ಯತೆಯನ್ನು ಮೆರೆದಿದ್ದಾರೆ. ಸಾಮ್ರಾಜ್ಯಗಳ ಆಳ್ವಿಕೆಯ ಕೊನೆಯ ಘಟ್ಟದಲ್ಲಿ ಆಳಿಹೋದ ವಿಜಯನಗರದ ಅರಸರು ಬೃಹದಾಕಾರದ ಗೋಪುರ ಹಾಗೂ ವಿಸ್ತಾರವಾದ ದೇವಾಲಯಗಳಿಗೆ ಹೆಚ್ಚಿನ ಮಹತ್ವ ನೀಡಿದರು. ವಿಜಯನಗರದ ನಂತರ ವೈಶಿಷ್ಟ್ಯಪೂರ್ಣವಾದ ಯಾವುದೇ ದೇವಾಲಯದ ನಿರ್ಮಾಣವು ಕನ್ನಡ ಸೀಮೆಯಲ್ಲಿ ಜರುಗಲಿಲ್ಲ. ಸಾಮ್ರಾಜ್ಯಶಾಹಿಗಳ ಕಾಲದಲ್ಲಿದ್ದ ದೇವಾಲಯಗಳ ಬಗೆಗಿರುವ ನಂಬಿಕೆ, ಆಚರಣೆಗಳು ಹಾಗೂ ಅವುಗಳನ್ನು ನಿರ್ಮಿಸುವ ಅವಶ್ಯಕತೆಗಳು ಅನೇಕ ಬಗೆಯ ಪ್ರಶ್ನೆಗೆ ಒಳಗಾದವು. ಹಾಗೂ ಹೆಚ್ಚಿನಂಶ ವಿದೇಶಿಯರ ಸಂಪರ್ಕವು ದೇವಾಲಯಗಳ ನಿರ್ಮಾಣದ ಮಾದರಿ ಕ್ರಮಗಳನ್ನೇ ಬದಲಾಯಿಸಿದವು. ಕ್ರಿ.ಶ. ೧೭ನೇ ಶತಮಾನದ ನಂತರ ಪ್ರಾಚೀನ ದೇಗುಲ ಸಂಸ್ಕೃತಿಗೆ ಶಾಶ್ವತವಾದ ತೆರೆಯೊಂದು ಬಿದ್ದಂತಾಯಿತೆಂದು ಅಭಿಪ್ರಾಯಿಸಿದರು.

**ದೇವಾಲಯಗಳ ನಿರ್ಮಾಣದ ಹಿಂದಿರುವ ಮನೋಭಾವನೆ**

ಲಕ್ಷಾನು ಸಂಖ್ಯೆಯಲ್ಲಿ ರಚನೆಯಾಗಿರುವ ಭಾರತದಲ್ಲಿಯ ದೇವಾಲಯಗಳ ನಿರ್ಮಾಣಕ್ಕೆ ಅನೇಕ ಕಾರಣೀಭೂತ ಅಂಶಗಳಿವೆ. ಅವುಗಳಲ್ಲಿ ಪ್ರಮುಖವಾಗಿ ಪರಿಗಣಿಸುವುದಾದರೆ ಇಲ್ಲಿರುವ ಸಂಪ್ರದಾಯದಲ್ಲಿ ಬಲವಾಗಿ ನಂಬಿಕೊಂಡು ಬಂದಿರುವ ಪುಣ್ಯ-ಪಾಪಗಳ ಪರಿಕಲ್ಪನೆ. ಐಶ್ವರ್ಯವಂತ ಜನರು ತಮ್ಮನ್ನು ತಾವು ಸಾಕಾರಗೊಳಿಸಿಕೊಳ್ಳಲು (ಪುಣ್ಯದ ಮೂಲಕ ಸ್ವರ್ಗ ಪಡೆಯುವುದು) ದೇವಾಲಯಗಳನ್ನು ಕಟ್ಟುತ್ತಿದ್ದರು. ಇಂಥ ಕಾರ್ಯಗಳು ಕೇವಲ ದೇವಾಲಯಕ್ಕೆ ಸೀಮಿತವಾಗಿರದೇ ಕೆರೆ-ಕಟ್ಟೆ, ಬಾವಿ, ಹಾಗೂ ಛತ್ರಗಳಂಥ ಲೌಕಿಕ ಕಟ್ಟಡಗಳನ್ನು ಕಟ್ಟುವುದರ ಮೂಲಕ ಬದುಕನ್ನು ಸಾರ್ಥಕಗೊಳಿಸಿಕೊಳ್ಳುತ್ತಿದ್ದರು. ಇವುಗಳನ್ನು ನಿರ್ಮಿಸಿ ಬಹುಜನರನ್ನು ಮೆಚ್ಚಿಸುವುದು ಅಧಿಕಾರವರ್ಗದ ಅಂತಿಮ ಕಾರ್ಯಸಾಧನೆಗಳಾಗಿದ್ದವು. ರಾಜನು ತನ್ನ ಇಷ್ಟದೇವತೆಯನ್ನು ಸಂತೃಪ್ತಗೊಳಿಸಲು ದೇವಾಲಯಗಳನ್ನು ನಿರ್ಮಿಸಿದರೆ, ಅವನ ಅಧಿಕಾರವರ್ಗವು ರಾಜನನ್ನು ಮೆಚ್ಚಿಸಲು ದೇವಾಲಯಗಳನ್ನು ಕಟ್ಟಿರುವ ನಿದರ್ಶನಗಳಿವೆ. ಸಾಮಾನ್ಯವಾಗಿ ಕಟ್ಟಿಸಿದವರ ಹೆಸರು ದೇವಾಲಯದ ಜೊತೆಗೂ ಸಹ ಸೇರುತ್ತಿತ್ತು. ಆದರೆ ಎಲ್ಲ ಸಂದರ್ಭಗಳಲ್ಲಿ ಇದು ಮಾನ್ಯವಾದುದಲ್ಲ. ಜನರನ್ನು ನಿಯಂತ್ರಿಸುವ ನೀತಿ ನಿಯಮಗಳ ನಿರೂಪಕಗಳಾದ ದೇವಾಲಯಗಳು ಸಮಾಜೋ-ಧಾರ್ಮಿಕ ಸಂಸ್ಥೆಗಳಾಗಿಯೂ ಕಾರ್ಯ ನಿರ್ವಹಿಸಿದವು. ಒಟ್ಟಾರೆ ದೇವಾಲಯಗಳನ್ನು ನಿರ್ಮಿಸಿ ಪೋಷಿಸುವುದು ಎಲ್ಲ ಜನವರ್ಗದ ಸ್ವಪ್ರತಿಷ್ಠೆಯಾಗಿತ್ತು. ದೇವಾಲಯಗಳೆಂದರೆ ಕೇವಲ ಅಲೌಕಿಕ ಕಾರ್ಯವಿಧಾನಗಳನ್ನು ಮಾತ್ರ ನಿರ್ವಹಿಸುತ್ತಿರಲಿಲ್ಲ. ಲೌಕಿಕ ಚಟುವಟಿಕೆಗಳಾದ ಅಂಗಭೋಗ-ರಂಗಭೋಗಗಳಿಗೂ ಸರಿಸಮಾನವಾದ ಪ್ರೋತ್ಸಾಹ ನೀಡಿದ್ದರು. ಸಾಮಾನ್ಯವಾಗಿ ದೇವಾಲಯಗಳಲ್ಲಿನ ನೃತ್ಯ, ಗೀತಗಾಯನ ಹಾಗೂ ಇತರ ಸೇವಾಕಾರ್ಯಗಳಿಗೆ ಹೆಣ್ಣುಗಳನ್ನು ನೇಮಿಸುತ್ತಿದ್ದರು. ಇವು ಇಂಥ ಕಾರ್ಯಗಳನ್ನು ಪೂರೈಸಲೆಂದೇ "ದೇವಾಲಯದ ಹೆಣ್ಣು ಅಥವಾ ದೇವಾಲಯದ ಸೂಳೆಯರು" ಎಂಬ ವರ್ಗವೇ ಸೃಷ್ಠಿಯಾಗಿರುವ ಉಲ್ಲೇಖಗಳಿವೆ. ಈ ತರಹದ ಅನೇಕ ಚಟುವಟಿಕೆಗಳು ಕುರುಗೋಡಿನ[1] ದೇವಾಲಯಗಳಿಗೆ ಸಂಬಂಧಪಟ್ಟಂತೆ ಶಾಸನಗಳಲ್ಲಿ ವ್ಯಕ್ತವಾಗಿವೆ.

**ದೇವಾಲಯಗಳ ನಿರ್ವಹಣೆ ಹಾಗೂ ದಾನದತ್ತಿಗಳು**

ದೇವಾಲಯಗಳನ್ನು ನಿರ್ಮಿಸುವುದೊಂದೆ ಪ್ರಮುಖ ಕಾರ್ಯವಾಗಿರಲಿಲ್ಲ. ಅವುಗಳ ಕೀರ್ತಿ ಹಾಗೂ ಮಹತ್ವ ಸೂರ್ಯ-ಚಂದ್ರರಿರುವವರೆಗೂ ನಿತ್ಯನೂತನ ಚಿರಂತನವಾಗಿರಬೇಕೆಂಬ ಬಹುದೊಡ್ಡ ಅಭಿಲಾಷೆ ದೇವಾಲಯ ಕಟ್ಟಿಸಿದವನಿಗಿರುತ್ತಿತ್ತು. ಆದ್ದರಿಂದ ಖಾಯಂ ಆದ ದಾನದತ್ತಿಗಳನ್ನು ದೇವಾಲಯ ನಿರ್ವಹಣೆಗಾಗಿಯೇ ಸ್ಥಾಪಿಸುತ್ತಿದ್ದರು. ದೇವರ ನಿತ್ಯಪೂಜೆಯ ನಿರ್ವಹಣೆಗಾಗಿ ಗ್ರಾಮದಾನ, ಭೂದಾನ, ಧನದಾನ ಮತ್ತು ತೆರಿಗೆಯಿಂದ ಬಂದ ಆದಾಯದಾನವನ್ನು ನೀಡುತ್ತಿದ್ದರು. ಇವುಗಳ ಮಾಹಿತಿಗಾಗಿ ಶಾಸನಗಳನ್ನು ಕಂಡರಿಸುತ್ತಿದ್ದರು.

ಪ್ರಮುಖವಾಗಿ ರಾಜ, ರಾಜನ ಪತ್ನಿಯರು, ಆಡಳಿತ ವ್ಯವಸ್ಥೆಯ ಅಧಿಕಾರವರ್ಗ, ವ್ಯಾಪಾರಿಗಳು (ಬಣಜಿಗರು) ಮುಂತಾದ ಗವರೆ, ಗಾತ್ರಿಗ ಹಾಗೂ ತೆಲ್ಲಿಗ, ಶೆಟ್ಟಿಗಳು ಸಮುದಾಯವು ಯಾವಾಗಲೂ ದೇವರು ಹಾಗೂ ದೇವಾಲಯಗಳಲ್ಲಿನ ಚಟುವಟಿಕೆಗಳಿಗೆ ದಾನ-ದತ್ತಿಗಳನ್ನು ನೀಡಲು ಕಾರ್ಯನಿರತವಾಗಿರುತ್ತಿತ್ತು. ಇವು ನಿರಾಂತಕವಾಗಿ ನಿರ್ವಹಣೆಯಾಗಲು ಅವುಗಳ ಉಸ್ತುವಾರಿಗಾಗಿ ಅನೇಕ ಮೇಲ್ವಿಚಾರಕರನ್ನು ಅಥವಾ ಅಧಿಕಾರಿಗಳನ್ನು ನೇಮಿಸುತ್ತಿದ್ದರು. ರಾಜಕೀಯ ವಿಪ್ಲವಗಳು ಹಾಗೂ ಬದಲಾವಣೆಗಳು ಏನೇ ಸಂಭವಿಸಿದರು, ಅಧಿಕಾರದ ಗದ್ದುಗೆಯನ್ನೇರಿದ ರಾಜ ಅಥವಾ ಅಧಿಕಾರಿವರ್ಗ ಜನಮನಗಳನ್ನು ಮೆಚ್ಚಿಸಲು ದೇವಾಲಯಗಳಿಗೆ ಕೊಟ್ಟಿರುವ ದಾನದತ್ತಿಗಳ ಯಥಾಸ್ಥಿತಿ ಕಾಯ್ದುಕೊಂಡು ಹೋಗುವುದು ಅಥವಾ ಹೆಚ್ಚಿಸುವುದು ತುಂಬಾ ಅವಶ್ಯಕವಾಗಿತ್ತು. ಅಲ್ಲದೇ ಆಡಳಿತಗಾರ ತನ್ನ ಆಡಳಿತದ ಸುಸೂತ್ರ ನಿರ್ವಹಣೆಗಾಗಿ ಬಹುಮುಖ್ಯವಾದ ಈ ತಂತ್ರ ರೂಪಿಸಲೇಬೇಕಾಗಿತ್ತು. ಒಮ್ಮೊಮ್ಮೆ ರಾಜನು ತನ್ನ ಧರ್ಮಾಚರಣೆಗಳನ್ನು ಬದಲಾಯಿಸಿದಾಗ ಅಥವಾ ತಾನು ಅನುಸರಿಸುವ ಧರ್ಮವನ್ನೇ ರಾಜ್ಯದ ಪ್ರಜೆಗಳು ಅನುಸರಿಸಬೇಕೆಂಬ ಒತ್ತಾಯವಿದ್ದಾಗ ದೇವಾಲಯ ಹಾಗೂ ದೇವರು ಸಹಜವಾಗಿ ಮಾರ್ಪಾಡಿಗೆ ಒಳಗಾಗುತ್ತಿತ್ತು.

ದೇವಾಲಯಗಳಿಗೆ ಸಂಬಂಧಿಸಿದಂತೆ ಇನ್ನೊಂದು ಬಹುಮುಖ್ಯ ವಿಚಾರವೆಂದರೆ 'ಸ್ಥಾನಪತಿಗಳದ್ದು'. ಇವರು ಸ್ಥಾನಾಚಾರ್ಯ, ತಪೋಧನ, ಸ್ಥಾನಯ್ದರು ಎಂಬ ನಾನಾ ಹೆಸರುಗಳಿಂದ ಉಲ್ಲೇಖಿತರಾಗಿರುವುದನ್ನು ಶಾಸನಗಳಿಂದ ತಿಳಿಯುತ್ತೇವೆ. ದೇವಾಲಯಗಳ ಕೆಲಸಕಾರ್ಯಗಳು ಸಾಂಗವಾಗಿ ನಡೆದುಕೊಂಡು ಹೋಗಲು ನೈಷ್ಠಿಕ ಬ್ರಹ್ಮಚಾರಿಗಳಾದ ಸ್ಥಾನಾಚಾರ್ಯ ಗುರುಗಳು ಬಹುದೊಡ್ಡ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದರು. ಶೀಲಸಂಪನ್ನರಾದ ಈ ಬ್ರಹ್ಮಚಾರಿಗಳು ವಿದ್ವತ್ತು ಹಾಗೂ ನೈತಿಕತೆಗೆ ಹೆಚ್ಚಿನ ಮಹತ್ವ ಕೊಟ್ಟಿದ್ದರು. ಇವರಿಗಿರುವ ಗೌರವಗಳಿಂದಾಗಿಯೇ ದೇವಾಲಯಗಳಿಗೆ ಸಂಬಂಧಿಸಿದ ಯಾವುದೇ ವಿಧಿವಿಧಾನ (ದಾನ-ದತ್ತಿ ಹಾಗೂ ಧರ್ಮಕಾರ್ಯ)ಗಳು ಇವರ ಪಾದಪೂಜೆಯಿಂದಲೇ ನೆರವೇರಿಸಲ್ಪಡುತ್ತಿತ್ತು. ಇಂಥ ಸಂಗತಿಗಳು ಶಾಸನಗಳಲ್ಲಿ 'ಕಾಲಂಕರ್ಚ್ಚಿ'[2] ಎಂದು ಉಲ್ಲೇಖಿತವಾಗಿದೆ. ದೇವಾಲಯದ ಎಲ್ಲ ರೀತಿಯ ಆಗುಹೋಗುಗಳಿಗೆ ಇವರು ಸಂಪೂರ್ಣ ಜವಾಬ್ದಾರರಾಗಿದ್ದು, ಪ್ರಾಚೀನ ದೇವಾಲಯಗಳು ಸಾಂಸ್ಕೃತಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುವಲ್ಲಿ ಇವರ ಪಾತ್ರ ತುಂಬಾ ಅವಶ್ಯಕವಾಗಿತ್ತು. ಕೊಡಮಾಡುವ ಎಲ್ಲ ದಾನಗಳು ಇವರ ಸುಪರ್ದಿಯಲ್ಲಿಯೇ ಇರುತ್ತಿದ್ದವು. ಸ್ಥಾನಪತಿಗಳು ನ್ಯಾಯಪತಿಗಳಾಗಿ, ದೇವಾಲಯ ನ್ಯಾಯಾಲಯವಾಗಿ ಗ್ರಾಮ ಅಥವಾ ಪಟ್ಟಣಗಳನ್ನು ನಿಯಂತ್ರಿಸುತ್ತಿದ್ದವು. ನಿರ್ಮಾಣವಾದ ಬೃಹತ್ ದೇವಾಲಯಗಳಿಗೆ ಸಣ್ಣ-ಪುಟ್ಟ ದೇವಾಲಯಗಳು ಎಲ್ಲ ತರಹದ 'ಬದ್ಧತೆ'ಗಳಿಗೆ ಒಳಗಾಗಬೇಕಿತ್ತು. ದೇವಾಲಯಗಳನ್ನು ನಿರ್ವಹಿಸುವ ಆಡಳಿತವರ್ಗ ಗ್ರಾಮ ಆಡಳಿತವನ್ನು ಸಹ ನೋಡಿಕೊಳ್ಳುತ್ತಿತ್ತು. ಪ್ರಾಚೀನ ನಿರ್ಮಿತಿಗಳ ಹಿಂದಿರುವ ಎಲ್ಲ ಬಗೆಯ ಪ್ರಮುಖ ಅಂಶಗಳನ್ನು ಗಮನಿಸಿಯೇ ಕುರುಗೋಡಿನ ದೇವಾಲಯಗಳನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ.

**ಕುರುಗೋಡ ಸಿಂದರು ಮತ್ತು ದೇವಾಲಯಗಳು**

ಕಲ್ಯಾಣ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನ ಅವಸಾನದ ನಂತರ ಕನ್ನಡ ನಾಡಿನ ರಾಜಕೀಯ ರಂಗನಾಟಕದಲ್ಲಿ ಪರಿಣಾಮಕಾರಿಯಾದ ಅನೇಕ ಬದಲಾವಣೆಗಳಾದವು. ಕಲ್ಯಾಣ ಚಾಲುಕ್ಯರ ವಿಘಟನೆಗೊಂಡ ನಂತರ ಕಲಚುರಿ, ಹೊಯ್ಸಳ ಹಾಗೂ ಸೇವುಣರು ಆಯಾ ನಿರ್ದಿಷ್ಟ ಪ್ರದೇಶದಲ್ಲಿ ಚಿಗಿತುಕೊಂಡು ವಿಸ್ತರಣೆಗೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿಕೊಂಡರು. ಅದೇ ಸಂದರ್ಭದಲ್ಲಿ ಆಂಧ್ರಪ್ರದೇಶದ 'ತುಂಬಳ'ದಿಂದ ಆಳುತ್ತಿದ್ದ ಸಿಂದವಾಡಿಯ ಸಾಸಿರದ ಅರಸರಾದ ಸಿಂದರು ತಮ್ಮ ರಾಜಧಾನಿ ಪಟ್ಟಣವನ್ನು ಕುರುಗೋಡು ಸೀಮೆಗೆ ಸ್ಥಳಾಂತರಿಸಿದರು. ಹಾಗೂ ತಮ್ಮ ಆಡಳಿತವನ್ನು ಬಲ್ಲುಕುಂದೆ-೩೦೦ರ ಆಡಳಿತ ವಿಭಾಗಕ್ಕೆ ಮಾತ್ರ ಕೇಂದ್ರೀಕರಿಸಿದರು. ಪ್ರಕೃತಿದತ್ತವಾದ ಕಣಶಿಲೆಯ ಬೆಟ್ಟಗಳು ಹೊಸದಾಗಿ ನಿರ್ಮಿತ ರಾಜಧಾನಿ ಪಟ್ಟಣಕ್ಕೆ ಅಭೇದ್ಯಕೋಟೆಯಂತಾದವು. ಉತ್ತರದಲ್ಲಿ ವಜ್ರಬಂಡಿ ಬಸಪ್ಪನ ದೇವಾಲಯದಿಂದ ದಕ್ಷಿಣದ ರಾಚಮಲ್ಲ ದೇವಾಲಯದವರೆಗೂ ಈ ಪಟ್ಟಣ ಹಬ್ಬಿಕೊಂಡಿತು. ಶತ್ರುಭಾದೆಯನ್ನು ಪ್ರಾರಂಭ ಹಂತದಲ್ಲಿ ತೊಡೆದುಹಾಕುವಂತೆ ಇಕ್ಕೆಲಗಳಲ್ಲಿ ವಿಸ್ತರಿಸಿಕೊಂಡಿರುವ ಬೆಟ್ಟಶ್ರೇಣಿಗಳನ್ನು ಸದುಪಯೋಗಪಡಿಸಿಕೊಂಡರು. ಉಜಾಳೇಶ್ವರ ದೇವಾಲಯವೊಂದನ್ನು ಬಿಟ್ಟು ಉಳಿದ ದೇವಾಲಯಗಳು ಎರಡು ಬೆಟ್ಟಶ್ರೇಣಿಗಳು ಮಧ್ಯಭಾಗದಲ್ಲಿ ನಿರ್ಮಾಣವಾಗಿವೆ. ಅಂದರೆ ಈಗ ಅಸ್ತಿತ್ವದಲ್ಲಲಿರುವ ಪಟ್ಟಣವು ನಂತರಕಾಲದಲ್ಲಿ ಬೆಳೆದುಬಂದಿರಬಹುದು. ಕುರುಗೋಡು ಸೀಮೆಯು ಅತ್ಯಂತ ಫಲವತ್ತಾದ ಕಪ್ಪುಮಣ್ಣಿನ ಭೂಮಿಯಿಂದ ವಿಸ್ತರಿಸಿಕೊಂಡಿದೆ. ಇಂಥ

ಅಂಶವು ರಾಜ್ಯ (ಬಲ್ಲಕುಂದೆ-೩೦೦) ಹಾಗೂ ರಾಜಧಾನಿಯನ್ನು ಸಂಪತ್ಭರಿತವಾಗಿಡಲು ತುಂಬಾ ಸಹಾಯಕವಾಗಿದೆ. ಅನೇಕ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಹೇರಳವಾದ ಸಂಪನ್ಮೂಲಗಳಿರುವುದರಿಂದ ಸಿಂದರು ಕುರುಗೋಡು ಪಟ್ಟಣದಿಂದ ಒಂದು ಶತಮಾನಗಳ ಕಾಲ ರಾಜ್ಯಭಾರ ಮಾಡಿದರು. ಕಲ್ಯಾಣ ಚಾಲುಕ್ಯರ ಕಾರಭಾರದಲ್ಲಿ ಮಹಾ ಸಾಮಂತರಾದ ಕುರುಗೋಡಿನ ಸಿಂದರು ಕಲಚುರಿಗಳ ಕಾಲದಲ್ಲಿ ಮಹಾಮಂಡಳೇಶ್ವರರಾಗಿ ನಿರ್ಣಾಯಕ ಪಾತ್ರವಹಿಸಿದರು. ಶರಣ ಚಳುವಳಿಯಲ್ಲಿ ಗುರುತಿಸಿಕೊಂಡ ಸಿಂದ ಅರಸರು ಅನೇಕ ಪವಾಡಗಳನ್ನು ಮೆರೆದು ತಮ್ಮನ್ನು ಉಗ್ರ ಶಿವಭಕ್ತರೆಂದು ಸಾಬೀತುಪಡಿಸಿಕೊಂಡಿದ್ದಾರೆ. ಚರಿತ್ರೆಯಲ್ಲಿ ಕುರುಗೋಡಿನ ಸಿಂದರನ್ನು ಕೇವಲ ಅವರ ಹೋರಾಟದ ಬದುಕಿನಿಂದ (ಯುದ್ಧಗಳಿಂದ) ಮಾತ್ರ ಗುರುತಿಸಲಾಗದು. ಆಡಳಿತ ಜೊತೆ ಜೊತೆಗೆ ಅವರು ನಿರ್ಮಿಸಿದ ಕಲಾರಚನೆ (ದೇಗುಲ)ಗಳು ಅತೀ ಮುಖ್ಯವಾಗುತ್ತವೆ. ಚರಿತ್ರೆಯಲ್ಲಿ ಕೇವಲ ಸಾಮಂತರಾಗಿ ಪರಿಗಣಿಸಲ್ಪಡುವ ಕುರುಗೋಡ ಸಿಂದರು ಬಲ್ಲಕುಂದೆ ನಾಡಿನಲ್ಲಿ ಅವರ ರಾಜರನ್ನು ಮೀರಿಸುವಷ್ಟು ಅದ್ಭುತವಾದ ರಚನೆಗಳನ್ನು ನಿರ್ಮಿಸಿದ್ದಾರೆ. ಸಿಂದರು ಕುರುಗೋಡಿನಲ್ಲಿ ದೇವಾಲಯಗಳನ್ನು ನಿರ್ಮಿಸುವ ಮೊದಲೇ ದೇವಾಲಯ ಕಾರ್ಯ ವಿಧಾನಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಮಾಹಿತಿಗಳಿವೆ. ಇಂಥ ವಿವರಗಳನ್ನು ಕುರುಗೋಡಿನಲ್ಲಿನ ದೇವಾಲಯಗಳನ್ನು ಚರ್ಚಿಸುವಾಗ ಹಿನ್ನೆಲೆಯಾಗಿ ಬಳಸಿಕೊಳ್ಳಲಾಗಿದೆ.

ಅರಿಬಲ್ಲದಾಗ್ರನ ಕಾಲದಿಂದಲೇ ಕುರುಗೋಡು ಸಿಂದರು ದೇವಾಲಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದನ್ನು ಶಾಸನಾಧರಗಳಿಂದ ತಿಳಿಯುತ್ತೇವೆ. ರಾಷ್ಟ್ರಕೂಟ ಮೂರನೆಯ ಕೃಷ್ಣನ ಕಾಲದಲ್ಲಿ ಮಹಾಸಾಮಂತನಾದ ಸಿಂದವಂಶದ ಮೂಲಪುರುಷ ಅರಿಬಲ್ಲದಾಗ್ರ ಹಾಗೂ ಕುರುಗೋಡಿನ ಮುನ್ನೂರು ಮಹಾಜನರು ಕುಡುತಿನಿಯ (ಕ್ರಿ.ಶ. ೯೪೭) ದೇಕಮ್ಮನ ದೇಗುಲಕೆ ಕುರುಗೋಡಿನ ಹೊಲದಲ್ಲಿ ೬೨ ಮತ್ತರ ಭೂಮಿಯನ್ನು ಬಿಟ್ಟಿರುತ್ತಾರೆ. ದೇವಾಲಯದ ಈ ಭೂಮಿಯನ್ನು ಅಯ್ಯಣಯ್ಯನ ಮಗನಾದ ಪುಟೆಗಳ್ಳನು ಉಪಭೋಗಿಸುತ್ತಿರುತ್ತಾನೆ. ಈ ವಿಷಯವನ್ನು ಗಡ್ಡದ ರುದ್ರರಾಸಿ ಭಟಾರರು ಸಾಮ್ರಾಟ್ ಅಕಾಳವರ್ಷದೇವ ಶ್ರೀಮತ್ ಛಲಕೆನಲ್ಲಾತ (ಕೃಷ್ಣ III)ನನ್ನು ಆಳಂಪುರದಲ್ಲಿ ಖುದ್ದಾಗಿ ಕಂಡು ನಿವೇದಿಸಿಕೊಳ್ಳುತ್ತಾರೆ. ಉಪಭೋಗಿಸಲ್ಪಡುವ ೬೨ ಮತ್ತರು ಭೂಮಿಯನ್ನು ದೇವಾಲಯದ ನಿರ್ವಹಣೆಗಾಗಿ ಶಾಸನ ಸಮೇತನಾಗಿ ಪಡೆದುಕೊಂಡು ಬರುತ್ತಾರೆ.[3] ಈಗ ಲಭ್ಯವಿರುವ ಮಾಹಿತಿಗಳ ಪ್ರಕಾರ ಕುರುಗೋಡು ಸಿಂದರು ದೇವಾಲಯ ಸಂಬಂಧಿ ಚಟುವಟಿಕೆಗಳಲ್ಲಿ ಭಾಗವಹಿಸಿದ ಮೊದಲ ಉಲ್ಲೇಖ ಇದಾಗಿದೆ. ಅನಂತರ ಸುಮಾರು ಒಂದು ಶತಮಾನಗಳ ಕಾಲ ಕುರುಗೋಡು ಸಿಂದರು ದಾನಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಉಲ್ಲೇಖಗಳು ಕಾಣವುದಿಲ್ಲ. ಕ್ರಿ.ಶ. ೧೦೪೫ರಲ್ಲಿ ಸಿಂದರಸ ಉದಯಾದಿತ್ಯನು ಅನೇಕ ದಾನ-ದತ್ತಿ ಕಾರ್ಯಗಳನ್ನು ಮಾಡಿರುವ ಮಾಹಿತಿಗಳಿವೆ.[4] ಆದರೆ ಉಲ್ಲೇಖಿತ ದಾನಗಳನ್ನು ಈತನು ನೇರವಾಗಿ ದೇವಾಲಯಗಳ ಚಟುಟಿಕೆಗಳಿಗಾಗಿಯೇ ನೀಡಿರುವ ಸ್ಪಷ್ಟ ಮಾಹಿತಿಗಳಿಲ್ಲ. ಆದರು ಸಾಮಾನ್ಯವಾಗಿ ಅರಸರು ಕೊಡಮಾಡುವ ಹೆಚ್ಚಿನ ದಾನಗಳು ಪರೋಕ್ಷವಾಗಿಯಾದರೂ ದೇವಾಲಯಗಳಿಗೆ ಸಂಬಂಧಿಸಿದವುಗಳಾಗಿರುತ್ತವೆ ಎಂಬುದನ್ನು ಪರಿಭಾವಿಸಬೇಕು. ಉದಯಾದಿತ್ಯನ ನಂತರ ಅಧಿಕಾರಕ್ಕೆ ಬಂದ ಮಹಾಸಾಮಂತ ಚೋಕರಸ (ಕ್ರಿ.ಶ. ೧೦೯೧-೯೨) ಆರನೆಯ ವಿಕ್ರಮಾದಿತ್ಯನ ರಾಣಿಯನ್ನು ಅನುಸರಿಸಿ, ೫೦ ಕೊಳಗ ಧಾನ್ಯವನ್ನು ಸಿರಗುಪ್ಪೆಯ ಕೇತಲೇಶ್ವರ ದೇವರಿಗೆ ಹಾಗು ಅಲ್ಲಿನ ಬ್ರಾಹ್ಮಣರ ಭೋಜನಕ್ಕಾಗಿ ಧಾನ್ಯವನ್ನು ನೀಡುತ್ತಾನೆ.[5] ಚೋಕರಸನ ತರುವಾಯ ಅಧಿಕಾರಕ್ಕೆ ಬಂದ ಸೋವಿದೇವನು (ಭೀಮದೇವ ಹಾಗೂ ಮಾಕಣಾಂಬೆಯವರ ಮಗ) ಸಿಂದರ ಆಡಳಿತಕ್ಕೆ ನಿಜವಾದ ಬುನಾದಿಯನ್ನು ನಿರ್ಮಿಸಿದವನೆಂಬ ಅಭಿಪ್ರಾಯವಿದೆ. ಸಮರ್ಥ ಆಡಳಿತಗಾರನಾದ ಸೋವಿದೇವನು ಕೊಂಚಗೆರೆ (ಸಿರುಗುಪ್ಪ ತಾಲೂಕು)ಯಲ್ಲಿನ ಸ್ವಯಂಭು ಕಲಿದೇವರ ಅಂಗಭೋಗ ನೈವೇದ್ಯಕ್ಕಾಗಿ ನಂದಾದೀವಿಗೆ ಚೈತ್ರಪವಿತ್ರಕ್ಕೆಂದು ಆಸ್ಥಾನದ ಆಚಾರ್ಯರಾದ ದೇವರಾಶಿ ಪಂಡಿತರ ಕೈಯಲ್ಲಿ ದಾನಕಾರ್ಯ ಮಾಡಿಸುತ್ತಾನೆ. ಇದೇ ಶಾಸನದಲ್ಲಿ ಕುರುಗೋಡು ಸಿಂದರ ವಂಶಾವಳಿಯ ವಿವರಣೆಯು ಸಹ ಇದೆ. ಹಾಗೂ ಸೋವಿದೇವನನ್ನು ಸ್ವಾಮಿಕಾರ್ತಿಕದೇವಲಬ್ಧ ವರಪ್ರಸಾದ ಎಂದು ಸಂಬೋಧಿಸಲಾಗಿದೆ.[6] ಈತನ ನಂತರ ಆಳ್ವಿಕೆಗೆ ಬಂದ ಇಮ್ಮಡಿ ಭೀಮನು (ಭೀಮರಸ) ಫಣಿವಂಶದವನೇ ಆದ ರೇವುಗಾವುಂಡ ಮಾಡಿಸಿದ ದೇವಾಲಯಗಳ ಸೇವೆಗಾಗಿ ತನ್ನ ತಮ್ಮ ಒಂದನೆಯ ರಾಚಮಲ್ಲನ ಜೊತೆಗೂಡಿ ಭೂಮಿದಾನ ಮಾಡಿದ್ದಾನೆ. ಕ್ರಿ.ಶ. ೧೧೩೧ರ ಬೈಲೂರು (ಬಳ್ಳಾರಿ ತಾಲೂಕು) ಶಾಸನದಲ್ಲಿ[7] ಉಲ್ಲೇಖವಾದಂತೆ ಸೋವಿದೇವನ ಮಗನಾದ ಇಮ್ಮಡಿ ಭೀಮನು

ಪಟ್ಟಣದ ಬೀರಗವುಡ ದೇವರಾಸಿ ಪಂಡಿತರ ಕಾಲುತೊಳೆದು ಕಾಲುತೊಳೆದು ಧಾರಾಪೂರ್ವಕವಾಗಿ ಮಲ್ಲಿಕಾರ್ಜುನ ದೇವರ ಕಾರ್ಯಕ್ಕೆ ಏಳುಮತ್ತರು ಭೂಮಿಯನ್ನು ನೀಡುತ್ತಾನೆ.

ಕ್ರಿ.ಶ. ೧೧೪೭-೭೭ರವರೆಗೆ ಆಡಳಿತ ನಿರ್ವಹಿಸಿದ ಒಂದನೆಯ ರಾಚಮಲ್ಲ ಕುರುಗೋಡು ಸಿಂದರ ಚರಿತ್ರೆಯಲ್ಲಿ ಅತ್ಯಂತ ಪ್ರತಿಷ್ಠಿತ ವ್ಯಕ್ತಿಯಾಗಿ ಬಿಂಬಿತನಾಗಿದ್ದಾನೆ. ಈತನ ಆಡಳಿತಾವಧಿಯಲ್ಲಿಯೇ ಕುರುಗೋಡು ಪಟ್ಟಣದಲ್ಲಿ ದೇವಾಲಯಗಳ ನಿರ್ಮಾಣ ಕಾರ್ಯ ಹೊಸ ವೇಗವನ್ನು ಪಡೆಯಿತು.[8] ಉಗ್ರಶಿವಭಕ್ತನಾದ ಈತನನ್ನು ಶಿವಪಾದ ಶಿಖಾಮಣಿ, ಶಿವಪಾದಶೇಖರಂ, ಮಾಹೇಶ್ವರಂ ವೀರಮಾಹೇಶ್ವರ ಎಂದು ಕರೆಯಲಾಗುತ್ತದೆ.[9] ರೇವಗೌಡ ಅಥವಾ ಗಾವುಂಡ ಕಟ್ಟಿಸಿದ ದೇವಾಲಯಕ್ಕೆ ಅಣ್ಣನಾದ ಇಮ್ಮಡಿ ಭೀಮದೇವನ ಜೊತೆಗೂಡಿ ದಾನ ನೀಡುವ ಮಾಹಿತಿಯನ್ನು ಈ ಹಿಂದೆ ವಿವರಿಸಲಾಗಿದೆ. ಕೊಂಚಗೆರೆ[10] ಶಾಸನದಲ್ಲಿ ಒಂದನೆಯ ರಾಚಮಲ್ಲನ ಪಿರಿಯರಿಸಿ ಮಾಕಲದೇವಿ ಆನೆವರಿಯ ರಾಮತೀರ್ಥದ ಭೈರವ ದೇವರಿಗೆ ದಾನ ಕೊಟ್ಟ ಉಲ್ಲೇಖವಿದೆ. ಇದೇ ಊರಿನ ಇನ್ನೊಂದು ಶಾಸನದಲ್ಲಿ ಒಂದನೆಯ ರಾಚಮಲ್ಲ ಅಲ್ಲಿನ ಸ್ವಯಂಭುಕಲಿದೇವರಿಗೆ ಎಲೆ ಅಡಿಕೆ ಹಾಗೂ ಕುದುರೆಗಾಡಿಗಳನ್ನು ಒದಗಿಸಿರುವ ಮಾಹಿತಿ ಇದೆ.[11] ಈತನ ಅಧಿಕಾರಿ ಕೇತಯ ಸಾಹಣಿಯು ಸಿದ್ಧನಾಥ, ನರಸಿಂಹ ಮತ್ತು ವಿನಾಯಕದೇವರಿಗೆ ದೇವಾಲಯಗಳನ್ನು ನಿರ್ಮಿಸಿ ಅವುಗಳ ಪೂಜೆ ಪುನಸ್ಕಾರಕ್ಕಾಗಿ ಭೂಮಿ ದಾನಮಾಡಿರುವ ಉಲ್ಲೇಖ ತೆಕ್ಕಲಕೋಟೆ (ಸಿರಗುಪ್ಪ ತಾಲೂಕು) ಶಾಸನದಲ್ಲಿದೆ.[12] ಕಟ್ಟಾ ಶಿವಭಕ್ತನಾದ ರಾಚಮಲ್ಲನ ಅನೇಕ ಪವಾಡ ಸಂಗತಿಗಳು ಕಾವ್ಯಗಳಲ್ಲಿ ಮಾತ್ರ ಉಲ್ಲೇಖವಾಗದೇ ಶಾಸನಗಳಲ್ಲಿಯೂ ಸಹ ಅವುಗಳ ವಿವರಣೆ ಇದೆ. ಶಿವನಲ್ಲಿ ಐಕ್ಯನಾದ ಈತನ ಬಗೆಗೆ ಕುರುಗೋಡು ಪಟ್ಟಣದ ಸ್ವಯಂಭುದೇವರ ಪಶ್ಚಿಮಾಭಿಮುಖದೊಳು ಬಂದುನಿಂದು ಸಕಳಲೋಕಕ್ಕೆ ಕೌತುಕಮವಾಗಿ ಲಿಂಗಮೂರ್ತಿಯಿಂದುದ್ಭವಿಸಲು ಶ್ರೀಮತ್ ಉದ್ಭವ ರಾಚಮಲ್ಲದೇವರೆಂಬ ಪೆಸರಂ ಪಡೆದ ಎಂಬ ಶಾಸನೋಕ್ತ ಉಲ್ಲೇಖ ಸಿಗುತ್ತದೆ.[13]ಈ ಉದ್ಭವ ಲಿಂಗಮೂರ್ತಿಗೆ ದೇವಾಲಯವನ್ನು ಎರಡನೆಯ ರಾಚಮಲ್ಲನ ಕಾಲಾವಧಿಯಲ್ಲಿ ಕಟ್ಟಿಸಲಾಗಿದೆ ಎಂಬ ಅಭಿಪ್ರಾಯವಿದೆ. ಕುರುಗೋಡು-ಕುಡುತಿನಿ ರಸ್ತೆಯಲ್ಲಿರುವ ದೇವಾಲಯವನ್ನು ರಾಚಮಲ್ಲೇಶ್ವರನೆಂದು ಗುರುತಿಸಲಾಗಿದೆ. ಒಂದನೆಯ ರಾಚಮಲ್ಲನ ಕಾಲಾವಧಿಯಲ್ಲಿ ಕುರುಗೋಡು ಪಟ್ಟಣದಲ್ಲಿ ಮುಮ್ಮರಿದಂಡಗಳು (ವೀರಬಣಜಿಗರು) ತ್ರಿಕೂಟಾಲಯವನ್ನು ನಿರ್ಮಿಸುತ್ತಾರೆ.[14] ಈ ದೇವಾಲಯದ ನಿತ್ಯಪೂಜೆಯ ನಿರ್ವಹಣೆಗಾಗಿ ಅರಸನು ದಾನ ನೀಡುತ್ತಾನೆ. ಒಂದನೆಯ ರಾಚಮಲ್ಲನ ಮಗ ಇರುಂಗೋಳದೇವ ತನ್ನ ತಂದೆ ಇನ್ನೂ ಅಧಿಕಾರದಲ್ಲಿದ್ದಾಗಲೇ ಮರಣ ಹೊಂದಿದೆ. ಇದಕ್ಕೆ ಪುಷ್ಟಿ ಎಂಬಂತೆ ಕ್ರಿ.ಶ. ೧೧೪೯ರ ಶಾಸನವೊಂದು ಎರಡನೆಯ ರಾಚಮಲ್ಲನ (ಇರುಂಗೋಳ ದೇವನ ಮಗ) ಆಡಳಿತವನ್ನು ಉಲ್ಲೇಖಿಸುತ್ತದೆ.[15] ಪಟ್ಟಣದ ಉತ್ತರ ಭಾಗದಲ್ಲಿ ನಿರ್ಮಾಣವಾಗಿರುವ ಉಜಾಳೇಶ್ವರ ದೇವಾಲಯದ ಅಂತರಾಳ ಬಾಗಿಲವಾಡದ ಎಡಭಾಗದಲ್ಲಿರುವ ದ್ವಾರಪಾಲಕ ಶಿಲ್ಪವನ್ನು ಇರುಂಗೋಳದ ಮಡದಿ (ಏಚಲದೇವಿ) ಯದೆಂದು ಹಾಗೂ ಈ ದೇವಾಲಯದ ನಿರ್ಮಾಣಕ್ಕೆ ಇವಳು ಕಾರಣೀಭೂತಳೆಂದು ಅಭಿಪ್ರಾಯಿಸಿದ್ದಾರೆ.[16] ಈತನ ಮಗ ಎರಡನೆಯ ರಾಚಮಲ್ಲ ತನ್ನ (ಯೌವನದಲ್ಲಿಯೇ) ಅಜ್ಜನಾದ ಒಂದನೆಯ ರಾಚಮಲ್ಲನ ಜೊತೆಗೂಡಿ ಅನೇಕ ಸಾಧನೆಗಳನ್ನು ಮಾಡಿದನು. ಕ್ರಿ.ಶ. ೧೧೪೯ರ ಹೊತ್ತಿಗೆ ತನ್ನನ್ನು ರಾಜ್ಯಾಧಿಕಾರದಲ್ಲಿ ತೊಡಗಿಸಿಕೊಂಡಿರುವ ಮಾಹಿತಿ ಸಿಗುತ್ತದೆ.[17] ಅಜ್ಜನ ನೆರಳಿನಲ್ಲಿ ಬೆಳೆದ ಈತನ ಸಹ ಒಬ್ಬ ಉಗ್ರ ಶಿವಭಕ್ತನಾಗಿ ರೂಪಿತನಾಗಿದ್ದು, ಶಿವನನ್ನು ಸಾಕ್ಷಾತ್ಕರಿಸಿಕೊಂಡಿರುವ ಅನೇಕ ಸಂಗತಿಗಳನ್ನು ಕಾವ್ಯಗಳು ಕಟ್ಟಿಕೊಡುತ್ತವೆ. ಅಪೂರ್ವ ವ್ಯಕ್ತಿತ್ವ ಹೊಂದಿರುವ ಎರಡನೆಯ ರಾಚಮಲ್ಲ ಧರ್ಮೋಪದೇಶ ಮಾಡುವ ಗುರುವಾಗಿ ಸಮಾಜಕ್ಕೆ ಆದರ್ಶ ಪುರುಷನಾಗಿ ಇದ್ದನು ಎಂಬ ಅಭಿಪ್ರಾಯವನ್ನು ಡಾ.ಎಂ.ಎಂ. ಕಲಬುರ್ಗಿಯವರು ವ್ಯಕ್ತಪಡಿಸಿದ್ದಾರೆ.[18]ಈತನು ಬಲ್ಲಕುಂದೆ ಆಡಳಿತ ವಿಭಾಗದ ವಿಸ್ತಾರ ಹಾಗೂ ಭದ್ರತೆಯನ್ನು ಅತ್ಯಂತ ವ್ಯವಸ್ಥಿತವಾಗಿ ಕಾರ್ಯಗತಗೊಳಿಸಿದನು. ಎರಡನೆಯ ರಾಚಮಲ್ಲನ ಅಧಿಕಾರಿ ಹೆಗ್ಗಡೆ ರೇಚಯ್ಯನು ಹಂಪಿಯ ಮನ್ಮಥತೀರ್ಥದ ಬಳಿ ರಾಚಮಲ್ಲನ ಸ್ಮರಣಾರ್ಥವಾಗಿ ರಾಚಮಲ್ಲೇಶ್ವರ ದೇವಾಲಯವನ್ನು ಕಟ್ಟಿಸುತ್ತಾನೆ.[19] ಇಮ್ಮಡಿ ರಾಚಮಲ್ಲನ ಮಗ ವೀರ ಕಲಿದೇವರಸನು ಕ್ರಿ.ಶ. ೧೧೯೯ರ ವೇಳೆಗೆ ಅಧಿಕಾರರೂಢನಾದ ಬಗೆಗೆ ವಿವರಣೆ ಸಿಗುತ್ತದೆ.[20] ಧಾರ್ಮಿಕವಾಗಿ ಅತ್ಯಂತ ಮಹತ್ವವುಳ್ಳ ಹಂಪೆಯ ರಕ್ಷಣೆಗಾಗಿ ವೀರಕಲಿದೇವರಸನು ತನ್ನ ಸಾಮಾಂತನನ್ನು ನೇಮಕ ಮಾಡಿಡುತ್ತಾನೆ. ವಿರೂಪಾಕ್ಷತೀರ್ಥ ರಕ್ಷಣಾರ್ಥವಾಗಿ ಸಾಮಂತ ಮಾದೆಯನಾಯಕನು ಮತಂಗಪರ್ವತವನ್ನು ಪರಿಪಾಲಿಸುತ್ತಿದ್ದ ಎಂಬ ಉಲ್ಲೇಖ ಶಾಸನದಲ್ಲಿದೆ.[21] ವೀರಕಲಿದೇವರಸನ ನಂತರ ಆಳ್ವಿಕೆ ಮಾಡಿದ ಕುರುಗೋಡು ಸಿಂದರಸರ ಬಗೆಗೆ ಯಾವ ಸ್ಪಷ್ಟ ಮಾಹಿತಿಗಳು ದೊರೆತಿಲ್ಲ. ಕಲ್ಯಾಣದ ಚಾಳುಕ್ಯರ ಪತನಾನಂತರ

ಸಾಮ್ರಾಜ್ಯ ವಿಸ್ತರಣೆಯ ನಿರ್ಣಾಯಕ ಯುದ್ಧದಲ್ಲಿ ಮಹಾಮಂಡಳೇಶ್ವರರಾದ ಹೊಯ್ಸಳರು ಸೇವುಣರನ್ನು ಸೋಲಿಸಿ ಮೇಲುಗೈ ಸಾಧಿಸುತ್ತಾರೆ. ಇವರು ತುಂಗಭದ್ರಾನದಿಯ ಬಲಭಾಗದ ಎಲ್ಲ ಪ್ರದೇಶವನ್ನು ನಮ್ಮ ಅಂಕಿತಕ್ಕೆ ಒಳಪಡಿಸಿಕೊಂಡು ಕ್ರಿ.ಶ. ೧೨೧೬ರ ಹೊತ್ತಿಗೆ ಹಂಪೆಯಿಂದಲೇ ಆಡಳಿತ ನಡೆಸಿರುವ ವಿವರಣೆ ಇದೆ.[22] ಈ ಸಂದರ್ಭದಲ್ಲಿ ಬಲ್ಲಕುಂದೆ ನಾಡಿನ ಅರಸರಾದ ಕುರುಗೋಡು ಸಿಂದರು ಸಹಜವಾಗಿಯೇ ಹೊಯ್ಸಳರ ಅಧಿಪತ್ಯಕ್ಕೆ ಒಳಗಾಗಿರಬಹುದು ಡಾ.ಎಂ.ಚಿದಾನಂತಮೂರ್ತಿ ಅವರು ಕುರುಗೋಡು ಸಿಂದರನ್ನು ಹೊಯ್ಸಳರ ಸಾಮಂತರೆಂದೆ ಗುರುತಿಸಿದ್ದಾರೆ.[23] ಒಟ್ಟಿನಲ್ಲಿ ಅಭಿಪ್ರಾಯಪಡುವುದಾದರೆ ೧೩ನೇ ಶತಮಾನದ ನಂತರ ಕುರುಗೋಡ ಸಿಂದರ ಬಗೆಗಿರುವ ಮಾಹಿತಿಗಳ ಅಲಭ್ಯತೆಯಿಂದ ಅವರ ಸಾಂಸ್ಕೃತಿಕ ಸಮಗ್ರ ಇತಿಹಾಸ ರಚಿಸುವುದು ಕಷ್ಟಸಾಧ್ಯವಾಗಿದೆ.

ಕುರುಗೋಡು ಪಟ್ಟಣಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸಬಹುದಾದ ಪ್ರಮುಖ ಸಂಗತಿಯೆಂದರೆ, ಅಲ್ಲಿರುವ ಪ್ರಾಚೀನ ಗುಹಾಂತರ ದೇವಾಲಯಗಳು. ಆದಿಮಾನವನ ಚಟುವಟಿಕೆಗಳಿಂದ ನಿರ್ಮಿತವಾದ ಆಯುಧ, ಕಲ್ಲಾಸರೆಯ ರೇಖಾಚಿತ್ರಗಳ ಕುರುಹುಗಳು ಕುರುಗೋಡು ಪರಿಸರದಲ್ಲಿ ಹಬ್ಬಿರುವ ಬೆಟ್ಟಗಳಲ್ಲಿ ಹೇರಳವಾಗಿ ಸಿಗುತ್ತವೆ. ಆದರೆ ನಿರ್ದಿಷ್ಟವಾದ ಗುಹಾಂತರ ದೇವಾಲಯಗಳು ಕಂಡುಬಂದಿಲ್ಲ. ಪ್ರಕೃತಿದತ್ತವಾದ ಗುಹೆಗಳನ್ನು ಇತ್ತೀಚೆಗೆ ದೇವಾಲಯಗಳನ್ನಾಗಿ ಪರಿವರ್ತಿಸಿದ್ದಾರೆ. ಉದಾಹರಣೆಗೆ ಗುಂಡುಬ್ರಹ್ಮನ ದೇವಾಲಯ ಹಾಗೂ ಹಿಂಡುಲಿ ಸಂಗಮೇಶ್ವರ ದೇವಾಲಯದ ಮುಂಭಾಗದ ಬೆಟ್ಟದಲ್ಲಿರುವ ಗವಿ ವೀರಭದ್ರನ ದೇವಾಲಯವನ್ನು ಸೂಚಿಸಬಹುದು. ಇವುಗಳನ್ನೇ ಗುಹಾಂತರ ದೇವಾಲಯಗಳೆಂದು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಕ್ಷೇತ್ರಕಾರ್ಯಾವಧಿಯಲ್ಲಿ ಅಂಥ ಸ್ಪಷ್ಟ ಮಾಹಿತಿ ಸಿಗದೇ ಇರುವುದರಿಂದ ಅವುಗಳ ವಿವರಣೆ ಕೈಬಿಡಲಾಗಿದೆ.

ಒಂದು ಶತಮಾನಗಳ ಕಾಲ ಆಡಳಿತ ನಿರ್ವಹಿಸಿದ ಸಿಂದರು ಕುರುಗೋಡು ಪಟ್ಟಣ ಸೇರಿದಂತೆ ಬಲ್ಲಕುಂದೆ, ಓರುವಾಯಿ, ಹಂಪೆ, ಕುಡುತಿನಿ, ಕೊಳಗಲ್ಲು, ಹಾವಿನಾಳ, ಬಳ್ಳಾರಿ ಮುಂತಾದ ಸ್ಥಳಗಳಲ್ಲಿರುವ ದೇವಾಲಯಗಳ ಚಟುವಟಿಕೆಗಳಲ್ಲಿ ಪರೋಕ್ಷವಾಗಿ ಭಾಗವಹಿಸಿರುವ ನಿದರ್ಶನಗಳಿವೆ. ಕುರುಗೋಡಿನ ಕೈಫಿಯತ್ತಿನ ಉಲ್ಲೇಖದಂತೆ ಕುರುಗೋಡ ಪಟ್ಟಣದಲ್ಲಿಯೇ ಸುಮಾರು ೧೦ ದೇವಾಲಯಗಳಿರುವ ಮಾಹಿತಿ ಇದೆ.[24]ಎಲ್ಲ ದೇವಾಲಯಗಳನ್ನು ಸ್ಪಷ್ಟವಾಗಿ ಗುರುತಿಸುವುದು ತುಂಬಾ ಕಷ್ಟಕರವಾದುದು. ಕಾರಣ ಹೆಚ್ಚಿನ ದೇವಾಲಯಗಳು ನಾಶವಾಗಿದೆ. ಹಾಗೂ ವಿನಾಶದ ಅಂಚಿನಲ್ಲಿರುವ ಕೆಲವು ದೇವಾಲಯಗಳಿಗೆ ಸ್ಪಷ್ಟವಾದ ಹೆಸರುಗಳೇ ಇಲ್ಲ. ಹೀಗಾಗಿ ಕಲಾ ಇತಿಹಾಸ ದೃಷ್ಟಿಯಿಂದ ಪ್ರಮುಖವಾದ ದೇವಾಲಯಗಳನ್ನು ಮಾತ್ರ ವಿವರವಾದ ಚರ್ಚೆಗೆ ಒಳಪಡಿಸಲಾಗಿದೆ. ಹಾಗೂ ಪ್ರಬಂಧದ ವ್ಯಾಪ್ತಿಯನ್ನು ಕುರುಗೋಡಿನಲ್ಲಿರುವ ದೇವಾಲಯಗಳಿಗೆ ಮಾತ್ರ ಸೀಮಿತಗೊಳಿಸಿಕೊಳ್ಳಲಾಗಿದೆ. ದೇವಾಲಯಗಳ ಛಾಯಾಚಿತ್ರ, ನಕ್ಷೆಗಳನ್ನು ಗ್ರಂಥದ ಕೊನೆಯಲ್ಲಿ ನೀಡಲಾಗಿದೆ.

ಕುರುಗೋಡಿನ ಪ್ರಾಚೀನ ಕಲ್ಲುಗುಡೇಶ್ವರ ದೇವಾಲಯವು ಸಂಪೂರ್ಣವಾಗಿ ಜೀರ್ಣೋದ್ಧಾರಕ್ಕೊಳಪಟ್ಟಿದೆ. ಕುರುಗೋಡು -ಮುಷ್ಟಗಟ್ಟೆ ರಸ್ತೆಯಲ್ಲಿರುವ ಈ ದೇವಾಲಯ ಕುರುಬ ಸಮುದಾಯದ ಉಸ್ತುವಾರಿಯಲ್ಲಿದೆ. ದೇವಾಲಯದ ಆವರಣದಲ್ಲಿ ತೃಟಿತವಾದ ಸಪ್ತಮಾತೃಕೆ ಶಿಲ್ಪ, ನಾಗಶಿಲ್ಪಗಳು ಹಾಗೂ ಕೈಮುಗಿದು ಕುಳಿತ ಅತ್ಯಂತ ಜೀರ್ಣವಾಗಿರುವ ಮೂರ್ತಿ ಶಿಲ್ಪವನ್ನು ಇಡಲಾಗಿದೆ. ಈ ಶಿಲ್ಪಗಳು ಪ್ರಾಚೀನ ಕಲ್ಲುಗುಡೇಶ್ವರ ದೇವಾಲಯಕ್ಕೆ ಸಂಬಂಧಿಸಿದವುಗಳೋ ಅಥವಾ ಬೇರೆ ಕಡೆಯಿಂದ ತಂದಿಟ್ಟಿರುವವು ಎಂಬುದು ಅಸ್ಪಷ್ಟ. ಇದೇ ಗುಡಿಗೆ ಸಂಬಂಧಪಟ್ಟ ಇನ್ನೊಂದು ಸ್ಮಾರಕ ಗ್ರಾಮದಲ್ಲಿದೆ. ಇದು ಮನೆಯಂಥ ರಚನೆ ಈ ದೇವಾಲಯದ ಗರ್ಭಗೃಹದಲ್ಲಿ ಅಶ್ವಧಾರಿ ಎರಡು ಶಿಲ್ಪಗಳಿದ್ದು ಅವುಗಳನ್ನು ಕಂಪಿಲ ಹಾಗೂ ಕುಮಾರರಾಮನಿಗೆ ಸಂಬಂಧ ಕಲ್ಪಿಸಿ ಗ್ರಾಮಸ್ಥರು ಕಥೆಗಳನ್ನು ಹೇಳುತ್ತಾರೆ. ಪ್ರತಿ ಜಾತ್ರೆಯಲ್ಲಿ ಇಲ್ಲಿರುವ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಕಂಪಲಿ ಪಟ್ಟಣಕ್ಕೆ ಒಯ್ದು ಮರಳಿ ತರುತ್ತಾರೆ ಎಂಬ ಮಾಹಿತಿ ಇದೆ. ಈ ವಿಷಯಗಳ ಬಗೆಗೆ ಹೆಚ್ಚಿನ ಸಂಶೋಧನೆ ಕೈಗೊಳ್ಳುವುದು ಸೂಕ್ತವಾಗಿದೆ.

ಕುರುಗೋಡು ಬಸವೇಶ್ವರನಷ್ಟೇ ಪ್ರಸಿದ್ಧಿ ಪಡೆದ ದೇವಾಲಯವೆಂದರೆ ನೀಲಮ್ಮನಮಠ. ಈ ದೇವತೆಯ ಬಗೆಗೆ ಅನೇಕ ಪವಾಡ ಕಥೆಗಳಿವೆ. ಈ ಮಠದ ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ತರ್ಕಿಸುವುದಾದರೆ ಇದು ಅನೇಕ ಮಾರ್ಪಾಡುಗಳಿಗೆ ಒಳಗಾಗಿದೆ. ಜೈನಪಂಥದ ಕುರುಹುಗಳು ಇಲ್ಲಿ ಕಾಣಬರುತ್ತವೆ. ಗರ್ಭಗೃಹದ ಇಕ್ಕೆಲುಗಳಲ್ಲಿ ಬೆಣಚುಕಲ್ಲಿನಲ್ಲಿ ಮಾಡಿದ ಗಜಶಿಲ್ಪಗಳನ್ನು

ಇಡಲಾಗಿದೆ. ನವೀಕರಿಸಿದ ಬಾಗಿಲವಾಡದಲ್ಲಿ ವೃಷಭ,ಲಲಾಟದಲ್ಲಿ ಲಿಂಗ ಹಾಗೂ ಕೆಳಭಾಗದಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ಗರ್ಭಗೃಹದ ಮೇಲ್ಛಾವಣಿಯ ಕೈಪಿಡಿ ಗೋಡೆಯಲ್ಲಿ ವೀರಭದ್ರ, ಬ್ರಹ್ಮ, ನರಸಿಂಹ, ಉಮಾಶಂಕರ (ನಂದಿ, ಭೃಂಗಿ, ಸಮೇತ) ಗಣಪ, ವಿಷ್ಣು ಹಾಗೂ ಮೇಷತಲೆಯ (ದಕ್ಷಬ್ರಹ್ಮ) ಶಿಲ್ಪವನ್ನು ಅಳವಡಿಸಲಾಗಿದೆ. ಇವುಗಳನ್ನೆಲ್ಲ ಗಚ್ಚು, ಗಾರೆಗಳಿಂದ ರಚಿಸಲಾಗಿದೆ.

ಮೇಲೆ ವಿವರಿಸಿದ ದೇವಾಲಯಗಳಲ್ಲದೇ, ಪಂಚಮುಖಿ ವೀರಭದ್ರ, ನೀಲಕಂಠ ದೇವರಗುಡಿ, ಸುಂಕಲಮ್ಮನನ ಗುಡಿ, ಗುಹಾಂತರ ದೇವಾಲಯ, ಕೊಳದ ವೀರಭದ್ರ, ಚೌಕಿ ನೀಲಮ್ಮನಗುಡಿ, ಆಂಜನೇಯದ ಗುಡಿ, ಕಾಳಮ್ಮನ (ಮೌನೇಶ್ವರ)ಗುಡಿ ಹಾಗೂ ಗವಿ ವೀರಭದ್ರದೇವಾಲಯಗಳು ಕುರುಗೋಡು ಪಟ್ಟಣದಲ್ಲಿವೆ. ಇವು ನಿರಾಲಂಕರಣೆಯಿಂದ ಕೂಡಿದ ಹಾಗೂ ನವೀಕರಣಕ್ಕೆ ಒಳಗಾಗಿ ಇತ್ತೀಚೆಗೆ ನಿರ್ಮಿತವಾದ ಸ್ಮಾರಕಗಳು. ಈ ಎಲ್ಲ ದೇವಾಲಯಗಳನ್ನು ಹೊರತುಪಡಿಸಿದರೆ ಕುರುಗೋಡು ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಸ್ವಯಂಭುದೇವರ ಹಾಗೂ ಭೋಗೇಶ್ವರ ದೇವಾಲಯಗಳು ಹೆಚ್ಚಿನ ಮಹತ್ವ ಪಡೆದಿದ್ದವು. ಆದರೆ ಅವುಗಳ ಅಸ್ತಿತ್ವದ ಬಗೆಗೆ ಸ್ಪಷ್ಟ ಮಾಹಿತಿ ಇಲ್ಲ. ಇವುಗಳನ್ನು ಶೋಧಿಸಿ ಬೆಳಕಿಗೆ ತರುವುದು ಅವಶ್ಯಕವಾಗಿದೆ. ಕ್ರಿ.ಶ. ೧೧೭೯ರ ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲನ (ಎರಡನೆಯ) ಕಾಲದ ಶಾಸನವು[25] ಅವನ ಮಹಾಮಂಡಲೇಶ್ವರ ಕಾಂಚರಸ, ಗಂಗರಸ, ದೊರವದಿನಾಡ (ದರೋಜಿ) ಲೋಕರಸ ಹಾಗೂ ಮಹಾಪ್ರಧಾನ ಲಖ್ಖೆಯನಾಯಕ ಅವನ ತಮ್ಮಂದಿರಾದ ಮಾದೆಯನಾಯಕ ವಿರುಪನಾಯಕ ಮತ್ತು ಆಚೆಯನಾಯಕ ಹಾಗೂ ದೊರವದಿ ಎಪ್ಪತ್ತರ ಪ್ರಭುಗಾವುಂಡರು ಸೇರಿ ಕುರುಗೋಡಿನ ಭೋಗೇಶ್ವರ ದೇವರ ದೇವಾಲಯಗಳನ್ನು ಕಟ್ಟಿಸಿ ಭೂದಾನ ನೀಡಿರುವ ಉಲ್ಲೇಖವಿದೆ. ಇದರ ಪ್ರಕಾರ ಕುರುಗೋಡಿನಲ್ಲಿ ಶಾಸನಕೃತ ಭೋಗೇಶ್ವರ ದೇವಾಲಯವು ಅತ್ಯಂತ ಪ್ರಾಚೀನವಾದುದು. (ಕ್ರಿ.ಶ. ೧೧೪೯)ಆದರೆ ಇಂದು ಭೋಗೇಶ್ವರ ದೇವಾಲಯವು ಕುರುಗೋಡು ಪಟ್ಟಣದಲ್ಲಿ ಕಾಣಸಿಗುತ್ತಿಲ್ಲ. ಅಥವಾ ಈಗಿರುವ ದೇವಾಲಯಗಳಲ್ಲಿ ಹಿಂದಿನ ದೇವಾಲಯದ ಹೆಸರು ಬದಲಾವಣೆಯೊಂದಿಗೆ ಇದೆ ಎಂಬುದು ಅತ್ಯಂತ ಜಿಜ್ಞಾಸೆಯ ವಿಷಯವಾಗಿದೆ. ಅದೇ ತರಹ ಕ್ರಿ.ಶ. ೧೧೭೩ರ ಶಾಸನ ಉಲ್ಲೇಖಿತ[26] ಸ್ವಯಂಭುದೇವರ ದೇವಾಲಯದ ಬಗೆಗೂ ಸ್ಪಷ್ಟ ಮಾಹಿತಿ ಇಲ್ಲ. ಎರಡನೆಯ ರಾಚಮಲ್ಲನ ಸಾಮಂತ ಹಡಪವಳ ದಂಡನಾಯಕ ಬೇಚಿರಾಜನು ಸ್ವಯಂಭುದೇವರ ದೇವಾಲಯವನ್ನು ಒಂದನೆಯ ರಾಚಮಲ್ಲನ ಕಾಲಾವಧಿಯಲ್ಲಿಯೇ ಕಟ್ಟಿಸಿರುತ್ತಾನೆ. ಇದೇ ದೇವಾಲಯಕ್ಕೆ ಅಲ್ಲಿನ ಮತ್ತೊಂದು ಶಾಸನದಲ್ಲಿ ಎರಡನೆಯ ರಾಚಮಲ್ಲನು ಶ್ರೀಪುರ ಸ್ವಯಂಭುದೇವರ ಸ್ಥಾನ ಬಾಲಶಿವಾ ಚಾರ್ಯರ ಕಾಲ್ತೊಳೆದು ದಾನ ನೀಡಿದ ವಿವರವಿದೆ. ಇದೇ ಶಾಸನ (ಕ್ರಿ.ಶ. ೧೧೭೩)ದಲ್ಲಿ ಬೇಚರಸನ ಮಡದಿ ಮಳ್ಹಾಣಿಯಕ್ಕ ಅಗ್ನಿಗೆ ಹೋದ ಸಂಗತಿ ಇದೆ. ಮೇಲೆ ವಿವರಿಸಿದ ಶಾಸನ ಉಲ್ಲೇಖಿತ ಈ ದೇವಾಲಯಗಳ ಬಗೆಗಿರುವ ಖಚಿತವಾದ ಕುರುಹುಗಳು ಈವರೆಗೂ ಸಿಕ್ಕಲ್ಲ. ಹೀಗಾಗಿ ಅಸ್ತಿತ್ವದಲ್ಲಿರುವ ಪ್ರಮುಖ ದೇವಾಲಯ ಹಾಗೂ ಮೂರ್ತಿಶಿಲ್ಪಗಳ ಲಕ್ಷಣ ಹಾಗೂ ಮಹತ್ವವನ್ನು ಮಾತ್ರ ಚರ್ಚಿಸಲಾಗಿದೆ.

[1] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೧ (ಕ.ವಿ.ವಿ.ಸಂ : ೧) ಕುರುಗೋಡು, ಬಳ್ಳಾರಿ (ತಾ) ಶಾಸನ ಸಂಖ್ಯೆ ೭ ಮತ್ತು ೮

[2] ಅದೇ….ಶಾಸನ ಸಂಖ್ಯೆ-೭

[3] ಅದೇ…. ಶಾಸನ ಸಂಖ್ಯೆ-೩೯

[4] ಅದೇ…. ಶಾಸನ ಸಂಖ್ಯೆ-೪೫

[5] ಕ.ವಿ.ವಿ.ಶಾ.ಸಂ : ೧, ಸಿರಗುಪ್ಪ, ಸಿರಗುಪ್ಪ ತಾ., ಶಾಸನ ಸಂಖ್ಯೆ-೧

[6] ಅದೇ….ಶಾಸನ ಸಂಖ್ಯೆ-೪೧

ಕ್ರಿ.ಶ. ೧೦೭೬ರಿಂದ ೧೧೨೬ರ ವರೆಗೆ ವಿಶಾಲವಾದ ಸಾಮ್ರಾಜ್ಯವನ್ನಾಳಿದ ಆರನೆಯ ವಿಕ್ರಮಾದಿತ್ಯನು ಅಣ್ಣನಾದ ಎರಡನೆಯ ಸೋಮೇಶ್ವರನಿಂದ ಪ್ರಾರಂಭದಲ್ಲಿ ಅನೇಕ ಕಿರುಕುಳಕ್ಕೆ ಒಳಗಾಗಿ ರಾಜಭ್ರಷ್ಟನಾಗಿ ಪಲಾಯನಗೈಯುತ್ತಾನೆ. ಈ ಸಂದರ್ಭದಲ್ಲಿ

ಆರನೆಯ ವಿಕ್ರಮಾದಿತ್ಯನು. ತನ್ನ ತಮ್ಮ ಜಯಸಿಂಹನ ಜೊತೆಗೂಡಿ ಸಿಂದವಾಡಿಯ ಸಾಸಿರ ಆಡಳಿತ ವಿಭಾಗದಲ್ಲಿಯೇ ಆಶ್ರಯ ಪಡೆಯುತ್ತಾನೆ. ಇಂಥ ಋಣಭಾರದ ಘಟನೆಯು ಬಹುಶಃ ಆರನೆಯ ವಿಕ್ರಮಾದಿತ್ಯ ಹಾಗೂ ಕುರುಗೋಡು ಸಿಂದರ ನಡುವಿನ ಬಾಂಧವ್ಯದ ಬೆಸುಗೆಯಾಗಿ ಕಾರ್ಯನಿರ್ವಹಿಸಿದ್ದರಬಹುದು. ಈ ಅವಕಾಶವನ್ನು ಸರಿಯಾಗಿ ಉಪಯೋಗಿಸಿಕೊಂಡ ಕುರುಗೋಡು ಸಿಂದರಸ ಸೋವಿದೇವನು ಆರನೆಯ ವಿಕ್ರಮಾದಿತ್ಯನ ಆಡಳಿತಾವಧಿಯಲ್ಲಿಯೇ (ಕ್ರಿ.ಶ. ೧೧೨೧)ಮಹಾಸಾಮಂತ ನಿಂದ ಮಹಾಮಂಡಳೇಶ್ವರನ ಸ್ಥಾನಕ್ಕೇರುತ್ತಾನೆ. (ಕ್ರಿ.ಶ. ೧೧೨೦)ರ ಕೊಂಚಿಗೆರೆ ಸಿರುಗುಪ್ಪ ತಾ.ಶಾಸನವು (ಕ.ವಿ.ವಿ.ಶಾ.ಸಂ : ೧ ಶಾಸನ ಸಂಖ್ಯೆಯ-೪೧) ಸೋವಿದೇವನನ್ನು ಮಹಾಮಂಡಳೇಶ್ವರನೆಂದು ಉಲ್ಲೇಖಿಸುತ್ತದೆ.

[7] ಕ.ವಿ.ವಿ.ಶಾ.ಸಂ : ೧, ಬೈಲೂರು, ಬಳ್ಳಾರಿ (ತಾ)ಶಾಸನ ಸಂಖ್ಯೆ-೩೯

[8] ಒಂದನೆಯ ರಾಚಮಲ್ಲನಿಗಿಂತ ಮುಂಚಿನ ಅರಸರು ದೇವಾಲಯ ಕಾರ್ಯಗಳಿಗೆ ಅನೇಕ ಬಗೆಯ ದಾನದತ್ತಿಗಳನ್ನು ನೀಡಿದ್ದಾರೆ. ಈ ಅರಸರು ಕೊಟ್ಟ ದಾನಗಳು ಕುರುಗೋಡು ಪಟ್ಟಣದಲ್ಲಿರುವ ದೇವಾಲಯ ಸಂಬಂಧಿ ಚಟುವಟಿಕೆಗಳಲ್ಲಿ ಸಿಂದರು ತೊಡಗಿಸಿಕೊಂಡಿರುವ ಮೊದಲ ಸಂಬಂಧಪಟ್ಟ ಉಲ್ಲೇಖ ಸಿಗುವುದು ಒಂದನೆಯ ರಾಚಮಲ್ಲನ, ಆಡಳಿತಾವಧಿಯಲ್ಲಿಯೇ ಎಂಬುದು ಮುಖ್ಯವಾದುದು.

[9] ನಾಗಯ್ಯ ಜೆ.ಎಂ., ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ; ಪುಟ-೧೦೩

[10] ಕ.ವಿ.ವಿ.ಶಾ.ಸಂ : ೧, ಕೊಂಚಗೆರೆ, ಸಿರುಗುಪ್ಪ ತಾ.ಶಾಸನ ಸಂಖ್ಯೆ - ೪೦

[11] ಅದೇ…..ಶಾಸನ ಸಂಖ್ಯೆ-೪೧

[12] ಅದೇ…..ತೆಕ್ಕಲಕೋಟೆ ಸಿರುಗುಪ್ಪ ತಾ.ಶಾಸನ ಸಂಖ್ಯೆ-೩೬

[13] ಕ.ವಿ.ವಿ.ಶಾ.ಸಂ : ೧, ಕುರುಗೋಡು, ಬಳ್ಳಾರಿ ತಾ. ಶಾಸನ ಸಂಖ್ಯೆ-೧೯

[14] ಅದೇ….ಶಾಸನ ಸಂಖ್ಯೆಯ-೮

ಬಲ್ಲಕುಂದೆ ಮುನ್ನೂರು ಆಡಳಿತ ವಿಭಾಗದಲ್ಲಿನ ಮುಮ್ಮುರಿದಂಡರು ಕುರುಗೋಡು ಅರಸರಷ್ಟೇ ಪ್ರಖ್ಯಾತಿ ಪಡೆದಿದ್ದರಬಹುದು. ಈ ನಾಡಿನ ಪ್ರತಿ ದೇವಾಲಯಗಳ ನಿರ್ಮಾಣದಲ್ಲಿ ಕೈಗೊಂಡಿರುವ ಅವರ ಸಾಧನೆಗಳು ಶಾಸನಗಳಲ್ಲಿ ಉಲ್ಲೇಖವಾಗಿವೆ. ಇದಕ್ಕೆ ಕುರುಗೋಡು ಪಟ್ಟಣವು ಹೊರತಾಗಿರಲಿಲ್ಲವೆಂದು ಗಮನಿಸುವುದು ಸೂಕ್ತ. ಕಲ್ಲೇಶ್ವರ, ತ್ರಿಕೂಟಾಲಯ, ರಾಚಮಲ್ಲೇಶ್ವರದಂತೆ ಪ್ರಮುಖ್ಯ ದೇವಾಲಯಗಳ ನಿರ್ಮಾಣದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ಮಾಹಿತಿಗಳಿವೆ.

[15] ಅದೇ…..ಓರುವಾಯಿ, ಬಳ್ಳಾರಿ (ತಾ)ಶಾಸನ ಸಂಖ್ಯೆ-೪೧

ಏಚಿಸೆಟ್ಟಿ ಎಂಬುವನು ವಿನಾಯಕ ದೇವರಿಗೆ ದೇವಾಲಯವನ್ನು ಕಟ್ಟಿಸಿದಾಗ ಒಂದನೆಯ ರಾಚಮಲ್ಲನ ಮೊಮ್ಮಗ ಇಮ್ಮಡಿ ರಾಚಮಲ್ಲ (ಇರುಂಗೋಳ ದೇವನ ಮಗ) ಈ ದೇವಾಲಯದ ನಿರ್ವಹಣೆಗೆ ಭೂಮಿದಾನ ನೀಡಿದ್ದಾನೆ. ಈ ಶಾಸನವು ಇಮ್ಮಡಿ ರಾಚಮಲ್ಲನನ್ನು ಉಲ್ಲೇಖಿಸುವ ಮೊದಲ ಶಾಸನವಾಗಿದೆ.

[16] ಹಿರೇಮಠ ಚನ್ನಬಸಯ್ಯ, ಕುರುಗೋಡು ಸಿಂದರು ಒಂದು ಅಧ್ಯಯನ, ಪುಟ ೨೬೭, ೨೮೬

[17] ಕ.ವಿ.ವಿ.ಶಾಸನ ಸಂಪುಟ-೧, ಓರುವಾಯಿ, ಬಳ್ಳಾರಿ (ತಾ)ಶಾಸನ ಸಂಖ್ಯೆ-೪೧

[18] ಕಲಬುರ್ಗಿ ಎಂ.ಎಂ., ಶಾಸನಗಳಲ್ಲಿ ಶಿವಶರಣರು, ಪುಟ ೧೦೭,೧೦೮

[19] ನಾಗಯ್ಯ ಜೆ.ಎಂ., ಪೂರ್ವೋಕ್ತ, ಪುಟ. ೧೦೮

[20] ಕ.ವಿ.ವಿ.ಶಾಸನ ಸಂಪುಟ-೨, ಹಂಪೆ, ಹೊಸಪೇಟೆ (ತಾ) ಶಾಸನ ಸಂಪುಟ-೫೫

[21] ಅದೇ....ಶಾಸನ ಸಂಖ್ಯೆ ೫೫

[22] ಕ.ವಿ.ವಿ.ಶಾಸನ ಸಂಪುಟ-೧, ಕುಮಾರಸ್ವಾಮಿ ಬೆಟ್ಟ, ಸೊಂಡುರು (ತಾ)ಶಾಸನ ಸಂಖ್ಯೆ ೭

[23] ಚಿದಾನಂದ ಮೂರ್ತಿ ಎಂ. ಹೊಸತು ಹೊಸತು, ಪುಟ ೪೩೭

[24] ಕಲ್ಬುರ್ಗಿ ಎಂ.ಎಂ., ಕರ್ನಾಟಕದ ಕೈಫಿಯುತ್ತುಗಳು, ಪುಟ ೪೪೮ ೪೯

[25] ಕ.ವಿ.ವಿ ಶಾಸನ ಸಂಪುಟ-೧, ಓರುವಾಯಿ, ಬಳ್ಳಾರಿ (ತಾ) ಶಾಸನ ಸಂಖ್ಯೆ ೪೦


[26] ಅದೇ.....ಕುರುಗೋಡು ಬಳ್ಳಾರಿ (ತಾ) ಶಾಸನ ಸಂಖ್ಯೆ ೧೮

## ೫. ವಾಸ್ತು ಮತ್ತು ಮೂರ್ತಿಶಿಲ್ಪ (೨)

**ಕಲ್ಲೇಶ್ವರ ದೇವಾಲಯ**

ಈ ದೇವಾಲಯದ ಮುಖಮಂಟಪದ ದಕ್ಷಿಣಭಾಗದಲ್ಲಿ ಕ್ರಿ.ಶ. ೧೧೭೩ರ ತೇದಿಯ ಶಾಸನವೊಂದಿದೆ. ಇದು ಕಲಚುರಿ ಅರಸ ರಾಯಮುರಾರಿ ಸೋವಿದೇವನ ಕಾಲದ್ದು. ಎರಡನೆಯ ರಾಚಮಲ್ಲನ ಮುಮ್ಮರಿದಂಡರಲ್ಲಿ ಒಬ್ಬನಾದ ಹಾವಿನಾಳ ಕಲ್ಲಿಶೆಟ್ಟಿಯು ಕುರುಗೋಡಿನಲ್ಲಿ ಕಲಿದೇವರನ್ನು ಪ್ರತಿಷ್ಠಾಪಿಸಿ ದಾನ ನೀಡಿದ್ದಾನೆ. ಹಾಗೂ ಇದೇ ಕಲಿ ದೇವರಿಗೆ ಮಹಾಮುಂಡಳೇಶ್ವರ ಸಿಂದವಂಶದ ಎರಡನೆಯ ರಾಚಮಲ್ಲ ಸಹ ದೇವಾಲಯದ ಸ್ಥಾನಾಚಾರ್ಯರಾದ ಅಮೃತರಾಶಿಮುನೀಂದ್ರ ಅಥವಾ ಅಮೃತಾರಾಶಿದೇವರ ಪಾದಪೂಜೆ ಮಾಡಿ (ಕಾಲಂಕರ್ಚಿ) ಅದರ ನಿರ್ವಹಣೆಗಾಗಿ ಭೂಮಿಯನ್ನು ದಾನ ನೀಡಿದ್ದಾನೆ. ದೇವಾ ಲಯದ ರಂಗಭೋಗ ಚಟುವಟಿಕೆಗಳಿಗೆ ದಾನ ನೀಡಿರುವ ಉಲ್ಲೇಖ ಈ ಶಾಸನದಲ್ಲಿದೆ.

[1]



ಕಲ್ಲೇಶ್ವರ ದೇವಾಲಯದ ತಲವಿನ್ಯಾಸ

ಕುರುಗೋಡು ಪಟ್ಟಣದ ನೈರುತ್ಯ ಭಾಗದಲ್ಲಿರುವ ಈ ಕಲ್ಲೇಶ್ವರ ದೇವಾಲಯ ಶಾಸನ ಉಲ್ಲೇಖಿತ ಕಲಿದೇವರ ದೇವಾಲಯವಾಗಿತ್ತು. ಕಲ್ಯಾಣ ಚಾಲುಕ್ಯ ಮಾದರಿಯ ಈ ರಚನೆ ಎತ್ತರದ ಕಟ್ಟೆಯ ಮೇಲೆ ನಿರ್ಮಾಣವಾಗಿದೆ. ಡಾ.ಎಸ್.ರಾಜಶೇಖರ ಅವರು ಇದನ್ನು ಸೇವುಣ ಮಾದರಿಯ ದೇವಾಲಯವೆಂದು ಅಭಿಪ್ರಾಯಪಟ್ಟಿದ್ದಾರೆ.[2] ಕಲ್ಲೇಶ್ವರ ದೇವಾಲಯದ ನಿರ್ಮಾಣ ಪೂರ್ವದಲ್ಲಿ ಕುರುಗೋಡಿನಲ್ಲಿ ಭೋಗೇಶ್ವರ ದೇವಾಲಯ (ಕ್ರಿ.ಶ. ೧೧೪೯) ನಿರ್ಮಾಣವಾಗಿರುವ ಮಾಹಿತಿ ಇದ್ದರೂ ದೇವಾಲಯದ

ಯಾವೊಂದೂ ಕುರುಹುಗಳು ಸಿಕ್ಕಿಲ್ಲ. ಆದ್ದರಿಂದ ಕುರುಗೋಡಿನ ಶಾಸನದಲ್ಲಿ ಉಲ್ಲೇಖಿತ ಕಲ್ಲೇಶ್ವರ ದೇವಾಲಯ ಕುರುಗೋಡಿನಲ್ಲಿ ಮೊದಲ ದೇವಾಲಯ ಎಂದು ಅಭಿಪ್ರಾಯಿಸಬಹುದು.

ಕಲ್ಲೇಶ್ವರ ದೇವಾಲಯ ಆಯತಾಕಾರದ ತಲವಿನ್ಯಾಸ ಹೊಂದಿದ್ದು, ಇದೊಂದು ಏಕಕೂಟ ದೇವಾಲಯವಾಗಿದೆ. ಗರ್ಭಗೃಹ, ಅಂತರಾಳ (ಸುಖನಾಸಿ), ನವರಂಗ (ಸಭಾಪಂಟಪ) ಹಾಗೂ ಮುಖಮಂಟಪ ಭಾಗವನ್ನು ಈ ದೇವಾಲಯವು ಒಳಗೊಂಡಿದೆ. ಕದಂಬನಾಗರ ಶಿಖರ ಶೈಲಿಯ ಈ ದೇವಾಲಯ ಸಾದಾ ರಚನೆಯದ್ದಾಗಿದೆ. ದೇವಾಲಯದ ಸುತ್ತಲೂ ಇಂದು ಅನೇಕ ಹೊಸ ಕಟ್ಟಡಗಳನ್ನು ಕಟ್ಟಿದ್ದಾರೆ.

ಗರ್ಭಗೃಹದಲ್ಲಿ ಎರಡು ಅಡಿ ಎತ್ತರದ ಲಿಂಗ ಇದೆ. ಇದರ ಬಾಗಿಲವಾಡದಲ್ಲಿ ಸಾಮಾನ್ಯ ರಚನೆಗಳಾದ ಅರ್ಧಕಂಬ, ಪಟ್ಟಿಕೆ, ಹೂವಿನ ಎಸಳು ಹಾಗೂ ಪುಷ್ಪ ಅಲಂಕರಣೆಗಳು ಇವೆ. ಲಲಾಟದಲ್ಲಿ ಗಜಲಕ್ಷ್ಮಿ ಉಬ್ಬು ಶಿಲ್ಪವಿದೆ. ಮೇಲ್ಭಾಗದಲ್ಲಿ ಔತ್ತರೇಯ (ಉತ್ತರ) ಮಾದರಿಯ ಶಿಖರ ಪಟ್ಟಿಕೆಗಳನ್ನು ಕೆತ್ತಲಾಗಿದೆ. ಗರ್ಭಗೃಹದ ಇಕ್ಕೆಲಗಳಲ್ಲಿ ತ್ರಿಶೂಲ, ಢಮರು ಹಾಗೂ ಗದಾಧರ ದ್ವಾರಶಿಲ್ಪಗಳನ್ನು ಇಡಲಾಗಿದೆ. ಗರ್ಭಗೃಹದ ಬಾಗಿಲವಾಡದಲ್ಲಿರುವ ಲಕ್ಷಣಗಳನ್ನೇ ಅಂತರಾಳದ ಬಾಗಿಲವಾಡದಲ್ಲಿ ಪುನರಾವರ್ತಿಸಿದ್ದಾರೆ. ಹೆಚ್ಚಿನ ಜೋಡಣೆಯಾಗಿ ಅಂತರಾಳದ ದ್ವಾರಶಾಖೆಗಳ ಎರಡು ಕಡೆಗೆ ಜಾಲಂಧರ (ಕಿಟಕಿ)ವನ್ನು ಅಳವಡಿಸಿದ್ದಾರೆ. ಹಾಗೂ ಪುರುಷ ದ್ವಾರಶಿಲ್ಪಗಳ ಬದಲಾಗಿ ಸ್ತ್ರಿ ದ್ವಾರಶಿಲ್ಪಗಳು ಅಂತರಾಳದ ಇಕ್ಕೆಲಗಳಲ್ಲಿವೆ. ಇವು ಕಂಠಹಾರ, ಕಂಕಣ, ಕೇಯೂರ ಹಾಗೂ ನೂಪುರಗಳ ಅಲಂಕರಣೆಗಳಿಂದ ಕೂಡಿವೆ.

ನವರಂಗ ಅಥವಾ ಸಭಾಮಂಟಪದಲ್ಲಿ ಕಲ್ಯಾಣಚಾಲುಕ್ಯ ಮಾದರಿಯ ನಾಲ್ಕು ಕಂಬಗಳಿವೆ. ಈ ನಾಲ್ಕು ಕಂಬಗಳ ಕೆಳಭಾಗದಲ್ಲಿ ಚೌಕಾಕಾರದ ರಚನೆ ಮಧ್ಯಭಾಗದಲ್ಲಿ ಅಷ್ಟಾಕೃತಿ, ಮೇಲ್ಭಾಗದಲ್ಲಿ ತಟ್ಟೆಯಾಕಾರದ ಮುಚ್ಚಳ ಹಾಗೂ ಅದರ ಮೇಲೆ ಚೌಕಾಕಾರದ ಫಲಕವನ್ನು ಜೋಡಿಸಲಾಗಿದೆ. ಕಂಬ ಹಾಗೂ ಮೇಲ್ಛಾವಣಿಯ ಮಧ್ಯಭಾಗದಲ್ಲಿ ಬೋಧಿಗೆಗಳ ರಚನೆಯಿದೆ. ಸಭಾಮಂಟಪದಲ್ಲಿ ಎತ್ತರದ ಕಟ್ಟೆಯ ಮೇಲೆ ಗರ್ಭಗೃಹದ ಲಿಂಗಕ್ಕೆ ಎದುರಾಗಿ ನಂದಿ ಶಿಲ್ಪವನ್ನು ಇಡಲಾಗಿದೆ.

ಸಭಾಮಂಟಪದಲ್ಲಿರುವ ದೇವಕೋಷ್ಠ ಅಥವಾ ಗೂಡುಗಳಲ್ಲಿ ಗಣೇಶ ಹಾಗೂ ಸೂರ್ಯನ ಶಿಲ್ಪಗಳನ್ನು ಇಡಲಾಗಿದೆ. ಈ ಗೂಡುಗಳು ಅಲಂಕರಣೆಯಿಂದ ಕೂಡಿದ್ದು, ಇಕ್ಕೆಲುಗಳಲ್ಲಿ ಅರ್ಧಕಂಬ ಹಾಗೂ ಮೇಲ್ಭಾಗದಲ್ಲಿ ಉತ್ತರ ಮಾದರಿಯ ಶಿಖರ ರಚನೆಗಳಿಂದ ಆಕರ್ಷಕವಾಗಿವೆ. ಸಭಾಮಂಟಪದ ಒಳಗೋಡೆಯು ಹಂಸ ಹಾಗೂ ಪುಷ್ಪಗಳ ಉಬ್ಬುಶಿಲ್ಪ ಕೆತ್ತನೆಯನ್ನು ಹೊಂದಿವೆ. ಸಭಾಮಂಟಪದಲ್ಲಿ ಕುಳಿತುಕೊಳ್ಳಲು ಕಕ್ಷಾಸನ ಅಥವಾ ಕಟ್ಟೆಯಿದೆ.

ಈ ದೇವಾಲಯ ಮುಖಮಂಟಪ ಹೊಂದಿದು, ಇಲ್ಲಿಯೂ ಸಹ ಕಕ್ಷಾಸನ ವ್ಯವಸ್ಥೆ ಇದೆ. ಸಭಾಮಂಟಪದ ಕಂಬಗಳು ಮುಖಮಂಟಪಕ್ಕೂ ವಿಸ್ತರಿಸಿವೆ. ಮೆಟ್ಟಿಲುಗಳ ಮೂಲಕ ದೇವಾಲಯವನ್ನು ಪ್ರವೇಶಿಸಬೇಕಾಗುತ್ತದೆ. ಪ್ರವೇಶದ ಇಕ್ಕೆಲಗಳಲ್ಲಿ ಆನೆಯ ಶಿಲ್ಪಗಳಿವೆ. ಮುಖಮಂಟಪದ ಕಕ್ಷಾಸನದ ಹೊರಗೋಡೆಯಲ್ಲಿ ಪುಷ್ಪ ಹಾಗೂ ಆನೆಯ ಉಬ್ಬುಶಿಲ್ಪಗಳ ಕೆತ್ತನೆಯಿದೆ. ಸಭಾಮಂಟಪ ಹಾಗೂ ಮುಖಮಂಟಪವು ಮುಂಚಾಚಿದ ಮಂಜೂರಿನ ಭಾಗವನ್ನು ಹೊಂದಿದೆ. ಸರಳ ಅಧಿಷ್ಠಾನ ರಚನೆಯುಳ್ಳ ಈ ದೇವಾಲಯ ಉಪಾನ, ಜಗತಿ, ತ್ರಿಪಟ್ಟ ಕುಮುದ ಭಾಗಗಳನ್ನು ಒಳಗೊಂಡಿದೆ. ದೇವಾಲಯಕ್ಕೆ ಶಿಖರವಿದೆ. ಆದರೆ ಇದನ್ನು ಇತ್ತೀಚೆಗೆ ನಿರ್ಮಿಸಿದ್ದಾರೆ.

**ರಾಚಮಲ್ಲೇಶ್ವರ ದೇವಾಲಯ**

ಉಗ್ರಶಿವಭಕ್ತರಾದ ಕುರುಗೋಡು ಸಿಂದರಸರು ಅನೇಕ ಪವಾಡಗಳನ್ನು ಮೆರೆದಿದ್ದಾರೆ. ತಮ್ಮನ್ನು ಶಿವಭಕ್ತರೆಂದು ಸಾಬೀತುಪಡಿಸಿಕೊಳ್ಳಲು ತಾವೇ ಅನೇಕ ಪ್ರಯೋಗ ಪರೀಕ್ಷೆಗೆ ಒಳಗಾಗಿದ್ದಾರೆ. ಇಂಥ ಮಾಹಿತಿ ನೀಡುವ ಕಾವ್ಯ ಹಾಗೂ ಶಾಸನಗಳು ಪ್ರಕಟಗೊಂಡಿವೆ. ಪವಾಡವನ್ನು ಮೆರೆದು ಶಿವನನ್ನು ಸಾಕ್ಷತ್ಕರಿಸಿಕೊಂಡ ಒಂದನೆಯ ರಾಚಮಲ್ಲನ ಬಗೆಗೆ ವಿವರನೆ ನೀಡುವ ಶಾಸನ ಕುರುಗೋಡು ಪಟ್ಟಣದಲ್ಲಿದೆ. ಕ್ರಿ.ಶ. ೧೧೭೩ರ ಕಾಲದ ಶಾಸನವು ಉಲ್ಲೇಖಿಸುವಂತೆ ರಾಚಮಲ್ಲನ ಶಿವಭಕ್ತಿಗೆ

ಮೆಚ್ಚಿ ಶಿವಪಾರ್ವತಿಯೊಡನೆ ದರ್ಶನವಿತ್ತು ಅವನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಾನೆ. ನಂತರ ರಾಚಮಲ್ಲ ಸ್ವಯಂಭುದೇವರ ಪಶ್ಚಿಮಭಾಗದಲ್ಲಿ ಲಿಂಗಮೂರ್ತಿಯಾಗಿ ಮರುಹುಟ್ಟು ಪಡೆಯುತ್ತಾನೆ.[3] ಇಲ್ಲಿರುವ ಲಿಂಗವನ್ನೇ ಜನರು ವಾಡಿಕೆಯಂತೆ ರಾಚಮಲ್ಲೇಶ್ವರನೆಂದು ಕರೆದಿದ್ದಾರೆ. ಭೈರವೇಶ್ವರ ಕಾವ್ಯದ ಉಲ್ಲೇಖದಂತೆ ಗಂಡಗತ್ತರೆಂದು ನಾಚಯ್ಯ, ರಾಚಮಲ್ಲಯ್ಯ, ಚಿಕ್ಕರಾಚಮಲ್ಲಯ್ಯ ಕೂಡಿ ಗಂಡಗತ್ತರಿ (ಭಿಕ್ಷೆ) ಕಾಯಕಕ್ಕೆ ಹೋಗುವಾಗ ವೈಷ್ಣವನು ಶಿವನಿಂದೆ ಮಾಡಿದಾಗ ನಾಚಯ್ಯಗಳು ಆತನನ್ನು ಸಂಹಾರ ಮಾಡಲು ಹೊರಟಾಗ ವೈಷ್ಣವ ಪಡೆ ಬಂದು ಇವರೊಂದಿಗೆ ವಾಗ್ವಾದಕ್ಕಿಳಿಯುತ್ತದೆ. ಗಂಡಗತ್ತರಿಯ ನಾಚಯ್ಯ ಮತ್ತು ರಾಚಮಲ್ಲಯ್ಯ ಶಿರವ ಕತ್ತರಿಸಿಕೊಂಡು ಪವಾಡ ಮೆರೆಯುತ್ತಾರೆ. ಚಿಕ್ಕ ರಾಚಮಲ್ಲಯ್ಯ ನರ್ತನ ಮಾಡುತ್ತಾನೆ. ಕಡೆಗೆ ಶಿವ-ಪಾರ್ವತಿಯರು ಪ್ರತ್ಯಕ್ಷರಾಗಿ ಇವರನ್ನು ಕೈಲಾಸಕ್ಕೆ ಕರೆದೊಯ್ದುದನ್ನು ಕಾವ್ಯವು ಉಲ್ಲೇಖಿಸುತ್ತದೆ.[4] ಬಹುಶಃ ಈ ಘಟನೆ ನಡೆದ ಸ್ಥಳದಲ್ಲಿ ಎರಡನೆಯ ರಾಚಮಲ್ಲನ (ಕ್ರಿ.ಶ. ೧೧೭೭ರ ನಂತರ) ಕಾಲದಲ್ಲಿ ದೇವಾಲಯ ಕಟ್ಟಿಸಿರುವ ಸಾಧ್ಯತೆ ಇದೆ. ಶಾಸನ ಹಾಗೂ ಕಾವ್ಯಗಳ ಮಾಹಿತಿಯನ್ನು ಆಧರಿಸಿ ವಿದ್ವಾಂಸರು ಕುರುಗೋಡು-ಕುಡುತಿನಿಯ ರಸ್ತೆಯಲ್ಲಿರುವ ಅನಾಮಧೇನು ಮೂರು ದೇವಾಲಯಗಳಲ್ಲಿ ವಿಸ್ತಾರವಾದ ದೊಡ್ಡ ದೇವಾಲಯವನ್ನು ರಾಚಮಲ್ಲೇಶ್ವರ ದೇವಾಲಯವೆಂದು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ರಾಚಮಲ್ಲನ ದೇವಾಲಯವನ್ನು ಡಾ.ಎಸ್.ರಾಜಶೇಖರ ಅವರು ಕುರುಗೋಡು ಶಾಸನದಲ್ಲಿ ಉಲ್ಲೇಖಿತವಾಗಿರುವ ತ್ರಿಕೂಟ ದೇವಾಲಯ ಆಗಿದ್ದಿರಬಹುದೆಂದು ಅಭಿಪ್ರಾಯಿಸಿದ್ದರು. ಆದರೆ ತ್ರಿಕೂಟ ದೇವಾಲಯದ ಬಗೆಗಿರುವ ಮಾಹಿತಿಗಳು ಸ್ಪಷ್ಟವಾಗಿ ದೊರಕದ್ದರಿಂದ ವಿದ್ವಾಂಸರ ಮೇಲಿನ ಅಭಿಪ್ರಾಯವನ್ನು ಬಿಡುವುದು ಸೂಕ್ತವೆನಿಸುತ್ತದೆ.


ರಾಚಮಲ್ಲನ ದೇವಾಲಯವು ಗರ್ಭಗೃಹ ಅಂತರಾಳ ತೆರದ ನವರಂಗ ಅಥವಾ ಸಭಾಮಂಟಪ ಹಾಗೂ ಮುಖಮಂಪಟವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಲಿಂಗವಿದ್ದು, ಬಹುಶಃ ಇದನ್ನೇ ಉದ್ಭವಲಿಂಗವೆಂದು ಜನರು ಪರಿಭಾವಿಸಿದ್ದಾರೆ. ಕ್ಷೇತ್ರಕಾರ್ಯ ವಧಿಯಲ್ಲಿ ಇದನ್ನು ಗಮನಿಸಿದಾಗ ಉದ್ಭವಲಿಂಗಮೂರ್ತಿಯ ಸ್ಪಷ್ಟವಾದ ಯಾವ ಕುರುಹುಗಳು ಕಾಣುವುದಿಲ್ಲ. ಇಲ್ಲಿರುವ ಲಿಂಗವು ಕಲ್ಯಾಣ ಚಾಲುಕ್ಯರ ಕಾಲಾವಧಿಯ ರಚನೆಯಾಗಿದೆಯೆಂದು ಅಭಿಪ್ರಾಯಿಸಬಹುದು. ಗೌರವದ್ಯೋತಕವಾಗಿ ಇಂಥ ಅನೇಕ ಕಥೆಗಳು ಎಲ್ಲ ಪ್ರದೇಶಗಳಲ್ಲಿ ಪ್ರಚಲಿತದಲ್ಲಿವೆ. ಲಲಾಟಬಿಂದುವಿದಲ್ಲಿ ಗಜಲಕ್ಷ್ಮೀ ಉಬ್ಬುಶಿಲ್ಪವಿದೆ. ಮೇಲ್ಭಾಗದಲ್ಲಿ ಉತ್ತರ ಮಾದರಿಯ ಶಿಖರ ಪಟ್ಟಿಕೆ ಕೆತ್ತಲಾಗಿದೆ. ಉಬ್ಬುಶಿಲ್ಪವಿದೆ. ಮೇಲ್ಭಾಗದಲ್ಲಿ ಉತ್ತರ ಮಾದರಿಯ ಶಿಖರ ಪಟ್ಟಿಕೆ ಕೆತ್ತಲಾಗಿದೆ. ಗರ್ಭಗೃಹ ಬಾಗಿವಾಡದಲ್ಲಿ ಉತ್ತರ ಮಾದರಿಯ ಶಿಖರ ಪಟ್ಟಿಕೆ ಕೆತ್ತಲಾಗಿದೆ. ಗರ್ಭಗೃಹ ಬಾಗಿಲವಾಡದಲ್ಲಿ ಹೂಬಳ್ಳಿ, ಪುಷ್ಪಸಾಲು ಹಾಗೂ ಅರ್ಧಗಂಬಗಳ ಕಂಡರಣೆಯಿದ್ದು ಇಕ್ಕೆಲಗಳಲ್ಲಿ ದ್ವಾರಪಾಲಕ ಶಿಲ್ಪಗಳಿವೆ. ಅಂತರಾಳದ ಬಾಗಿಲವಾಡಿನ ಲಲಾಟದ ಮೇಲ್ಭಾಗದಲ್ಲಿ ಕೆತ್ತಲಾದ ಔತ್ತರೇಯ ಮಾದರಿಯ ಶಿಖರ ಪಟ್ಟಿಕೆಗಳ ಮಧ್ಯೆ ಸಿಂಹಗಳ ಉಬ್ಬುಶಿಲ್ಪಗಳನ್ನು ರಚಿಸಿದ್ದಾರೆ ಹಾಗೂ ಇಕ್ಕೆಲಗಳಲ್ಲಿ ಜಾಲಂಧರವನ್ನು ಅಳವಡಿಸಿದ್ದು, ದ್ವಾರಪಾಲಕ ಶಿಲ್ಪಗಳ ಬದಲಾಗಿ ಚಾಮರದಾಣೀಯರ ಶಿಲ್ಪಗಳನ್ನು ಇಡಲಾಗಿದೆ. ನವರಂಗ ಅಥವಾ ಸಭಾಮಂಟಪವು ವಿಶಾಲವಾಗಿದೆ. ಇದಕ್ಕೆ ಉತ್ತರದಲ್ಲಿ ಪ್ರವೇಶದ್ವಾರವಿದೆ. ಕಂಬಗಳು ಚೌಕಾಕಾರವಾಗಿದ್ದು ಅವುಗಳು ಫಲಕ, ಮುಚ್ಚಳಾಕೃತಿ ಹಾಗೂ ಬೋಧಿಗೆಗಳನ್ನು ಹೊಂದಿವೆ. ಈ ಸಭಾಮಂಟಪವು ಕಕ್ಷಾಸನ ವ್ಯವಸ್ಥೆ ಹೊಂದಿದೆ. ಕಕ್ಷಾಸನದಲ್ಲಿ ಕಂಬಗಳನ್ನು ಅಳವಡಿಸಲಾಗಿದೆ. ಸಭಾಮಂಟಪಕ್ಕೆ ಮಂಜೂರವಿದ್ದು, ದೇವಾಲಯದ ಹೊರಗೋಡೆಗಳು ನಿರಾಲಂಕರಣೆಯಿಂದ ಕೂಡಿವೆ. ಕದಂಬನಾಗರ ಮಾದರಿಯ ಶಿಖರವಿದೆ. ಸ್ಮಾರಕದ ಅಧಿಷ್ಠಾನ ಭಾಗವು ಮಣ್ಣಲ್ಲಿ ಹೂತುಹೋಗಿದೆ.

ರಾಚಮಲ್ಲೇಶ್ವರ ದೇವಾಲಯದ ದಕ್ಷಿಣಭಾಗದಲ್ಲಿ ಎರಡು ಗುಡಿಗಳಿವೆ. ಅವುಗಳ ಗರ್ಭಗೃಹದ ಭಾಗ ಮಾತ್ರ ಉಳಿದಿದ್ದು ಉಳಿದಂತೆ ಎಲ್ಲವೂ ನಾಶವಾಗಿದೆ. ರಾಮ ದೇವಯ್ಯಗುಡಿ ಹಾಗೂ ಆಚಾರದ ಭೀಮಯ್ಯನ ಗುಡಿಯೆಂದು ಕರೆಯಲ್ಪಡುವ ಈ ದೇವಾಲಯಗಳ ಬಗೆಗೆ ಯಾವ ಸ್ಪಷ್ಟವಾದ ಮಾಹಿತಿಗಳಿಲ್ಲ. ಕದಂಬನಗರ ಶಿಖರ ಶೈಲಿಯ ರಚನೆಯ ಗರ್ಭಗೃಹವು ಬಾಗಿಲವಾಡದಲ್ಲಿ ಹೂಬಳ್ಳಿ, ಪುಷ್ಪಸಾಲು ಹಾಗೂ ಅರ್ಧಗಂಬಗಳ ಕೆತ್ತನೆಯ ಹೊಂದಿದೆ. ಗರ್ಭಗೃಹದ ಹೊರಗೋಡೆಯು ನಿರಾಲಂಕರಣೆಯಿಂದ ಕೂಡಿದೆ. ರಾಚಮಲ್ಲೇಶ್ವರ ಗುಡಿಯ ಅಧಿಷ್ಠಾನ ಭಾಗವು ಮಣ್ಣಿನಲ್ಲಿ ಹೂತುಹೋಗಿದ್ದರೆ, ಇವುಗಳ ಅಧಿಷ್ಠಾನ ಭಾಗದಲ್ಲಿನ ಉಪಾನ, ಆಳವಾದ ಗಳ ಹಾಗೂ ಕಪೋತಭಾಗವು ಸ್ಪಷ್ಟವಾಗಿ ಕಾಣುತ್ತವೆ. ಈ ಎರಡು ಗುಡಿಗಳ ಅಧಿಷ್ಠಾನ ಭಾಗದಲ್ಲಿನ ರಚನೆಗಳೇ ಬಹುಶಃ ರಾಚಮಲ್ಲನ ದೇವಾಲಯಗಳ ನಿರ್ಮಾಣದ ಕಾಲಾವಧಿ ಒಂದೇ ಆಗಿದೆ. ಇವುಗಳ ರಚನೆಯಲ್ಲಿ ಬಳಸಿದ ವಿಧಾನಗಳು ೧೨ನೇ ಶತಮಾನಕ್ಕೆ ಸರಿಹೋಗುತ್ತವೆ.

**ಬಜಾರ ಬಸಪ್ಪನ ಗುಡಿ (ತ್ರಿಕೂಟಾಲಯ)**

ತ್ರಿಕೂಟ ದೇವಾಲಯ ರಚನೆ ಮೋಟ್ಟಮೊದಲಿಗೆ (ಜಂಭುಲಿಂಗ-ಬಾದಾಮಿ) ಬಾದಾಮಿ ಚಾಲುಕ್ಯರ ಕಾಲಾವಧಿಯಲ್ಲಿ ಪ್ರಾರಂಭವಾಯಿತು. ಕಾಲಕ್ರಮೇಣ ಇಂಥ ಮಾದರಿಯ ದೇವಾಲಯಗಳು ರಾಷ್ಟ್ರಕೂಟ ಹಾಗೂ ಕಲ್ಯಾಣದ ಚಾಲುಕ್ಯರ ಕಾಲದಲ್ಲಿಯೂ ಸಹ ರಚಿಸಲ್ಪಟ್ಟವು. ಕುರುಗೋಡು ಪಟ್ಟಣದಲ್ಲಿ ತ್ರಿಕೂಟ ದೇವಾಲಯ ರಚನೆಯಾಗಿರುವ ಉಲ್ಲೇಖವಿದೆ. ಆದರೆ ಖಚಿತವಾಗಿ ಗುರುತಿಸುವುದು ಕಷ್ಟಸಾಧ್ಯವಾಗಿದೆ. ನಾಶದ ಅಂಚಿನಲ್ಲಿರುವ ಬಜಾರ ಬಸಪ್ಪನ ದೇವಾಲಯವೇ ಶಾಸನ ಉಲ್ಲೇಖಿತ ತ್ರಿಕೂಟವಾಗಿದೆ. ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯ.[5]

ತ್ರಿಕೂಟ ದೇವಾಲಯದ ಉಲ್ಲೇಖವಿರುವ ಕ್ರಿ.ಶ. ೧೧೭೭ರ ಕಾಲಾವಧಿಯ ಶಾಸನವನ್ನು ದೊಡ್ಡ ಬಸವೇಶ್ವರ ದೇವಾಲಯದ ಆವರಣದಲ್ಲಿ ಇಟ್ಟಿದ್ದಾರೆ. ಕಲಚುರಿ ಅರಸ ಸಂಕಮದೇವ (ಸಂಖವರ್ಮ)ನ ಮಹಾಮಂಡಳೇಶ್ವರ ಸಿಂದವಂಶದ ಎರಡನೆಯ ರಾಚಮಲ್ಲನ ಕಾಲದಲ್ಲಿ ಈ ಸ್ಮಾರಕ ರಚನೆಯಾಗಿದೆ. ಕುರುಗೋಡು ಪಟ್ಟಣದ ಮುಮ್ಮರಿದಂಡುಗಳು (ವೀರಬಣಜಿಗರು) ತ್ರಿಕೂಟ ದೇವಾಲಯವನ್ನು ನಿರ್ಮಿಸಿ ಗೌರೇಶ್ವರನನ್ನು ಪ್ರತಿಷ್ಠಾಪಿಸುತ್ತಾರೆ. ಹಾಗೂ ಮುಮ್ಮರಿದಂಡಗಳಲ್ಲಿ ಇಬ್ಬರಾದ ಮಲ್ಲಿಶೆಟ್ಟಿ ಹಾಗೂ ಮುದ್ದರಸನು ಕ್ರಮವಾಗಿ ಮಲ್ಲಿಕಾರ್ಜುನ ಹಾಗೂ ಮುದ್ದೇಶ್ವರ ದೇವರನ್ನು ಇದೇ ದೇವಾಲಯದಲ್ಲಿ ಪ್ರತಿಷ್ಠಾಪಿಸುತ್ತಾರೆ. ಅಲ್ಲದೇ ತಮ್ಮ ವ್ಯಾಪಾರದಿಂದ ಬರುವ ಸುಂಕಲಾಭ ಹಾಗೂ ಭೂಮಿಯನ್ನು ದೇವಾಲಯದ ನಿರ್ವಹಣೆಗೆ ನೀಡುತ್ತಾರೆ.[6] ದಾನ ವಿವರಗಳ ಉಲ್ಲೇಖವಿರುವ ಈ ಶಾಸನವನ್ನು ಪರಿಗಣಿಸಿ ಶ್ರಿಯುತ ವೈ.ಹನುಮಂತ ರೆಡ್ಡಿಯವರು ಇಂದಿನ ಬಜಾರಬಸಪ್ಪನಗುಡಿಯು ಅಂದಿನ ತ್ರಿಕೂಟ ದೇವಾಲಯವಾಗಿತ್ತೆಂದು ಗುರುತಿಸುವ ಪ್ರಯತ್ನಮಾಡಿದ್ದರೆ. ದೇವಾಲಯದಲ್ಲಿರುವ ಪೀಠಗಳನ್ನು ಪರಿಗಣಿಸಿ ಇಲ್ಲಿ ತ್ರಿಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಹಾಗೂ ಈ ಕಾರಣಗಳಿಂದಲೇ ಇದನ್ನು ತ್ರಿಕೂಟಾಲಯವೆಂದು ಕರೆಯಲಾಗಿದೆ ಎಂದು ಹೇಳುತ್ತಾರೆ. ಅವರು ನೀಡುವ ಸಮರ್ಥನೆಗಳೆಂದರೆ, ನವರಂಗಕ್ಕೆ ಹೊಂದಿಕೊಂಡು ಮೂರು ಗರ್ಭಗೃಹಗಳಿದ್ದು, ಅವುಗಳಲ್ಲಿ ಮೂರು ದೇವರು (ತ್ರಿಮೂರ್ತಿಗಳು) ಇರುವುದಕ್ಕೆ ತ್ರಿಕೂಟವೆಂದು ಕರೆಯುವರು. ಆದರೆ ಇಲ್ಲಿ ನವರಂಗಕ್ಕೆ ಹೊಂದಿಕೊಂಡು ಕೇವಲ ಎರಡು ಗರ್ಭಗೃಹಗಳು ಮಾತ್ರ ಉಳಿದಿದ್ದು, ಮೂರನೇಯದು ಸಂಪೂರ್ಣ ಹಾಳಾಗಿದೆ. ನವರಂಗಕ್ಕೆ ಹೊಂದಿಕೊಂಡು ಪೂರ್ವಾಭಿ ಮುಖವಾಗಿ ಸುಕನಾಸಿ ಮತ್ತು ಗರ್ಭಗೃಹವಿದ್ದು, ಅದರಲ್ಲಿ ಪಾಣಿಪೀಠದ ಮೇಲೆ ಶಿವಲಿಂಗವಿದ್ದು, ಅದರ ಜಲಧಾರೆ ಮಾಮೂಲಿನಂತೆ ಅದರ ಎಡಭಾಗದಲ್ಲಿದೆ. ಆದರೆ ಅದರ ಪಕ್ಕದಲ್ಲಿ ಉತ್ತರಕ್ಕೆ ಮುಖಮಾಡಿ ಇರುವ ಸುಕನಾಸಿ ಮತ್ತು ಗರ್ಭಗೃಹದಲ್ಲಿರುವ ಲಿಂಗದ ಜಲಧಾರೆ ಅದರ ಬಲಭಾಗಕ್ಕಿದೆ. ಪೂರ್ವಾಭಿಮುಖವಾಗಿರುವ ಲಿಂಗವು ಶಿವನ ಪ್ರಾತಿನಿಧಿಕವಾಗಿಯೂ, ಉತ್ತರಾಭಿಮುಖವಾಗಿರುವ ಲಿಂಗವು ಬ್ರಹ್ಮನ ಪ್ರಾತಿನಿಧಿಕವಾಗಿರುವುದರಿಂದ, ಇವುಗಳ ಜಲಧಾರೆಯ ದಿಕ್ಕಿನಲ್ಲಿ ವ್ಯತ್ಯಾಸವಿದೆ. ಇದೇ ತರಹ ಇದರ ಎಡಭಾಗದಲ್ಲಿದ್ದ ಸುಕನಾಸಿ ಮತ್ತು ಗರ್ಭಗೃಹ ಹಾಳಾಗಿದ್ದು, ಅದು ವಿಷ್ಣುವಿನ ಪ್ರಾತಿನಿಧಿಕವಾಗಿರಬೇಕು. ಆದ್ದರಿಂದ ಮೇಲಿನ ಶಾಸನದಲ್ಲಿ ತಿಳಿಸಿರುವ ತ್ರಿಕೂಟ ದೇವಸ್ಥಾನ ಇದೇ ಆಗಿರಬೇಕು.[7] ಆದರೆ ಸದ್ಯದ ಮಟ್ಟಿಗೆ ಇದೊಂದು ತ್ರಿಕೂಟಾಲಯವೆಂದು ಪರಿಗಣಿಸಿದರೂ ಇದನ್ನು ತ್ರಿಮೂರ್ತಿಗಳಿಂದಾಗಿಯೇ ತ್ರಿಕೂಟಾಲಯವೆಂದು ಕರೆಯಲಾಗುತ್ತದೆ ಎಂಬ ಅವರ ಅಭಿಪ್ರಾಯ ಸರಿಯಾದುದಲ್ಲ. ಕಾರಣ ಶಾಸನದಲ್ಲಿ ಗೌರೇಶ್ವರ, ಮಲ್ಲಿಕಾರ್ಜುನ ಹಾಗೂ ಮುದ್ದೇಶ್ವರ ಎಂಬ ಸ್ಪಷ್ಟ ಉಲ್ಲೇಖಗಳಿವೆ. ಈ ಹೆಸರುಗಳು ಶಿವನಿಗೆ ಸಂಬಂಧಪಟ್ಟ ನಾನಾ ಹೆಸರುಗಳು ಹೊರತು ತ್ರಿಮೂರ್ತಿ ದೇವತೆಗಳಿಲ್ಲ. ಇದೇ ದೇವಾಲಯಗಳನ್ನು ತ್ರೈಪುರುಷ ದೇವಾಲಯಕ್ಕೂ ಹೋಲಿಸಿರುವುದರಿಂದ ಸಹ ಸೂಕ್ತವಾದುದಲ್ಲ.[8] ಸಾಮಾನ್ಯವಾಗಿ ತ್ರೈಪುರುಷ ರಚನೆಯಲ್ಲಿ ಆದಿತ್ಯ ಅಥವಾ ಸೂರ್ಯನನ್ನು ಪ್ರತಿಷ್ಠಾಪಿಸಿರುತ್ತಾರೆ. ಅಥವಾ ಬೇರೆ ಬೇರೆ ಹೆಸರಿನ ಮೂರು ದೇವತೆಗಳನ್ನು ಮೂರ ಗರ್ಭಗೃಹದಲ್ಲಿ ಸ್ಥಾಪಿಸಿರುತ್ತಾರೆ. ಅದಕ್ಕೆ ಪುಷ್ಠಿಕೊಡುವ ಯಾವ ಅವಶೇಷಗಳು ಸಿಕ್ಕಿಲ್ಲ. ಹಾಗೂ ಶಾಸನದಲ್ಲಿಯೂ ಶಿವನಿಗೆ ಸಂಬಂಧಪಟ್ಟ ಬೇರೆ ಬೇರೆ ಹೆಸರುಗಳನ್ನು ಮಾತ್ರ ಉಲ್ಲೇಖಿಸಲಾಗಿದೆ. ಆದ್ದರಿಂದ ಈ ದೇವಾಲಯವನ್ನು ತ್ರಿಕೂಟಾಲಯ ಮಾತ್ರವೆಂದು ಪರಿಗಣಿಸಿ ಉಳಿದ ಅಭಿಪ್ರಾಯಗಳನ್ನು ಬಿಡುವುದು ಸೂಕ್ತ.



ಬಜಾರ ಬಸಪ್ಪ (ತ್ರಿಕೂಟಾಲಯ)ದೇವಾಲಯದ ತಲವಿನ್ಯಾಸ


ಗುರುತಿಸಲಾದ ತ್ರಿಕೂಟ ದೇವಾಲಯದ ಎರಡು ಗರ್ಭಗೃಹಗಳು ಮಾತ್ರವಿದ್ದು ಉಳಿದಂತೆ ದೇವಾಲಯದ ಸಭಾಮಂಟಪ ಸಂಪೂರ್ಣವಾಗಿ ಹಾಳಾಗಿದೆ. ಗರ್ಭಗೃಹದ ಬಾಗಿಲವಾಡದಲ್ಲಿ ಹೂಬಳ್ಳಿ, ಪುಷ್ಪಸಾಲು ಹಾಗೂ ಪಟ್ಟಿಕೆಗಳನ್ನು ರಚಿಸಲಾಗಿದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮೀ ಉಬ್ಬು ಶಿಲ್ಪವಿದೆ. ಮೇಲ್ಭಾಗದಲ್ಲಿ ಔತ್ತರೇಯ ಮಾದರಿಯ ಶಿಖರಗಳನ್ನು ರಚಿಸಿದ್ದಾರೆ. ತ್ರಿಶೂಲ, ಡಮರು ಹಾಗೂ ಗದೆ ಹಿಡಿದು ನಿಂತಿರುವ ದ್ವಾರಪಾಲಕರ ವಿಗ್ರಹಗಳಿವೆ. ಒಂದು ಗರ್ಭಗೃಹವು ಶಿಖರವನ್ನು (ಕದಂಬ-ನಾಗರ) ಹೊಂದಿದೆ. ಹೊರಗೋಡೆಯಲ್ಲಿ ಅರ್ಧಕಂಬ, ಅರ್ಧ ಕೋಷ್ಠಕಗಳನ್ನು ಕೆತ್ತಲಾಗಿದೆ. ಶಿಖರಕ್ಕೆ ಸ್ಥೂಪಿ ಭಾಗವಿಲ್ಲ. ಬಿದ್ದಿರುವ ದೇವಾಲಯಗಳ ಅವಶೇಷಗಳು ಮಣ್ಣಿನಲ್ಲಿ ಹೊತುಹೋಗಿವೆ. ಉತ್ಖನನ ಮಾಡಿದರೆ ಹೊಸ ಮಾಹಿತಿಗಳು ಸಿಗುವ ಸಂಭವವಿದೆ.

**ಉಜಾಳೇಶ್ವರ ದೇವಾಲಯ**

ಕುರುಗೋಡು ಪಟ್ಟಣದ ಈಗೀನ ಉಜಾಳಪೇಟೆಯ ಸರಹದ್ದಿನಲ್ಲಿರುವ ಈ ಸ್ಮಾರಕ ಉಜಾಳೇಶ್ವರ ದೇವಾಲಯವೆಂದೇ ಪ್ರಸಿದ್ಧವಾಗಿದೆ. ದೇವಾಲಯದ ಬಗೆಗೆ ಮಾಹಿತಿ ನೀಡುವ ಸ್ಪಷ್ಟವಾದ ಯಾವ ಕುರುಹುಗಳು ಇರಲಿಲ್ಲ. ಆದರೆ ಒಂದು ದಶಕದ ಹಿಂದೆ ಗ್ರಾಮದ ಅಗಸೆಯ ಪಕ್ಕದ ಗುಂಡಿಯಲ್ಲಿ ಸಿಕ್ಕಿರುವ ಶಾಸನವೊಂದು ಉಜಾಳೇಶ್ವರ ದೇವಾಲಯದ ಬಗೆಗಿರುವ ಹಿಂದಿನ ವಿವರಗಳನ್ನು ಪುನರ್ ಅವಲೋಕಿಸುವಂತೆ ಮಾಡಿದೆ. ಕ್ರಿ.ಶ. ೧೫೧೨ರ ತೇದಿಯ ಈ ಶಾಸನವನ್ನು ಸದ್ಯ ಕುರುಗೋಡು ಪಟ್ಟಣದ ದೊಡ್ಡ ಬಸವೇಶ್ವರ ದೇವಾಲಯದ ಮುಂಭಾಗದಲ್ಲಿ (ಸೋಮವಾರದ ಬಾಗಿಲು) ನಿಲ್ಲಿಸಲಾಗಿದೆ.[9] ಈ ಶಾಸನ ವಿವರವನ್ನು ಚರ್ಚಿಸುವುದಕ್ಕಿಂದ ಮುಂಚೆ ಈ ದೇವಾಲಯದ ಬಗೆಗಿರುವ ಹಲವು ಮಾಹಿತಿಗಳನ್ನು ಗಮನಿಸುವುದು ಸೂಕ್ತವಾಗಿದೆ.

ಸಿಂದ ಅರಸ ಇರುಂಗೋಳ (ಒಂದನೆಯ ರಾಚಮಲ್ಲನ ಮಗ - ಕ್ರಿ.ಶ. ೧೧೭೩-೯೫)ನ ಕಾಲಾವಾಧಿಯಲ್ಲಿ ಈ ಉಜಾಳೇಶ್ವರ ದೇವಾಲಯ ನಿರ್ಮಾಣವಾಗಿದೆ ಎಂದು ಕೆಲವರು ಅಭಿಪ್ರಾಯಿಸಿದ್ದಾರೆ.[10] ಅವರು ಕೊಡುವ ಸಮರ್ಥನೆಗಳಿಗೆ ಆಧಾರಗಳೆಂದರೆ, ಇದೇ ದೇವಾಲಯದ ಅಂತರಾಳದ (ಸುಖನಾಸಿ) ಬಾಗಿಲವಾಡದ ಇಕ್ಕೆಲಗಳಲ್ಲಿರುವ ಸ್ತ್ರೀ ಶಿಲ್ಪಗಳ ಪ್ರತಿಮಾ ಲಕ್ಷಣ ಗಮನಿಸಿದಾಗ ಇವು ಸಾಮಾನ್ಯ ಸ್ತ್ರೀಯರನ್ನು ಅಂದರೆ ಚಾಮರ ಧಾರಣಿಯರನ್ನು ಪ್ರತಿನಿಧಿಸುವಂಥ ಲಕ್ಷಣವುಳ್ಳ ಶಿಲ್ಪಗಳಲ್ಲ. ಇವು ಅಧಿಕಾರಸ್ಥ ಕುಟುಂಬವರ್ಗಕ್ಕೆ ಸೇರಿದ ಪೋಷಾಕುಗಳಿಂದ ಅಲಂಕೃತವಾದ ಶಿಲ್ಪಗಳಾಗಿವೆ. ಬಲಭಾಗದ ಶಿಲ್ಪದ ಕೆಳಭಾಗದಲ್ಲಿ ಲೋಕಾಹುರ 'ಜೊಲದೇವಿ' ಎಂದು, ಎಡಭಾಗದಲ್ಲಿರುವ ಶಿಲ್ಪದ ಕೆಳಭಾಗದಲ್ಲಿ ಲೋಕಾಹುರದ 'ದೇಚಲದೇವಿ' ಎಂದು ಕೆತ್ತಲಾಗಿದೆ.[11] ಇವರನ್ನು ಸಿಂದವಂಶದ ದೊರೆಗಳಾದ ಒಂದನೆಯ ರಾಚಮಲ್ಲನ ಪತ್ನಿ ಸೋಮಲದೇವಿ ಹಾಗೂ ಆತನ ಸೊಸೆ ಏಚಲದೇವಿ (ಇರುಂಗೋಳನ ಹೆಂಡತಿ) ಎಂದು ಪರಿಭಾವಿಸಿಕೊಂಡು, ಇವರೇ ಉಜಾಳೇಶ್ವರ ದೇವಾಲಯದ ನಿರ್ಮಾಣಕ್ಕೆ ಕಾರಣಕರ್ತ ವ್ಯಕ್ತಿಗಳಾಗಿದ್ದಾರೆಂದು ಅಭಿಪ್ರಾಯ ಪಡುತ್ತಾರೆ. ಸಿಂದರ ರಾಣಿಯರಾದ ಇವರುಗಳು ಮಹಾಸಾಮ್ರಾಟನಾದ ಕಲಚುರಿ ಬಿಜ್ಜಳನ ಹೆಸರಿನಲ್ಲಿ ಈ

ದೇವಾಲಯ ಕಟ್ಟಿಸಿದರು. ಬಿಜ್ಜಳನ ಹೆಸರಿನಲ್ಲಿ ನಿರ್ಮಾಣವಾದ ಈ ದೇವಾಲಯ ಹಾಗೂ ದೇವಾಲಯ ಪರಿಸರದ ವಸತಿ ಪ್ರದೇಶ ಕಾಲಾನಂತರ 'ಬಿಜ್ಜಳ' ಬದಲಾಗಿ ಉಜ್ಜಳ, ಉಜಾಳ ಎಂಬ ಪದ ರೂಪಾಂತರವು ದೇವಾಲಯ ಹಾಗೂ ವಸತಿ ಪ್ರದೇಶ (ಪೇಟೆ)ಎರಡಕ್ಕೂ ಸೇರಿಕೊಂಡವು ಎಂದು ವಿವರಿಸುತ್ತಾರೆ. ಹೀಗಾಗಿ ಪ್ರಾಚೀನ ಬಿಜ್ಜಳೇಶ್ವರ ದೇವಾಲಯ ಉಜಾಳೇಶ್ವರನಾಗಿಯೂ 'ಬಿಜ್ಜಳಪೇಟೆ' ಉಜಾಳಪೇಟೆಯಾಗಿ ಬದಲಾವಣೆ ಹೊಂದಿದವು.[12] ಆದರೆ ಇದೇ ದೇವಾಲಯದ ಸಂಬಂಧವಾಗಿ ರಚನೆಯಾದ ಕ್ರಿ.ಶ. ೧೫೧೭ರ ಶಾಸನವನ್ನು ಗಮನಿಸಿದಾಗ ಭಿನ್ನವಾದ ಮಾಹಿತಿಗಳು ದೊರಕುತ್ತವೆ. "ಕುರುಗೋಡು ಬಸವಣ್ಣ ನಾಯಕನ ಮಕ್ಕಳು ಹಾಗೂ ಮಲ್ಲಪ್ಪನಾಯಕರ ಧರ್ಮ ಪತ್ನಿಯಾದ ಮಲ್ಲಮ್ಮಳೂ ಕುರುಗೋಡು ಸೀಮಕ್ಕೆ ಈಶಾನ್ಯ ದಿಕ್ಕಿನ ಹೂಜೆಹಾಳ ಶಾಂತಮಲ್ಲಿಕಾರ್ಜುನ ದೇವರ ದೇವಾಲಯ ಬಾವಿನು ಜೀರ್ಣೋದ್ಧಾರ ಮಾಡಿದರು" ಎಂಬ ಸಂಗತಿ ತಿಳಿದುಬರುತ್ತದೆ.[13] ಈ ಶಾಸನದಲ್ಲಿಯೂ ಉಲ್ಲೇಖಿತ ಮಾಹಿತಿಯನ್ನು ಪರಿಗಣಿಸಿ ಇಂದಿನ ಉಜಾಳೇಶ್ವರ ದೇವಾಲಯವೇ ಪ್ರಾಚೀನ 'ಹೂಜಿಹಾಳ' ಗ್ರಾಮದಲ್ಲಿನ ಶಾಂತಮಲ್ಲಿಕಾರ್ಜುನ ದೇವಾಲಯವಾಗಿರುವುದು ಸ್ಪಷ್ಟವೆಂದು ಕೆಲವರು ಅಭಿಪ್ರಾಯಿಸಿದ್ದಾರೆ.[14] ಹಾಗಾದರೆ ಹಿಂದಿನ 'ಹೂಜಿನಾಳ' ಗ್ರಾಮ ಉಜಾಳಪೇಟೆಯಾಗಿ ಹಾಗೂ ಅಂದಿನ ಶಾಂತಮಲ್ಲಿಕಾರ್ಜುನ ಇಂದಿನ ಉಜಾಳೇಶ್ವರನಾಗಿ ರೂಪಾಂತರಗೊಂಡಿದೆಯೆಂದು ನಿರ್ಧರಿಸಬಹುದು. ಪ್ರಾಚೀನ 'ಹೂಜಿಹಾಳ' ಗ್ರಾಮ ಅನೇಕ ಕಾರಣಗಳಿಂದ ನಾಶವಾಗಿರಬಹುದು ಅಥವಾ ಸ್ಥಳಾಂತರಗೊಂಡಿರಬಹುದು. ಆದರೆ ಅಲ್ಲಿನ ದೇವಾಲಯ ಪ್ರಾಚೀನ 'ಹೂಜಿಹಾಳ'ದ ನೆನಪಿಗಾಗಿ 'ಉಜಾಳೇಶ್ವರ' ಹೆಸರನ್ನು ಪಡೆದು ಹಾಗೆ ಉಳಿದುಕೊಂಡಿರಬಹುದು. (ಗ್ರಾಮೀಣರ ಬಾಯಲ್ಲಿ 'ಹು'ಗಿಂತಲೂ 'ಉ'ಹೆಚ್ಚು ಪ್ರಚಲಿತ.)ಅಥವಾ ಶಾಸನದಲ್ಲಿನ ಹೂಜಿಹಾಳ ಗ್ರಾಮ ಶಾಂತಮಲ್ಲಿಕಾರ್ಜುನ ದೇವಾಲಯ ಸಂಪೂರ್ಣ ನಾಶವಾಗಿರುವ ಸಾಧ್ಯತೆಗಳು ಇವೆ. ದೇವಾಲಯದ ಅಂತರಾಳದ ಬಾಗಿಲವಾಡದ ಇಕ್ಕೆಲಗಳಲ್ಲಿರುವ ಮೂರ್ತಿಶಿಲ್ಪಗಳನ್ನು ಸಿಂದವಂಶದ ರಾಣಿಯರಿಗೆ ಸಂಬಂಧಕಲ್ಪಿಸುವುದರ ಮೂಲಕ ಇಡೀ ದೇವಾಲಯದ ನಿರ್ಮಾಣ ಚರಿತ್ರೆಯನ್ನು ಕಟ್ಟುವುದು ಅಷ್ಟು ಸಮಂಜಸ ವಿಷಯವಾಗಲಾರದು. ಹಾಗೂ ದೇವಾಲಯಕ್ಕೆ ಸಂಬಂಧಿಸಿದ ಶಾಸನವು ಬೇರೆಯಾದ ಮಾಹಿತಿಗಳನ್ನೇ ನೀಡುತ್ತದೆ. ಅಂತರಾಳದ ಬಾಗಿಲವಾಡಿನ ಇಕ್ಕೆಲಗಳಲ್ಲಿರುವ ದ್ವಾರಶಿಲ್ಪಗಳ ಕೆಳಭಾಗದಲ್ಲಿ ಬರೆದಿರುವ ಲಿಪಿಯು ಹನ್ನೆರಡನೆಯ ಶತಮಾನದ್ದೆಂದು ಗುರುತಿಸಿದ್ದರೂ, ಲಿಪಿಯು ರಾಣಿಯರ ಹೆಸರಿನ ಸ್ಪಷ್ಟ ಉಲ್ಲೇಖವುಳ್ಳದ್ದೇ ಎಂದು ಹೇಳುವುದು ಕಷ್ಟಕರವಾದುದು. ಹೀಗಾಗಿ ಇಲ್ಲಿರುವ ದ್ವಾರಶಿಲ್ಪಗಳು ಚಾಮರಧಾರಣಿಯರ ಶಿಲ್ಪಗಳೆಂದು ಪರಿಗಣಿಸುವುದು ಸೂಕ್ತ.



ಉಜಾಳೇಶ್ವರ ದೇವಾಲಯದ ತಲವಿನ್ಯಾಸ

ಈ ದೇವಾಲಯವು ಕ್ರಿ.ಶ. ೧೨ನೇ ಶತಮಾನದ ಕಾಲಾವಧಿಯಲ್ಲಿ ರಚನೆಯಾಗಿರುವ ಸಾಧ್ಯತೆಗಳಿವೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿರುವ ಉಜಾಳೇಶ್ವರ ದೇವಾಲಯ ಕದಂಬನಾಗರ ಅಥವಾ ಫಂಸಾನ ಮಾದರಿಯ ಶಿಖರವನ್ನು ಹೊಂದಿವೆ. ಸ್ಥಿತಿಯಲ್ಲಿರುವ ಈ ಸ್ಮಾರಕ ಕಲಾವೈಭವದ ದೃಷ್ಟಿಯಿಂದ ಹಿಂಡುಲಿ ಸಂಗಮೇಶ್ವರ ದೇವಾಲಯಕ್ಕೆ


ಸರಿಸಮಾನವಾದುದು. ಗರ್ಭಗೃಹದ ಬಾಗಿಲವಾಡವು ಪುಷ್ಪ, ಹೂವಿನ ಎಸಳು ಹಾಗೂ ಅರ್ಧಕಂಬಗಳ ಕೆತ್ತನೆಯಿಂದ ಕೂಡಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಶಿಲ್ಪವಿದೆ. ಮೇಲ್ಭಾಗದಲ್ಲಿ ಉತ್ತರ ಮಾದರಿಯ ಶಿಖರ ಪಟ್ಟಿಕೆಗಳನ್ನು ಕೆತ್ತಲಾಗಿದೆ. ಬಾಗಿಲದ ಇಕ್ಕೆಲಗಳಲ್ಲಿ ಆಯುಧ ಸಮೇತರಿರುವ ದ್ವಾರಪಾಲಕ ವಿಗ್ರಹಗಳಿವೆ. ಗರ್ಭಗೃಹದಲ್ಲಿನ ಲಿಂಗವು ಕಲ್ಯಾಣ ಚಾಲುಕ್ಯ ಮಾದರಿಯದ್ದು. ಅಂತರಾಳ ಅಥವಾ ಸುಖನಾಸಿಯ ಬಾಗಿಲದ ಇಕ್ಕೆಲಗಳಲ್ಲಿ ಈ ಹಿಂದೆ ವಿವರಿಸಿದ ಸ್ತ್ರೀ ಶಿಲ್ಪಗಳಿವೆ. ವಿಶಾಲವಾದ ನವರಂಗದಲ್ಲಿ ಕೆತ್ತನೆಯಿಂದ ಕೂಡಿದ ತಿರುಗಣಿಯ ಕಂಬಗಳಿವೆ. ಇವು ಫಲಕ ಬೋಧಿಗೆಗಳಿಂದ ಅಲಂಕೃತವಾಗಿವೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಕಗಳಿವೆ. ಈ ಗೂಡುಗಳನ್ನು ಪುಷ್ಪಕೆತ್ತನೆ ಹಾಗೂ ಮೇಲ್ಭಾಗದಲ್ಲಿ ಔತ್ತರೇಯ ಶಿಖರ ಪಟ್ಟಿಕೆಗಳಿಂದ ಅಲಂಕರಣಗೊಳಿಸಿದ್ದಾರೆ. ನವರಂಗವು ಕಕ್ಷಾಸನ ವ್ಯವಸ್ಥೆಯನ್ನು ಹೊಂದಿದೆ. ನವರಂಗದಲ್ಲಿ ನಂದಿಶಿಲ್ಪವಿದೆ. ದೇವಾಲಯಕ್ಕೆ ಮುಖಮಂಟಪವಿದ್ದು, ಈ ಮುಖಮಂಟಪ ಹಾಗೂ ನವರಂಗಕ್ಕೆ ಮಂಜೂರಿನ ರಚನೆಯಿದೆ. ಹೊರಗೋಡೆಗಳು ಅಲಂಕರಣೆಯಿಂದ ಕೂಡಿದೆ. ದೇವಾಲಯದ ಅಧಿಷ್ಠಾನಭಾಗ ಎತ್ತರವಾಗಿದ್ದು, ಇದು ಉಪಾನ, ಜಗತಿ, ಕಂಠ, ಗಳ, ತ್ರಿಪಟ್ಟಕುಮುದದಂತಹ ರಚನೆಗಳನ್ನು ಹೊಂದಿದೆ. ಉಜಾಳೇಶ್ವರ ದೇವಾಲಯದ ಮುಂಭಾಗದ ಸ್ವಲ್ಪ ದೂರದಲ್ಲಿ ಇತಿಹಾಸ ಪ್ರಸಿದ್ಧ “ಕತ್ತೆ ಬಂಡೆಯ” ಶಾಸನ ಇರುವುದನ್ನು ಕಾಣತ್ತೇವೆ. ೯ನೇ ಶತಮಾನಕ್ಕೆ ಸೇರಿದ ಈ ಶಾಸನವು ಪ್ರಾಚೀನ ಕಾಲದ ಅಳತೆ (ಮಾಪನ)ಯ ಬಗೆಗೆ ಮಾಹಿತಿ ನೀಡುತ್ತದೆ.

**ಹಿಂಡುಲಿ ಸಂಗಮೇಶ್ವರ ದೇವಾಲಯ**

ಕುರುಗೋಡು ಪಟ್ಟಣದ ಉತ್ತರ ಭಾಗದಲ್ಲಿರುವ ಸಂಗಮೇಶ್ವರ ದೇವಾಲಯ ಕುರುಗೋಡು ಮುಷ್ಟಗಟ್ಟೆ ರಸ್ತೆಯಲ್ಲಿದೆ. ಈ ದೇವಾಲಯವನ್ನು ಎಲ್ಲರು ಹಿಂಡುಲಿ ಸಂಗಮೇಶ್ವರನೆಂದು ಕರೆಯುತ್ತಾರೆ. ಸಂಗಮೇಶ್ವರ ದೇವಾಲಯಕ್ಕೆ ಯಾವ ಕಾರಣಕ್ಕಾಗಿ ಹಿಂಡುಲಿ ಎಂಬ ಹೆಸರು ಅಂಟಿಕೊಂಡಿತು ಎಂಬ ಸ್ವಲ್ಪ ಮಾಹಿತಿಗಳಿಲ್ಲ. ಆದರೆ ಹಿಂಡುಲಿ ಹೆಸರಿಗೆ ಸಂಬಂಧಿಸಿದ ಮೌಖಿಕ ಮಾಹಿತಿಗಳು ಹಲವಾರಿದೆ. ದೇವಾಲಯದ ಮುಂಭಾಗದಲ್ಲಿರುವ ಕಡಿದಾದ ಬೆಟ್ಟಗಳಲ್ಲಿ ಹುಲಿಗಳ ಹಿಂಡು ವಾಸಿಸುತ್ತಿದ್ದವು. ಅವುಗಳು ಕೆಲವೊಮ್ಮೆ ಹಿಂಡು (ಗುಂಪು)ಗಳಾಗಿ ದೇವಾಲಯದ ಅತ್ಯಂತ ಸಮೀಪಕ್ಕೆ ಬಂದು ಕೂರುತ್ತಿದ್ದವು. ಈ ಕಾರಣಕ್ಕಾಗಿ ಸಂಗಮೇಶ್ವರ ದೇವಾಲಯಕ್ಕೆ ಹಿಂಡುಲಿ ಸೇರಿಕೊಂಡಿತು ಎಂಬ ಪ್ರತೀತಿ ಇದೆ. ಸುಮಾರು ೬೦-೭೦ ವರ್ಷಗಳ ಹಿಂದೆಯೇ ಈ ಪಟ್ಟಣದ ಸುತ್ತಲಿರುವ ಬೆಟ್ಟಗಳಲ್ಲಿ ಹುಲಿಗಳ ವಾಸವಿತ್ತೆಂಬ ಮಾಹಿತಿಯನ್ನು ಸ್ಥಳೀಯರಾದ ಶ್ರೀಯುತ ರುದ್ರಗೌಡ ನಾಗನಗೌಡರು ಒದಗಿಸಿದ್ದಾರೆ. ಇಲ್ಲಿರುವ ಬೆಟ್ಟಗಳಲ್ಲಿ ನೈಸರ್ಗಿಕವಾಗಿ ನಿರ್ಮಿತವಾದ ಅನೇಕ ಗುಹೆಗಳು ಇರುವುದರಿಂದ ಹುಲಿ ಹಾಗೂ ಮತ್ತಿತರ ಕ್ರೂರ ಪ್ರಾಣಿಗಳ ವಾಸಕ್ಕೆ ಹೆಚ್ಚಿನ ಪ್ರಾಶಸ್ತ ಒದಗಿಸಿದಂತಿವೆ. ಆದರೆ ಇದನ್ನು ಶಾಸ್ತ್ರೀಯವಾಗಿ ವಿವೇಚಿಸಿರುವ ಪ್ರೊ.ಲಕ್ಷ್ಮಣ್ ತೆಲಗಾವಿ ಅವರು ಅಭಿಪ್ರಾಯಪಡುವಂತೆ ಕಡಿದಾದ ಎರಡು ಬೆಟ್ಟಗಳ ಮಧ್ಯಭಾಗದಲ್ಲಿರುವ ಪ್ರದೇಶವನ್ನುಯ ‘ಹೂಲಿ’ ಎಂದು ಸಂಭೋಧಿಸಲಾಗುತ್ತದೆ. ಇಂಥ ಪ್ರದೇಶದಲ್ಲಿ ನಿರ್ಮಾಣದ ಸಂಗಮೇಶ್ವರ ದೇವಾಲಯ ‘ಹೂಲಿಸಂಗಮೇಶ್ವರ’ನಾಗಿದ್ದು, ಕ್ರಮೇಣ ಹೂಲಿಯ ಜೊತೆಗೆ ಹಿಂಡು (ಗುಂಪು) ಬೆಟ್ಟಗಳನ್ನು ಮೇಳೈಸಿ ‘ಹಿಂಡುಲಿ’ ಆಗಿರುವ ಸಾಧ್ಯತೆ ಇದೆ. ಇಲ್ಲಿ ನಿರ್ಮಿತ ಸಂಗಮೇಶ್ವರ ದೇವಾಲಯದ ಜೊತೆಗೆ ಸಹಜವಾಗಿ ‘ಹಿಂಡುಲಿ’ ಎಂಬ ಈ ಪದವು ಸೇರಿಕೊಂಡಿದೆ ಎಂದು ಅಭಿಪ್ರಾಯಪಡುತ್ತಾರೆ.[15] ಆದರೂ ದೇವಾಲಯದ ಬಗೆಗೆ ಇದುವರೆಗೂ ಯಾವ ಖಚಿತ ಮಾಹಿತಿ ದೊರೆಯದೇ ಇರುವುದರಿಂದ ಊಹೆಗಳನ್ನೇ ಆಧಾರವಾಗಿ ಪರಿಗಣಿಸಬೇಕಾಗುತ್ತದೆ.

ಕ್ರಿ.ಶ. ೧೫೪೩ರ ತೇದಿ ಹೊಂದಿರುವ ಶಾಸನ ಈ ದೇವಾಲಯಲ್ಲಿದೆ.[16] ವಿಜಯನಗರದ ಅರಸ ಶ್ರೀಕೃಷ್ಣದೇವರಾಯನು ಸಂಗಮೇಶ್ವರ ದೇವಾಲಯದ ನಿರ್ವಹಣೆಗಾಗಿ ಜಾನಕುಂಟೆ (ಚಿನಕುಂಟೆ) ಗ್ರಾಮವನ್ನು ದಾನವಾಗಿ ನೀಡಿರುತ್ತಾನೆ. ಆದರೆ ಯಾವುದೋ ಕಾರಣಕ್ಕಾಗಿ ಈ ದತ್ತಿ ನಿಂತುಹೋಗಿರುತ್ತದೆ. ನಿಂತುಹೋದ ಈ ದತ್ತಿಯನ್ನು ಗುಂಡರಾಯನ ಅಳಿಯ ನಿಂಗರಾಜನು ತನ್ನ ಒಡೆಯ ಸದಾಶಿವಮಹಾರಾಯನಿಗೆ ಪುಣ್ಯ ಲಭಿಸಲೆಂದು ದತ್ತಿಯನ್ನು ಪುನಃ ಬಿಟ್ಟಿರುವ ಉಲ್ಲೇಖವಿದೆ. ವಿಜಯನಗರದ ಅರಸರ ಆಳ್ವಿಕೆಯಲ್ಲಿ ಕುರುಗೋಡು ಪರಿಸರದಲ್ಲಿ ಈ ದೇವಾಲಯ ಪ್ರಾಮುಖ್ಯತೆ ಹೊಂದಿತ್ತು ಎಂಬುದನ್ನು ಇಂಥ ದಾನ-ದತ್ತಿಗಳಿಂದ ಊಹಿಸಬಹುದು. ಇದೇ ದೇವಾಲಯದ ಇನ್ನೊಂದು ಶಾಸನದಲ್ಲಿ ಜೂಜಾಡುವವರು ಸಂಗಮೇಶ್ವರ ದೇವರಿಗೆ ಹಣ ಬಿಟ್ಟ

ಉಲ್ಲೇಖವಿದೆ.[17]ಈ ಶಾಸನದಲ್ಲಿ ಕಾಲವನ್ನು ನಮೂದಿಸಿಲ್ಲ. ಒಟ್ಟಾರೆ ದೊರೆತ ಈ ಎರಡು ಶಾಸನಗಳಿಂದ ಸಂಗಮೇಶ್ವರ ದೇವಾಲಯದ ಕಾಲ ಮತ್ತು ಕರ್ತೃವಿನ ಬಗೆಗೆ ಯಾವ ಖಚಿತ ಮಾಹಿತಿ ದೊರೆಯುವುದಿಲ್ಲ. ಆದರೆ ಶ್ರೀಯುತ ಹನುಮಂತರೆಡ್ಡಿಯವರು ಕುರುಗೋಡು ಸಂಗಮೇಶ್ವರ ದೇವಾಲಯದ ನಿರ್ಮಾಣವನ್ನು ಕುರುಗೋಡು ಸಿಂದರ ಆಳ್ವಿಕೆಯಲ್ಲಿ ಆದ ರಚನೆಯೆಂದು ಅಭಿಪ್ರಾಯಿಸುತ್ತಾರೆ. ಈ ಅಭಿಪ್ರಾಯವು ಸಹ ಮರುಪರಿಶೀಲನೆಗೆ ಒಳಪಡಬೇಕಾಗಿರುವುದು ಅವಶ್ಯವಾಗಿದೆ.



ಹಿಂಡುಲಿ ಸಂಗಮೇಶ್ವರ ದೇವಾಲಯದ ತಲವಿನ್ಯಾಸ

ಪೂರ್ವಾಭಿಮುಖವಾದ ಸಂಗಮೇಶ್ವರನ ದೇವಾಲಯ ವಿಶಾಲವಾಗಿದೆ. ಇದು ಗರ್ಭಗೃಹ, ಅಂತರಾಳ, ನವರಂಗ ಅಥವಾ ಸಭಾಮಂಟಪ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹ ಹಾಗೂ ಅಂತರಾಳ, ಸುತ್ತಲೂ ಪ್ರದಕ್ಷಿಣಾಪಥವನ್ನು ಹೊಂದಿವೆ. ವಿಸ್ತಾರವಾದ ಈ ಪ್ರದಕ್ಷಿಣಾಪಥಕ್ಕೆ ಕಕ್ಷಾಸನದ ವ್ಯವಸ್ಥೆಯನ್ನು ಸಹ ಮಾಡಲಾಗಿದೆ. ಈ ಕಕ್ಷಾಸನವು ನವರಂಗ ಹಾಗೂ ಮುಖಮಂಪಟಗಳಿಗೂ ವಿಸ್ತರಿಸಿದೆ. ಸುತ್ತಲೂ ರಚನೆಯಾಗಿರುವ ಈ ಕಕ್ಷಾಸನದಲ್ಲಿ ಕಂಬಗಳನ್ನು ಮೇಲ್ಛಾವಣಿಗೆ ಹೊಂದಿಕೊಂಡಂತೆ ಜೋಡಿಸಲಾಗಿದೆ. ಇದರಲ್ಲಿರುವ ಕಂಬಗಳು ಕೆಳಭಾಗದಲ್ಲಿ ಚೌಕಾಕಾರವಾಗಿದ್ದು ಈ ಚೌಕಾಕಾರದ ಮೇಲ್ಭಾಗದಲ್ಲಿ ಚೌಕಾಕಾರದ ಪಟ್ಟಿಕೆಗಳನ್ನು ಕೆತ್ತಲಾಗಿದೆ. ಕಂಬಗಳಲ್ಲಿರುವ ತಟ್ಟೆ ಆಕಾರದ ರಚನೆ ದುಂಡಾಕೃತಿಯ ಫಲಕಗಳು ಕೆತ್ತನೆಯ ಪ್ರಾರಂಭದ ಹಂತದಲ್ಲಿಯೇ ಇದ್ದಂತಿವೆ. ಇವುಗಳ ಮೇಲ್ಭಾಗದ ಬೋಧಿಗೆಯು ನಾಲ್ಕು ದಳದ ಪುಷ್ಪದಂತಿದ್ದು ಆದರೆ ಚೌಕಾಕಾರವಾಗಿದೆ. ಈ ಕಂಬಗಳು ಮೇಲ್ಛಾವಣಿಯ ಭಾರವನ್ನು ಹೊತ್ತಿವೆ. ಕಕ್ಷಾಸನಕ್ಕೆ ಮಂಜೂರಿನ ಭಾಗವನ್ನು ರಚಿಸಲಾಗಿದೆ. ದೇವಾಲಯಕ್ಕೆ ಅರ್ಧಗೋಡೆಯಂತೆ ರಚನೆಯಾಗಿರುವ ಈ ಕಕ್ಷಾಸನದ ಒಳ-ಹೊರಗೋಡೆಯ ಭಾಗದಲ್ಲಿ ಅಲಂಕರಣೆ ಇದೆ. ಕಕ್ಷಾಸನದ ಅಧಿಷ್ಠಾನದಲ್ಲಿ ಉಪಾನ, ಜಗತಿ, ಕುಮುದದಂಥ ಭಾಗಗಳನ್ನು ಪುನರಾವರ್ತಿಸಲಾಗಿದೆ.

ಗರ್ಭಗೃಹದಲ್ಲಿನ ಪ್ರಾಚೀನ ಲಿಂಗವು ನಾಶವಾಗಿದೆ. ಹೀಗಾಗಿ ಸ್ಥಳೀಯರು ಹೊಸದಾಗಿ ಇಲ್ಲಿಯ ಲಿಂಗವನ್ನು ಮರು ಪ್ರತಿಷ್ಠಾಪಿಸಿದ್ದಾರೆ. (ಕ್ರಿ.ಶ. ೧೯೭೯ರಲ್ಲಿ) ಗರ್ಭಗೃಹ ಬಾಗಿಲವಾಡದಲ್ಲಿ ಅರ್ಧಕಂಬಗಳ ಕೆತ್ತನೆ ಇದೆ. ಇಕ್ಕೆಲುಗಳಲ್ಲಿ ದ್ವಾರಪಾಲಕ ಶಿಲ್ಪಗಳಿವೆ. ಇವು ತ್ರಿಶೂಲ ಹಿಡಿದು ಸಮಭಂಗಿಯಲ್ಲಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಉಬ್ಬು ಶಿಲ್ಪವಿದ್ದು, ಮೇಲ್ಭಾಗದಲ್ಲಿ ಔತ್ತರೇಯ (ಉತ್ತರ ಅಥವಾ ನಾಗರ) ಮಾದರಿಯ ಶಿಖರಗಳನ್ನು ಕೆತ್ತಿದ್ದಾರೆ. ಗರ್ಭಗೃಹದ ಬಾಗಿಲವಾಡದಲ್ಲಿರುವ ಬಹುತೇಕ ಲಕ್ಷಣಗಳು ಅಂತರಾಳದ ಬಾಗಿಲವಾಡದಲ್ಲಿಯೂ ಪುನರಾವರ್ತನೆಯಾಗಿವೆ. ಅಂತರಾಳದ ಬಾಗಿಲಿನ ಇಕ್ಕೆಲಗಳಲ್ಲಿಯೂ ಸಹ ದ್ವಾರಪಾಲಕ ಶಿಲ್ಪಗಳಿವೆ. ಇವುಗಳು ನವರಂಗಕ್ಕಿಂತ ಕೆಳಮಟ್ಟದಲ್ಲಿವೆ. ಅಂದರೆ ನವರಂಗದಲ್ಲಿರುವ ಮೆಟ್ಟಿಲುಗಳ ಸಹಾಯದಿಂದ ಗರ್ಭಗೃಹ ಮತ್ತು ಅಂತರಾಳದ ಸುತ್ತಲಿರುವ ಪ್ರದಕ್ಷಿಣಾಪಥಕ್ಕೆ ಪ್ರವೇಶಿಸಬೇಕಾಗುತ್ತದೆ. ಇವುಗಳ ಅಧಿಷ್ಠಾನ ಭಾಗವು ಸದಾ ರಚನೆಯಾಗಿದ್ದು.

ಉಪಾನ, ಜಗತಿ ಮತ್ತು ತ್ರಿಪಟ್ಟ ಕುಮುದದಂತಹ ಭಾಗಗಳ ರಚನೆಯಿದೆ. ಆದರೆ ಅವುಗಳ ಹೊರಗೋಡೆ ಯಾವುದೇ ಅಲಂಕರಣೆಯನ್ನು ಒಳಗೊಂಡಿಲ್ಲ.

ವಿಶಾಲವಾದ ನವರಂಗವು ಮೂವತ್ತಾರು ಕಂಬಗಳನ್ನು ಹೊಂದಿದೆ. ಇವು ಮೂರು ರೀತಿಯ ರಚನಾಶೈಲಿಯಲ್ಲಿವೆ. ಉದಾಹರಣೆಗೆ ಮಧ್ಯದಲ್ಲಿರುವ ಕಪ್ಪನೆಯ ಹೊಳಪುಳ್ಳ ನಾಲ್ಕು ಕಂಬಗಳು ಸುಂದರವಾಗಿವೆ. ಇವು ಬುಡದಲ್ಲಿ ಚೌಕಾಕಾರವಾಗಿದ್ದು, ಮಧ್ಯಭಾಗದಲ್ಲಿ ಪಟ್ಟಿಕೆ ರಚನೆಯಿದೆ. ಇವುಗಳ ಮೇಲ್ಭಾಗದಲ್ಲಿ ದುಂಡಾದ ತಟ್ಟೆಯಾಕಾರದ ಮುಚ್ಚಳ, ಚೌಕಾಕಾರದ ಫಲಕ, ಬೋಧಿಗೆಗಳಿಂದ ಕಂಡರಿಸಲ್ಪಟ್ಟಿವೆ. ಉಳಿದ ಕಂಬಗಳು ಇವುಗಳಿಗಿಂತ ಭಿನ್ನ ಮಾದರಿಯವು. ನವರಂಗದಲ್ಲಿನ ಮಧ್ಯದ ನಾಲ್ಕು ಕಂಬಗಳನ್ನು ಯಾವ ಕಾರಣಕ್ಕಾಗಿ ಹಾಗೂ ಎಲ್ಲಿಂದ ತರಲಾಯಿತು ಎಂಬುದು ಅಸ್ಪಷ್ಟವಾಗಿದೆ. ಇಂಥದ್ದೆ ಲಕ್ಷಣವುಳ್ಳ ಕಂಬಗಳನ್ನು ಹಂಪೆಯಲ್ಲಿನ ಹಜಾರರಾಮನ ದೇವಾಲಯದಲ್ಲಿಯೂ ಕಾಣುತ್ತೇವೆ. ಕಕ್ಷಾಸನವು ನವರಂಗದ ಅರ್ಧಗೋಡೆಯಾಗಿ ಇಲ್ಲಿಯೂ ಮುಂದುವರೆದಿದೆ. ಇದರ ಹೊರ-ಒಳಗೋಡೆಯ ಭಾಗದಲ್ಲಿ ಪುಷ್ಪಪಟ್ಟಿಕೆ ಹಾಗೂ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ದೇವಾಲಯಕ್ಕೆ ಮುಖಮಂಪಟವಿದೆ. ಮುಖಮಂಟಪದಲ್ಲಿರುವ ಮೆಟ್ಟಿಲುಗಳ ಸಹಾಯದಿಂದಲೇ ದೇವಾಲಯ ಪ್ರವೇಶಿಸಬೇಕಾಗುತ್ತದೆ. ಇದಕ್ಕೂ ಕಕ್ಷಾಸನ ವ್ಯವಸ್ಥೆ ಇದೆ. ಪ್ರವೇಶದ್ವಾರದಲ್ಲಿ ತಕ್ಕಮಟ್ಟಿನ ಎತ್ತರದ ಎರಡು ಗಜಶಿಲ್ಪಗಳನ್ನು ಇಕ್ಕೆಲುಗಳಲ್ಲಿ ಇಡಲಾಗಿದೆ. ಪ್ರಾಚೀನ ಸಂಗಮೇಶ್ವರನ ದೇವಾಲಯಕ್ಕೆ ಅನೇಕ ಧಕ್ಕೆಗಳಾಗಿವೆ, ಅಲ್ಲದೆ ಸ್ಥಳೀಯರಿಂದ ಅನೇಕ ನವೀಕರಣ ಕ್ರಿಯೆಗೂ ಸಹ ಒಳಗಾಗಿದೆ. ಇತ್ತೀಚೆಗೆ ಶಿಖರವನ್ನು ನಿರ್ಮಿಸಲಾಗಿದ್ದು ದೇವಾಲಯಕ್ಕೆಲ್ಲ ಸುನ್ಣ ಬಳಿಯಲಾಗಿದೆ.

ಕುರುಗೋಡು ಪಟ್ಟಣದಲ್ಲಿ ಅತ್ಯಂತ ಪ್ರಾಮುಖ್ಯತೆ ಪಡೆದ ಈ ದೇವಾಲಯದ ರಚನಾಶೈಲಿಯನ್ನು ಗಮನಿಸಿದಾಗ, ಇದು ಹೊಯ್ಸಳರ ನಂತರ ಹಾಗೂ ವಿಜಯನಗರ ಅರಸರ ಆಡಳಿತ ಪ್ರಾರಂಭ ಘಟ್ಟದಲ್ಲಿ ನಿರ್ಮಾಣವಾಗಿರಬಹುದೆಂದು ಊಹಿಸಬಹುದಾಗಿದೆ. ಅಂದರೆ ೧೪ನೇ ಶತಮಾನದ ಪೂರ್ವಾರ್ಧದಲ್ಲಿ ಈ ದೇವಾಲಯ ರಚನೆಯಾಗಿರಬಹುದು. ಬಲ್ಲಕುಂದೆ ಮುನ್ನೂರು ಆಡಳಿತ ವಿಭಾಗದಲ್ಲಿನ ಈ ದೇವಾಲಯವು ಸಾಂಧರ (ಪ್ರದಕ್ಷಿಣಾ ಪಥ) ಲಕ್ಷಣದ ಬೆಳವಣಿಗೆಯ ಹಿನ್ನೆಲೆಯಲ್ಲಿ ಅತ್ಯಂತ ಪ್ರಾಮುಖ್ಯತೆ ಪಡೆದ ರಚನೆಯಾಗಿದೆ ಎಂದು ಡಾ.ಎಸ್.ರಾಜಶೇಖರ ಅಭಿಪ್ರಾಯಪಡುತ್ತಾರೆ. ಇಂಥ ಲಕ್ಷಣವುಳ್ಳ (ಪ್ರದಕ್ಷಿಣಾ ಪಥ) ದೇವಾಲಯಗಳು ವಿಜಯನಗರ ಕಾಲದಲ್ಲಿ ಸರ್ವೇಸಾಮಾನ್ಯವಾದವು ಹಾಗೂ ಈ ಲಕ್ಷಣವು ದೇವಾಲಯಕ್ಕೆ ಅವಶ್ಯಕವೆಂಬಷ್ಟು ಬಳಸಲಾಗಿದೆ. ಈ ಸಂಗತಿಯನ್ನು ಪ್ರಸ್ತಾಪಿಸುವ ಕಾರಣವೆಂದರೆ ಪ್ರದಕ್ಷಿಣಾಪಥ ಲಕ್ಷಣವು ಕನ್ನಡನಾಡಿನ ದೇವಾಲಯಗಳಲ್ಲಿ ಆಮದು (ತಮಿಳು ರಾಜ್ಯದಿಂದ) ರೂಪದಲ್ಲಿ ಬಂದಿದೆ ಎಂಬ ಮನೋಭಾವನೆಯಿಂದ ನೋಡಲಾಗುತ್ತದೆ. ಆದರೆ ಕುರುಗೋಡಿನ ಹಿಂಡುಲಿಸಂಗಮೇಶ್ವರ ದೇವಾಲಯದಲ್ಲಿನ ಈ ಲಕ್ಷಣವು ವಿಜಯನಗರ ಕಾಲದ ರಚನೆಗಳಿಗಿಂತ ಪೂರ್ವದ್ದು. ಅಲ್ಲದೇ ವಿಜಯನಗರದ ಅರಸರ ನೇರ ಸಂಬಂಧಗಳು ಈ ಪ್ರದೇಶದ ಜೊತೆಗೆ ಇದ್ದಿರುವ ಮಾಹಿತಿಗಳು ತುಂಬಾ ಇವೆ. ಇಂಥ ಸಂಗತಿಗಳನ್ನು ಗಮನಿಸಿದಾಗ ವಿಜಯನಗರ ಕಾಲದ ದೇವಾಲಯಗಳಲ್ಲಿ ಅಳವಡಿಸಲಾಗಿರುವ ಪ್ರದಕ್ಷಿಣಾಪಥ ಲಕ್ಷಣದ ಆಮದು ವಿಚಾರಗಳ ಬಗೆಗೆ ಪುನರ್ ಪರಿಶೀಲಿಸುವ ಅಗತ್ಯವಿದೆ. ಸಮೀಪದಲ್ಲಿರುವ ಬಲ್ಲಕುಂದೆನಾಡಿನ ದೇವಾಲಯಗಳಲ್ಲಿರುವ ಲಕ್ಷಣಗಳ ಪ್ರಭಾವ ಸಹಜವಾಗಿ ಹಂಪೆಯಲ್ಲಿನ ದೇವಾಲಯಗಳ ಮೇಲಾಗಿರುವ ಸಾಧ್ಯತೆಗಳಿವೆ. ಉದಾಹರಣೆಗಾಗಿ ಕುರುಗೋಡಿನಲ್ಲಿರುವ ಸಂಗಮೇಶ್ವರ ದೇವಾಲಯದ ಕೆಲವು ಲಕ್ಷಣಗಳು ಹಾಗೂ ಹಂಪೆಯಲ್ಲಿರುವ ಹಜಾರರಾಮ ದೇವಾಲಯದಲ್ಲಿನ ರಚನಾ ವಿಧಾನಗಳು ಹೆಚ್ಚಿನ ಸಾಮಿಪ್ಯ ಹೊಂದಿರುವುದನ್ನು ಗಮನಿಸುವುದು ಸೂಕ್ತ.

[1] ಅದೇ….ಶಾಸನ ಸಂಖ್ಯೆ - ೭

[2] ಈ ಮಾಹಿತಿಯನ್ನು ಡಾ.ಸಿ., ಮಹದೇವ ಕ.ವಿ.ವಿ. ಹಂಪಿ, ಅವರು ಒದಗಿಸಿದ್ದಾರೆ.

[3] ಕ.ವಿ.ವಿ.ಶಾಸನ ಸಂಪುಟ-೧, ಕುರುಗೋಡು, ಬಳ್ಳಾರಿ (ತಾ) ಶಾಸನ ಸಂಖ್ಯೆ-೧೮

[4] ನಾಗಯ್ಯ ಜೆ.ಎಂ., ಪೂರ್ವೋಕ್ತ ಪುಟ ೧೦೪, ೧೦೫

[5] ಹನುಮಂತರೆಡ್ಡಿ ವೈ., ಬಲ್ಲಕುಂದೆ ಮುನ್ನೂರು ನಾಡಿನ ರಾಜಧಾನಿ ಕುರುಗೋಡಿನ ಸಾಂಸ್ಕೃತಿಕ ಇತಿಹಾಸ, (ಬಮುನಾರಾಕುಸಾಇ) ಪುಟ ೬೦

ಮೇಲಿನ ಗ್ರಂಥಲೇಖಕರಾದ ಶ್ರೀ ಹನುಮಂತರೆಡ್ಡಿ ಅವರು ಈ ತ್ರಿಕೂಟಾಲಾಯ ಇರುಂಗೋಳನ ಕಾಲದಲ್ಲಿ ನಿರ್ಮಾಣವಾಗಿದ್ದು ಎಂಬ ಅಭಿಪ್ರಾಯ ಹೊಂದಿದ್ದಾರೆ. ಆದರೆ ಕ್ರಿ.ಶ. ೧೧೪೯ರ ನಂತರವೇ ನಿರ್ಮಾಣವಾಗಿದೆ. ಅಂದರೆ, ಎರಡನೆಯ ರಾಚಮಲ್ಲನ ಕಾಲದಲ್ಲಿ ದೇವಾಲಯ ರಚನೆಯಾಗಿದ್ದು ಇದರ ಮೊದಲ ಉಲ್ಲೇಖ ಕ್ರಿ.ಶ. ೧೧೭೭ರ ಶಾಸನದಲ್ಲಿ ಬರುವುದರಿಂದ ಶ್ರೀ ರೆಡ್ಡಿಯವರ ಅಭಿಪ್ರಾಯ ಸಮಂಜಸವಾಗಲಾರದು.

[6] ಕ.ವಿ.ವಿ. ಶಾಸನ ಸಂಪುಟ-೧, ಕುರುಗೋಡು, ಬಳ್ಳಾರಿ (ತಾ) ಶಾಸನ ಸಂಖ್ಯೆ -೮

[7] ಹನುಮಂತ ರೆಡ್ಡಿ ವೈ., ಪೂರ್ವೋಕ್ತ, ಪುಟ ೬೧

[8] ಬಡಿಗೇರ ವಾಸುದೇವ, ಕರ್ನಾಟಕ ದೇವಾಲಯ ಕೋಶ, ಬಳ್ಳಾರಿ ಜಿಲ್ಲೆ ಪುಟ ೧೮

[9] ಕ.ವಿ.ವಿ.ಶಾಸನ ಸಂಪುಟ-೧, ಕುರುಗೋಡು, ಬಳ್ಳಾರಿ (ತಾ) ಶಾಸನ ಸಂಖ್ಯೆ-೧೦

[10] ಹನುಮಂತರೆಡ್ಡಿ ವೈ., ಪೂರ್ವೋಕ್ತ, ಪುಟ ೩೭,೩೮

[11] ಕ.ವಿ.ವಿ.ಶಾಸನ ಸಂಪುಟ-೧, ಕುರುಗೋಡು, ಬಳ್ಳಾರಿ (ತಾ) ಶಾಸನ ಸಂಖ್ಯೆ-೧೩,೧೪

[12] ಹನುಮಂತ ರೆಡ್ಡಿ ವೈ., ಪೂರ್ವೋಕ್ತ, ಪುಟ ೭೫

[13] ಕ.ವಿ.ವಿ.ಶಾಸನ ಸಂಪುಟ-೧, ಕುರುಗೋಡು ಬಳ್ಳಾರಿ (ತಾ)ಶಾಸನ ಸಂಖ್ಯೆ-೧೦

[14] ವಾಸುದೇವ ಬಡಿಗೇರ, ಪೂರ್ವೋಕ್ತ, ಪುಟ ೨೫

[15] ಕುರುಗೋಡು ವಿಚಾರ ಸಂಕಿರಣದ ಗೋಷ್ಠಿಯ ಅಧ್ಯಕ್ಷೀಯ ಭಾಷಣದಲ್ಲಿ

[16] ಅದೇ…. ಕುರುಗೋಡು, ಬಳ್ಳಾರಿ (ತಾ) ಶಾಸನ ಸಂಖ್ಯೆ-೧೬

[17] ಅದೇ…. ಶಾಸನ ಸಂಖ್ಯೆ-೧೭

# ೫. ವಾಸ್ತು ಮತ್ತು ಮೂರ್ತಿಶಿಲ್ಪ (೩)

**ಸಿದ್ದೇಶ್ವರ (ಘನ ಲಿಂಗೇಶ್ವರ) ದೇವಾಲಯ**

ತ್ರಿಕೂಟ ದೇವಾಲಯವೆಂದು ಗುರುತಿಸಲ್ಪಟ್ಟಿರುವ ಇಂದಿನ ಈಶ್ವರ ದೇವಾಲಯದ ಸಮೀಪದಲ್ಲಿಯೇ ಸಿದ್ದೇಶ್ವರ ದೇವಾಲಯ ನಿರ್ಮಾಣವಾಗಿದೆ. ಪ್ರಾರಂಭದಲ್ಲಿ ಇದು ಜೈನ ದೇವಾಲಯವಾಗಿದ್ದು, ಕಾಲಾನಂತರ ಅನೇಕ ಬದಲಾವಣೆಗೆ ಒಳಗಾಗಿದೆ. ವಿಜಯನಗರಅರಸ ಸದಾಶಿವರಾಯನ ಕಾಲನ (ಕ್ರಿ.ಶ. ೧೫೪೫)ಶಾಸನವೊಂದು ಈ ದೇವಾಲಯದ ಮುಖ್ಯಮಂಟಪದ ಗೋಡೆಯಲ್ಲಿದೆ.[1] ದೇವಾಲಯದ ಜಿನದೇವರ ಅಮೃತಪಡಿ ನೈವೇದ್ಯಕ್ಕೆ ಭೂಮಿಯನ್ನು ದಾನಕೊಟ್ಟಿರುವ ಉಲ್ಲೇಖವನ್ನು ಈ ಶಾಸನ ನೀಡುತ್ತದೆ. ಇದೇ ದೇವಾಲಯದಲ್ಲಿರುವ ಕ್ರಿ.ಶ. ೧೫೪೬ರ ತೇದಿಯುಳ್ಳ ಇನ್ನೊಂದು ಶಾಸನದಲ್ಲಿ ಮೂಲಸಂಘ ಬಲತ್ಕಾರಗಣಕ್ಕೆ ಸೇರಿದ ಸೂರ್ಯಪ್ಪಶೆಟ್ಟಿಯ ಮಗ ಗೋಮಿಸೆಟ್ಟಿಯು ಈ ದೇವಾಲಯ ಜೀರ್ಣೋದ್ಧಾರ ಮಾಡಿದ್ದ ಬಗೆಗೂ ವಿವರಣೆಯಿದೆ.[2] ಹಾಗಾದರೆ ಈ ಜೈನ ದೇವಾಲಯ ೧೬ನೆಯ ಶತಮಾನ ಕಾಲಾವಧಿಯ ನಂತರವೇ ಕೆಲವು ಮಾರ್ಪಾಡುಗಳಿಗೆ ಒಳಪಟ್ಟಿರಬಹುದು. ಶೈವ ಮತಾವಲಂಬಿಗಳೇ ಹೆಚ್ಚಾಗಿರುವ ಕುರುಗೋಡು ಪಟ್ಟಣದಲ್ಲಿ ಇಂಥ ಅದಲು-ಬದಲು ಘಟನೆಗಳು ಸಹಜವಾಗಿಯೇ ನಡೆದಿರಬಹುದು. ದೇವಾಲಯದ ಗರ್ಭಗೃಹದ ಹಾಗೂ ಅಂತರಾಳದ ಸಹಜವಾಗಿಯೇ ನಡೆದಿರಬಹುದು. ದೇವಾಲಯದ ಗರ್ಭಗೃಹದ ಹಾಗೂ ಅಂತರಾಳದ ಬಾಗಿಲವಾಡದ ಲಲಾಟದಲ್ಲಿರುವ ಜಿನ ಉಬ್ಬುಶಿಲ್ಪ ಲಿಂಗವಾಗಿ ಪರಿವರ್ತನೆಯಾಗಿದ್ದು ಅಲ್ಲದೇ ಗರ್ಭಗೃಹದಲ್ಲಿಯ ಸಿಂಹಪೀಠದಲ್ಲಿನ ಜಿನಶಿಲ್ಪದ ಬದಲಾಗಿ ಲಿಂಗ (ರುದ್ರಭಾಗ)ವನ್ನು ಪ್ರತಿಷ್ಠಾಪಿಸಿರುವುದು ಮಾರ್ಪಾಡಾಗಿರುವ ಸಂಗತಿಗಳಿಗೆ ಸಾಕ್ಷಿಗಳಾಗಿವೆ. ಉಳಿದಂತೆ ದೇವಾಲಯದ ಯಾವ ಭಾಗಗಳು ಅಂಥ

ಬದಲಾವಣೆಗೆ ಒಳಗಾಗಿಲ್ಲವೆಂದೇ ಹೇಳಬಹುದು. ದೇವಾಲಯದ ಯಾವ ಭಾಗಗಳು ಅಂಥ ಬಂದಲಾವಣೆಗೆ ಒಳಗಾಗಿಲ್ಲವೆಂದೇ ಹೇಳಬಹುದು. ದೇವಾಲಯದ ಮೂಲ ದೇವರು ಬದಲಾಗುವುದರೊಂದಿಗೆ ಹಿಂದಿನ ಜಿನಾಲಯ, ಘನಲಿಂಗೇಶ್ವರನಾಗಿಯೂ ನಂತರ ಸಿದ್ದೇಶ್ವರನಾಗಿ ಮರುನಾಮಕರಣ ಹೊಂದಿದೆ. ಇಂಥ ಬದಲಾವಣೆಗಳು ಯಾವ ಕಾಲಘಟ್ಟದಲ್ಲಿ ಹಾಗೂ ಯಾವ ಕಾರಣಕ್ಕಾಗಿ ಆದವು ಎಂದು ನಿರ್ದಿಷ್ಟವಾಗಿ ಅರ್ಥೈಸುವುದು ಇತಿಹಾಸಕಾರನಿಗೆ ಬಿಡಿಸಲಾಗದ ಪ್ರಶ್ನೆಯಾಗಿ ಉಳಿದುಕೊಂಡಿದೆ. ಇದೇ ದೇವಾಲಯದ ವಿವರಣೆಯ ಸಂದರ್ಭದಲ್ಲಿ ಇನ್ನೊಂದು ವಿಷಯ ಉಳಿದುಕೊಂಡಿದೆ. ಇದೇ ದೇವಾಲಯದ ವಿವರಣೆಯ ಸಂದರ್ಭದಲ್ಲಿ ಇನ್ನೊಂದು ವಿಷಯ ಪ್ರಸ್ತಾಪಿಸುವುದು ಸೂಕ್ತ. ಪಟ್ಟಣದಲ್ಲಿರುವ ನೀಲಮ್ಮನ ಮಠದ ಮಹಾದ್ವಾರ ಹಾಗೂ ಅಲ್ಲಿ ಅಳವಡಿಸಲಾಗಿರುವ ಕೆಲವು ಬಿಡಿ ಶಿಲ್ಪಗಳು ಕುತೂಹಲ ಕೆರಳಿಸುತ್ತವೆ. ಕಾರಣ ಶೈವ ಪಂಥೀಯರ ಪೂಜಾ ಕೇಂದ್ರವಾದ ಇಲ್ಲಿ ಜೈನ ಶಿಲ್ಪಾವಶೇಷಗಳು ಇರುವುದು. ಪ್ರಾಚೀನ ಜಿನಾಲಯದ ಮಹಾದ್ವಾರ ನಾಶವಾದ ನಂತರ ಅಲ್ಲಿರುವ ಅವಶೇಷಗಳನ್ನು ನೀಲಮ್ಮನ ಮಠಕ್ಕೆ ಒಯ್ದು ಜೋಡಿಸಿರಬಹುದೇ? ಎಂಬ ಸಂಗತಿ ಚರ್ಚಾರ್ಹವಾದದು. ಈ ತರಹದ ಸಹಜವಾದ ಕ್ರಿಯೆಗಳೂ ಚರಿತ್ರೆಯುದ್ದಕ್ಕೂ ನಡೆದಿವೆ. ಹಾಗೂ ಇಂದಿಗೂ ಇಂಥ ಪ್ರಕ್ರಿಯೆಗಳು ನಡೆಯುತ್ತಲಿವೆ.

ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಅಥವಾ ಸಭಾಮಂಪಟ ಹಾಗೂ ಮುಖಮಂಟಪಗಳಿಂದ ಕೂಡಿದೆ. ತಕ್ಕಮಟ್ಟಿಗೆ ವಿಶಾಲವಾದ ಈ ದೇವಾಲಯಕ್ಕೆ ಇಂದು ಶಿಖರವಿಲ್ಲ. ಗರ್ಭಗೃಹವು ಆಯಾತಾಕಾರದ ಸಿಂಹಪೀಠವುಳ್ಳ ಲಿಂಗವನ್ನು ಹೊಂದಿದೆ. ಈ ಪೀಠದ ಕೆಳಭಾಗದಲ್ಲಿರುವ ಸಿಂಹ ಉಬ್ಬುಶಿಲ್ಪಗಳನ್ನು ಗಮನಿಸಿದಾಗ ಈ ದೇವಾಲಯ ವರ್ಧಮಾನನಿಗೆ ಸಂಬಂಧಿಸಿದ ಜಿನಾಲಯವಾಗಿರಬೇಕು. ಗರ್ಭಗೃಹದಲ್ಲಿ ಭುವನೇಶ್ವರಿ ಕೆತ್ತನೆಯಿದೆ. ಇದರ ಪ್ರವೇಶ ದ್ವಾರವನ್ನು ಹೂವಿನ ಎಸಳು ಹಾಗೂ ಅರ್ಧಕಂಬಗಳಿಂದ ಕಂಡರಿಸಲಾಗಿದೆ. ಅಲ್ಲದೇ ದ್ವಾರಶಾಖೆ ಇಕ್ಕೆಲಗಳಲ್ಲಿ ಕುಂಬಗಳ ರಚನೆ ಇದೆ. ಇವುಗಳನ್ನು ಅರ್ಧಕಂಬ, ಮಕರ ಹಾಗೂ ಕೀರ್ತಿಮುಖಗಳಿಂದ ಅಲಂಕರಣೆ ಮಾಡಲಾಗಿದೆ. ಬಾಗಿಲವಾಡದ ಮೇಲ್ಭಾಗದಲ್ಲಿ ಔತ್ತರೆಯ ಮಾದರಿಯ ಶಿಖರ ಪಟ್ಟಿಕೆಗಳಿವೆ. ಮೇಲೆ ವಿವರಿಸಿದ ಇಂಥ ಲಕ್ಷಣಗಳು ಅಂತರಾಳ ಹಾಗೂ ಸಭಾಮಂಟಪ ಬಾಗಿಲವಾಡಗಳಲ್ಲಿ ಪುನರಾವರ್ತನೆಯಾಗಿವೆ. ಅಂತರಾಳ ಹಾಗೂ ನವರಂಗದಲ್ಲಿನ ಚೌಕಾಕಾರದ ಕಂಬಗಳು ಹದಿನಾರು ಪಟ್ಟಿಕೆಗಳನ್ನು, ಫಲಕ ಹಾಗೂ ಬೋಧಿಗೆಯ ರಚನೆಗಳನ್ನು ಹೊಂದಿವೆ. ದೇವಾಲಯ ಅಧಿಷ್ಠಾನವು ಉಪಾನ, ಜಗತಿ, ಕಂಠ, ಗಳ, ತ್ರಿಪಟ್ಟ ಕುಮದ ಹಾಗೂ ಪುಷ್ಪ ಪಟ್ಟಿಕೆಗಳಿಂದ ಕೂಡಿದೆ.

**ಚನ್ನಕೇಶವ ದೇವಾಲಯ**

ಹಿಂಡುಲಿ ಸಂಗಮೇಶ್ವರ ದೇವಾಲಯದ ಸಮೀಪದಲ್ಲಿ ಚೆನ್ನಕೇಶವ ದೇವಾಲಯ ನಿರ್ಮಾಣವಾಗಿದೆ. ಗಾರೆ-ಇಟ್ಟಿಗೆಗಳಿಂದ ದೇವಾಲಯದ ಶಿಖರವನ್ನು ನಿರ್ಮಿಸಿದ್ದಾರೆ. ಕುರುಗೋಡಿನಲ್ಲಿ ಇಂಥ ಮಾದರಿ ಶಿಖರವುಳ್ಳ ಏಕಮಾತ್ರ ಸ್ಮಾರಕ ಇದಾಗಿದೆ. ಇದರ ರಚನಾ ಶೈಲಿಯನ್ನು ಗಮನಿಸಿದಾಗ ಇದೊಂದು ವಿಜಯನಗರ ಕಾಲಾವಧಿಯಲ್ಲಿನ ನಿರ್ಮಾಣವೆಂದು ಊಹಿಸಬಹುದು. ನಾಶದ ಅಂಚಿನಲ್ಲಿರುವ ಗರ್ಭಗೃಹವೊಂದನ್ನು ಬಿಟ್ಟರೆ ದೇವಾಲಯದ ಉಳಿದ ಯಾವ ಭಾಗಗಳು ಇಲ್ಲ. ಇದರ ಅಧಿಷ್ಠಾನವು ವಿಜಯನಗರ ಕಾಲದ ರಚನೆಯನ್ನು ಹೋಲುತ್ತದೆ. ಹೊರಗೋಡೆಯಲ್ಲಿ ಮತ್ಸ್ಯ ಹಾಗೂ ಕೂರ್ಮ (ಆಮೆ)ಗಳ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ವೈಷ್ಣವ ಪಂಥಕ್ಕೆ ಸೇರಿದ ಈ ದೇವಾಲಯ ಸಂಪೂರ್ಣ ಶಿಥಿಲವಾಗಿದೆ.

**ನಗರೇಶ್ವರ ದೇವಾಲಯ**

ಈ ದೇವಾಲಯವನ್ನು ಈಶ್ವರ ದೇವಾಲಯವೆಂತಲೂ ಕರೆಯುತ್ತಾರೆ. ಇದರ ಕರ್ತೃ ಹಾಗೂ ಕಾಲದ ಬಗೆಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಾಗಿಲ್ಲ. ಆದರೂ ಕಟ್ಟಡದ ಲಕ್ಷಣಗಳನ್ನು ಗಮನಿಸಿ ಹೇಳುವುದಾದರೆ ಇದು ಹನ್ನೆರಡನೆಯ ಶತಮಾನದ ಉತ್ತರಾರ್ಧ ಕಾಲಾವಧಿಯಲ್ಲಿ ನಿರ್ಮಾಣವಾಗಿರಬಹುದು. ಚನ್ನಕೇಶವ ದೇವಾಲಯದ ಮುಂಭಾಗದಲ್ಲಿ ರಚನೆಯಾಗಿರುವ ನಗರೇಶ್ವರ ದೇವಾಲಯ ಬಿದ್ದುಹೋದ ಗರ್ಭಗೃಹ ಹಾಗೂ ಅಂತರಾಳದ ಭಾಗವನ್ನು ಮಾತ್ರ ಹೊಂದಿದೆ. ಗರ್ಭಗೃಹದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಮೇಲ್ಛಾವಣಿಯಲ್ಲಿ ತೂಲೆಯೊಂದಿದ್ದು ಅದು ಬಹುಶಃ ಇನ್ನೊಂದು ಗರ್ಭಗೃಹದ

ಜೋಡಣೆಯಾಗಿದ್ದಿರಬಹುದೆ? ಆದರೆ ತೊಲೆ ಉಳಿದು ಗರ್ಭಗೃಹಗಳು ಬಿದ್ದು ನಾಶವಾಗಿದೆ. ಹೀಗಾಗಿ ಸ್ಪಷ್ಟವಾಗಿ ಏನನ್ನು ಹೇಳಲಿಕ್ಕಾಗದು. ಮುಂದುವರೆದ ತೊಲೆಯಿಂದ ಊಹಿಸಬಹುದಾದ ಸಂಗತಿಗಳೇನೆಂದರೆ ಇದು ಸಹ ತ್ರಿಕೂಟ ದೇವಾಲಯ ಆಗಿತ್ತೆ? ಸಭಾಮಂಟಪದ ಅವಶೇಷಗಳು ದೇವಾಲಯದ ಸುತ್ತಲೂ ಬಿದ್ದಿವೆ. ದೇವಾಲಯದ ಸುತ್ತಲೂ ಉತ್ಖನನ ಕಾರ್ಯಕೈಗೊಂಡರೆ ಹಲವು ಮಹತ್ವದ ವಿಷಯಗಳು ತಿಳಿಯುವ ಸಾಧ್ಯತೆ ಇದೆ.

**ತಳವಾರ ಈಶ್ವರ ದೇವಾಲಯ**

ಕುರುಗೋಡು ಪಟ್ಟಣದಲ್ಲಿರುವ ಅನೇಕ ದೇವಾಲಯಗಳ ಬಗೆಗೆ ಸ್ಪಷ್ಟವಾದ ಮಾಹಿತಿಗಳ ಕೊರತೆ ಇದೆ. ಹೀಗಾಗಿ ಸ್ಥಳೀಯರು ಹಾಗೂ ವಿದ್ವಾಂಸರು ತಮಗೆ ಅನುಕೂಲವಾದ ರೀತಿಯಲ್ಲಿ ದೇವಾಲಯಗಳ ಹೆಸರನ್ನು ಗುರುತಿಸಿಕೊಂಡಿದ್ದಾರೆ. ಇದು ಸಹಜವು ಹಾಗೂ ಅನಿವಾರ್ಯವಾಗಿದೆ. ಈಶ್ವರ ದೇವಾಲಯದ ಸುತ್ತಲೂ ಬೇಡ ಅಥವಾ ನಾಯಕ ಜನಾಂಗವು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವುದರಿಂದ ಸಹಜವಾಗಿ ಜಾತಿಸೂಚಕದಿಂದಲೇ ಈ ದೇವಾಲಯವನ್ನು ಹೆಸರಿಸುತ್ತಾರೆ. ತಳವಾರ ಎಂಬುದು ನಾಯಕ ಅಥವಾ ಬೇಡ ಹೆಸರಿನ ಪರ್ಯಾಯ ಪದವೇ ಆಗಿದೆ. ಆದರೆ ಇದೇ ದೇವಾಲಯಕ್ಕೆ ಸ್ಥಳೀಯರೊಬ್ಬರು ಶ್ರೀ ಮಲ್ಲಿಕಾರ್ಜುನ ದೇವಾಲಯವೆಂದು ಮರುನಾಮಕರಣ ಮಾಡಿ ನಾಮಫಲಕವನ್ನು ಹಾಕಿದ್ದಾರೆ.

ಈ ದೇವಾಲಯ ಕುರುಗೋಡು-ಮುಷ್ಠಗಟ್ಟಿ ಮಾರ್ಗದಲ್ಲಿದೆ. ಗರ್ಭಗೃಹ ಅಂತರಾಳ, ತೆರೆದ ನವರಂಗ ಅಥವಾ ಸಭಾಮಂಟಪ ಹಾಗೂ ಮುಖಮಂಟಪವನ್ನು ಹೊಂದಿದೆ. ಈ ಸ್ಮಾರಕವನ್ನು ಮೆಟ್ಟಿಲುಗಳ ಮೂಲಕ ಪ್ರವೇಶಿಸಬೇಕಾಗುತ್ತದೆ. ಗರ್ಭಗೃಹದಲ್ಲಿ ಲಿಂಗವಿದ್ದು, ಮೇಲ್ಛಾವಣಿಯ ಒಳಭಾಗದಲ್ಲಿ ಭುವನೇಶ್ವರಿಯ ಕೆತ್ತನೆಯಿದೆ. ಬಾಗಿಲವಾಡದ ಶಾಖೆಗಳಲ್ಲಿ ಪುಷ್ಪಸಾಲು ಹಾಗೂ ಅರ್ಧಕಂಬಗಳು ರಚಿಸಿದ್ದಾರೆ. ಲಲಾಟದಲ್ಲಿ ಗಜಲಕ್ಷ್ಮೀ ಉಬ್ಬು ಶಿಲ್ಪವಿದೆ. ಇಕ್ಕೆಲಗಳಲ್ಲಿ ತ್ರಿಶೂಲ, ಡಮರು, ಗದೆ ಹಿಡಿದು ನಿಂತ ದ್ವಾರಪಾಲಕ ವಿಗ್ರಹಗಳಿವೆ.

ಅಂತರಾಳದ ಬಾಗಿಲವಾಡವು ಗರ್ಭಗೃಹದ ಬಾಗಿಲವಾಡವು ಗರ್ಭಗೃಹದ ಬಾಗಿಲವಾಡದ ರಚನಾ ಮಾದರಿಯನ್ನು ಹೊಂದಿದೆ. ಆದರೆ ಅಂತರಾಳದ ಲಲಾಟದ ಮೇಲ್ಭಾಗದಲ್ಲಿ ಔತ್ತರೇಯ ಮಾದರಿಯ ಶಿಖರ ಹಾಗೂ ಸಿಂಹಗಳನ್ನು ರಚಿಸಿದ್ದಾರೆ. ಸಭಾಮಂಟಪದಲ್ಲಿ ನಂದಿ ಶಿಲ್ಪವಿದೆ. ಸಭಾಮಂಟಪವು ಗೂಡು (ಕೋಷ್ಠಕ)ಗಳನ್ನು ಹೊಂದಿದ್ದು ಅವುಗಳನ್ನು ಅರ್ಧಕಂಬ ಹಾಗೂ ಮಂಜೂರಿನ ಭಾಗಗಳಿಂದ ಅಲಂಕರಣಗೊಳಿಸಿದ್ದಾರೆ. ಇದರಲ್ಲಿಯ ನಾಲ್ಕು ಕಂಬಗಳು ಚೌಕಾಕಾರವಾಗಿದೆ. ಕಂಬಗಳಲ್ಲಿ ತಟ್ಟೆಯಾಕಾರದ ಮುಚ್ಚಳ, ಫಲಕ ಹಾಗೂ ಬೋಧಿಗೆಗಳನ್ನು ಅಳವಡಿಸಿದ್ದಾರೆ. ಅಧಿಷ್ಠಾನ ಭಾಗಗಳು ಮಣ್ಣಲ್ಲಿ ಹೂತುಹೋಗಿರುವುದರಿಂದ ಅದರ ಭಾಗಗಳನ್ನು ತಿಳಿಯುವುದು ಕಷ್ಟಸಾಧ್ಯ. ಕಣಶಿಲೆಯಲ್ಲಿ ನಿರ್ಮಾಣವಾಗಿರುವ ಈ ದೇವಾಲಯ ಕದಂಬನಾಗರ ಶಿಖರ ಹೊಂದಿದೆ. ಹೊರಗೋಡೆಯು ಕೆಲವು ಕಡೆ ಕುಸಿದಿದೆ.

**ಕಣವಿ ಈಶ್ವರ**

ಕುರುಗೋಡು ಕೈಫಿಯತ್ತಿನಲ್ಲಿ ಉಲ್ಲೇಖವಾಗಿರುವ ತಳಕಾಲದ ಈಶ್ವರನ ಗುಡಿಯಲ್ಲಿ ಇಂದು ಕಣಿವೆ ಈಶ್ವರ ದೇವಾಲಯವೆಂದು ಕರೆಯಲಾಗುತ್ತಿದೆ. ಕುರುಗೋಡ-ಮುಷ್ಟಗಟ್ಟಿ ರಸ್ತೆಯಲ್ಲಿರುವ ಈ ದೇವಾಲಯ ಗರ್ಭಗೃಹ, ಅಂತರಾಳ ಹಾಗೂ ತೆರದ ನವರಂಗ ಅಥವಾ ಸಭಾಮಂಪಟವನ್ನು ಹೊಂದಿದೆ. ಸುಂದರವಾದ ಈ ದೇವಾಲಯಕ್ಕೆ ಕದಂಬನಾಗರ ಮಾದರಿ ಶಿಖರವಿದೆ. ಇತ್ತೀಚೆಗೆ ಈ ದೇವಾಲಯದಲ್ಲಿನ ಲಿಂಗವನ್ನು ನಿಧಿಕಳ್ಳರು ಅಗೆದಿದ್ದಾರೆ. ಗರ್ಭಗೃಹದ ಬಾಗಿಲವಾಡದಲ್ಲಿ ಪುಷ್ಪಪಟ್ಟಿಕೆ, ಹೂಬಳ್ಳಿ ಹಾಗೂ ಅರ್ಧಕಂಬಗಳ ರಚನೆಯಿದೆ. ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದ್ದು ಅದರ ಮೇಲ್ಭಾಗದಲ್ಲಿ ಮುಂಚಾಚಿದ ಪಟ್ಟಿಕೆಗಳನ್ನು ಕೆತ್ತಿದ್ದಾರೆ. ಗರ್ಭಗೃಹದ ಬಾಗಿಲವಾಡದ ಎರಡು ಕಡೆಗೆ ದ್ವಾರಪಾಲಕ ವಿಗ್ರಹಗಳಿವೆ. ಗರ್ಭಗೃಹದ ಬಾಗಿಲವಾಡದಲ್ಲಿಯ ಕೆತ್ತನೆಗಳನ್ನೇ ಅಂತರಾಳದ ಬಾಗಿಲವಾಡದಲ್ಲಿಯೂ ಕೆತ್ತಲಾಗಿದೆ. ಆದರೆ ದ್ವಾರಪಾಲಕ ವಿಗ್ರಹಗಳ ಬದಲಾಗಿ ಕೈಯಲ್ಲಿ ಚಾಮರ ಹಿಡಿದಿರುವ ಸ್ತ್ರೀ

ಶಿಲ್ಪಗಳಿವೆ. ನವರಂಗವು ಕಲ್ಯಾಣ ಚಾಲುಕ್ಯ ಮಾದರಿಯ ಕಂಬಗಳನ್ನು ಹೊಂದಿದ್ದು ಅವುಗಳಲ್ಲಿ ಹದಿನಾರು ಎಂಬ ಪಟ್ಟಿಕೆಗಳನ್ನು ಕೆತ್ತಲಾಗಿದೆ. ಈ ಕಂಬಗಳು ಫಲಕ ಬೋಧಿಗೆಗಳನ್ನು ಹೊಂದಿವೆ. ದೇವಾಲಯ ಕಣಶಿಲೆಯಲ್ಲಿ ನಿರ್ಮಿತವಾಗಿದೆ.

**ವಜ್ರಬಂಡಿ ಬಸಪ್ಪ**

ಕುರುಗೋಡು-ಮುಷ್ಟಗಟ್ಟೆ ರಸ್ತೆಯಲ್ಲಿರುವ ಈ ದೇವಾಲಯ ಅಂದಿನ ಹಾಗೂ ಇಂದಿನ ಕುರುಗೋಡು ಪಟ್ಟಣದ ಉತ್ತರ ದಿಕ್ಕಿನಲ್ಲಿರುವ ಕೊನೆಯ ದೇವಾಲಯವಾಗಿದೆ. ಕಲಾ ನೈಪುಣ್ಯತೆಯಿಂದ ಅತ್ಯಂತ ಸರಳ ರಚನೆಯಾದ ಈ ಸ್ಮಾರಕವು ವಿಜಯನಗರ ಆಳ್ವಿಕೆಯ ಕೊನೆಗಾಲದಲ್ಲಿ ರಚನೆಯಾಗಿರಬಹುದು. ಇದು ಬೃಹತ್ತಾದ ಬೆಟ್ಟಗಳ ಕೆಳಭಾಗದಲ್ಲಿದೆ. ಹಾಗೂ ಈ ಬೆಟ್ಟದ ಶಿಲೆಯು ಕಪ್ಪುಬಣ್ಣದಾಗಿದೆ. ವಜ್ರದ ಹೋಲಿಕೆಯುಳ್ಳ ಇಲ್ಲಿನ ಬಂಡೆಗಳಿಂದ ಈ ದೇವಾಲಯಕ್ಕೆ ಈ ಹೆಸರು ಬಂದಿರಬಹುದೆಂದು ಅಭಿಪ್ರಾಯವಿದೆ.[3] ಇದು ಕ್ರಮೇಣ ವಜ್ರದುಂಡಿ>ವಜ್ರದಂಡಿ>ವಜ್ರಬಂಡಿ ಎಂಬ ನಾನಾ ಹೆಸರುಗಳನ್ನು ಪಡೆಯುತ್ತಾ ಬಂದಿದೆ. ಆದರೆ ಈ ದೇವಾಲಯದ ಸುತ್ತಲಿರುವ ಕಪ್ಪು ಬಣ್ಣದ ಶಿಲೆಗಳಿಂದಲೇ ಈ ದೇವಾಲಯಕ್ಕೆ ಈ ಹೆಸರು ಬಂದಿರಬಹುದೆಂಬ ಅಭಿಪ್ರಾಯಕ್ಕಿಂತ ಈ ದೇವಾಲಯವೇ ಕಣಶಿಲೆಯಿಂದಾಗಿರುವ ಹಾಸುಕಲ್ಲಿನ (ಚಪ್ಪಡಿ) ಮೇಲೆ ನಿರ್ಮಾಣವಾಗಿದೆ. ಎಂಬುದನ್ನು ಗಮನಿಸುವುದು ಸೂಕ್ತ. ಈ ಹಾಸು ಬಂಡೆಯಲ್ಲಿರುವ ಕಣಶಿಲೆಗಳು ವಜ್ರದ ಹಾಗೇ ಹೊಳಪುಳ್ಳವು. ಈ ಹೊಳಪುಳ್ಳ ಬಂಡೆಯ ಮೇಲೆ ನಿರ್ಮಾಣವಾದ ಈ ಬಸವನ ದೇವಾಲಯವನ್ನು ಗ್ರಾಮ್ಯವಾಗಿ ವಜ್ರಬಂಡಿ ಬಸಪ್ಪ ಎಂದು ಕರೆದಿರುವುದು ಸಹಜವಾಗಿದೆ ಎಂದು ಅಭಿಪ್ರಾಯಿಸಬಹುದು. ವಜ್ರದುಂಡಿ ಶಿಲಾಸಮೂಹದ ನಡುವೆ ಈ ದೇವಾಲಯ ನಿರ್ಮಾಣವಾಗಿರುವುದರಿಂದ ಇದನ್ನು ಸಹಜವಾಗಿ 'ವಜ್ರದುಂಡಿ' ಬಸಪ್ಪನ ದೇವಾಲಯ ಎಂದು ಕರೆದಿರುವ ಸಾಧ್ಯತೆ ಇದೆಯೆಂದು ಬಾಲಸುಬ್ರಹ್ಮಣ್ಯ ಅವರ ಅನಿಸಿಕೆಯಾಗಿದೆ.

ದೇವಾಲಯವು ಗರ್ಭಗೃಹ ಮತ್ತು ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಬೃಹತ್ತಾದ ನಂದಿ ವಿಗ್ರಹವಿದೆ. ಗರ್ಭಗೃಹದ ಬಾಗಿಲಿನಲ್ಲಿ ಅರ್ಧಕಂಬ ಪಂಚಪಟ್ಟಿಕೆಗಳನ್ನು ರಚನೆ ಮಾಡಿದ್ದಾರೆ. ಮುಂಭಾಗದಲ್ಲಿ ತ್ರಿಶೂಲ, ಡಮರು, ಗದೆ ಹಿಡಿದಿರುವ ದ್ವಾರಪಾಲಕ ವಿಗ್ರಹಗಳು ಎರಡು ಕಡೆಗೆ ಇವೆ. ಫಲಕ ಬೋಧಿಗೆ ಹಾಗೂ ಚೌಕಾಕಾರದ ರಚನೆಯುಳ್ಳ ನಾಲ್ಕು ಕಂಬಗಳು ಮುಖಮಂಟಪದಲ್ಲಿವೆ. ಬೆಟ್ಟದ ಕೆಳಭಾಗದಲ್ಲಿ ನಿರ್ಮಾಣವಾದ ಈ ದೇವಾಲಯದ ಅಧಿಷ್ಠಾನ ಭಾಗ, ಬೆಟ್ಟದ ಮೇಲಿನಿಂದ ಬರುವ ಮಳೆನೀರು, ಮಣ್ಣನ್ನು ಸಾಗಿಸಿಕೊಂಡು ಬರುವುದರಿಂದ ಈ ಮಣ್ಣು ದೇವಾಲಯದ ಸುತ್ತಲೂ ಆವರಿಸಿದೆ. ಆದರೂ ಅಧಿಷ್ಠಾನದಲ್ಲಿರುವ ತ್ರಿಪಟ್ಟ ಕುಮುದ, ಪದ್ಮಭಾಗಗಳು ಕಾಣುತ್ತವೆ. ದೇವಾಲಯದ ಗೋಡೆಯ ಅರ್ಧಕಂಬ ಹಾಗೂ ಪಟ್ಟಿಕೆಗಳಿಂದ ಅಲಂಕೃತವಾಗಿದೆ. ದೇವಾಲಯದ ಮುಂಭಾಗದ ಬಂಡೆಯ ಮೇಲೆ ಎರಡು ಸಾಲಿನ ಶಾಸನ ಕೆತ್ತಲಾಗಿದೆ. ಆದರೆ ಈ ಅಸ್ಪಷ್ಟ ಶಾಸನದಿಂದ ಏನು ಅರ್ಥೈಸಲಿಕ್ಕಾಗದು. ದೇವಾಲಯದ ಸುತ್ತಲಿನ ಪ್ರದೇಶದಲ್ಲಿ ಸೂಕ್ಷ್ಮಶಿಲಾಯುಧಗಳನ್ನು ಹೋಲುವಂಥ ಅನೇಕ ಕುರುಹುಗಳು ವಿಸ್ತರಿಸಿಕೊಂಡಿವೆ. ದೇವಾಲಯಕ್ಕೆ ಸುಣ್ಣಬಣ್ಣವನ್ನು ಬಳಸಿದ್ದಾರೆ.

**ದೊಡ್ಡ ಬಸವೇಶ್ವರ ದೇವಾಲಯ**

ಕಲಾವೈಭವ ದೃಷ್ಟಿಯಿಂದ ಇದೊಂದು ಅತ್ಯಂತ ಸರಳ ರಚನೆಗಳಿಂದ ಕೂಡಿದೆ ಸ್ಮಾರಕವಾಗಿದೆ. ಆದರೆ ಕುರುಗೋಡು ಪಟ್ಟಣ ಹಾಗೂ ಸುತ್ತಲಿನ ಪ್ರದೇಶದ ಬಹುಸಂಖ್ಯಾತ ಜನರ ಆರಾಧ್ಯದೈವವಾಗಿ ಪ್ರಸಿದ್ಧಿ ಪಡೆದಿದೆ. ಕುರುಗೋಡಿನಲ್ಲಿರುವ ಬಹುಜನರ ನಿತ್ಯದ ಕಾರ್ಯಗಳು ದೊಡ್ಡ ಬಸವೇಶ್ವರನ ಸ್ಮರಣೆಯಿಂದಲೇ ಪ್ರಾರಂಭವಾಗುತ್ತವೆಯೆಂದರೆ ಅತಿಶಯೋಕ್ತಿ ಆಗಲಾರದು. ಕುರುಗೋಡು ಪಟ್ಟಣ ಪರಿಸರದಲ್ಲಿ ನಿರ್ಮಾಣವಾದ ಪ್ರಾಚೀನ ದೇವಾಲಯಗಳನ್ನು ಗಮನಿಸಿದಾಗ ದೊಡ್ಡ ಬಸವೇಶ್ವರ ದೇವಾಲಯ ತುಂಬಾ ಅರ್ವಾಚೀನವಾದುದು. ಆದರೂ ಇದೇ ಪಟ್ಟಣದಲ್ಲಿ ವಿಜಯನಗರೋತ್ತರ ಕಾಲದ ನಿರ್ಮಿತಿಗಳು ಸಹ ಕಾಣುತ್ತೇವೆ. ಉದಾ : ಕಲ್ಗುಡೇಶ್ವರ, ನೀಲಮ್ಮನಮಠ ಹಾಗೂ ಮೌನೇಶ್ವರ ದೇವಾಲಯಗಳನ್ನು ಹೆಸರಿಸಬಹುದು. ಆದರೆ ಇವು ಯಾವುವೂ ಅಧ್ಯಯನ ದೃಷ್ಟಿಯಿಂದ ಅಂತ ಮಹತ್ವವನ್ನು ಸ್ಮಾರಕಗಳೇನಲ್ಲ.

ಎತ್ತರದ ಜಗತಿಯ ಮೇಲೆ ನಿರ್ಮಾಣವಾಗಿರುವ ಈ ದೇವಾಲಯಕ್ಕೆ ವಿಶಾಲವಾದ ಪ್ರಾಕಾರವಿದೆ. ದೇವಾಲಯವು ಗರ್ಭಗೃಹ, ಅಂತರಾಳ ಹಾಗೂ ವಿಸ್ತಾರವಾದ ಸಭಾ ಮಂಟಪವನ್ನು ಹೊಂದಿದ್ದರೂ ದೇವಾಲಯದ ಅತ್ಯಂತ ಪ್ರಮುಖವಾದ ಆಕರ್ಷಣೆಯೆಂದರೆ ಗರ್ಭಗೃಹದಲ್ಲಿರುವ ಬೃಹದಾಕಾರದ ನಂದಿ ವಿಗ್ರಹ. ಸುಮಾರು ೧೫ ಅಡಿ ಎತ್ತರವಿರುವ ಈ ವಿಗ್ರಹವು ಏಕಶಿಲೆಯಲ್ಲಿ ನಿರ್ಮಿತವಾಗಿದೆ. ಇಲ್ಲಿಯ ದೊಡ್ಡ ವಿಗ್ರಹದಿಂದಲೇ ಈ ದೇವಾಲಯವನ್ನು ದೊಡ್ಡ ಬಸವೇಶ್ವರ ದೇವಾಲಯವೆಂದು ಕರೆದಿರಬಹುದು. ಅಲ್ಲದೇ ಈ ಬೃಹದಾಕಾರದ ನಂದಿ ವಿಗ್ರಹಕ್ಕೆ ಅತ್ಯಂತ ಕಿರಿದಾದ ಕೋಡುಗಳಿವೆ. ಈ ಕಿರಿದಾದ ಕೋಡುಗಳಿಂದಾಗಿ ಈ ಗ್ರಾಮಕ್ಕೆ ಕುರುಗೋಡು ಎಂಬ ಹೆಸರು ಬಂದಿತು ಎಂಬ ಐತಿಹ್ಯ ತುಂಬಾ ಪ್ರಚಲಿತದಲ್ಲಿದೆ. ಉಳಿದಂತೆ ಗರ್ಭಗೃಹದ ಬಾಗಿಲವಾಡವು ಅನೇಕ ಕೆತ್ತನೆಗಳಿಂದ ಕೂಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಅದರ ಮೇಲೆ ಕೀರ್ತಿಮುಖ ಹಾಗೂ ಶೈವ ದ್ವಾರಪಾಲಕ ಉಬ್ಬುಶಿಲ್ಪಗಳಿಂದ ಅಲಂಕರಣಗೊಳಿಸಿದ್ದಾರೆ. ಅಂತರಾಳದ ನಡುವೆ ಎರಡು ಕಂಬಗಳಿವೆ. ಸಭಾಮಂಟಪದಲ್ಲಿರುವ ಕಂಬಗಳು ಆನೆ, ಕಾಲೆತ್ತಿನಿಂತ ಸಿಂಹ (ಯಾಳಿ)ಗಳು ಹಾಗೂ ಇಳಿಬಿಟ್ಟ ಪುಷ್ಪ ಬೋಧಿಗೆಯ ರಚನೆಗಳಿಂದ ಮಾಡಲ್ಪಟ್ಟಿವೆ. ಇವು ಹಂಪೆಯ ವಿರೂಪಾಕ್ಷ ದೇವಾಲಯದ ರಂಗಮಂಟಪದಲ್ಲಿನ ಕಂಬಗಳನ್ನು ನೆನಪಿಸುವಂತಿವೆ. ಸಭಾಮಂಟಪದ ಮೇಲ್ಛಾವಣಿಯಲ್ಲಿ ಸಾಲಾಗಿ ಅನೇಕ ಗೂಡುಗಳನ್ನು (ಕೈಪಿಡಿಗೋಡೆ) ರಚಿಸಲಾಗಿದೆ. ಹಾಗೂ ಅವುಗಳಲ್ಲಿ ವಾಹನರೂಢರಾದ ಶಿವಪಾರ್ವತಿ, ತ್ರಿಮೂರ್ತಿ ಹಾಗೂ ಇನ್ನಿತರ ಶಿಲ್ಪಗಳಿವೆ. ಮುಂಬಾಗಿಲಿನ ಇಕ್ಕೆಲಗಳಲ್ಲಿ ಗಜಶಿಲ್ಪಗಳನ್ನು ಇಡಲಾಗಿದೆ. ಅನೇಕ ಹೊಸ ಮಾರ್ಪಟುಗಳಿಗೆ ಸಭಾಮಂಟಪ ಒಳಗಾಗಿದೆ.

ವಿಶಾಲವಾದ ಹಾಗೂ ಎತ್ತರವಾದ ಪ್ರಾಕಾರ ಗೋಡೆಯನ್ನು ಹೊಂದಿರುವ ಈ ದೇವಾಲಯ ಪಶ್ಚಿಮ, ದಕ್ಷಿಣ ಹಾಗೂ ಉತ್ತರಾಭಿಮುಖವಾಗಿರುವ ಮೂರು ಪ್ರವೇಶ ದ್ವಾರಗಳನ್ನು ಹೊಂದಿದೆ. ಉತ್ತರದ ಪ್ರವೇಶದ್ವಾರವನ್ನು ಸೋಮವಾರದ ಬಾಗಿಲೆಂದು ಕರೆಯುವ ರೂಢಿಯಿದೆ. ಪ್ರವೇಶದ್ವಾರವನ್ನು ಸೋಮವಾರದ ಬಾಗಿಲೆಂದು ಕರೆಯುವ ರೂಢಿಯಿದೆ. ಪ್ರವೇಶದ್ವಾರಗಳಿಗೆ ಗೋಪುರಗಳಿದ್ದು, ಉತ್ತರ-ದಕ್ಷಿಣದ ಪ್ರವೇಶದ್ವಾರ ಗೋಪುರಗಳ ಚಿಕ್ಕವುಗಳಾಗಿವೆ. ಆದರೆ ಪಶ್ಚಿಮಾಭಿಮುಖವಾದ ದ್ವಾರಗೋಪುರ ಎತ್ತರವಾಗಿದ್ದು ಐದು ತಲಗಳನ್ನು ಹೊಂದಿದೆ. ಗಾರೆ, ಇಟ್ಟಿಗೆಗಳಿಮದ ನಿರ್ಮಾಣವಾದ ಈ ಗೋಪುರವು ವಿಜಯನಗರ ಮಾದರಿಯನ್ನು ನೆನಪಿಸುವಂತಿದೆ. ಪ್ರಾಕಾರದಲ್ಲಿ ಅನೇಕ ಚಿಕ್ಕ ಮಂಟಪಗಳಲ್ಲಿ ರಚಿಸಲಾಗಿದೆ. ದೇವಾಲಯದ ಒಳಾಂಗಣದಲ್ಲಿ ಹಾಗೂ ಹೊರಾಂಗಣದಲ್ಲಿ ಅನೇಕ ಬಿಡಿಶಿಲ್ಪಿಗಳನ್ನು ಇಡಲಾಗಿದೆ. ಕುರುಗೋಡಿನ ಪಟ್ಟಣ ಪರಿಸರದಲ್ಲಿ ಸಿಗುವ ಶಿಲ್ಪಾವಶೇಷಗಳನ್ನು ಈ ಗುಡಿಯ ಆವರಣದಲ್ಲಿಡುವ ಸ್ತುತ್ಯರ್ಹ ಕಾರ್ಯವನ್ನು ಗ್ರಾಮದ ಜನತೆ ರೂಢಿಸಿಕೊಂಡಿದ್ದಾರೆ. ದೇವಾಲಯದ ಹೊರಭಿತ್ತಿಯಲ್ಲಿ ಅನೇಕ ಉಬ್ಬುಶಿಲ್ಪಗಳಿವೆ. ಉದಾ : ಗಣೇಶ, ವೀರಭದ್ರ, ಶೇಷಶಯನ, ಕಾಳಿಮರ್ದನ ಇಂತ ಉಬ್ಬುಶಿಲ್ಪಗಳು ಒಳಭಾಗದ ಗೋಡೆಯಲ್ಲಿಯೂ ಸಹ ಇವೆ. ಬಹುಜನರ ಆರಾಧ್ಯ ದೈವವಾದ ದೊಡ್ಡ ಬಸವೇಶ್ವರ ದೇವರ ರಥೋತ್ಸವ ಪ್ರತಿವರ್ಷ ಫಾಲ್ಗುಣ ಶುದ್ಧ ಹುಣ್ಣಿಮೆಯಂದು ಜರುಗುತ್ತದೆ.

ಕ್ರಿ.ಶ. ೧೫೨೮ರ ಕಾಲಾವಧಿಯ ಶಾಸನವು[4] ಉಲ್ಲೇಖಿಸುವಂತೆ ಶ್ರೀಕೃಷ್ಣದೇವರಾಯನಿಗೆ ಪುಣ್ಯವಾಗಲೆಂದು ಬಾಗಿಲಕೃಷ್ಣಪ್ಪ ನಾಯಕನೆಂಬುವ ದೊಡ್ಡ ಬಸವಣ್ಣನ ಅಮೃತಪಡಿಗೆ ಭೂಮಿಯನ್ನು ದಾನವಾಗಿ ಬಿಟ್ಟಿರುವ ವಿಷಯವಿದೆ. ಹಂಪೆಯ ಪಂಪಾಪತಿಯು (ವಿರೂಪಾಕ್ಷ) ವಿಜಯನಗರ ಪಟ್ಟಣದ ದೈವಮಾತ್ರವಾಗಿರದೇ ಇಡೀ ವಿಜಯನಗರ ಸಾಮ್ರಾಜ್ಯದ ಅಧಿದೈವವಾಗಿತ್ತು ಎಂಬುದು ಅನೇಕ ಮಾಹಿತಿಗಳಿಂದ ತಿಳಿದುಬರುವ ಸಂಗತಿ. ಆದುದರಿಂದಲೇ ಕುರುಗೋಡಿನ ದೊಡ್ಡ ಬಸವೇಶ್ವರನ ದೇವಾಲಯದಲ್ಲಿನ ಬೃಹದಾಕಾರದ ನಂದಿ ವಿಗ್ರಹವನ್ನು ಹಂಪೆಯ ವಿರೂಪಾಕ್ಷನ ಎದುರಾಗಿ ಅಂದರೆ ಪಶ್ಚಿಮಾಭಿಮುಖವಾಗಿ ಪ್ರತಿಷ್ಠಾಪಿಸಿದ್ದಾರೆ. ಈ ಕಾರಣಕ್ಕಾಗಿ ಇಲ್ಲಿಯ ಬಸವಣ್ಣನನ್ನು ಎದುರು ಬಸವನೆಂದು ಸಹ ಕರೆಯುವ ವಾಡಿಕೆಯಿದೆ. ಬಸವೇಶ್ವರ ದೇವಾಲಯದ ಹಿಂಭಾಗ ಹಾಗೂ ಪಶ್ಚಿಮ ದ್ವಾರದ ಮುಂಭಾಗದಲ್ಲಿ ಹೀಗೆ ಎರಡು ದೀಪಸ್ತಂಭಗಳನ್ನು ನಿಲ್ಲಿಸಿದ್ದಾರೆ. ದೊಡ್ಡ ಬಸವೇಶ್ವರ ದೇವಾಲಯದಲ್ಲಿನ ಲಿಂಗದ ಎದುರಾಗಿ (ಪಶ್ಚಿಮದ್ವಾರದ ಮುಂಭಾಗ) ಒಂದು ದೀಪಸ್ತಂಭವಾದರೆ, ಇದೇ ಗುಡಿಯ ಹಿಂಭಾಗದಲ್ಲಿರುವ ದೀಪಸ್ತಂಭವು ಹಂಪೆಯ ವಿರೂಪಾಕ್ಷ ದೇವಾಲಯದ ಎದುರಿನ ದೀಪಸ್ತಂಭವಾಗಿ ಪರಿಗಣಿತವಾಗುತ್ತದೆ.

ಈ ದೇವಾಲಯದ ನಿರ್ಮಾಣ ಕಲ್ಯಾಣದ ಚಾಲುಕ್ಯರ ಆಳ್ವಿಕೆಯ ಉತ್ತರಾರ್ಧ ಕಾಲಾವಧಿಯಲ್ಲಿ ಆರಂಭವಾಯಿತೆಂದುಸ ಅಭಿಪ್ರಾಯಿಸಿದ್ದಾರೆ.[5] ಆದರೆ ದೇವಾಲಯದ ರಚನಾಶೈಲಿಯನ್ನು ಗಮನಿಸಿದಾಗ ಇದೊಂದು ವಿಜಯನಗರದ (೧೫-೧೬ನೇ ಶತಮಾನ) ಕಾಲದ ರಚನೆಯೆಂದೇ ಸ್ಪಷ್ಟವಾಗಿ ತಿಳಿಯಬಹುದು. ಸಂಗಮರು ವಿಜಯನಗರ ರಾಜ್ಯ ಪ್ರಾರಂಭಿಸುವುದಕ್ಕಿಂತ ಮೊದಲಿಂದಲೂ ಕುರುಗೋಡಿನ ಅರಸರ ಅನ್ಯೋನ್ಯ ಸಂಬಂಧ ಹಂಪೆಯೊಂದಿಗೆ ಇರುವುದನ್ನು ಈ ಹಿಂದೆ ಚರ್ಚಿಸಲಾಗಿದೆ. ಕುರುಗೋಡಿನ ಅರಸರು ಹಂಪೆಯಲ್ಲಿ ದೇವಾಲಯ ಕಟ್ಟಿರುವ ನಿದರ್ಶನಗಳು ಹಾಗೂ ವಿಜಯನಗರದ ಅರಸರು ಕುರುಗೋಡಿನಲ್ಲಿ ಅನೇಕ ದಾನ-ದತ್ತಿಗಳನ್ನು ನೀಡಿರುವ ಉಲ್ಲೇಖಗಳಿವೆ. ಅಂಥ ನಿರಂತರ ಪ್ರಕ್ರಿಯೆಗಳು ವಿಜಯನಗರ ಸಾಮ್ರಾಜ್ಯ ಪತನದವರೆಗೂ ಮುಂದುವರೆದಿವೆ.

**ಮೂರ್ತಿಶಿಲ್ಪ**

ವಾಸ್ತುಶಿಲ್ಪ (ದೇವಾಲಯ)ಗಳಂತೆ ಮೂರ್ತಿಶಿಲ್ಪವು ಪ್ರತ್ಯೇಕ ಅಧ್ಯಯನದ ವಸ್ತುವೇ ಆಗಿದೆ. ಆದರೆ ಸಾಮಾನ್ಯವಾಗಿ ಮೂರ್ತಿಶಿಲ್ಪಗಳನ್ನು ದೇವಾಲಯಗಳ ಭಾಗವಾಗಿಯೇ ಕಾಣುತ್ತಾರೆ. ಐತಿಹಾಸಿಕವಾಗಿ ಹಾಗೂ ಕಲೆಯ ದೃಷ್ಟಿಯಿಂದ ಕುರುಗೋಡಿನ ದೇವಾಲಯಗಳು ಕರ್ನಾಟಕ ಕಲಾಪರಂಪರೆಗೆ ಹೊಸ ಹೊಳಹುಗಳನ್ನು ನೀಡುವ ಕಲಾಕೃತಿಗಳಾಗಿ, ಇಲ್ಲಿರುವ ಮೂರ್ತಿಶಿಲ್ಪಗಳನ್ನು ಅಧ್ಯಯನದ ಚೌಕಟ್ಟಿಗೆ ಒಳಪಡಿಸಿದಾಗ ಅಂಥ ಮಹತ್ವದ ರಚನಾಕೃತಿಗಳಲ್ಲೆಂಬ ಅಭಿಪ್ರಾಯಕ್ಕೆ ಬರಬಹುದು. ಸ್ಥಳೀಯವಾಗಿ ಸಿಗುವ ಕಣಶಿಲೆಯಲ್ಲಿ ಇಲ್ಲಿನ ಮೂರ್ತಿಶಿಲ್ಪಗಳು ಮೊದಲ ನೋಟದಲ್ಲಿ ಕಣ್ಮನ ಸೆಳೆಯುವಲ್ಲಿ ಸೋಲುತ್ತವೆ. ಕುರುಗೋಡು ಪಟ್ಟಣದಲ್ಲಿ ಪ್ರತ್ಯೇಕ ಬಿಡಿಶಿಲ್ಪಗಳು ತುಂಬಾ ವಿರಳ. ದೇವಾಲಯದಲ್ಲಿರುವ ಬಿಡಿಶಿಲ್ಪ ಹಾಗೂ ಉಬ್ಬುಶಿಲ್ಪಗಳನ್ನೇ, ಮೂರ್ತಿಶಿಲ್ಪ ಅಧ್ಯಯನದಲ್ಲಿ ಪರಿಗಣಿಸ ಬೇಕಾಗುತ್ತದೆ. ದೊಡ್ಡ ಬಸವೇಶ್ವರ, ಹಿಂದುಲಿ ಸಂಗಮೇಶ್ವರ ದೇವಾಲಯದ ಮುಂಭಾಗದಲ್ಲಿರುವ ಶಿಲ್ಪಗಳು, ದೊಡ್ಡಬಸವೇಶ್ವರ ದೇವಾಲಯದ ಆವರಣದಲ್ಲಿರುವ ಬಿಡಿಶಿಲ್ಪಗಳು, ಇಲ್ಲಿನ ದೇವಾಲಯಗಳಲ್ಲಿರುವ ದ್ವಾರಶಿಲ್ಪಗಳು ಹಾಗೂ ನೀಲಮ್ಮನ ಮಠದ ಕೈಪಿಡಿ ಗೋಡೆಯಲ್ಲಿರುವ ಶಿಲ್ಪಗಳು ಕುರುಗೋಡು ಪಟ್ಟಣದಲ್ಲಿರುವ ಪ್ರಮುಖ ಶಿಲ್ಪಗಳಾಗಿವೆ.

**ನಂದಿ**

ಇಲ್ಲಿರುವ ದೊಡ್ಡಬಸವೇಶ್ವರ ದೇವಾಲಯದಲ್ಲಿರುವ ನಂದಿವಿಗ್ರಹವು ಬೃಹದಾಕಾರದ್ದಾಗಿದೆ. ಸಾಮಾನ್ಯವಾಗಿ ನಂದಿವಿಗ್ರಹವನ್ನು ಬಸವ, ಬಸವಣ್ಣ ಹಾಗೂ ಬಸವೇಶ್ವರನೆಂದು ಸಂಬೋಧಿಸಲಾಗುತ್ತದೆ. ಈ ಕಾರಣದಿಂದಲೇ ಏನೋ ಈ ದೇವಾಲಯವನ್ನು 'ದೊಡ್ಡಬಸವೇಶ್ವರ' ದೇವಾಲಯವೆಂದು ಕರೆದಿರಬಹುದು. ಈ ವಿಗ್ರಹವು ಪಶ್ಚಿಮಾಭಿಮುಖವಾಗಿದ್ದು ಇದನ್ನು ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿರುವ ಲಿಂಗಕ್ಕೆ ಎದುರಾಗಿ ಪ್ರತಿಷ್ಠಾಪಿಸಲಾಗಿದೆ ಎಂಬ ಪ್ರತೀತಿ ಇದೆ. ಸೋಜಿಗವೆಂದರೆ ಬೃಹದಾಕಾರದ ಈ ವಿಗ್ರಹಕ್ಕೆ ಅತ್ಯಂತ ಕಿರಿದಾದ ಕೋಡುಗಳಿವೆ. ಈ ವಿಗ್ರಹಕ್ಕಿರುವ ಕಿರಿದಾದ ಕೋಡುಗಳಿಂದಲೇ ಪಟ್ಟಣಕ್ಕೆ 'ಕುರುಗೋಡು' ಎಂಬ ಹೆಸರು ಬಂದಿದೆ ಎಂಬ ವಿಚಾರ ಮೌಖಿಕ ಇತಿಹಾಸದಿಂದ ತಿಳಿದುಬರುತ್ತದೆ. ದೊಡ್ಡದಾದ ನಂದಿಶಿಲ್ಪವನ್ನು ಕಣಶಿಲೆಯಲ್ಲಿ ಕಂಡರಿಸಲಾಗಿದ್ದು ಇದು ನಿರಾಲಂಕರಣೆಯ ರಚನೆ.

**ಉಮಾಮಹೇಶ್ವರ**

ಕಲಾದೃಷ್ಟಿಯಿಂದ ಪರಿಗಣಿಸುವುದಾದರೆ ಉಮಾಮಹೇಶ್ವರ ಶಿಲ್ಪವು ಉತ್ಕೃಷ್ಟ ಕಲಾಕೃತಿ. ಇದನ್ನು ಕಪ್ಪು ಮಿಶ್ರಿತ ಬಳಪದ ಕಲ್ಲಿನಲ್ಲಿ ಕಂಡರಿಸಲಾಗಿದೆ. ಬಿಲ್ಲು ಬಾಣ ಆಯುಧ ಧಾರಿಯಾದ ಶಿವನು ಕಿರೀಟ ಧರಿಸಿದ್ದಾನೆ. ಕೊರಳಲ್ಲಿ ಹಾರ ಮತ್ತು ಸೊಂಟದಲ್ಲಿ ಕಟಿಬಂಧಗಳಿವೆ. ಮಹೇಶ್ವರನ ಜೊತೆಗಿರುವ ಉಮೆಯನ್ನು ಅಲಂಕರಣೆಗೊಳಿಸಿದ್ದಾರೆ. ಈ ಸುಂದರ ಮೂರ್ತಿಶಿಲ್ಪವು ಕುರುಗೋಡು - ಕಂಪ್ಲಿ ರಸ್ತೆಯಲ್ಲಿರುವ ಕೆರೆಯ ದಂಡೆಯ ಮೇಲಿದೆ.

**ಇತರೆ ಶಿಲ್ಪಗಳು**

ಹಿಂಡುಲಿ ಸಂಗಮೇಶ್ವರ ದೇವಾಲಯದ ಮುಂಭಾಗದಲ್ಲಿರುವ ಕಟಾಂಗಧಾರಿ ಶಿವನ ಶಿಲ್ಪವು ತೃಟಿತವಾಗಿದೆ. ಸುಂದರವಾದ ಶಿಲ್ಪವು ಕಿರೀಟ ಹೊಂದಿದ್ದು, ಹಾರ ಹಾಗೂ ಕಟಿಬಂಧಗಳಿಂದ ಅಲಂಕರಣೆಗೊಂಡಿದೆ. ಸುಮಾರು ನಾಲ್ಕುವರೆ ಅಡಿ ಎತ್ತರದ ಈ ಶಿಲ್ಪವು ಚಕ್ರ ಗಧೆಯನ್ನು ಹೊಂದಿದೆ. ಇದರ ಬಗೆಗೆ ಹೆಚ್ಚಿನ ಅಧ್ಯಯನಗಳಾಗಬೇಕಾಗಿರುವುದು ಅವಶ್ಯಕ. ಇದಕ್ಕೆ ಸುಣ್ಣ ಬಳಿಯಲಾಗಿದೆ. ಚನ್ನಕೇಶವ ಹಾಗೂ ದೊಡ್ಡಬಸವೇಶ್ವರ ದೇವಾಲಯದ ಹೊರಗೋಡೆಗಳಲ್ಲಿ ಕೆಲವು ಉಬ್ಬುಶಿಲ್ಪಗಳಿವೆ. ಕುರುಗೋಡು ಪಟ್ಟಣದಲ್ಲಿರುವ ಕೆಲವು ಬಿಡಿ ಶಿಲ್ಪಗಳನ್ನು ಹಂಪಿ, ಕನ್ನಡ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯದಲ್ಲಿಯೂ ಸಹ ಇಡಲಾಗಿದೆ. ಉಳಿದಂತೆ ಸಪ್ತಮಾತೃಕೆಯಿಂದ ಶಿಲ್ಪ, ಗಣೇಶ, ಮಹಿಷಮರ್ದಿನಿಯ ಶಿಲ್ಪಗಳಲ್ಲದೇ ಅನೇಕ ಉಬ್ಬುಶಿಲ್ಪಗಳನ್ನು ಇಲ್ಲಿನ ಹಲವು ದೇವಾಲಯಗಳಲ್ಲಿ ಅನೇಕ ಬಿಡಿ ಶಿಲ್ಪಗಳನ್ನು ಇಡಲಾಗಿದೆ. ಉದಾಹರಣೆಗೆ ವೀರಭದ್ರ, ಬ್ರಹ್ಮ, ನರಸಿಂಹ, ಉಮಾಮಹೇಶ್ವರ, ನಂದಿ, ಭೃಂಗಿ, ಮೇಷ ತಲೆಯ ಶಿಲ್ಪ (ದಕ್ಷ) ಕಾಳಿಮರ್ಧನ, ಶೇಷಶಯನ ಮುಂತಾದ ಶಿಲ್ಪಗಳನ್ನು ಕುರುಗೋಡು ಪಟ್ಟಣದಲ್ಲಿ ಕಾಣಬಹುದು.

**ಉಪಸಂಹಾರ**

ನಿರ್ಣಾಯಕ ಯುದ್ಧಗಳಿಂದ ಕುರುಗೋಡು ಸಿಂದರನ್ನು ಚರಿತ್ರೆಯಲ್ಲಿ ಗುರುತಿಸದಿದ್ದರೂ ಅವರು ಮಾಡಿರುವ ಸಾಂಸ್ಕೃತಿಕ ಸಾಧನೆಗಳಿಂದ ಎಂದೂ ಮರೆಯದ ಸಾಧಕರಾಗಿ ಪ್ರತಿಬಿಂಬಿತವಾಗಿದ್ದಾರೆ. ಆಯಕಟ್ಟಿನ ಸ್ಥಳವಾದ ಕುರುಗೋಡನ್ನು ಬಲ್ಲಕುಂದೆಯ ಆಡಳಿತ ವಿಭಾಗದ ರಾಜಧಾನಿ ಪಟ್ಟಣವನ್ನಾಗಿ ನಿರ್ಮಿಸಿ ಬೆಳೆಸಿದರು. ೧೨ನೇ ಶತಮಾನದ ಕನ್ನಡ ನಾಡಿನ ರಾಜಕೀಯ ಪರಿಸ್ಥಿತಿಯಲ್ಲಿ ಎಲ್ಲ ಅರಸರ ಸ್ಥಿತಿ ಚದುರಂಗಾಟದಲ್ಲಿನ ಕಾಯಿಗಳಂತೆ ಸದಾ ಬದಲಾವಣೆಗೊಳಗಾಗುತ್ತಿತ್ತು. ಇಂಥ ಸಂದಿಗ್ದತೆಯಲ್ಲಿ ತಮ್ಮ ಚಾಣಾಕ್ಷ ರಾಜನೀತಿಗಳಿಂದಾಗಿ ಸ್ಥಿರತೆಯನ್ನು ಕಾಪಾಡಿಕೊಂಡು ಒಂದು ಶತಮಾನಗಳ ಕಾಲ ಸುಭದ್ರ ರಾಜ್ಯಭಾರ ಮಾಡಿದರು. ಬಲಾಢ್ಯ ಸಾಮ್ರಾಟರಿಗೆ ನಿಷ್ಠೆಯನ್ನು ಬದಲಾಯಿಸುತ್ತ ತಮ್ಮ ಅಸ್ತಿತ್ವವನ್ನು ಯಾವಾಗಲೂ ಕಾಯ್ದುಕೊಂಡರು. ಆದ್ದರಿಂದಲೇ ಕುರುಗೋಡು ಪಟ್ಟಣ ಒಂದರಲ್ಲಿಯೇ ಇಪ್ಪತ್ತಕ್ಕಿಂತ ಹೆಚ್ಚಿನ ದೇವಾಲಯಗಳನ್ನು ಕಟ್ಟಲು ಸಾಧ್ಯವಾಯಿತು. ಇಲ್ಲಿರುವ ಕಲ್ಲೇಶ್ವರ, ತ್ರಿಕೂಟಾಲಯ, ಹಿಂಡುಲಿಸಂಗಮೇಶ್ವರ, ಉಜಾಳೇಶ್ವರ, ರಾಚಮಲ್ಲೇಶ್ವರ ಹಾಗೂ ದೊಡ್ಡಬಸವೇಶ್ವರ ದೇವಾಲಯಗಳು ಕಲಾತ್ಮಕ ಪ್ರಯೋಗಗಳಿಗೆ ಕೈಗನ್ನಡಿ ಆಗಿವೆ. ಮುಖ್ಯವಾಗಿ ಇಲ್ಲಿನ ದೇವಾಲಯಗಳು ಕನ್ನಡ ನಾಡಿನ ಪ್ರಾಚೀನ ಕಲಾ ಇತಿಹಾಸದಲ್ಲಿ ಅಲ್ಲಲ್ಲಿ ಕಳಚಿಹೋಗಿರುವ ಕೊಂಡಿಗಳನ್ನು ಮತ್ತೆ ಮರುಜೋಡಿಸುವಲ್ಲಿ ಸಹಾಯಕಾರಿಯಾಗಿವೆ. ಉದಾಹರಣೆಗೆ ಕಲ್ಯಾನದ ಚಾಲುಕ್ಯರ ಹಾಗೂ ವಿಜಯನಗರದ ಕಲಾಶೈಲಿಗಳ ಮಧ್ಯವರ್ತಿಗಳಾಗಿ ಇಲ್ಲಿನ ಕಲಾರಚನೆಗಳು ನಿಶ್ಚಿತವಾದ ಪಾತ್ರವಹಿಸುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಕುರುಗೋಡಿನಲ್ಲಿರುವ ದೇವಾಲಯಗಳ ಅಧ್ಯಯನದ ಸಂದರ್ಭದಲ್ಲಿ ಎದುರಾಗುವ ಪ್ರಮುಖ ಸಮಸ್ಯೆಲೆಂದರೆ, ಅವುಗಳ ನಿರ್ಮಾಣದ ಕಾಲ ಹಾಗೂ ಕರ್ತೃವಿನ ಬಗೆಗೆ. ಇಲ್ಲಿರುವ ಬಹುತೇಕ ದೇವಾಲಯಗಳ ಬಗ್ಗೆ ಅಸ್ಪಷ್ಟವಾದ ಮಾಹಿತಿಗಳಿರುವುದರಿಂದ ನಿರ್ದಿಷ್ಟವಾದ ಅಭಿಪ್ರಾಯಗಳು ರೂಪಿತವಾಗುವಲ್ಲಿ ಹೆಚ್ಚಿನ ತೊಡಕಾಗಿದೆ. ೧೩ನೇ ಶತಮಾನದ ನಂತರ ಕುರುಗೋಡು ಸಿಂದರ ಆಡಳಿತದ ಬಗೆಗೆ ಸ್ಪಷ್ಟ ಮಾಹಿತಿಗಳಿಲ್ಲ. ಲಭ್ಯವಿರುವ ಮಾಹಿತಿಗಳ ಮರುಶೋಧದಿಂದ ಮಾತ್ರ ಕುರುಗೋಡು ಸಿಂದರ ಬಗೆಗೆ ಕಳಚಿಹೋದ ಕೊಂಡಿಯನ್ನು ಇತಿಹಾಸದಲ್ಲಿ ಮತ್ತೆ ಜೋಡಿಸಬಹುದಾಗಿದೆ.

[1] ಅದೇ... ಶಾಸನ ಸಂಖ್ಯೆ-೧೫

[2] ಅದೇ.... ಶಾಸನ ಸಂಖ್ಯೆ

[3] ಹನುಮಂತರೆಡ್ಡಿ ವೈ., ಪೂರ್ವೋಕ್ತ, ಪುಟ ೭೭

[4] ಅದೇ ಪುಟ ೭೯

[5] ಕ.ವಿ.ವಿ. ಶಾಸನ ಸಂಪುಟ-೧, ಕುರುಗೋಡು, ಬಳ್ಳಾರಿ (ತಾ) ಶಾಸನ ಸಂಖ್ಯೆ-೯

# ೬. ರಕ್ಷಣಾ ವಾಸ್ತು

ಕುರುಗೋಡು ಬಳ್ಳಾರಿ ತಾಲೂಕಿಗೆ ಸೇರಿದ ಪಟ್ಟಣ ಪ್ರದೇಶ. ಇದು ಜಿಲ್ಲಾ ಕೇಂದ್ರದಿಂದ ವಾಯುವ್ಯ ದಿಕ್ಕಿಗೆ ೨೮ ಕಿ.ಮೀ. ದೂರದಲ್ಲಿದೆ. ಈ ಪಟ್ಟಣವು ಐತಿಹಾಸಿಕವಾಗಿ ಬಹಳ ಮಹತ್ವದ್ದಾಗಿದೆ. ಪ್ರಾಗಿತಿಹಾಸ ಕಾಲದ ರೇಖಾಚಿತ್ರಗಳು ಇಲ್ಲಿವೆ. ಕುರುಗೋಡು ತಾಮ್ರಶಿಲಾಯುಗ ಕಾಲಕ್ಕೆ ಸೇರಿದೆ ಎಂದು ಅ. ಸುಂದರರವರು[1] ಅಭಿಪ್ರಾಯ ಪಟ್ಟಿರುವರು. ಇತಿಹಾಸಯುಗದಲ್ಲಿ ಕ್ರಿ.ಶ. ೨-೩ನೇ ಶತಮಾನಕ್ಕೆ ಸೇರಬಹುದಾದ ಕುರುಗೋಡು ಮತ್ತು ಹಂಪೆ ಶಾಸನಗಳು ಹೆಚ್ಚು ತ್ರುಟಿತಗೊಂಡಿರುವುದರಿಂದ ಹೆಚ್ಚಿನ ಅಂಶಗಳು ತಿಳಿಯದಿದ್ದರೂ ಈ ಪ್ರದೇಶ ಶಾತವಾಹನರ ಆಳ್ವಿಕೆಗೆ ಒಳಪಟ್ಟು ಶಾತವಾನಿಹಾರ[2] ಎಂದು ಕರೆಸಿಕೊಂಡಿದ್ದು, ಶಾಸನಗಳಿಂದ ವೇದ್ಯವಾಗುತ್ತದೆ. ಅಲ್ಲದೆ ಬಾದಾಮಿ ಚಾಲುಕ್ಯರ ಆಡಳಿತ ವ್ಯಾಪ್ತಿಯಲ್ಲಿದ್ದು[3] ನಂತರ ಕಲ್ಯಾಣ ಚಾಳುಕ್ಯರ ಸಾಮಂತರಾದ ಕುರುಗೋಡು ಸಿಂದರು ಇದನ್ನೆ ರಾಜಧಾನಿ ಮಾಡಿಕೊಂಡು ಆಡಳಿತ ನಡೆಸಿದರು.[4] ಆಗ ನೊಳಂಬವಾಡಿ-೩೨೦೦೦, ಕದಂಬಳಿಗೆ-೧೦೦೦, ಕೋಗಳಿ-೫೦೦, ಬಲ್ಲಕುಂದೆ-೩೦೦ ಇವು ಆಡಳಿತ ಕೇಂದ್ರ ಭಾಗಗಳು.[5] ಇವುಗಳಲ್ಲಿ ಬಲ್ಲಕುಂದೆ-೩೦೦ಕ್ಕೆ ಕುರುಗೋಡು ರಾಜಧಾನಿಯಾಗಿದ್ದಿತು. ಈ ರಾಜಧಾನಿ ಪಟ್ಟಣವು ವಿಸ್ತೃತವಾಗಿ ಬೆಳೆಯಿತು. ಬೆಳೆದ ಪಟ್ಟಣ ಹಾಗೂ ರಾಜಧಾನಿಯ ರಕ್ಷಣೆಗಾಗಿ ಸಿಂದರು ಕೋಟೆ ಕಟ್ಟಿಕೊಂಡರು. ವಿಜನಯಗರದ ಅವಧಿಯಲ್ಲಿ ಕುರುಗೋಡು ಸೀಮೆಯಾಗಿ[6] ಮಾರ್ಪಟ್ಟಿತು. ಕುರುಗೋಡು ಸೀಮೆಯ ಕೋಟೆಯನ್ನು ವಿಜಯನಗರದವರು ಭದ್ರ ಪಡಿಸಿದಂತೆ ಶಾಸನಗಳು ಹೇಳುತ್ತವೆ. ಹಂಡೆಯ ಪಾಳೆಯಗಾರರು ಈ ಆಯಾಕಟ್ಟಿನ ಕುರುಗೋಡು ಕೋಟೆಯಲ್ಲಿಯೇ ಆಶ್ರಯಪಡೆದು ಕೆಲವು ಕಾಲ ಆಡಳಿತ ನಡೆಸಿದರು. ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಕ್ರಮವಾಗಿ ಇದನ್ನು ವಶಕ್ಕೆ ತೆಗೆದುಕೊಂಡರು. ಹೈದರಾಲಿ ಕುರುಗೋಡು ಬೆಟ್ಟದ ಮೇಲಿನ ಕೋಟೆಯನ್ನು ದುರಸ್ಥಿ ಮಾಡಿಸಿ ಆಂಜನೇಯ ದೇವಾಲಯವನ್ನು ನಿರ್ಮಿಸಿದಂತೆ[7]ಕಂಡುಬರುತ್ತದೆ.

ಕುರುಗೋಡಿನ ಸ್ಥಳನಾಮದ ಅಧ್ಯಯನದ ಮೂಲಕ ಆಯಾ ಕಾಲದ ಜನರ ಮನೋಧರ್ಮ, ಜನಜೀವನದ ಸಾಂಸ್ಕೃತಿಕ ವಿಕಾಸ, ಈ ಪ್ರದೇಶದ ಭಾಷಾ ಇತಿಮಿತಿಯನ್ನು ಸಾದರಪಡಿಸಬಹುದಾಗಿದೆ. ಆದ್ದರಿಂದ ಮುಂದುವರಿದ ರಾಷ್ಟ್ರಗಳಲ್ಲಿ ಚರಿತ್ರೆ ಹಾಗೂ ಕೋಶವನ್ನು ಅತ್ಯಂತ ವೈಜ್ಞಾನಿಕವಾಗಿ ಪುನರ್ ನಿರ್ಮಿಸುವಾಗ ಸ್ಥಳನಾಮಗಳನ್ನು ಮುಖ್ಯ ಆಧಾರವನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕುರುಗೋಡು ಸ್ಥಳನಾಮವನ್ನು ಚರ್ಚಿಸಲಾಗಿದೆ. ಕು ಱು- ಇದು ದ್ರಾವಿಡ ಮೂಲದಿಂದ ಬಂದ ಪದವಾಗಿದೆ. 'ಕುರು' ಎಂದರೆ ಚಿಕ್ಕ, ಹುಣ್ಣು, ವಂಶ, ಪ್ರದೇಶ ಎಂಬಿತ್ಯಾದಿ ಅರ್ಥಗಳಿವೆ. ಇದಕ್ಕೆ ಸಂಸ್ಕೃತದಲ್ಲಿ ಆರಂಭವೆಂತಲೂ ಹೇಳಿದೆ. ಕೋಡ : ದ್ರಾವಿಡ ಭಾಷೆಗಳಿಗೆಲ್ಲ ಸಮಾನವಾದ ಈ ಸ್ಥಳನಾಮ ವಾಚಕವು ಶಿಖರ, ಬೆಟ್ಟದ ತುದಿ ಎಂಬ ಅರ್ಥವನ್ನು ಸೂಚಿಸುತ್ತದೆ. ತಮಿಳಿನಲ್ಲಿ ಕೋಟೆ, ತುಳುವಿನಲ್ಲಿ ಕೋಡಿ ಜ್ಞಾತಿ ಪದಗಳು ಈ ಅರ್ಥದಲ್ಲಿವೆ. ತಮಿಳಿನ ಕೋಟಿ ಕನ್ನಡ ಕೋಡು ಎಂಬ ಪದಗಳು ತೊರೆ, ಹೊಳೆ, ಶಾಖೆ, ಕೋಡು ಎಂಬ ಅರ್ಥವನ್ನು ನೀಡುತ್ತದೆ.

ಕುರುಗೋಡು ಸ್ಥಳನಾಮವನ್ನು ಚರ್ಚಿಸುತ್ತಾ ಚನ್ನಬಸವಯ್ಯ ಹಿರೇಮಠರು ಚಿಕ್ಕ ಶಿಖರವೆಂದು ಅರ್ಥೈಸಿದ್ದಾರೆ.[8]

ಕ್ರಿ.ಶ. ೧೨ನೇ ಶತಮಾನದ ಶಾಸನದಲ್ಲಿ ಕುಱುಗೋಡು[9] ಕುರುಗೋಡು ಎಂದು ಕರೆಯಿಸಿಕೊಂಡಿರುವುದರಿಂದ ಸಿಂದರು ಆಳ್ವಿಕೆ ಮಾಡುವಾಗ ಈ ಪ್ರದೇಶದಲ್ಲಿ ಸಿಂದರ ಒಂದು ಶಾಖೆ ಇದ್ದಿರಬೇಕು. ಹಾಗಾಗಿಯೇ ಇವರನ್ನು ಕುರುಗೋಡು ಸಿಂದರು ಎಂದಿರುವರು. ಕ್ರಿ.ಶ. ೧೨ನೇ ಶತಮಾನಕ್ಕಿಂತ ಮೊದಲಿನ ಶಾಸನಗಳು ಕುರುಗೋಡನ್ನು 'ಕುಱುಂಗೋಡು' ಎಂದಿವೆ.[10]

ಕೋಟೆ ಅಥವಾ ರಕ್ಷಾವರಣ ಎಂದರೆ ಆವರಣವುಳ್ಳ ಪ್ರದೇಶ ಎಂದರ್ಥ. ಕೋಟೆಗೆ ಸಂಸ್ಕೃತದಲ್ಲಿ ದುರ್ಗ ಎಂದು ಅರ್ಥವಿದೆ. ಕೋಟೆಗೆ ಪುರ, ಪ್ರಾಕಾರ, ಕಿಲ್ಲೆ ಎಂಬ ಅನ್ವರ್ಥಗಳು ಇವೆ. ಸೈನಿಕರುಗಳಿಂದ ಆವರಿಸಲ್ಪಟ್ಟ ಅಥವಾ ರಕ್ಷಿತವಾದ ಮತ್ತು ರಕ್ಷಣೆಗೆ ಮುಡುಪಾಗಿರುವ ಗಟ್ಟಿಯಾದ ಸ್ಥಳವೇ ಕೋಟೆ ಎನಿಸಿಕೊಳ್ಳುತ್ತದೆ. ಪ್ರಾಚೀನ ಗ್ರಂಥ : ಋಗ್ವೇದದಲ್ಲಿ 'ಪುರ'ಗಳ ಉಲ್ಲೇಖ, ಪಾಂಡವರ ಇಂದ್ರಪ್ರಸ್ಥನಗರದ ಕೋಟೆ ಇವು ಕೋಟೆಯ ಪ್ರಾಚೀನತೆಯನ್ನು ತಿಳಿಸುತ್ತವೆ.

ಪ್ರಾಗಿತಿಹಾಸಕಾಲದ ಜನಸಂಸ್ಕೃತಿಯನ್ನು ಗಮನಿಸಿದರೆ ಹಲವು ಪ್ರಮುಖ ಅಂಶಗಳು ಕಂಡುಬರುತ್ತವೆ. ಈ ಅವಧಿಯಲ್ಲಿ ಮಾನವನು ಬೇಟೆಯಾಡುತ್ತಾ ಆಹಾರ ಸಂಗ್ರಹಿಸುತ್ತ ಜೀವನ ನಡೆಸುತ್ತಿದ್ದನು. ಆತನು ನಿರಂತರವಾಗಿ ಪ್ರಕೃತಿಯೊಡನೆ ಸೆಣಸಬೇಕಾಗಿತ್ತು. ಮಳೆ, ಗುಡುಗು, ಸಿಡಿಲು, ಕಾಳ್ಗಿಚ್ಚು ನಿಸರ್ಗದಲ್ಲಿ ನಡೆಯುವ ಇಂಥಹ ಘಟನೆಗಳು ಆತನಲ್ಲಿ ಭಯ ಹುಟ್ಟಿಸಿದವು. ಇವುಗಳಿಂದ ರಕ್ಷಣೆ ಪಡೆಯುವುದಕ್ಕಾಗಿ ದೊಡ್ಡ ದೊಡ್ಡ ಬಂಡೆಗಳ ಆಶ್ರಯದಲ್ಲಿ ವಾಸಿಸಿದನು. ತಾನು ಸುಭದ್ರವಾಗಿ ಇರಬೇಕೆಂದರೆ ಬೃಹತ್ ಬಂಡೆಗಳ ಸಮೂಹಗಳ ಮಧ್ಯದಲ್ಲಿ ಎಂದು ಅರಿತನು. ಇಂಥಹ ಬೃಹತ್ ಬಂಡೆಗಳ ಸಮೂಹಗಳು ಗುಡೇಕೋಟೆ, ಜರಿಮಲೆ, ಕುರುಗೋಡು, ಹಂಪಿ ಮುಂತಾದ ಸ್ಥಳದಲ್ಲಿ ಕಾಣಸಿಗುತ್ತವೆ. ಹೀಗೆ ಕೋಟೆಯ ಪರಿಕಲ್ಪನೆಯನ್ನು ನಾವಿಲ್ಲಿ ಕಾಣಬಹುದು.

ಮಾನವನು ನಾಗರೀಕತೆಯ ಪ್ರಗತಿಯ ಪಥದಲ್ಲಿ ನಡೆದಂತೆ ಅನೇಕ ಸಮುದಾಯಗಳು ಉದಯಿಸಿದವು. ಇಂತಹ ಹಲವು ಕಿರುಸಮುದಾಯಗಳು ಒಂದೆಡೆ ನೆಲೆಗೊಂಡಾಗ ವಿವಿಧ ವಿಶಿಷ್ಟ ಹಿತಾಶಕ್ತಿಯ ಸಮಾಜಗಳು ನಿರ್ಮಾಣಗೊಂಡವು. ರಾಜ್ಯಗಳ ಸಾಮ್ರಾಜ್ಯಗಳ ಉದಯಪೂರ್ವದಲ್ಲಿ ಸಮುದಾಯಗಳಲ್ಲಿ ಜನಸಂಖ್ಯೆ ಹೆಚ್ಚಾಗಿ ಅಥವಾ ಬೇರೆ ಗುಂಪುಗಳ ಜೊತೆಗೂಡಿ ಊರುಗಳಾದವು. ಈ ಪ್ರಕ್ರಿಯೆಗೆ ಮೂಲಕಾರಣ ಮನುಷ್ಯನ ಸಮಾಜ ಜೀವಿತ ಪ್ರಜ್ಞೆ. ಈ ಕಾರಣವಾಗಿ ತನ್ನ ಸುತ್ತಮುತ್ತಲಿನ ಪರಿಸರದ ಅಭದ್ರತೆ ಬಗ್ಗೆ ಯೋಚಿಸಿದ. ಅಂತೆಯೇ ನೆಲೆ ನಿಂತಿದ್ದ ಊರಿನ ರಕ್ಷಣೆಗಾಗಿ ಕೋಟೆ, ಕಟ್ಟಿಕೊಳ್ಳುವ ಅವಶ್ಯಕತೆ ಕಂಡುಬಂದಿತು. ಊರುಗಳು ಬೆಳೆದು, ಹಲವಾರು ಊರುಗಳು ಒಟ್ಟುಗೂಡಿ ರಾಜ್ಯಗಳು ಸ್ಥಾಪನೆಯಾದ ಮೇಲೆ ಆಳುವ ಅರಸರು ತಮ್ಮ ರಾಜ್ಯಗಳನ್ನು ಸಂರಕ್ಷಿಸಿಕೊಳ್ಳಲು ರಾಜಧಾನಿ ಹಾಗೂ ಗಡಿ ಪ್ರದೇಶಗಳಲ್ಲಿ ಬೃಹತ್ ಆಕಾರದ ಕೋಟೆಗಳನ್ನು ಕಟ್ಟಿಸಿದರು. ಹೀಗಾಗಿ ಪ್ರಾಚೀನ ಕಾಲದ ಮಾನವನ ರಕ್ಷಣೆಯ ಕಾರ್ಯದಲ್ಲಿ ರಕ್ಷಣಾವಾಸ್ತು ಮಹತ್ತರ ಪಾತ್ರವಹಿಸಿದೆ. ಅಲ್ಲದೆ ಕುರುಗೋಡು ಕೋಟೆಯು ರಾಜಧಾನಿಯ ರಕ್ಷಣೆಗೆ ಇರುವಂತದ್ದು. ಜೆ.ಟಿ.ಡಾಂಟೆ ಪ್ರಕಾರ ಪ್ರಾಚೀನ ಕಾಲದ ಈ ಕೋಟೆಗಳು ರಾಜಧಾನಿ ರಕ್ಷಣೆಯ ಸಲುವಾಗಿ ಇರುವಂತಹವು.[11]

ರಾಜರ ಮತ್ತು ಚಿಕ್ಕ ಸಂಸ್ಥಾನದ ಮುಖ್ಯಸ್ಥರ ಅತಿಹೆಚ್ಚಿನ ಬಲ ಈ ರಕ್ಷಣಾ ವಾಸ್ತುಗಳ ಮೇಲೆ ಅವಲಂಬಿತವಾಗಿವೆ. ಶತ್ರುಗಳು ಕೋಟೆಯಿಂದ ರಕ್ಷಿತವಾಗಿಲ್ಲದ ಪಟ್ಟಣಗಳನ್ನು ಬಹು ಸುಲಭವಾಗಿ ಸ್ವಾಧೀನ ಪಡಿಸಿಕೊಳ್ಳಬಲ್ಲರು. ಆದ್ದರಿಂದ ಆಳುವವರು ಅತ್ಯವಶ್ಯಕವಾಗಿ ಕೋಟೆಯನ್ನು ಕಟ್ಟಬೇಕೆಂದು ಸಾಮ್ರಾಜ್ಯಲಕ್ಷ್ಮಿ ಪೀಠಿಕಾದಲ್ಲಿ ಪ್ರಸ್ತಾಪವಾಗಿದೆ.[12] ಕೌಟಿಲ್ಯನು ಏಳು ಪ್ರಕಾರದ ಕೋಟೆಗಳನ್ನು ಹೆಸರಿಸಿರುವನು[13] ಅದರಲ್ಲಿ ಗಿರಿದುರ್ಗವೂ ಒಂದು.

**ಕೋಟೆಯ ಲಕ್ಷಣಗಳು**

ಕುರುಗೋಡು ಬಳ್ಳಾರಿ ಜಿಲ್ಲೆಯ ಪ್ರಾಚೀನ ಗಿರಿದುರ್ಗಗಳಲ್ಲಿ ಕೋಟೆಯು ಎರಡನೆಯದು. ಪ್ರಕೃತಿದತ್ತವಾದ ಬೆಟ್ಟ ಗುಡ್ಡಗಳಿಂದ ಸುತ್ತುವರೆದಿದ್ದ ಈ ಪಟ್ಟಣದಲ್ಲಿ ಗುಡ್ಡದ ಮೇಲೆ ತುಂಬ ಎತ್ತರದ ಕೋಟೆ ಇತ್ತು. ಇದನ್ನು ಕುರುಗೋಡಿನ ಶಾಸನವು[14] ಮುಗಿಲುದ್ದವಾಗಿ ಮೂವಳಿಸಿದ ಕೋಟೆ ಎಂದು ಕರೆದಿದೆ. ಆದರೆ ಶಾಸನದಲ್ಲಿ ಈ ಕೋಟೆಯಲ್ಲಿ ಎಷ್ಟು ಸುತ್ತುಗಳಿವೆ, ಅದರ ವ್ಯಾಪ್ತಿ ಎಷ್ಟು ಎಂಬ ಬಗ್ಗೆ ಮಾಹಿತಿಗಳಿಲ್ಲ. ನಾಲ್ಕು ಸುತ್ತಿನ ಕೋಟೆ ಯೊಳಗೆ ಕಂಗೊಳಿಸುತ್ತಿದ್ದ ಪ್ರಾಚೀನ ಕುರುಗೋಡು ಎಂದು ಕೈಫಿಯತ್ತಿನಲ್ಲಿ[15] ವರ್ಣಿಸಲಾಗಿರುವುದರಿಂದ ಇದು ನಾಲ್ಕು ಸುತ್ತಿನ ಕೋಟೆ ಎಂಬುದು ಸ್ಪಷ್ಟ. ಕಂಪ್ಲಿ ಕಡೆಯಿಂದ ಕುರುಗೋಡನ್ನು ಪ್ರವೇಶಿಸುವಾಗ ಸಿಗುವ ಮೊದಲನೇ ಕೋಟೆ ಅಥವಾ ಹೊರಕೋಟೆ ಬಹಳ ವಿಶಾಲವಾದದ್ದು. ಇದು ಇಡೀ ಊರನ್ನಲ್ಲದೆ ಕಿಲ್ಲೆದುರ್ಗ, ಬೂದಿಕೊಳ್ಳದ ಗುಡ್ಡ, ಬಾಳೆಕೊಳ್ಳದ ಗುಡ್ಡ, ಬಾಲೆ ಕಿಲ್ಲೆ, ಜಿಂಕಲ ಹರವಿನಗುಡ್ಡ, ಕೋಳಿಗುಡ್ಡ, ರಾಮಲಿಂಗನ ಗುಡ್ಡ. ದಿಡ್ಡಿ ಹನುಮಂತನ ಕಣಿವೆ ಮತ್ತು ಹಾಲಭಾವಿ ಕಣಿವೆಯನ್ನು ಸುತ್ತುವರೆದಿರುವುದು ತಿಳಿದುಬರುವ ಅಂಶ.[16]

ಬಳ್ಳಾರಿಯಿಂದ ಕುರುಗೋಡಿಗೆ ಬರುವಾಗ ಕೋಟೆಯ ಎರಡನೆ ಸುತ್ತಿನ ಅವಶೇಷಗಳು ಕಂಡುಬರುವವು. ಇದನ್ನು ಪ್ರಾಯಶಃ ಹನುಮಂತನ ಗುಡ್ಡದ ದಕ್ಷಿಣ ತುದಿಯಿಂದ ಗೋಡಿನಿಂದ ದೊಡ್ಡ ಬಸವೇಶ್ವರ ಗುಡಿಯನ್ನು ಬಳಸಿಕೊಂಡು ಕಟ್ಟಿರಬೇಕು. ಕುರು ಗೋಡಿನಿಂದ ಸಿರಿಗೇರಿಗೆ ಹೋಗುವ ರಸ್ತೆಯ ಬಲಭಾಗಕ್ಕೆ ಕೋಟೆಯ ಮೂರನೆಯ ಸುತ್ತಿನ ಬಾಗಿಲಿದೆ. ಇದು ಪಶ್ಚಿಮ ಬೆಟ್ಟವನ್ನು ಸುತ್ತುವರೆದು ಹಿಂದುಲಿ ಸಂಗಮೇಶ್ವರ ದೇವಾಲಯದ ಪಶ್ಚಿಮಕ್ಕೆ ಸಂಪೂರ್ಣ ಹಾಳಾಗಿ ಹೋದ ಗೋಡೆಯೇ ಶಾಸನೋಕ್ತ

ಕೋಟೆಯ ಮೂರನೆಯ ಸುತ್ತು. ಇದನ್ನು ಜಿಂಕಲ ಹರವಿನಗುಡ್ಡಕ್ಕೆ ಹೊಂದಿಕೊಂಡಿರುವ ಪ್ರಾಚೀನ ಕೋಟೆಯೆಂದು ಕೈಫಿಯತ್ತು ಕರೆದಿದೆ. ಹನುಮಂತನಗುಡ್ಡದ ತುದಿಯಲ್ಲಿರುವುದೇ ಕೋಟೆಯ ನಾಲ್ಕನೇ ಸುತ್ತು. ಇದನ್ನು ಹಂಡೆ ಪಾಳಯಗಾರರು ಕಟ್ಟಿಸಿರುವರೆಂದು ಕುರುಗೋಡು ಕೈಫಿಯತ್ತು ಹೇಳುತ್ತದೆ.[17] ಇದರೊಳಗೆ ವಸತಿಯ ಅವಶೇಷಗಳು, ಆಂಜನೇಯ ಗುಡಿ, ಬಾವಿ ಹಾಗೂ ಖಾಲಿ ಮಂಟಪಗಳಿವೆ. ಇದು ಸುರಕ್ಷಿತ ಹಾಗೂ ಭದ್ರವಾಗಿರುವುದರಿಂದ ಇಲ್ಲಿಯೇ ಹಂಡೆ ಪಾಳೆಯಗಾರರು ನೆಲೆಸಿರಬಹುದು.

ಈ ಮೇಲೆ ಉಲ್ಲೇಖಿಸಿದ ಕೋಟೆಯ ನಾಲ್ಕು ಸುತ್ತುಗಳಲ್ಲಿ ಮೊದಲ ಹಾಗೂ ಎರಡನೆಯ ಸುತ್ತಿನ ಕೋಟೆಗಳು ನಾಮಾವಶೇಷವಾಗಿವೆ. ಈಗ ಉಳಿದಿರುವುದು ಕೋಟೆಯ ಮೂರು ಮತ್ತು ನಾಲ್ಕನೆ ಸುತ್ತುಗಳು ಮಾತ್ರ. ಈ ಗೋಡೆಗಳ ಪೂರ್ವಭಾಗಕ್ಕೆ ಪ್ರವೇಶ ದ್ವಾರಗಳಿವೆ, ಮೂರನೆಯ ಸುತ್ತಿನ ಗೋಡೆಯಲ್ಲಿರುವ ಬಾಗಿಲು ಸುಮಾರು ೧೦ ಅಡಿ ಎತ್ತರ ಮತ್ತು ೮ ಅಡಿ ಅಗಲವಾಗಿದೆ. ಮೇಲಿನ ಛತ್ತು ಹಾಳಾಗಿದೆ. ಇದರ ಬಲಭಾಗದ ಕೋಟೆಗೋಡೆಯಲ್ಲಿ ನಂದಿಯ ಉಬ್ಬುಶಿಲ್ಪವಿದೆ. ಮುಂಭಾಗದಲ್ಲಿ ಆಂಜನೇಯನ ದೇವಾಲಯವಿದೆ. ಇದನ್ನು ಕೋಟೆ ಆಂಜನೇಯನೆಂದು ಕರೆಯುವರು. ನಾಲ್ಕನೇ ಸುತ್ತಿನ ಬಾಗಿಲು ಕೋಟೆಯೊಳಕ್ಕೆ ನೇರವಾದ ಪ್ರವೇಶವನ್ನು ನೀಡುವುದಿಲ್ಲ. ದೂರದಿಂದ ನೋಡಿದಾಗ ಈ ಬಾಗಿಲು ಕಾಣುವುದಿಲ್ಲ. ಬಾಗಿಲ ಎರಡು ಪಾರ್ಶ್ವಗಳಲ್ಲಿ ಮತ್ತು ಮುಂಭಾಗದಲ್ಲಿ ಅದೇ ರೀತಿಯ ಗೋಡೆಗಳನ್ನು ಕಟ್ಟಿ ಅದನ್ನು ಮರೆಮಾಡಿ ಗೋಡೆಯಲ್ಲಿ ಪ್ರವೇಶ ಕಲ್ಪಿಸಲಾಗಿದೆ. ಹೀಗಾಗಿ ಒಳಗೆ ಬರುವ ದಾರಿಯು ಅಂಕು-ಡೊಂಕಾಗಿದೆ. ಇದರ ಎರಡೂ ಬದಿಗೆ ಕೊತ್ತಳಗಳಿವೆ. ಬಾಗಿಲಿನ ಮೂಲಕ ಅಂಕು-ಡೊಂಕಾದ ದಾರಿಯಲ್ಲಿ ಒಳ ಪ್ರವೇಶಿಸಲು ಪ್ರಯತ್ನಿಸುವ ವೈರಿಸೈನ್ಯವನ್ನು ಕೋಟೆಗೋಡೆಯ ಮತ್ತು ಕೊತ್ತಳಗಳ ಮೇಲೆ ಸಂರಕ್ಷಣೆಗಾಗಿ ನಿಂತ ಸೈನಿಕರು ಸುಲಭವಾಗಿ ಸದೆಬಡಿಯಲು ಅನುಕೂಲವಾಗುತ್ತಿತ್ತು.

ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ಕೊತ್ತಳಗಳನ್ನು ನಿರ್ಮಿಸಲಾಗಿದೆ. ಇವು ವೃತ್ತಾಕಾರವಾಗಿದ್ದು, ಕೋಟೆ ಗೋಡೆಗಿಂತ ಎತ್ತರವಾಗಿವೆ. ಬೆಟ್ಟದ ಮೇಲಿನ ಕೋಟೆಯಲ್ಲಿ ಕೆಲವು ಕೊತ್ತಳಗಳನ್ನು ಹಾಸುಬಂಡೆಗಳ ಮೇಲೆ ನಿರ್ಮಿಸಲಾಗಿದೆ. ಈಗ ಸುಮಾರು ೧೫ ಕೊತ್ತಳಗಳು ಮಾತ್ರ ಗೋಚರಿಸುತ್ತವೆ.

ಈ ಕೋಟೆಯನ್ನು ಕೆತ್ತಿ ನಯಮಾಡಿದ ಮಧ್ಯಮಗಾತ್ರದ ಕಲ್ಲುಗಳಿಂದ ಕಟ್ಟಿದೆ. ಕಲ್ಲುಗಳ ಮಧ್ಯದಲ್ಲಿ ಸಂಧಿ ಇಲ್ಲದಂತೆ ಒಂದು ಕಲ್ಲು ಮತ್ತೊಂದಕ್ಕೆ ಹೊಂದಿಕೊಳ್ಳುವಂತೆ ಅಂಚುಗಳನ್ನು ಕೆತ್ತಿ ಜೋಡಿಸಲಾಗಿದೆ. ಕಲ್ಲುಗಳ ಮಧ್ಯದಲ್ಲಿ ಯಾವುದೇ ಗಾರೆ ಇಲ್ಲ. ಸುಮಾರು ೧೫ ಅಡಿ ಎತ್ತರವಿರುವ ಕೋಟೆಯ ಮೇಲಿನ ಕಲ್ಲಿನ ಸಾಲು ಸ್ವಲ್ಪ ಮುಂದೆ ಚಾಚಿಗೊಂಡಿದೆ. ಕೋಟೆಯ ಅಗಲ ಸುಮಾರು ೩ ಅಡಿ. ಮೇಲಿದ್ದ ಮಣ್ಣಿನ ಕುಂಬೆಯ ಅವಶೇಷಗಳು ಕಾಣುತ್ತವೆ. ಕೋಟೆಯ ಹೊರಮೈಯನ್ನು ಮಧ್ಯಗಾತ್ರದ ಕಲ್ಲುಗಳಿಂದ ಮತ್ತು ಒಳಮೈಯನ್ನು ಚಿಕ್ಕ ಕಲ್ಲುಗಳಿಂದ ಇವುಗಳ ಮಧ್ಯದಲ್ಲಿ ಮಣ್ಣುತುಂಬಿ ಕಟ್ಟಲಾಗಿದೆ. ಬೆಟ್ಟದ ಮೇಲಿರುವ ಕೋಟೆಗೋಡೆಗಳು ಮಾತ್ರ ಉಳಿದುಕೊಂಡಿವೆ. ಕೆಲವೆಡೆ ಕಲ್ಲಿನ ಭಾಗ ಬಿದ್ದು ಹೋಗಿ ಮಧ್ಯದಲ್ಲಿನ ಮಣ್ಣಿನ ಭಾಗ ಮಾತ್ರ ಉಳಿದಿದೆ.

**ಕೋಟೆಯ ನಿರ್ಮಾಣ**

ಕುರುಗೋಡು ಕೋಟೆಯ ನಿರ್ಮಾಪಕರ ಮತ್ತು ನಿರ್ಮಾಣ ಕಾಲವನ್ನು ನಿಖರವಾಗಿ ಹೇಳುವುದು ಕಷ್ಟವಾದರೂ ಶಾಸನಾಧಾರಗಳಿಂದ ಈ ಕೆಳಗಿನಂತೆ ಚರ್ಚಿಸಿದೆ. ಇಲ್ಲಿ ದೊರೆತಿರುವ ಬಾದಾಮಿ ಚಾಳುಕ್ಯ ಸತ್ಯಾಶ್ರಯದ ಶಾಸನದಲ್ಲಾಗಲಿ[18] ಅಥವಾ ಈ ಮುಂಚಿನ ಯಾವುದೇ ದಾಖಲೆಗಳಲ್ಲಿ ಕುರುಗೋಡು ಕೋಟೆಯ ಪ್ರಸ್ತಾಪಗಳಿಲ್ಲ. ಕಲಚೂರಿಗಳ ಕ್ರಿ.ಶ. ೧೧೭೩[19] ರ ಶಾಸನವನ್ನು ಸೇರಿದಂತೆ ಇತ್ತೀಚಿನ ಶಾಸನಗಳಲ್ಲಿ ಕುರುಗೋಡು ಕೋಟೆಯ ಉಲ್ಲೇಖಗಳಿವೆ. ಕುಮಾರರಾಮನಿಗಿಂತ ಮೊದಲು ಮಲ್ಲರಾಯರ ವಂಶದವರು ಕೋಟೆ ಕಟ್ಟಿಸಿದರೆಂದು ಕೈಫಿಯತ್ತಿನಲ್ಲಿ ಹೇಳಿದೆ.[20] ಕ್ರಿ.ಶ. ೧೧೭೪ರಲ್ಲಿ[21]ಹೊಯ್ಸಳ ವಿಷ್ಣುವರ್ಧನನು ಸಿಂದರ ಆಳ್ವಿಕೆಗೊಳಪಟ್ಟ ಕುರುಗೋಡು ಕೋಟೆಯ ಮೇಲೆ ದಾಳಿ ಮಾಡಿರಬೇಕೆಂದು ಚನ್ನಬಸವಯ್ಯ ಹಿರೇಮಠದ ಅಭಿಪ್ರಾಯ.[22]

ಈ ಮೇಲಿನ ಶಾಸನಾಧಾರಗಳು ಕೈಫಿಯತ್ತಿನ ಆಧಾರಗಳೊಂದಿಗೆ ಸರಿಹೊಂದುವುದರಿಂದ ಕೈಫಿಯತ್ತಿನಲ್ಲಿ ಉಲ್ಲೇಖವಾಗುವ ಮಲ್ಲರಾಯರ ವಂಶದವರೆಂದರೆ ಸಿಂದವಂಶದ ರಾಚಮಲ್ಲನೇ ಇರಬೇಕು. ಒಟ್ಟಿನಲ್ಲಿ ಸಿಂದರ ಆಳ್ವಿಕೆಯ ಅವಧಿಯಲ್ಲಿಯೇ ಕುರುಗೋಡಿನಲ್ಲಿ ಕೋಟೆ ನಿರ್ಮಾಣವಾಗಿದೆ. ಮುಂದೆ ಈ ಕೋಟೆಯನ್ನು ವಿಜಯನಗರದ ಅರಸರು ಆಳಿದರು. ಹಂಡೆಯ ಪಾಳೆಯಗಾರರು ಈ ಕೋಟೆಯನ್ನು ಭದ್ರಪಡಿಸಿಕೊಂಡು ಕೋಟೆಯ ಕೆಲವು ಸುತ್ತುಗಳನ್ನು ಕಟ್ಟಿಸಿದರೆಂದು ತಿಳಿದುಬರುತ್ತದೆ.[23] ನಂತರ ಹೈದರಾಲಿ- ಟಿಪ್ಪು ಇವರು ಕುರುಗೋಡು ಕೋಟೆಯನ್ನು ಜೀರ್ಣೋದ್ಧಾರ ಮಾಡಿಕೊಂಡಿದ್ದಾರೆ. ಹೈದರಾಲಿ ಕೋಟೆಯ ಒಳಗೆ ಆಂಜನೇಯದ ದೇವಾಲಯವನ್ನು ಕಟ್ಟಿಸಿದ್ದಾನೆಂಬುದು ಶಾಸನದಿಂದ ತಿಳಿದು ಬರುತ್ತದೆ.[24]

**ಕೋಟೆಯ ಮಹತ್ವ**

ಬೆಟ್ಟ-ಗುಡ್ಡಗಳ ಮಧ್ಯದಲ್ಲಿ ನಾಲ್ಕು ಸುತ್ತಿನಲ್ಲಿ ನಿರ್ಮಾಣವಾದ ಕುರುಗೋಡು ಕೋಟೆ ಅಬೇಧ್ಯ ಗಿರಿದುರ್ಗವೆನಿಸಿತ್ತು. ಇದನ್ನೆ ಶಾಸನಗಳು *" ಕುಲಗಿರಿಗಳ್ಗೆ ಮೇರು ಗಿರಿಯಿರ್ಪ್ಪ ವೊಲಿರ್ದ್ದುದುತಾಂ ನದೀನದಾವಳಿಗೆ ಪಯಃ ಪಯೋಧಿನೆಗಳ್ದಿರ್ಪ ವೊಲಿರ್ದ್ದುದು ತಾರಕಾಸ ಮಾಕುಳತೆ ಹಿಮಾಂಶುಬಿಂಬ ಮೆಸೆದಿರ್ಪ್ಪ ವೊಲಿರ್ದ್ದುದಾ ವಸುನ್ಧರಾಲಲನೆಗೆ ವಕ್ತ್ರ ಪಂಕರು ಹಮಿರ್ಪ್ಪವೊಲಿದಿತ್ತು*[25] *ಎಂದೂ, ರಾಜರಾಜನಗರ ರಮಣೀಯ ಮಣಿದರ್ಪಣಾಯನ ಮೆನಿಸೆ ಭಗ್ನಾದ್ರಿ ಯಂತಾಗ್ರ್ಯವರಿದ ದುರ್ಗಮವಾದ"* [26]ಕೋಟೆಯಾಗಿತ್ತೆಂದು ಬಣ್ಣಿಸಿವೆ.

ಕೋಟೆಯ ಸುತ್ತಲೂ ಕಂದಕಗಳಿದ್ದು ಅದರಲ್ಲಿ ನೀರನ್ನು ತುಂಬಲಾಗಿತ್ತು. ಹೀಗೆ ಒಂದೆಡೆ ಗಿರಿದುರ್ಗ ಮತ್ತೊಂದೆಡೆ ಜಲದುರ್ಗಗಳಿಂದ ಕೂಡಿದ ಅದು[27]

*||ಕಂ|| ಕೆಲಬಲದ ಜಲದ ದುರ್ಗಗಳ*
*ನೆಲೆವುದು ನೆರೆಯ ಹೊರೆಯ ತುರುಗಿರಿದುರ್ಗಂ*
*ಗಳ ನಿಳಿಸಿ ತನ್ನ ಮೆರೆವುದು*
*ಕುಲಗಿರಿ ಕುರುಗೋಡು ದುರ್ಗ್ಗವಾಗ್ರ್ದುಂದುರ್ಗ್ಗಂಎನಿಸಿತು.* [28]

ಚೋಳ, ಗುರ್ಜರ, ಪಾಲ, ಪಾಂಡ್ಯ, ತೆಲುಗ ಭೂಪಾಲರು ಕುರುಗೋಡು ಕೋಟೆಯನ್ನು ಗೆಲ್ಲಲು ಆಗಾಗ ಪ್ರಯತ್ನಿಸುತ್ತಿದ್ದರು. ಚಾಳುಕ್ಯರ ಆಡಳಿತಾವಧಿಯಲ್ಲಿ ಈ ಕೋಟೆಯನ್ನು ಜಯಿಸಲು ನಡೆಸಿದ ಹೋರಾಟಗಳು ವಿಫಲವಾದ ಮೇಲೆ ಕಲಚೂರಿಗಳ ಕಾಲದಲ್ಲಿ ಇಂಥ ಪ್ರಯತ್ನವನ್ನು ಮುಂದುವರೆಸಿದರು. ಆದರೆ ಸಮರ್ಥ ಸಾಮಂತ ಅರಸರಾದ ಸಿಂದರಿಂದಾಗಿ ಬಲಿಷ್ಠವಾದ ಈ ಕೋಟೆಯನ್ನು ಪಡೆಯಲೇಬೇಕೆಂಬ ಇವರ ಕನಸು ನನಸಾಗಲಿಲ್ಲ.[29] ಬದಲಾಗಿ ಅದು.

*"ಚೋಳನನಾಳು ಮಾಡುವುದು ಗೂರ್ಜರರಂಸೆಲೆ ತರ್ದ್ದಿಕುಂಕರಂ*
*ಲಾಳನ ನಾಳಿಮಾಡುವುದು ಪಾಂಡ್ಯನ ನಂಡಲೆಗುಂ ತೆಲುಂಗ ಭೂ*
*ಪಾಲನ ನೇಳಿ ದಿಕ್ಕೆಯನೆ ಮಾಡುವದೀ ಕುರುಗೋಡು ಕೋಟೆ ತಾಂ*
*ಕಾಳಗ ಮೆಂದಡೇಳುಮಡಿ ಪೆರ್ಚ್ಚುವುದಚ್ಚರಿ ಯಾರೊ ಕಾದುವರ್ ||*

ಎನ್ನುವಂತೆ ಶಕ್ತಿಯುತವಾಗಿತ್ತು.[30] ಹೊಯ್ಸಳ ಬಲ್ಲಾಳನು ಕ್ರಿ.ಶ. ೧೧೯೯ರಲ್ಲಿ ಕುರುಗೋಡು ಕೋಟೆಯನ್ನು ವಶಪಡಿಸಿಕೊಳ್ಳಬೇಕೆಂದು ನಡೆಸಿದ ಯತ್ನವು ವಿಫಲವಾಯಿತು.[31] ಒಟ್ಟಿನಲ್ಲಿ ಬಲ್ಲಕುಂದೆನಾಡಿನ ರಾಜಧಾನಿಯಾಗಿದ್ದ ಕುರುಗೋಡು ಕೋಟೆಯು ವಿರೋಧಿ ಅರಸರಿಗೆ ಸುಲಭವಾಗಿ ದಕ್ಕಲಿಲ್ಲ. ಸಮರ್ಥ ನಾಯಕರಾಗಿದ್ದ ಸಿಂದರಸರು ಈ ಕೋಟೆಯನ್ನು ರಕ್ಷಿಸಿದರು. ಎರಡನೇ ಬಲ್ಲಾಳನು ಈ ಕೋಟೆಯನ್ನು ವಶಪಡಿಸಿಕೊಳ್ಳುವುದಕ್ಕಾಗಿ ಅಪಾರ ಸಂಖ್ಯೆಯ ಸೈನಿಕರನ್ನು ಕಳೆದುಕೊಳ್ಳಬೇಕಾಯಿತು.

ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಲ್ಲಿ ಕುರುಗೋಡು ಕೋಟೆಯ ಬಲಿಷ್ಠತೆಯ ಅರಿವಾಗುತ್ತದೆ. ನಿಸರ್ಗದತ್ತ ಬೆಟ್ಟವು ನಗರವನ್ನು ಸುತ್ತುವರೆದಿರುವುದರಿಂದ ಇದರ ಮಧ್ಯದಲ್ಲಿ ಅಲ್ಲಲ್ಲಿ ಕಂಡುಬರುವ ಸಂದುಗಳಿಗೆ ಬೃಹದಾಕಾರದ ಕಲ್ಲು ಬಂಡೆಗಳನ್ನೊಟ್ಟಿ ಕೋಟೆ ಕಟ್ಟಲಾಗಿದೆ. ಇದರಿಂದ ಶತ್ರುಗಳು ಮೇಲೇರಿ ಒಳ ಬರಲು ಕಷ್ಟಸಾಧ್ಯ.

ಈ ಪ್ರದೇಶದಲ್ಲಿ ಬಳ್ಳಾರಿ, ಕೋಳೂರು, ನಡಿವಿ, ತೆಕ್ಕಲಕೋಟೆ, ದರೋಜಿ, ಕೆಂಚನ ಗುಡ್ಡ ಹಾಗೂ ಸಿರುಗುಪ್ಪಗಳಲ್ಲಿ ಕೋಟೆಗಳಿವೆ. ಈ ಎಲ್ಲಾ ಕೋಟೆಗಳಿಗಿಂತ ಕುರುಗೋಡಿನ ಕೋಟೆಗೆ ಮಹತ್ವ ಹೆಚ್ಚು ಏಕೆ ಕೋಳೂರಿನ ಕೋಟೆ ಕುರುಗೋಡು ಕೋಟೆಯಷ್ಟೇ ಹಳೆಯದು ಮತ್ತು ಸಮಕಾಲೀನ. ಆದರೆ ಕೋಳೂರಿನ ಕೋಟೆಯ ಉಲ್ಲೇಖ ಶಾಸನಗಳಲ್ಲಿ ಮಾತ್ರ ಬರುತ್ತದೆ.

ಮೇಲಿನ ಪ್ರಶ್ನೆಗೆ ಉತ್ತರ ನೀಡುವಲ್ಲಿ ಕೆಳಗಿನ ಚರ್ಚೆಯು ಉಪಯುಕ್ತವಾಗಬಹುದು. ಸಿಂದರು ಕುರುಗೋಡನ್ನು ಆಳುವಾಗ ದಕ್ಷಿಣದಿಂದ ಹೊಯ್ಸಳರು, ಯಾದವರು, ಪೂರ್ವದಿಂದ ತೆಲುಗು ಭೂಪಾಲರು ಗುರ್ಜರು ಇವರು ಚಾಳುಕ್ಯ ರಾಜ್ಯದ ಮೇಲೆ ದಂಡೆತ್ತಿ ಹೋಗಬೇಕಾದರೆ ಕುರುಗೋಡನ್ನು ಸಂಧಿಸಲೇಬೇಕಾಗುತ್ತಿತ್ತು. ಎರಡನೆಯದಾಗಿ ಕುರುಗೋಡು ಕೋಟೆ ಇದರ ಸುತ್ತಮುತ್ತಲಿನಲ್ಲಿ ಇರುವ ಕೋಟೆಗಳಿಗಿಂತ ಬಹು ಆಯ ಕಟ್ಟಿನ ಸ್ಥಳದಲ್ಲಿದ್ದು, ಶತ್ರುಗಳಿಗೆ ಸುಲಭವಾಗಿ ವಶವಾಗದಂತೆ ನಿಸರ್ಗದತ್ತ ಬೆಟ್ಟಗುಡ್ಡಗಳಿಂದ ಆವರಿಸಲ್ಪಟ್ಟಿತ್ತು. ಹಾಗಾಗಿಯೇ ಹೊಯ್ಸಳ ವಿಷ್ಣುವರ್ಧನನು ಈ ಕೋಟೆಯನ್ನು ಗೆಲ್ಲಲು ಪ್ರಯಾಸ ಪಡಬೇಕಾಯಿತು. ಹೈದರಾಲಿ ಮತ್ತು ಟಿಪ್ಪು ಅವರ ದಾಳಿಗೆ ತತ್ತರಿಸಿದ ಹಂಡೆ ಪಾಳೆಯಗಾರರು, ಬಳ್ಳಾರಿಯಿಂದ ಬಂದು ಕುರುಗೋಡು ಕೋಟೆಯಲ್ಲಿ ಆಶ್ರಯ ಪಡೆದರು.

ಕುರುಗೋಡು ಪರಿಸರದಲ್ಲಿ ಸ್ಥಳ, ಜಲ ಹಾಗೂ ಗಿರಿದುರ್ಗಗಳು ಮಾತ್ರ ಕಂಡುಬರುತ್ತವೆ. ಹಂಪಾಪಟ್ಟಣದ ಕೋಟೆಯು ಸ್ಥಳದುರ್ಗಕ್ಕೆ ಉತ್ತಮ ನಿದರ್ಶನವಾದರೆ, ನಡಿವಿ ಕೋಟೆಯು ನೈಸರ್ಗಿಕ ಜಲದುರ್ಗವಾಗಿದೆ. ಈ ಎರಡು ಲಕ್ಷಣಗಳನ್ನು ಮೈಗೂಡಿಸಿಕೊಂಡಿದ್ದ ಕೋಟೆ ಎಂದರೆ ಕುರುಗೋಡಿನದು. ಇದನ್ನು ಅರ್ಧಭಾಗ ನೆಲದ ಮೇಲೆ ಇನ್ನರ್ಧ ಭಾಗ ಬೆಟ್ಟದಮೇಲೆ ಕಟ್ಟಲಾಗಿದೆ. ಬಳ್ಳಾರಿ ಹಾಗೂ ಉಚ್ಚಂಗಿದುರ್ಗದ ಕೋಟೆಗಳು ಇದೇ ಸ್ವರೂಪದ್ದಾಗಿವೆ. ಇಲ್ಲಿ ಆಳ್ವಿಕೆ ಮಾಡಿದ ಬಹುಪಾಲು ಅರಸರು ಮತ್ತು ಪಾಳೆಯಗಾರರು ತಮ್ಮ ರಾಜಧಾನಿಯನ್ನು ದುರ್ಗಮವಾದ ಗುಡ್ಡ ಅಥವಾ ಬೆಟ್ಟದ ಮೇಲೆ ಕಟ್ಟಿಕೊಂಡಿರುತ್ತಿದ್ದರು. ಕಾರಣ ಶತ್ರುಗಳಿಂದ ರಕ್ಷಣೆ ಪಡೆಯಲು ಇವು ಸೂಕ್ತ ಸ್ಥಳಗಳಾಗಿದ್ದವು.

ಈ ಕೋಟೆಯನ್ನು ಸುಮಾರು ನಾಲ್ಕು ಸುತ್ತುಗಳಲ್ಲಿ ಕಟ್ಟಿಕೊಂಡಿದ್ದರು. ಕೋಟೆಯ ಒಂದೊಂದು ಸುತ್ತು ವೈರಿಯ ದಾಳಿಗೆ ತುತ್ತಾಗಿ ಅವರ ವಶವಾದಾಗ ಹಿಂದಕ್ಕೆ ಸರಿಯುತ್ತಾ ಒಳಕೋಟೆಗಳಲ್ಲಿ ರಕ್ಷಣೆ ಪಡೆಯುವ ಉದ್ದೇಶಕ್ಕಾಗಿ ಸುತ್ತುಗಳು ನಿರ್ಮಾಣಗೊಂಡಿವೆ. ವೈರಿಯು ಅಂತಿಮಸುತ್ತಿನ ಕೋಟೆಯು ವಶವಾಗುವವರೆಗೂ ಕಾದಾಡಬೇಕಾಗುತ್ತಿತ್ತು. ಇಂತಹ ಎರಡಕ್ಕಿಂತ ಅಧಿಕ ಸುತ್ತುಗಳನ್ನು ಬಳ್ಳಾರಿ, ಹಂಪಿ, ಉಚ್ಚಂಗಿದುರ್ಗಗಳಲ್ಲಿ ಕಾಣಬಹುದು. ಕುರುಗೋಡಿನ ಕೋಟೆಯ ಹೊರ ಸುತ್ತುಗಳು ಬೆಟ್ಟದ ಬದಿಯಲ್ಲಿರುವ ಊರನ್ನು ಸುತ್ತುವರೆದಿದೆ. ಉಳಿದ ಸುತ್ತುಗಳು ಬೆಟ್ಟದ ವಿವಿಧ ಎತ್ತರಗಳಲ್ಲಿದ್ದು ಕೊನೆಯ ಸುತ್ತು ಅತಿ ಎತ್ತರದ ಭಾಗಗಳಲ್ಲಿವೆ. ಬೆಟ್ಟದ ಮೇಲಿನ ಒಳಸುತ್ತಿನಲ್ಲಿ ರಾಜಪರಿವಾರದವರಿಗೆ ಸಂಬಂಧಿಸಿದ ಕಟ್ಟಡಗಳಿವೆ. ಹಾಗಾಗಿ ಈ ಸುತ್ತನ್ನು ಕಡೆಗಾಪು ಅಥವಾ ರಾಜವಾಡೆಗಳೆಂದು ಕರೆಯುವರು. ಯುದ್ಧದ ಸಂದರ್ಭದಲ್ಲಿ ಊರಜನರು ಈ ಸುತ್ತಿನಲ್ಲಿ ಆಶ್ರಯಪಡೆಯುವರು. ಹೈದರಾಲಿ ಕುರುಗೋಡು ಕೋಟೆಯನ್ನು ಮುತ್ತಿದಾಗ ಊರಜನರು ಇಲ್ಲಿ ಆಶ್ರಯ ಪಡೆದುದಕ್ಕೆ ಆಧಾರಗಳಿವೆ.

ನೀರು ಮತ್ತು ಆಹಾರ ಧಾನ್ಯಗಳ ಜೀವನಕ್ಕೆ ಅವಶ್ಯಕವಾದವು. ಇವುಗಳ ಸಂಗ್ರಹಣೆಗೆ ಈ ಕೋಟೆಯಲ್ಲಿ ವ್ಯವಸ್ಥೆ ಇದೆ. ಮಳೆಗಾಲದಲ್ಲಿ ಬಿದ್ದ ನೀರನ್ನು ಹರಿದುಹೋಗಲು ಬಿಡದೆ ಅಲ್ಲಲ್ಲೇ ತಡೆಗೋಡೆಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸುತ್ತಿದ್ದರು. ಕೆಳಗಿನ ಸುತ್ತಿನ ಕೋಟೆಯಲ್ಲಿ ನೀರಿಗಾಗಿ ಕೆರೆ ಬಾವಿಗಳನ್ನು ಕಟ್ಟಿಕೊಂಡಿದ್ದರು. ಕೋಟೆಯ ಸುತ್ತಲಿನ ಕಂದಕಕ್ಕೆ ಪಕ್ಕದ ಹಳ್ಳದಿಂದ ನೀರನ್ನು ತುಂಬಿಸುವ ವ್ಯವಸ್ಥೆ ಇತ್ತು. ಮುನ್ನೆಚ್ಚರಿಕೆಯ ಪ್ರತಿರೂಪವಾಗಿ ತಲೆ ಎತ್ತಿದ ಆಹಾರ ಧಾನ್ಯಗಳ ಕಣಜಗಳು ಕೋಟೆಯ ಮೇಲಿನ ಸುತ್ತಿನ ಒಳಗೆ ಕಂಡುಬರುತ್ತವೆ. ರಾಗಿ, ತುಪ್ಪ ಎಣ್ಣೆಯ ಶೇಖರಣೆಗಾಗಿ ಪ್ರತ್ಯೇಕ ಕಣಜಗಳೇ ಇದ್ದವು. ಈ ಕಣಜಗಳು ಅಂದಿನ ಆರ್ಥಿಕ ಸ್ಥಿತಿಗಳನ್ನು ಬಿಂಬಿಸುತ್ತವೆ.

ಇದೇ ರೀತಿ ಒಂದು ರಾಜ್ಯದ ಅಳಿವು ಉಳಿವು ಅವುಗಳ ಶಕ್ತಿಸಾಮರ್ಥ್ಯದ ಮೇಲೆ ನಿಂತಿತ್ತು ಎಂಬುದನ್ನು ನಾವು ಮರೆಯಬಾರದು. ಈ ಸಾಮರ್ಥ್ಯವಿರುವುದು ಯುದ್ಧ ಸಾಮಗ್ರಿಗಳ ಸಂಗ್ರಹದಲ್ಲಿ ಇಂದು ಜಗತ್ತಿನ ಬಹುತೇಕ ರಾಷ್ಟ್ರಗಳು ನವೀನ ತಂತ್ರಜ್ಞಾನದ ಯುದ್ಧ ಸಾಮಗ್ರಿಗಳನ್ನು ಕೂಡಿಹಾಕುವುದಕ್ಕಾಗಿ ಆದಾಯದ ಬಹುಭಾಗವನ್ನು ವೆಚ್ಚಮಾಡುತ್ತಿವೆ. ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಬಳ್ಳಾರಿ ಹಾಗೂ ಕೃಷ್ಣನಗರದ ಕೋಟೆಯ ಭದ್ರವಾದ ಸ್ಥಳಗಳಲ್ಲಿ ಯುದ್ಧ ಸಾಮಗ್ರಿಗಳಾದ ಮದ್ದುಗುಂಡುಗಳನ್ನು ರಕ್ಷಿಸುವುದಕ್ಕಾಗಿ ಇಟ್ಟಿಗೆ ಗಾರೆಯನ್ನು ಬಳಸಿ ನಿರ್ಮಿಸಿರುವ ಕಣಜಗಳನ್ನು ನಾವು ಇಂದಿಗೂ ಕಾಣಬಹುದು.

ಕುರುಗೋಡಿನ ಕೋಟೆ ಕ್ರಿ.ಶ. ೧೦ನೆಯ ಶತಮಾನದ್ದು. ಇದು ರಾಜಕೀಯ ಏರಿಳಿತಗಳಿಂದಾಗಿ ಮೂಲರೂಪದಲ್ಲಿಲ್ಲ. ಕೋಟೆಯ ಒಳಸುತ್ತಿನ ಬಾಗಿಲುಗಳು ಸರಳವಾಗಿರದೆ ವೈರಿಗೆ ಗೊಂದಲವುಂಟು ಮಾಡುವ ರೀತಿಯಲ್ಲಿವೆ. ದೊಡ್ಡ ಕೊತ್ತಳದಂತೆ ಮುಂದೆ ಚಾಚಿರುವ ಭಾಗದ ಬದಿಯಲ್ಲಿರುವ ಬಾಗಿಲು ಶತ್ರು ದೃಷ್ಟಿಗೆ ಬೀಳುವುದಿಲ್ಲ. ಪ್ರವೇಶವು ಹಲವು ದಿಕ್ಕುಗಳನ್ನು ಬದಲಿಸುವುದರಿಂದ ಶತ್ರುವನ್ನು ತಡೆಹಿಡಿಯುವುದು ತೀರಾ ಸುಲಭ. ಈ ವ್ಯವಸ್ಥೆಯನ್ನು ಉಚ್ಚಂಗಿದುರ್ಗದ ಕೋಟೆಯಲ್ಲಿಯೂ ಅಳವಡಿಸಲಾಗಿದೆ. ಕೋಟೆಯು ಬಹು ವಿಶಾಲವಾಗಿರವುದಲ್ಲದೆ ಕಡಿದಾದ ಬೆಟ್ಟದ ಮೇಲೆಯು ಎತ್ತರವಾದ ಕೋಟೆ ಗೋಡೆಗಳಿದ್ದವು. ಹೀಗಾಗಿ ಕುರುಗೋಡಿನ ಶಾಸನಗಳು ಇದನ್ನು ಮುಗಿಲುದ್ದವಾಗಿ ಮುವಳಿಸಿದ ಕೋಟೆ ಎಂದಿವೆ.

ಪಾಳೆಯಗಾರರ ಕೋಟೆಗಳಲ್ಲಿ ಹಿಂದೂ-ಮುಸ್ಲಿಂ ಮಿಶ್ರ ಶೈಲಿಯನ್ನು ಗುರುತಿಸಬಹುದು. ಕಲ್ಲುಗಳ ಜೊತೆಗೆ ಇಟ್ಟಿಗೆ ಗಾರೆ ಬಳಕೆ ಹಾಗೂ ಕಮಾನಿನಾಕಾರದ ಬಾಗಿಲುಗಳು ರಚನೆಯಾದವು. ಈ ಮೊದಲಿದ್ದ ಆಳ್ವೇರಿಗಳ ಮೇಲಿನ ತೆನೆಗಳ ವಿನ್ಯಾಸದಲ್ಲಿ ಬದಲಾವಣೆಯಾಗಿದೆ. ಮುಂಚಿನ ಕೋಟೆ ತೆನೆಗಳು ಘನರೂಪದವುಗಳಾಗಿದ್ದವು. ಇವುಗಳ ಹಿಂದೆ ನಿಂತು ಬಿಲ್ಲುಗಾರರು ಎರಡು ತೆನೆಗಳ ಮಧ್ಯದ ಸಂಧಿಯ ಮೂಲಕ ಬಾಣಗಳನ್ನ ಬಿಡುತ್ತಿದ್ದರು. ಕ್ರಮೇಣ ಬಂದೂಕುಗಳ ಬಳಕೆ ಪ್ರಾರಂಭವಾದುದರಿಂದ ಅವುಗಳಿಗಾಗಿ ತೆನೆಗಳಲ್ಲಿ ಹಾಗೂ ಕೋಟೆ ಗೋಡೆಗಳಲ್ಲಿ ರಂಧ್ರಗಳನ್ನು ಬಿಟ್ಟಿರುವುದು ಗೋಚರಿಸುವುದರಿಂದ ಘನರೂಪ ಹಾಗೂ ರಂಧ್ರಗಳ ಈ ಎರಡು ಸ್ಥಿತ್ಯಂರಗಳನ್ನು ನಾವಿಲ್ಲಿ ಸೂಕ್ಷ್ಮವಾಗಿ ಗುರುತಿಸಬಹುದು.

ಕೋಟೆಗಳ ಜೊತೆಗೆ ಕೊತ್ತಳಗಳೆಂಬ ಪದವು ಸೇರಿಕೊಂಡಿದೆ. ಕೋಟೆಯಿಂದ ಕೊತ್ತಳವನ್ನು ಬೇರ್ಪಡಿಸುವುದೆಂದರೆ ಶರೀರದಿಂದ ಅಂಗಾಂಗಗಳನ್ನು ವಿಭಜಿಸಿದಂತೆ. ಕೋಟೆಗೆ ಭದ್ರತೆ ಇರುವುದೇ ಕೊತ್ತಳಗಳಿಂದ. ಹಾಗಾಗಿ ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ಕೊತ್ತಳಗಳನ್ನು ನಿರ್ಮಿಸುತ್ತಿದ್ದರು. ಕೊತ್ತಳವು ಎರಡು ಗೋಡೆಗಳನ್ನು ಜೋಡಿಸುವುದರ ಜೊತೆಗೆ ರಕ್ಷಣೆಯ ಜವಾಬ್ದಾರಿಯನ್ನು ಹೋರುತ್ತದೆ. ಹೀಗಾಗಿಯೇ ಕೌಟಿಲ್ಯನು ಕೊತ್ತಳಗಳು ಕೋಟೆಗೆ ಅಂಟಿ ಕೊಂಡಿರಬೇಕೆಂದಿದ್ದಾನೆ. ಕೊತ್ತಳವೆಂದರೆ ಬುರುಜು, ಹುಡೇವು ಎಂಬ ಅರ್ಥಗಳನ್ನು ಕಲ್ಪಿಸಲಾಗಿದೆ. ಇದಿನ್ನು ಚರ್ಚೆಯಾಗಬೇಕಾದ ವಿಷಯ. ಏಕೆಂದರೆ ಕೌಟಿಲ್ಯನ ಚಿಂತನೆಯಲ್ಲಿ ಕೊತ್ತಳವು ಭಿನ್ನ ಅರ್ಥವನ್ನು ಪಡೆದುಕೊಳ್ಳುತ್ತದೆ.

[1] ಸುಂದರ ಅ., ಕರ್ನಾಟಕ ಪ್ರಾಗಿತಿಹಾಸಕಾಲದ ಕಲೆ, ಪು.೬೭-೬೯, ಬೆಂಗಳೂರು ಐ.ಬಿ.ಎಚ್.ಪ್ರಕಾಶನ ೧೯೯೪.

[2] ದೇವರ ಕೊಂಡರೆಡ್ಡಿ ಮತ್ತು ಇತರರು, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, (ಬಳ್ಳಾರಿ ಜಿಲ್ಲೆ) ಪು. ೩೭೨-೭೫, ೧೯೯೮, ಹಂಪಿ ಕನ್ನಡ ವಿಶ್ವವಿದ್ಯಾಲಯ

[3] ಅದೇ., ಪು.೧೯

[4] ಚೆನ್ನಬಸವಯ್ಯ ಹಿರೇಮಠ, ಕುರುಗೋಡು ಸಿಂದರು : ಒಂದು ಅಧ್ಯಯನ, ಪು. ೧೦೮, ೧೯೯೮, ಕೊಪ್ಪಳ ಸಂಗಣ್ಣನವರು ಅಗಡಿ ಸಂಸ್ಕೃತಿ ಪ್ರತಿಷ್ಠಾನ

[5] ದೇವರ ಕೊಂಡಾರೆಡ್ಡಿ ಮತ್ತು ಇತರರು, ಪೂರ್ವೋಕ್ತ ಪು. ೪೦, ೧೯೯೮

[6] ಅದೇ., ಪು.೩೯

[7] ಅದೇ., ಪು. ೧೯

[8] ಚೆನ್ನಬಸವಯ್ಯ ಹಿರೇಮಠ, ಪುರ್ವೋಕ್ತ, ಪು. ೧೦೮, ೧೯೯೫

[9] ಅದೇ., ಪು. ೧೦೯

[10] ಅದೇ., ಪು.೧೦೯

[11] ಕೊಟ್ರೇಶ್ ಎಂ. ಕೋಟೆ ಕೊತ್ತಳಗಳು ಒಂದು ಅಧ್ಯಯನ (ಬಳ್ಳಾರಿ ಜಿಲ್ಲೆ) ಪಿಎಚ್.ಡಿ. ಮಹಾಪ್ರಬಂಧ, ೨೦೦೨, ಹಂಪಿ ಕನ್ನಡ ವಿಶ್ವವಿದ್ಯಾಲಯ

[12] ಅದೇ., ಪು. ೩೭

[13] ಅದೇ., ಪು. ೩೬

[14] ಕುರುಗೋಡಿನ ಬಸವೇಶ್ವರ ದೇವಾಲಯದ ದಕ್ಷಿಣಕ್ಕೆ ಇರಿಸಿರುವ ಶಾಸನದಲ್ಲಿ

[15] ಕಲಬುರ್ಗಿ ಎಂ.ಎಂ., (ಸಂ) ಕರ್ನಾಟಕದ ಕೈಫಿಯುತ್ತುಗಳು, ಪು. ४೫೫, ೧೯೯४, ಹಂಪಿ ಕನ್ನಡ ವಿಶ್ವವಿದ್ಯಾಲಯ

[16] ಅದೇ., ಪು. ४೫೫

[17] ಅದೇ., ಪು. ४೫೫

[18] SII IX (I) pt I No. 53, ಕುರುಗೋಡು

[19] ದೇವರಕೊಂಡಾರೆಡ್ಡಿ ಮತ್ತು ಇತರರು, ಪುರ್ವೋಕ್ತ, ಪು. ೨೩, ೧೯೯೮

[20] ಕಲಬುರ್ಗಿ ಎಂ.ಎಂ., ಸಂ, ಪುರ್ವೋಕ್ತ. ಪು. ४೫೬, ೧೯೯४

[21] ಚೆನ್ನಬಸವಯ್ಯ ಹಿರೇಮಠ., ಪುರ್ವೋಕ್ತ, ಪು. ೭೩-೭४, ೧೯೯೫

[22] ಚೆನ್ನಬಸವಯ್ಯ ಹಿರೇಮಠ., ಕುರುಗೋಡು ಕೋಟೆ ಮುತ್ತಿಗೆ, ಸೂರ್ಯಕೀರ್ತಿ (ಸಂ.) ಡಾ.ಕೃಷ್ಣಮೂರ್ತಿ ಮತ್ತು ಪಿ.ವಿ.ವಸಂತಲಕ್ಷ್ಮಿ ಪು. ೨೭४, ೨೦೦೦, ಬೆಂಗಳೂರು ಸೂರ್ಯನಾಥ ಕಾಮತ್ ಅಭಿನಂದನಾ ಸಮಿತಿ

[23] ಕಲಬುರ್ಗಿ ಎಂ.ಎಂ., (ಸಂ), ಪುರ್ವೋಕ್ತ, ಪು. ४೫೫, ೧೯೯४

[24] ಕೊಟ್ರೇಶ್ ಎಂ., ಪುರ್ವೋಕ್ತ, ಪು. ೮೧, ೨೦೦೨

[25] E.I XIV p. 297 ಕುರುಗೋಡು

[26] E.I XIV p.279 ಕುರುಗೋಡು

[27] ಚೆನ್ನಬಸವಯ್ಯ ಹಿರೇಮಠ, ಪುರ್ವೋಕ್ತ, ಪು. ೧೦४, ೧೯೯೫

[28] E.I. XIV p.265 ಕುರುಗೋಡು

[29] ಚೆನ್ನಬಸವಯ್ಯ ಹಿರೇಮಠ, ಪುರ್ವೋಕ್ತ, ಪು. ೧೦४, ೧೯೯೫

[30] SII IX (I)p. 296, ಕುರುಗೋಡು

[31] ಚೆನ್ನಬಸವಯ್ಯ ಹಿರೇಮಠ., ಪುರ್ವೋಕ್ತ, ಪು. ೨೭೫, ೨೦೦೨

## ೭. ಮೌಖಿಕ ಆಕರಗಳು

ಇತಿಹಾಸ ಸಂಶೋಧಕರು ಹಸ್ತಪ್ರತಿ, ಶಾಸನ ಮತ್ತು ಸ್ಮಾರಕಗಳನ್ನು ಆಧರಿಸಿ ಹೇಳುವ ಅಥವಾ ಬರೆದಿರುವ ಚರಿತ್ರೆ ಇತಿಹಾಸದ ಒಂದು ಭಾಗ. ಅದರ ಇನ್ನೊಂದು ಭಾಗ ಜನಪದರಲ್ಲಿದೆ. 'ಜನಪದರಲ್ಲಿ ನಿರ್ದಿಷ್ಟ ಕಾಲಮಿತಿಯ ಆಕರಗಳನ್ನೊಳಗೊಂಡ ಇತಿಹಾಸ ಅಥವಾ ಚರಿತ್ರೆ ಎಂಬುದಿಲ್ಲ. ಅವರಲ್ಲಿ ಪುರಾಣ, ಕಥೆ, ಕಾವ್ಯ ಮತ್ತು ಐತಿಹ್ಯಗಳಿವೆ. ಅದನ್ನೇ ಅವರು ಇತಿಹಾಸ ಎಂದು ತಿಳಿದುಕೊಂಡಿದ್ದಾರೆ ಮತ್ತು ಅದನ್ನೇ ಅವರು ನಿರೂಪಿಸುತ್ತಾರೆ'. ಇತಿಹಾಸ ಸಂಶೋಧಕರಂತೆ ಜಾನಪದ ನಿರೂಪಕರಿಗೆ ದಾಖಲೆಗಳು ಬೇಕಾಗಿಲ್ಲ. ಅದರ ಅವಶ್ಯಕತೆಯೂ ಅವರಿಗೆ ಇಲ್ಲ. ಅವರು ನಿರೂಪಿಸುವುದನ್ನೇ ಸತ್ಯ ಎಂದು ನಂಬಿ ಅದನ್ನೇ

ಪ್ರತಿಪಾದಿಸುತ್ತಾರೆ. ಪ್ರತಿಯೊಂದು ಪ್ರದೇಶದ ಮೌಖಿಕ ಪರಂಪರೆಯಲ್ಲಿರುವ ಪುರಾಣ, ಕಥೆ, ಕಾವ್ಯ ಅಧ್ಯಯನಕ್ಕೆ ತೊಡಗಿಕೊಂಡಾಗ ಆ ಪ್ರದೇಶದ ಚರಿತ್ರೆಯ ಇನ್ನೊಂದು ಮುಖದ ಪರಿಚಯವಾಗುತ್ತದೆ.

ಒಂದು ಪ್ರದೇಶದ ಸಮಗ್ರ ಅಧ್ಯಯನವೆಂದರೆ ಅಲ್ಲಿಯ ಚರಿತ್ರೆ, ಹಸ್ತಪ್ರತಿ, ಶಾಸನ ಮತ್ತು ಸ್ಮಾರಕಗಳಿಂದ ಮಾತ್ರ ಪರಿಪೂರ್ಣವಾಗಲಾರದು. ಅದರ ಜೊತೆಗೆ ತಲೆತಲಾಂತರಗಳಿಂದ ಮೌಖಿಕ ಪರಂಪರೆಯಲ್ಲಿ ಉಳಿದಿರುವ ಸಾಹಿತ್ಯದ ಅಧ್ಯಯನವೂ ಅಷ್ಟೆ ಮುಖ್ಯ. ಇತಿಹಾಸ ರಚನೆಕಾರರ ಕಣ್ಣಿಗೆ ಗೋಚರಿಸದೇ ಉಳಿದಿರುವ ಅದೆಷ್ಟೋ ನಗ್ನ ಸತ್ಯಗಳು ಜಾನಪದ ಸಾಹಿತ್ಯದಲ್ಲಿ ಹುದುಗಿಕೊಂಡಿರುತ್ತವೆ. ಒಂದು ಘಟ್ಟದಲ್ಲಿ ಇತಿಹಾಸ ತಜ್ಞರು ಚರಿತ್ರೆ ಬರೆಯುವಾಗ ಅಲ್ಲಿಯ ಲಿಖಿತ ಆಕರಗಳೇ ಮೂಲ ಆಕರಗಳು ಮೌಖಿಕ ಪರಂಪರೆಯಲ್ಲಿರುವ ಯಾವುದೇ ಆಕರಗಳಿಗೆ ಸಾಕ್ಷಿಗಳಿರುವುದಿಲ್ಲ ಎಂದು ನಿರಾಕರಿಸುತ್ತಿದ್ದರು. ಈ ಮನೋಧರ್ಮ ಬದಲಾಗಬೇಕಾಗಿದೆ. ಜಾನ್‌ಫ್ಲೀಟ್ ಅವರು ಸಂಗ್ರಹಿಸಿದ ಲಾವಣಿಗಳ ಮತ್ತು ಆ ಪ್ರದೇಶದ ಚರಿತ್ರೆಯ ಅಧ್ಯಯನ ಮಾಡಿದಾಗ ಚರಿತ್ರೆಕಾರರಿಗೆ ಗೊತ್ತಾಗದೇ ಇರುವ ಅನೇಕ ಸಂಗತಿಗಳನ್ನು ಅರಿತುಕೊಳ್ಳಬಹುದು. ಹೀಗಾಗಿ ಚರಿತ್ರೆಯನ್ನು ಪುನರ್ ರಚಿಸುವಾಗ ಮೌಖಿಕ ಆಕರಗಳನ್ನು ಗಮನಿಸಬೇಕಾದುದು ಅತ್ಯವಶ್ಯವಾಗಿ ನಡೆಯಬೇಕಾಗಿದೆ.

ಬಳ್ಳಾರಿ ಜಿಲ್ಲೆ ಪ್ರಾಗಿತಿಹಾಸ ಮತ್ತು ಇತಿಹಾಸಕಾಲದ ಅನೇಕ ಅವಶೇಷಗಳನ್ನೊಳಗೊಂಡ ಸ್ಥಳವಾಗಿದೆ. ಇದಕ್ಕೆ ಕುರುಗೋಡು ಹೊರತಾಗಿಲ್ಲ. ಪ್ರಾಗಿತಿಹಾಸಕಾಲದ ಮಾನವ ಇಲ್ಲಿ ಬಾಳಿ ಬದುಕಿದ್ದ ಎಂಬುದಕ್ಕೆ ಈ ಪರಿಸರದಲ್ಲಿರುವ ಬೆಟ್ಟಗಳು, ಗುಹೆಗಳು, ಬಂಡೆ ಚಿತ್ರಗಳು, ಅವನು ಬಳಸುತ್ತಿದ್ದ ಕೈಕೊಡಲಿಗಳು ಸಾಕ್ಷಿಗಳಾಗಿವೆ. ಕುರುಗೋಡು ಪ್ರದೇಶ ಪ್ರಾಗಿತಿಹಾಸಕಾಲದಿಂದ ಇತಿಹಾಸ ಕಾಲದವರೆಗೆ ಆದಿಮಾನವನ ಪರಿವರ್ತನಾಶೀಲವಾದ ಬದುಕನ್ನು ಕಂಡಿದೆ ಎಂಬುದು ಹೆಮ್ಮೆಯ ವಿಷಯ. ಆದಿಮ ಸಂಸ್ಕೃತಿಯ ಅನೇಕ ಮೌಲಿಕ ಬುಡಕಟ್ಟು, ಸಾಂಸ್ಕೃತಿಕ, ಮಾನವಶಾಸ್ತ್ರ, ಪ್ರಾಗಿತಿಹಾಸ, ಚರಿತ್ರೆ, ಶಾಸನ, ಸಮಾಜಶಾಸ್ತ್ರ, ಜಾನಪದ, ರಾಜಕೀಯ ಮುಂತಾದ ಹಲವಾರು ಕ್ಷೇತ್ರಗಳಲ್ಲಿ ಅಧ್ಯಯನ ಕೈಕೊಳ್ಳಲು ಕುರುಗೋಡು ಪ್ರಶಸ್ತ ಸ್ಥಳವಾಗಿದೆ.

ಆದಿಮಾನವನ ತನ್ನ ಬದುಕಿನ ಅನೇಕ ಸ್ಥಿತ್ಯಂತರಗಳನ್ನು ಈ ಪ್ರದೇಶದಲ್ಲಿ ಕಂಡುಕೊಂಡಿದ್ದಾನೆಂದು ಹೇಳುವುದು ನಿರ್ವಿವಾದ. ಕುರುಗೋಡು ಆದಿಮಾನವನಿಂದ ಬೇಟೆ, ಪಶುಪಾಲನೆ, ಕೃಷಿ ನಂತರ ರಾಜ್ಯ, ಸಾಮ್ರಾಜ್ಯದವರೆಗೆ ಮಾನವ ತನ್ನ ಸಮಗ್ರ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಂಡ ಪ್ರದೇಶವಾಗಿದೆ. ಕುರುಗೋಡು ಐತಿಹಾಸಿಕವಾಗಿ, ಧಾರ್ಮಿಕವಾಗಿ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಸಮೃದ್ಧ ನಾಡು. ಇಲ್ಲಿಯವರೆಗೆ ಇಲ್ಲಿಯ ಚರಿತ್ರೆ, ಪ್ರಾಗಿತಿಹಾಸ, ಸ್ಮಾರಕ, ಶಾಸನ ಇವುಗಳ ಮೇಲೆ ಬೆಳಕು ಚೆಲ್ಲುವ ಅಧ್ಯಯನಗಳು ನಡೆದಿವೆ ಆದರೆ ಮೌಖಿಕ ಚರಿತ್ರೆ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಧ್ಯಯನ ಅತ್ಯಲ್ಪ. ಈ ಪ್ರದೇಶದ ಪಾರಂಪರಿಕ ಜ್ಞಾನ, ಮೌಖಿಕ ಸಂಸ್ಕೃತಿ, ಸಾಹಿತ್ಯದ ಮೂಲಕ ಸಂವಹನಗೊಳ್ಳುತ್ತ ಬಂದಿರುವ ನಮ್ಮ ಅನೇಕ ಅನುಭವದ, ವಾಸ್ತವದ ತಿಳುವಳಿಕೆಗಳು ಮಾನವನಷ್ಟೇ ಪ್ರಾಚೀನವಾದವು. ಮನುಕುಲದ ಅಧ್ಯಯನವನ್ನು ಈ ಪ್ರದೇಶದಲ್ಲಿ ಕೈಕೊಳ್ಳಬೇಕಾಗಿದೆ.

ಇತಿಹಾಸದ ಪುಟಗಳನ್ನು ತಿರುವಿದಾಗ ರಾಜ, ಮಹಾರಾಜ, ಮಂತ್ರಿ, ಪುರೋಹಿತ, ಆಡಳಿತಾಧಿಕಾರ ಅವರ ಪತ್ನಿಯರ, ಮಕ್ಕಳ ಮತ್ತು ಯುದ್ಧ ಅಥವಾ ರಾಜ್ಯವಿಸ್ತಾರದ ವಿಷಯ ತಿಳಿಯುತ್ತದೆ. ಆದರೆ ಈ ರಾಜ್ಯವನ್ನು ಕಟ್ಟಿದ, ಹೋರಾಟದಲ್ಲಿ ಸತ್ತ, ರಾಜನಿಗಾಗಿ ಪ್ರಾಣತ್ಯಾಗ ಮಾಡಿದವರ ಹೆಸರಿನಲ್ಲಿ ಹೆಚ್ಚೆಂದರೆ ಒಂದು ವೀರಗಲ್ಲು ಇರುತ್ತದೆ. ಅದು ಯಾವ ವೀರನಿಗೆ ಸಂಬಂಧಿಸಿದ ವೀರಗಲ್ಲು ಎಂಬುದನ್ನು ಅಲ್ಲಿ ನಮೂದಿಸಿರುವುದಿಲ್ಲ. ಅವನಿಗೆ ಸಂಬಂಧಿಸಿದ ಯಾವ ಚರಿತ್ರೆಯೂ ಇತಿಹಾಸದಲ್ಲಿರುವುದಿಲ್ಲ. ಇಂತಹ ಅನೇಕ ಮರೆಮಾಚಿದ, ರಾಜ್ಯಕ್ಕಾಗಿ, ರಾಜನಿಗಾಗಿ, ಈ ಸಂಸ್ಕೃತಿಗಾಗಿ, ಹೋರಾಡಿದ ಸಾಂಸ್ಕೃತಿಕ ವೀರರ, ಚಾರಿತ್ರಿಕ ವೀರರ ಚರಿತ್ರೆ ಮೌಖಿಕ ಸಾಹಿತ್ಯ ಪರಂಪರೆಯಲ್ಲಿ ಉಳಿದುಕೊಂಡಿರುತ್ತದೆ. ಹೀಗಾಗಿ ಮನುಕುಲದ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಲು ಅಕ್ಷರ ಸಂಸ್ಕೃತಿಯ ಸೋಂಕಿಲ್ಲದೇ ಇರುವ ಮೌಖಿಕ ಸಾಹಿತ್ಯದಲ್ಲಿ ತಲೆತಲಾಂತರ ವರ್ಷಗಳಿಂದ ಜನರು ಬದುಕಿದ, ಬದುಕುತ್ತಿದ್ದ, ಅವರ ಸಂಸ್ಕೃತಿ, ಆಚಾರ, ವಿಚಾರ, ಕಾವ್ಯ, ಕಥೆ, ಪುರಾಣ, ಧರ್ಮ, ನಂಬಿಕೆ ಸಂಪ್ರದಾಯ, ಇವುಗಳ ಅಧ್ಯಯನದಿಂದ ಈ ಪ್ರದೇಶದ ಸಂಸ್ಕೃತಿಯ ಹತ್ತಾರು ಮುಖಗಳ ದರ್ಶನವಾಗುತ್ತದೆ.

ಮೌಖಿಕ ಸಾಹಿತ್ಯ ಉಳಿದೆಲ್ಲ ಸಾಹಿತ್ಯ ಪ್ರಕಾರಗಳಿಗೆ ಅದು ತಾಯಿಬೇರು. ಈ ಮೌಖಿಕ ಸಾಹಿತ್ಯ ಎರಡು ಪ್ರಮುಖ ಮಾಧ್ಯಮಗಳ ಮೂಲಕ ಪ್ರಸಾರವಾಗುತ್ತಿರುತ್ತದೆ. ೧. ಮಾತು ೨. ಕೃತಿ

ಕೇಳುವುದು ಅದನ್ನು ಜ್ಞಾಪಕದಲ್ಲಿಟ್ಟು ಇನ್ನೊಬ್ಬರಿಗೆ ಹೇಳುವುದು. ನೋಡುವುದು ಅದನ್ನು ನೆನಪಿನಲ್ಲಿಟ್ಟುಕೊಂಡು ಅದರಂತೆ ಅಭಿವ್ಯಕ್ತಪಡಿಸುವುದು. ಇವೆರಡು ಮೌಖಿಕ ಸಾಹಿತ್ಯದ ಪ್ರಮುಖ ಲಕ್ಷಣಗಳು. ಜನಪದ ಪುರಾಣ, ಐತಿಹ್ಯ, ಕಥೆ, ಗೀತೆ, ಗಾದೆ, ಒಗಟು, ಕಾವ್ಯಗಳು ಇವೇ ಮೊದಲಾದವುಗಳು ಮಾತಿಗೆ ಸಂಬಂಧಿಸಿದ ಮಾಧ್ಯಮಗಳಾಗಿವೆ.

ನಂಬಿಕೆ, ಆಚಾರ-ವಿಚಾರ, ಸಂಪ್ರದಾಯ, ಶಿಲ್ಪ, ವಾಸ್ತುಶಿಲ್ಪ, ಚಿತ್ರ, ನರ್ತನ, ಆಟಗಳು, ಬಯಲಾಟ ಮುಂತಾದವು ಕೃತಿ ಮಾಧ್ಯಮವಾಗಿವೆ.

ಕುರುಗೋಡಿನ ಸುತ್ತಲಿನ ಪ್ರದೇಶ ಆದಿಮಾನವನ ನೆಲೆಯಾಗಿತ್ತು ಎಂಬುದನ್ನು ಈಗಾಗಲೇ ಇತಿಹಾಸ ತಜ್ಞರು ಗುರುತಿಸಿದ್ದಾರೆ. ಆದಿಮಾನವನಿಂದ ಅರ್ವಾಚೀನ ಮಾನವನವರೆಗೆ ಮೌಖಿಕ ಪರಂಪರೆ ಹೇಗೆ ರೂಪಗೊಂಡು ಸ್ಥಿತ್ಯಂತರಗಳನ್ನು ಹೊಂದುತ್ತ ವಿವಿಧ ಶಾಖೆಗಳಲ್ಲಿ ಬೆಳೆದು ಬಂದಿತು ಎಂಬುದನ್ನು ಗಮನಿಸುವುದು ಸೂಕ್ತವೆನಿಸುತ್ತದೆ.

**ಧರ್ಮ-ಜನಪದ ಪದ್ಯ ಸಾಹಿತ್ಯ**

ಕುರುಗೋಡು ಪರಿಸರ ಹನ್ನೆರಡನೆಯ ಶತಮಾನಕ್ಕಾಗಲೇ ಭಕ್ತಿ ಪಂಥದ ಕೇಂದ್ರವಾಗಿತ್ತು. ಇಲ್ಲಿಯ ಪ್ರಮುಖ ಆರಾಧ್ಯ ದೈವಗಳಲ್ಲೊಂದಾದ ವಜ್ರಬಂಡಿ ಬಸಪ್ಪನನ್ನು ಕುರಿತಾದ ಅನೇಕ ಹಾಡುಗಳಲ್ಲಿ, ಭಜನೆ, ಡೊಳ್ಳಿನ ಹಾಡುಗಳಲ್ಲಿ ಪ್ರಸ್ತಾಪಿಸುತ್ತಿದ್ದರು. ಜಗತ್ತಿನಲ್ಲಿಯ ಯಾವುದೇ ಧರ್ಮವಿರಲಿ ಅದಕ್ಕೂ ಸಂಗೀತಕ್ಕೂ ಇರುವ ಅವಿನಾಭಾವ ಸಂಬಂಧ ಮಾತ್ರ ಅತ್ಯಂತ ಪ್ರಾಚೀನವಾದದು. ಜನಪದ ಸಂಗೀತ ಆದಿಮಾನವನ ಜೊತೆಗೆ ಬೆಳೆದು ಬಂದಿರುವಂತಹದ್ದು. ಮಾತು ಬಾರದ ಆದಿಮಾನವನ ತನ್ನ ಸುತ್ತಲಿದ್ದ ಪರಿಸರದಲ್ಲಿನ ಪಶುಪಕ್ಷಿಗಳ, ಪ್ರಾಣಿಗಳ ಕೂಗುಗಳನ್ನು ಅನುಕರಣೆ ಮಾಡುತ್ತ ತನ್ನಲ್ಲಿಯ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಪ್ರಾಣಿಗಳಂತೆ ಲಯಬದ್ಧವಾಗಿ ಕೂಗತೊಡಗಿದ. ಇಲ್ಲಿಂದಲೇ ಜನಪದ ಸಾಹಿತ್ಯದ ಸಂಗೀತದ ಬೇರುಗಳು ಪ್ರಾರಂಭವಾದವು. ಆದಿಮಾನವನ ಬೆಳೆದಂತೆ ಸಂಗೀತವೂ ಅವನ ಜೊತೆ ಜೊತೆಗೆ ಬೆಳೆಯಿತು. ಅಲೆಮಾರಿಯಾಗಿದ್ದ ಮೂಲ ಮಾನವ ಕೃಷಿ ವೃತ್ತಿಯನ್ನು ಕೈಕೊಂಡು, ಒಂಟಿತನದಿಂದ ಸಂಘ ಜೀವನಕ್ಕೆ ಕಾಲಿಟ್ಟು, ಕಾಲಾನಂತರದ ಧರ್ಮದ ಚೌಕಟ್ಟಿಗೊಳಪಟ್ಟಂತೆ ಅವನ ಜೊತೆಗಿದ್ದ ಸಂಗೀತವು ಹೊಸ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತ, ಮಾನವನಿಗೆ ಸಂತೋಷ ನೀಡುತ್ತ ಬೆಳೆಯಿತು. ಮಾನವನ ಬದುಕಿಗೆ ಗಾಳಿ, ನೀರು, ಆಹಾರ ಎಷ್ಟು ಮುಖ್ಯವೋ, ಅಷ್ಟೇ ಜನಪದ ಹಾಡುಗಾರಿಕೆ ಮುಖ್ಯವಾಯಿತು. ಆದಿಮಾನವನ ಕ್ರಿಯೆಯಲ್ಲಿಯೇ ಸಂಗೀತ ಅಂಟಿಕೊಂಡಿತು. ಹೀಗಾಗಿ ಮಾನವನ ಅನೇಕ ವೃತ್ತಿಗಳಲ್ಲಿ ಹಾಡುಗಳಿರುವುದನ್ನು ಕಾಣುತ್ತೇವೆ. ಬೀಸುವಾಗ, ಕುಟ್ಟುವಾಗ, ರೈತ ಹೊಲಗದ್ದೆಗಳನ್ನು ಉಳುವಾಗ, ಕಳೆಕೀಳುವಾಗ, ಹಂತಿ ಹೊಡೆಯುವಾಗ, ರಾಸಿ ಮಾಡುವಾಗ, ಭಕ್ತಿಯಿಂದ ದೈವವನ್ನು ಒಲಿಸಿಕೊಳ್ಳುವಾಗ ಹೀಗೆ ಹತ್ತು ಹಲವಾರು ಕ್ರಿಯೆಗಳಲ್ಲಿ ಹಾಡುಗಳು ಮೂಡಿ ಬಂದವು.

ಮೌಖಿಕ ಸಾಹಿತ್ಯ ಪರಂಪರಾನುಗತವಾಗಿ ಉಳಿದು ಬೆಳೆಯುತ್ತ ಬರಲು ಅದರಲ್ಲಿರುವ ಗೇಯ ಪ್ರಧಾನತೆಯೇ ಪ್ರಮುಖ ಕಾಣರವಾಗಿದೆ. ಈ ಪರಿಸರದಲ್ಲಿ ಇರುವ ಕಾಳಿಂಗರಾಯ ಸಾಸಿ ಚೆನ್ನಮ್ಮ, ಕುರುಗೋಡು ಬಸವಣ್ಣ ಮುಂತಾದವರನ್ನು ಕುರಿತಾದ ಹಾಡು, ಕಾವ್ಯಗಳೆಲ್ಲ ಉಳಿದು ಬರಲಿಕ್ಕೆ ಅದು ಗೇಯಪ್ರಧಾನವಾದ ಹಾಡುಗಬ್ಬವಾಗಿರುವುದೇ ಕಾರಣ. ಪ್ರಾಚೀನ ಜನಪದ ಕವಿಗಳು ಗದ್ಯಕ್ಕಿಂತ ಪದ್ಯ ಸಾಹಿತ್ಯಕ್ಕೆ ಹೆಚ್ಚು ಮನ್ನಣೆ ನೀಡಿದ್ದಾರೆ. ಈ ಕಾರಣಕ್ಕಾಗಿ ಅವು ಮೌಖಿಕ ಪರಂಪರೆಯಲ್ಲಿ ಉಳಿದು ಬರಲು ಸಾಧ್ಯವಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ಚಂಪೂ, ವಚನ, ರಗಳೆ, ಷಟ್ಪದಿ ಈ ಕಾವ್ಯ ಪ್ರಕಾರಗಳೆಲ್ಲವೂ ಹಾಡುಗಬ್ಬಗಳು. ಕುಮಾರವ್ಯಾಸ ಭಾರತವನ್ನು ಹಾಡುವ ಅನೇಕ ಕಲಾವಿದರು ಇಂದೂ ಅಲ್ಲಲ್ಲಿ ಸಿಗುತ್ತಾರೆ. ಹೀಗಾಗಿ ಧಾರ್ಮಿಕ ಪವಿತ್ರ ಗ್ರಂಥಗಳನ್ನು ಬರೆದಿಟ್ಟು ಓದುವುದರ ಬದಲು, ಕಂಠ ಪರಂಪರೆಯಿಂದ ಹಾಡಿಕೊಳ್ಳುವುದು ಹೆಚ್ಚು ಕಡಿಮೆ ಎಲ್ಲ

ಜನಾಂಗಗಳಲ್ಲಿಯೂ ಬಹಳ ಹಿಂದಿನಿಂದಲೂ ಬಂದಿದೆ. ಹೀಗಾಗಿ ಕುರುಗೋಡು ಪರಿಸರದಲ್ಲಿಯೂ, ಡೊಳ್ಳಿನ ಹಾಡುಗಳು, ಭಜನೆ ಹಾಡುಗಳು, ಶರಣರ ಸ್ವರವಚನಗಳು, ಬಯಲಾಟದ ಪದ್ಯಗಳು, ಕಾವ್ಯಗಳು ಪರಂಪರಾಗತವಾಗಿ ಉಳಿದು ಬೆಳೆದು ಬರಲಿಕ್ಕೆ ಅದು ಹಾಡಿನ ರೂಪದಲ್ಲಿರುವುದರಿಂದಲೇ ಸಾಧ್ಯವಾಗಿದೆ.

ಜಾನಪದ ಸಾಹಿತ್ಯದಲ್ಲಿ ಅನೇಕ ಕಲಾ ಪ್ರಕಾರಗಳಿವೆ. ಕೋಲಾಟ, ಡೊಳ್ಳಿನ ಕುಣಿತ, ದೊಡ್ಡಾಟ, ಸಣ್ಣಾಟ, ಪುರವಂತರ ಕುಣಿತ, ಸುಗ್ಗಿಕುಣಿತ, ನಂದಿಕೋಲು ಕುಣಿತ, ಲಾವಣಿ, ಗೀಗೀ ಮುಂತಾದವು ಪ್ರದರ್ಶಿಸಲ್ಪಡುತ್ತಿವೆ. ಈ ಕಲೆಗಳ ಪ್ರದರ್ಶನದಲ್ಲಿ ಹಾಡುಗಾರಿಕೆಗೆ ಮಹತ್ವದ ಸ್ಥಾನವಿದೆ. ಜನಪದ ಕಲೆಗಳಲ್ಲಿ ಹಾಡು ಮೊದಲು ಕುಣಿತ ನಂತರ. ಕನ್ನಡ ನಾಡಿನಾದ್ಯಂತ ಅನೇಕ ಬುಡಕಟ್ಟು ಮತ್ತು ಜನಪದ ಮಹಾಕಾವ್ಯಗಳುಂಟು. ಈ ಮಹಾಕಾವ್ಯಗಳು ಧರ್ಮ, ಚಾರಿತ್ರಿಕ ಘಟನೆ, ಸಮುದಾಯಗಳ ಸಂಸ್ಕೃತಿ, ಅವರ ಆಚಾರ ವಿಚಾರ, ಸಂಪ್ರದಾಯ ಮುಂತಾದ ಅನೇಕ ವಿಷಯಗಳನ್ನು ಬಿಂಬಿಸುವ ಸಾಂಸ್ಕೃತಿಕ ಮತ್ತು ಧಾರ್ಮಿಕ ಮಾಧ್ಯಮಗಳಾಗಿವೆ. ಈ ಪ್ರದೇಶದ ಡೊಳ್ಳಿನ ಹಾಡು, ಸಾಸಿ ಚೆನ್ನಮ್ಮನ ಕಾವ್ಯ, ಕುಮಾರ ರಾಮ ಮತ್ತು ಕೃಷ್ಣಗೊಲ್ಲರ ಕಥನ ಕಾವ್ಯ ಮುಂತಾದವು ಸುಮಾರು ಮೂರುನೂರು ಪುಟಗಳಿಂದ ನಾಲ್ಕುನೂರು ಪುಟಗಳಷ್ಟು ವಿಸ್ತಾರವಾದವುಗಳಾಗಿವೆ. ಇಂತಹ ಮಹಾಕಾವ್ಯಗಳನ್ನು ಕಲಾವಿದರು ತಮ್ಮ ಸ್ಮೃತಿ ಪಟಲದಲ್ಲಿಟ್ಟುಕೊಂಡು ಹಾಡುತ್ತ ಬಂದಿರುವ ಪರಂಪರೆಯನ್ನು ಇಂದೂ ಕಾಣುತ್ತೇವೆ.

ಜಾನಪದ ಕ್ಷೇತ್ರದಲ್ಲಿ ಪದ್ಯ ಸಾಹಿತ್ಯ ಅತ್ಯಂತ ವಿಸ್ತಾರವಾದದ್ದು. ಜನಪದ ಹಾಡು ಗಾರಿಕೆಯಲ್ಲಿ ಸಾವಿರಾರು ಲಯಗಳಿವೆ. ಆಯಾ ಪದ್ಯಗಳನ್ನು ಆಯಾ ಲಯದಲ್ಲಿ ಹಾಡಿದರೆ ಮಾತ್ರ ಸೊಗಸು. ಜನಪದ ಹಾಡುಗಾರಿಕೆಯಲ್ಲಿ ಹುಟ್ಟಿಕೊಂಡ ಲಯಗಳು ಕ್ರಿಯಾ ಪ್ರಧಾನವಾದವುಗಳು. ಕುಟ್ಟುವ, ಬೀಸುವ ಹಾಡಿನ ಲಯದಲ್ಲಿ ಹಂತಿ, ರಾಸಿ ಪದಗಳನ್ನು ಹಾಡಿದರೆ ಅಭಾಸವೆನಿಸುತ್ತದೆ. ಹಾಡುಗಾರಿಕೆಯಲ್ಲಿ ಅತೀ ದೊಡ್ಡ ಶಕ್ತಿ ಅಡಗಿದೆ. ಪ್ರೇಕ್ಷಕರನ್ನು ಸಮ್ಮೋಹನಕ್ಕೊಳಪಡಿಸುವ ಶಕ್ತಿ ಜನಪದ ಸಂಗೀತ ಮತ್ತು ಹಾಡುಗಾರಿಕೆಯಲ್ಲಿದೆ. ಇಂತಹ ಶಕ್ತಿಯುಳ್ಳ ಸಂಗೀತವನ್ನು ಜಗತ್ತಿನ ಎಲ್ಲ ಧಾರ್ಮಿಕ ಪಂಥಗಳು, ತಮ್ಮ ದೈವದ ಸ್ಮರಣೆಗಾಗಿ, ಧರ್ಮದ ಪ್ರಚಾರಕ್ಕಾಗಿ, ಸಮುದಾಯದ ಸಂಸ್ಕೃತಿ ಆಚರಣೆ ಸಂಪ್ರದಾಯಗಳನ್ನು ಅಭಿವ್ಯಕ್ತಪಡಿಸುವುದಕ್ಕಾಗಿ, ಮನರಂಜನೆಗಾಗಿ ಬಳಸಿಕೊಂಡಿದ್ದಾರೆ.

ಕುರುಗೋಡು ಶೈವ ಧರ್ಮದ ಪ್ರಮುಖ ಕೇಂದ್ರವಾಗಿತ್ತೆಂದು ಹೇಳಬಹುದು. ಹಂಪೆಯ ವಿರೂಪಾಕ್ಷದೇವರಿಗೆ ಕುರುಗೋಡಿನ ಬಸವೇಶ್ವರ ಎದುರು ದೇವರು ಎಂಬ ಪ್ರತೀತಿ ಇದೆ. ಯುಗಾದಿಯ ಪಾಡ್ಯದದಿನ ಹಂಪೆಯಲ್ಲಿರುವ ವಿರೂಪಾಕ್ಷದೇವನ ಲಿಂಗಕ್ಕೆ ಸೂರ್ಯೋದಯವಾದ ಕೂಡಲೇ ಸೂರ್ಯನ ಕಿರಣಗಳು ಈಶ್ವರ ಲಿಂಗದ ಮೇಲೆ ಬೀಳುತ್ತವೆ. ಅಂದೆ ಸಾಯಂಕಾಲ ಸೂರ್ಯನ ಕಿರಣಗಳು ಕುರುಗೋಡಿನ ಬಸವೇಶ್ವರ ಮೇಲೆ ಮೂಡುತ್ತವೆ. ಹೀಗಾಗಿ ಹಂಪೆಯ ವಿರೂಪಾಕ್ಷನಿಗೆ ಕುರುಗೋಡಿನ ಬಸವ ಎದುರು ಬಸವನಾಗಿದ್ದಾನೆ ಎಂಬ ಭಾವನೆ ಇದೆ. ಕುರುಗೋಡಿನ ಪರಿಸರದಲ್ಲಿ ಶೈವ ದೇವಾಲಯಗಳೇ ಹೆಚ್ಚು ಕಂಡು ಬರುತ್ತವೆ. ಅದರಲ್ಲೂ ವೀರಭದ್ರನ ಆರಾಧನೆ ಸಂಪ್ರದಾಯ ಈ ಪರಿಸರದಲ್ಲಿ ಪ್ರಮುಖ ಸ್ಥಾನ ಪಡೆದುಕೊಂಡಂತಿದೆ. ಈ ಪ್ರದೇಶದಲ್ಲಿ ಪಂಚಮುಖದ ವೀರಭದ್ರ, ಕೊಳವೆ ವೀರಭದ್ರ, ಗವಿ ವೀರಭದ್ರ ದೇವಸ್ಥಾನಗಳಿರುವುದು ಕಂಡು ಬರುತ್ತದೆ. ಶ್ರಾವಣ ಮಾಸದಲ್ಲಿ ಬಸವೇಶ್ವರ ದೇವಸ್ಥಾನದಲ್ಲಿ ನಡೆಯುವ ಆಚರಣೆಗಳನ್ನು ಗಮನಿಸಿದಾಗ ಪ್ರತಿ ಶ್ರಾವಣ ಸೋಮವಾರ ಬಸವೇಶ್ವರ ದೇವಸ್ಥಾನದಿಂದ ಪಾಲಕಿ ವೀರಭದ್ರನ ದೇವಸ್ಥಾನಕ್ಕೆ ಹೋಗಿ ಬರುವ ಪರಂಪರೆ ಇರುವುದು ಕಂಡು ಬರುತ್ತದೆ. ಹೀಗಾಗಿ ಈ ಪರಿಸರದಲ್ಲಿ ವೀರಭದ್ರನ ಕುಣಿತ, ತಾಸೆ ಕುಣಿತ, ಪುರವಂತಿಕೆ ಮೇಳ, ಗುಗ್ಗಳ ಸಂಪ್ರದಾಯ ಪ್ರಮುಖವಾಗಿ ಕಂಡುಬರುತ್ತದೆ.

ವೀರಭದ್ರ ಶಿವನ ಪರಿವಾರದಲ್ಲಿ ಪರಾಕ್ರಮಶಾಲಿಯಾದ ದೈವ. ವೀರಭದ್ರನ ಸೃಷ್ಟಿ ಕುರಿತು ಪುರಾಣದಲ್ಲಿ ಹೀಗೆ ಉಲ್ಲೇಖವಾಗಿದೆ. ದಕ್ಷಬ್ರಹ್ಮ ಮಹಾಯಜ್ಞವನ್ನು ಮಾಡುವಾಗ ಶಿವ ಮತ್ತು ಉಮಾದೇವಿಯನ್ನು ಹೊರತು ಪಡಿಸಿ ಎಲ್ಲ ದೇವಾನು ದೇವತೆಗಳಿಗೆ, ಋಷಿ ಮುನಿಗಳಿಗೆ ಆಹ್ವಾನವನ್ನು ನೀಡಿರುತ್ತಾನೆ. ದಕ್ಷಬ್ರಹ್ಮನ ಮಗಳು ಉಮೆ ಶಿವನನ್ನು ಒತ್ತಾಯಿಸಿ ಯಜ್ಞಕ್ಕೆ ಕರೆಯನ್ನಿಡದಿದ್ದರೂ ಹೋಗುತ್ತಾಳೆ. ಅಲ್ಲಿ ದಕ್ಷಬ್ರಹ್ಮ ಎಲ್ಲರ ನಡುವೆ ಶಿವನನ್ನು ಶಿವನನ್ನು ಅವಮಾನಗೊಳಿಸುತ್ತಾನೆ. ಗಂಡನಿಗಾದ ಅವಮಾನವನ್ನು ಸಹಿಸದ ಉಮೆ ಯಜ್ಞ ಕುಂಡದಲ್ಲಿ ಹಾರಿ ಸಾವನ್ನಪ್ಪುತ್ತಾಳೆ. ಇದನ್ನು ತಿಳಿದ ಶಿವ ತನ್ನ ಜಡೆಯನ್ನು ನೆಲಕ್ಕೆ ಅಪ್ಪಳಿಸಿದಾಗ ವೀರಭದ್ರ

ಉದಯಿಸುತ್ತಾನೆ. ಶಿವನ ಆಜ್ಞೆಯ ಮೇರೆಗೆ ದಕ್ಷಬ್ರಹ್ಮ ನಡೆಸುವ ಯಜ್ಞ ಸ್ಥಳಕ್ಕೆ ಹೋಗಿ ದಕ್ಷಬ್ರಹ್ಮನನ್ನು ಕೊಲ್ಲುತ್ತಾನೆ ಎಂಬ ಪುರಾಣ ಕಥೆಯನ್ನು ಹೊರತು ಪಡಿಸಿ ನೋಡಿದರೆ 'ಆರ್ಯ ಮತ್ತು ದ್ರಾವಿಡ ಸಂಘರ್ಷದ ಮಧ್ಯ ವೀರಭದ್ರ ಹುಟ್ಟಿದ ಎಂದು ತೋರುತ್ತದೆ. ಆರ್ಯ ಮೂಲದ ದಕ್ಷ ಮತ್ತು ದ್ರಾವಿಡ ಮೂಲದ ಶಿವ ಇವರಿಬ್ಬರ ಸಂಘರ್ಷಣೆಯೇ ವೀರಭದ್ರನ ಅವತಾರಕ್ಕೆ ಕಾರಣವಾಗಿರಬಹುದು'.[1] ಆರ್ಯರು ದ್ರಾವಿಡರ ಮೇಲೆ ಅನ್ಯಾಯ ದೌರ್ಜನ್ಯಗಳನ್ನು ಎಸಗುತ್ತಲೇ ಬಂದಿದ್ದರು. ಅವರ ಅಟ್ಟಹಾಸವನ್ನು ಅಡಗಿಸಲು ವೀರಭದ್ರನೆಂಬ ಸಾಂಸ್ಕೃತಿಕ ನಾಯಕ ಹುಟ್ಟಿಬಂದ. ಮುಂದೆ ವೀರಭದ್ರ ಒಬ್ಬ ಸಾಂಸ್ಕೃತಿಕ ನಾಯಕನಾಗಿ, ಶಿವನ ಪರಿವಾರದ ವೀರದೈವನಾಗಿ, ಕೊನೆಗೆ ಪುರಾಣ ದೈವವಾಗಿ ನಿಂತಿದ್ದಾನೆ. ಅಂದಿನಿಂದ ಇಂದಿನವರೆಗೂ ವೀರಭದ್ರ ಧಾರ್ಮಿಕವಲಯದ ದೈವವಾಗಿ ಆರಾಧನೆಗೊಳಪಡುತ್ತ ಬಂದಿದ್ದಾನೆ. ವೀರಭದ್ರನ ಶಕ್ತಿ, ಸಾಹಸ, ವೀರತ್ವಗಳನ್ನು ಗುಣಗಾನ ಮಾಡಲು ಸ್ಮರಿಸುವ ಆಚರಣೆ, ಮದುವೆ ಸಮಯದ ಗುಗ್ಗಳ ಕಾರ್ಯದಲ್ಲಿ ನಡೆಯುತ್ತದೆ. ವೀರಭದ್ರನ ಶೌರ್ಯ, ವೀರಭದ್ರನ ಕುಣಿತ, ತಾಸೆ ಕುಣಿತ, ಪುರವಂತರ ಕುಣಿತ, ವೀರಗಾಸೆ ಕುಣಿತ ಎಂಬುದಾಗಿ ಕರೆಯುತ್ತಾರೆ. ಈ ಪರಂಪರೆ ಕುರುಗೋಡು ಪರಿಸರದಲ್ಲಿ ದಟ್ಟವಾಗಿರುವುದನ್ನು ಕಾಣುತ್ತೇವೆ. ವೀರಶೈವರ ಮದುವೆ ಕಾರ್ಯದಲ್ಲಿ ಗುಗ್ಗಳ ಆಚರಣೆ ಇದ್ದೇ ಇರುತ್ತದೆ. ವೀರಭದ್ರ ವೀರಶೈವ ಸಮುದಾಯದ ಅನೇಕ ಕುಟುಂಬಗಳಲ್ಲಿ ಮನೆ ದೇವನಾಗಿ ಸ್ಥಾನ ಪಡೆದುಕೊಂಡಿದ್ದಾನೆ. ವೀರಭದ್ರನ ಕುಣಿತ ಆಚರಣೆಗಳನ್ನು ವಿಧಿವತ್ತಾಗಿ ನೆರವೇರಿಸುವ ಸಲುವಾಗಿ ಅನೇಕ ಕುಟುಂಬಗಳಲ್ಲಿಯ ಪುರುಷರು 'ಕಾಸೆ' ಕಟ್ಟಿಕೊಂಡು ತಮ್ಮ ಸೇವೆಯನ್ನು ವೀರಭದ್ರನಿಗಾಗಿಯೇ ಮುಡುಪಾಗಿಟ್ಟಿರುವುದನ್ನು ಕುರುಗೋಡು ಪರಿಸರದಲ್ಲಿ ಕಾಣುತ್ತೇವೆ. ಪುರವಂತಿಕೆ ಮೇಳದಲ್ಲಿ ವೀರಭದ್ರನ ಸ್ಮರಣೆಗಾಗಿ ಒಡಬುಗಳನ್ನು ಪುರವಂತರು ಹೇಳುತ್ತಾರೆ. ಇಲ್ಲಿ ಅಲ್ಲಮಪ್ರಭು, ಬಸವಣ್ಣನ ವಚನಗಳನ್ನು ಬಳಸಿಕೊಂಡಿರುತ್ತಾರೆ. ಕುರುಗೋಡಿನ ಪರಿಸರದ ಪುರವಂತರು ತಮ್ಮ ಪರಿಸರದಲ್ಲಿ ಸಂದು ಹೋದ ಶರಣ ಎಮ್ಮೆ ಬಸವನ ಕಾಲಜ್ಞಾನದ ವಚನಗಳನ್ನು ಹೆಚ್ಚಾಗಿ ಬಳಸಿಕೊಂಡಿದ್ದಾರೆ ಎಂಬುದು ತಿಳಿಯುತ್ತದೆ. ಇಂತಹ ಧಾರ್ಮಿಕ ಕಲೆಗಳೆಲ್ಲವೂ ಪರಂಪರಾನುಗತವಾಗಿ ಮೌಖಿಕ ಪರಂಪರೆಯಲ್ಲಿ ಉಳಿದು ಬಂದಿವೆ. ಪುರವಂತಿಕೆ ಕುಣಿತದಲ್ಲಿ ಬಳಸುವ ಸಮಾಳ ವಾದ್ಯ, ವೀರ ರೌದ್ರತೆಯಿಂದ ಕೂಡಿದ ವೀರಭದ್ರನ ರೂಪದ ಕುಣಿತಕ್ಕೆ ಮತ್ತಷ್ಟು ರೌದ್ರತೆಯನ್ನು ತಂದು ಕೊಡುತ್ತದೆ. ಕೃಷಿ ವೃತ್ತಿಯಾಗಿ ಬೆಳೆದು ಬಂದ ಮೇಲೆ ನಂದಿ ಆರಾಧ್ಯ ದೈವವಾದರೆ, ವೀರಭದ್ರ ನಂದಿಗಿಂತ ಮೊದಲು ಆರಾಧ್ಯ ದೈವವಾಗಿದ್ದರಿಂದ ಕುರುಗೋಡಿನಲ್ಲಿ ಬಸವೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದಲ್ಲಿ ಆಚರಿಸಲ್ಪಡುವ ಆಚರಣೆಯಲ್ಲಿ ವೀರಭದ್ರ ದೇವರಿಗೆ ಮೊದಲ ಪೂಜೆ ಕಲ್ಪಿಸಿರುವುದು ಕಂಡು ಬರುತ್ತದೆ.

ಕುರುಗೋಡಿನ ಸಿಂಧರು, ವಿಜಯನಗರ ಅರಸರು ಕುರುಗೋಡಿನ ಬಸವೇಶ್ವರನನ್ನು ಆರಾಧ್ಯ ದೈವವಾಗಿರಿಸಿಕೊಂಡಿದ್ದರು. ಕುರುಗೋಡು ಪರಿಸರದಲ್ಲಿ ಭಜನೆ, ಡೊಳ್ಳಿನ ಹಾಡುಗಳ ಪರಂಪರೆ ಬಹಳ ಹಿಂದಿನಿಂದ ಮೌಖಿಕವಾಗಿ ಬೆಳೆದು ಬಂದಿದೆ. ಭಜನೆ, ಭಕ್ತಿಗೀತೆಗಳ, ಡೊಳ್ಳಿನ ಹಾಡುಗಳ ಮೇಲೆ ಶೈವ ಭಕ್ತಿ ಪಂಥದ ಪ್ರಭಾವವಿದೆಯೆಂದು ತಿಳಿಯುತ್ತದೆ. 'ಒಂಟಿಯಾಗಿ ಅಥವಾ ಗುಂಪಿನಲ್ಲಿ ದೇವರನ್ನು ಭಕ್ತಿಯಿಂದ ಸ್ತುತಿಸುವ ಕ್ರಮಕ್ಕೆ 'ಭಜನೆ' ಎನ್ನುವರು', ಭಕ್ತನೊಬ್ಬ ದೈನ್ಯತೆಯಿಂದ ಪರಮಾತ್ಮನನ್ನು ಕುರಿತು ಪ್ರಾರ್ಥಿಸಿ, ವರ್ಣಿಸಿ, ಸ್ತುತಿಸಿ ಹಾಡುವಂತಹ ಭಕ್ತಿಗೀತೆಗಳನ್ನು 'ಭಜನೆ'ಗಳೆಂದು ಕರೆಯಬಹುದು.[2] ಕುರುಗೋಡಿನಲ್ಲಿ ಡೊಳ್ಳಿನ ಮೂಲಕ, ಭಜನೆ ಮೂಲಕ ತಮ್ಮ ಆರಾಧ್ಯ ದೈವಗಳನ್ನು ಸ್ಮರಿಸುವ ಸಮುದಾಯಗಳನ್ನು ಕಾಣುತ್ತೇವೆ. ಭಜನೆ ಭಕ್ತಿ ಪಂಥದ ಪ್ರಮುಖ ಕೊಡುಗೆಯಾಗಿದೆ. ದುಃಖ, ಅಶಾಂತಿ, ದ್ವೇಷ, ಅಸೂಯೆ ತುಂಬಿದ ಮನಸ್ಸುಗಳಿಗೆ 'ಭಜನೆ'ಯ ಮೂಲಕ ಶಾಂತಿ ನೆಮ್ಮದಿ ನೀಡಲು ಸಾಧ್ಯ ಎಂಬುದನ್ನು ಅರಿತುಕೊಂಡ ಜನ ಸಮುದಾಯಗಳು ದೇವರ ನಾಮಸ್ಮರಣೆಯುಳ್ಳ ಹಾಡುಗಳನ್ನು, ವಚನಗಳನ್ನು ಮೇಳಗಳಲ್ಲಿ ಹಾಡತೊಡಗಿದರು. ಶಿವರಾತ್ರಿಯ ದಿನ ಕುರುಗೋಡು ಪರಿಸರದ ಅನೇಕ ಭಜನೆಮೇಳಗಳು ಹಂಪೆಗೆ ಬಂದು ಬೆಳತನಕ ಭಜನೆ ಮಾಡುವುದನ್ನು ಕಾಣುತ್ತೇವೆ. ಕರ್ನಾಟಕದ 'ಭಕ್ತಿ ಪಂಥಗಳು ಹುಟ್ಟಿ ಪ್ರಚಾರ ಪಡೆದ ಮೇಲೆ ಭಜನೆ ಪದ್ಧತಿಯು ಬಹುಬೇಗ ಜನಪ್ರಿಯವಾಯಿತು. ಪ್ರತಿ ಹಳ್ಳಿಗಳಲ್ಲಿಯೂ ಭಜನಾ ಮೇಳಗಳಿವೆ. ಭಜನಾ ಮೇಳಗಳ ಮೂಲ ಉದ್ದೇಶ ಭಗವದ್ಭಕ್ತಿಯನ್ನು ಸಾಮೂಹಿಕವಾಗಿ ಪ್ರಚೋದಿಸುವುದು ಆಗಿದೆ.'[3] ಈ ಭಜನೆಯೂ ಮೌಖಿಕ ಪರಂಪರೆಯಲ್ಲಿ ಸಾಗಿ ಬಂದಿರುವುದನ್ನು ಕಾಣುತ್ತೇವೆ. ಕುರುಗೋಡಿನ ಪರಿಸರದಲ್ಲಿ ಭಜನಾ ಮೇಳಗಳಲ್ಲದೇ ಡೊಳ್ಳಿನ ಮೇಳಗಳು ಅಲ್ಲಲ್ಲಿ ಕಂಡು ಬರುತ್ತವೆ. ಈ ಮೇಳಗಳಲ್ಲಿಯೂ ದೈವದ ನಾಮಸ್ಮರಣೆ ಕುರಿತಾದ ಹಾಡುಗಳನ್ನು, ಐತಿಹಾಸಿಕ, ಸಾಂಸ್ಕೃತಿ, ಚಾರಿತ್ರಿಕ, ಪೌರಾಣಿಕ ಕಥನ ಗೀತೆಗಳನ್ನು ಹಾಡುತ್ತಾರೆ.

ಚೌಡಕಿ ಮೇಳಗಳು ಕುರುಗೋಡ ಪರಿಸರದಲ್ಲಿ ಕಂಡು ಬರುತ್ತವೆ. ಮಾತೃ ದೇವತೆಯ ಆರಾಧನೆಗಾಗಿ ಹುಟ್ಟಿಕೊಂಡ ಈ ಆರಾಧನಾ ಪದ್ಧತಿ ಮೌಖಿಕ ಪರಂಪರೆಯಲ್ಲೇ ಸಾಗಿ ಬಂದಿದೆ. ಕುರುಗೋಡು ಪರಿಸರದಲ್ಲಿ ಆರಾಧಿಸಲ್ಪಡುವ ಶಕ್ತಿ ದೇವತೆಗಳನ್ನು ಕುರಿತು ಈ ಚೌಡಕಿ ಮೇಳಗಳಲ್ಲಿ ಕುಣಿಯುತ್ತ ಹಾಡುತ್ತಾರೆ. ಜೋಗಪ್ಪ, ಜೋಗವ್ವ, ಬಿಡುವ ಸಂಪ್ರದಾಯ ಈ ಪ್ರದೇಶದಲ್ಲಿರಬಹುದು. ಚೌಡಕಿ ಹಿಡಿದು ಹಾಡುವ ಈ ಕಲಾವಿದರಲ್ಲಿಯ ಕುಣಿತ ಹಾಡು ಮನಸ್ಸೆಳೆಯುವಂತಹದ್ದಾಗಿದೆ.

**ಬಯಲಾಟ**

ಕುರುಗೋಡು ಕುಡುತಿನಿ ಪ್ರದೇಶಗಳಲ್ಲಿ ಒಂದು ಕಾಲಕ್ಕೆ ಮೌಖಿಕವಾಗಿ ಸಾಗಿ ಬಂದ ಬಯಲಾಟಗಳ ಕೊಡುಗೆ ಅದ್ವಿತೀಯವಾದದ್ದು. ಈ ಪ್ರದೇಶದ ಬಯಲಾಟಗಳು ಸಿಂಧರ ಮತ್ತು ವಿಜಯನಗರ ಅರಸರ ಆಡಳಿತ ಕಾಲದಿಂದಲೇ ಹೆಚ್ಚು ಪ್ರಚಾರಕ್ಕೆ ಬಂದಂತೆ ತೋರುತ್ತದೆ. ಯಕ್ಷಗಾನ ಕೇವಲ ಕರಾವಳಿ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಕುರುಗೋಡಿನಲ್ಲಿಯೂ ಯಕ್ಷಗಾನಗಳ ಪ್ರದರ್ಶನ ನಡೆಯುತ್ತಿತ್ತು ಎಂಬುದರ ಉಲ್ಲೇಖ ಕುರುಗೋಡಿನ ಸೀಮೆಯ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿರುವ ಶಾಸನದಿಂದ ತಿಳಿಯುತ್ತದೆ. ಈ ದೇವರಿಗೆ ಯಕ್ಷಗಾನದ ತಾಳಮದ್ದಲೆಯ ಸೇವೆ ನಡೆಸಿದವರಿಗೆ ದತ್ತಿ ಬಿಟ್ಟುದುದನ್ನು ಈ ಶಾಸನ ತಿಳಿಸುತ್ತದೆ. ಈ ಶಾಸನ ೧೫೫೬ರ ಕಾಲದ್ದು.

ಕುರುಗೋಡಿನ ಸುತ್ತಮುತ್ತ ಅನೇಕ ದೊಡ್ಡಾಟದ ಕಲಾವಿದರು ಇಂದೂ ಬಯಲಾಟಗಳನ್ನಾಡುವ ಪರಂಪರೆಯನ್ನು ಬೆಳೆಸಿಕೊಂಡು ಬಂದವರಾಗಿದ್ದಾರೆ. ಇವರು ಆಡುವ ಆಟಗಳೆಲ್ಲ ಹೆಚ್ಚಾಗಿ ವೀರ ರಸ ಪ್ರಧಾನವಾದವುಗಳೇ ಆಗಿವೆ. ಇದಕ್ಕೆ ಕಾರಣವನ್ನು ಹೀಗೆ ಊಹಿಸಬಹುದು. ಕುರುಗೋಡು, ಕಂಪ್ಲಿ, ಕುಡುತಿನಿ ಮುಂತಾದ ಈ ಪ್ರದೇಶ ದೊಡ್ಡಾಟಗಳ ತೌರುಮನೆಯೆಂದೇ ಹೇಳಬಹುದು. ಈ ಪ್ರದೇಶವನ್ನಾಳಿದ ಸಿಂದರು, ವಿಜಯನಗರ ಅರಸರು ಪರಾಕ್ರಮಶಾಲಿಗಳು. ಅವರ ಪ್ರಭಾವ ಈ ದೊಡ್ಡಾಟಗಳ ಮೇಲೆ ಆಗಿರಬಹುದು. ಹೀಗಾಗಿ ಈ ಪ್ರದೇಶಗಳಲ್ಲಿ ವೀರರಸ ಕಲ್ಲಕಂಬದ ಹೂವಣ್ಣ ವೃತ್ತಿಯಲ್ಲಿ ಪೋಲಿಸ ಕೆಲಸ ನಿರ್ವಹಿಸುತ್ತಿದ್ದರೂ ಇವರಿಗೆ ದೊಡ್ಡಾಟದ ಗೀಳು ಅಂಟಿಕೊಂಡಿದೆ ಎಂಬುದು ತಿಳಿಯುತ್ತದೆ.

ಕುಡುತಿನಿ ಮತ್ತು ಕಂಪಲಿಯಲ್ಲಿ ದೊಡ್ಡಾಟಗಳನ್ನು ರಚಿಸುತ್ತಿದ್ದರು ಎಂಬುದಕ್ಕೆ ಈ ಕೆಳಗಿನ ಪದ್ಯವನ್ನು ಗಮನಿಸಬಹುದು.

*'ಶ್ರೀ ಗೌರಿ ವರಪುತ್ರಾ, ಸತತಾಶುಭ ಚರಿತ್ರಾ*
*ಯೋಗಿ ಸಜ್ಜನ ಸ್ತೋತ್ರ ಜನನಿಭಾಗಾತ್ರಾ* //೧//

*ನಿಟಿಲನೇತ್ರನ ಸುತನೆ ನಿಗಮಗಮ ವಂದಿಪನೆ*
*ಸತಿತಾ ಸನ್ನಿತಕರ್ಣಾ ಕುಂಡಲಾಭರಣಾ* //೨//

*ಪೊಡವಿಯೊಳ್ ಕುಡುತಿನಿಯ ಒಡೆಯ ಭೀಮೇಶನ್*
*ಒಡೆಯ ಭೀಮೇಶನ ಬಿಡದೆ ಭಜಿಸುವೆ ನಾನು* //೩//

*ಶ್ರೀ ವಿಘ್ನರಾಜಾ ಪಾಹಿಮಾಂ*
ಗಿರಿಜಾತೆನಂದನ ಮಾಡುವೆನು ವಂದನ
ನಿಮ್ಮ ಪಾದ ಸ್ಮರಣೆ ಮಾಳ್ಪೆ ಧನ್ಯ ಚರಿತನೆ
ಸನ್ನತಗುಣ ಶಾಂತವಿಟ್ಟು
ಪಾಲಿಸು ಮುದದಿ
ಕಲುಷರಹಿತ ಕಂಪಲಿಪುರ ನಿಲಯದಿ

ನೆಲೆಸಿ ಭಕ್ತಜನರಿಗೊಲಿದು ಸಲುಹೋ ನೀ ಮುದದಿ
ಕಾರಣ್ಯ ಶಶಧಿ ಭಕ್ತ ಜನರಿಗೊಲಿದು ಸಲಹೋ ನೀ ಮುದದಿ'[4]

ಕುರುಗೋಡಿನ ಅಕ್ಕ ಪಕ್ಕದ ಪ್ರದೇಶಗಳಾದ ಕುಡುತಿನಿ ಮತ್ತು ಕಂಪಲಿಯಲ್ಲಿ ರಚನೆಯಾದ ಬಯಲಾಟಗಳು ಕುರುಗೋಡಿನ ಕಲಾವಿದರ ಮೂಲಕ ಪ್ರದರ್ಶನಗೊಳ್ಳುತ್ತಿದ್ದವು ಎಂದು ತಿಳಿಯುತ್ತದೆ. 'ಕುರುಗೋಡದ ದೊಡ್ಡ ಬಸವೇಶ್ವರನನ್ನು ಆರಾಧ್ಯ ದೈವವೆಂದು ನಂಬಿದ ಬಯಲಾಟ ಕವಿಗಳು ಮೊದಲಿಗೆ ಬಯಲಾಟ ಕೃತಿಗಳ ನೇರವಾದ ರಚನೆಗೆ ತೊಡಗದೆ, ಆ ದೇವತಾ ಪರವಾದ ಸ್ತುತಿ, ಮಂಗಳಾರತಿ, ತತ್ವದ ಹಾಡುಗಳನ್ನು ರಚಿಸಿದ್ದಾರೆ. ಇದರೊಟ್ಟಿಗೆ ಬಯಲಾಟದ ಕಥೆಗಳ ಜೋಡಣೆಯನ್ನು ಅವರೇ ಮಾಡಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಧಾರ್ಮಿಕ, ಸಾಂಸ್ಕೃತಿಕ ನೆಲವಾದ ಈ ಪ್ರದೇಶ ಬಯಲಾಟ ಸಾಹಿತ್ಯದ ಬೆಳವಣಿಗೆಯ ಕೇಂದ್ರ ಪ್ರದೇಶವಾಗಿ ಕಾಣುತ್ತದೆ'.[5]

ಕುರುಗೋಡಿನಲ್ಲಿ ಬಯಲಾಟಗಳ ಗೀಳೂ ಅಂಟಿಸಿಕೊಂಡವರ ಪರಂಪರೆ ಒಂದು ಕಾಲಕ್ಕಿತ್ತು ಎಂದು ಹೇಳಬಹುದು. ಕುರುಗೋಡದ ಕೆ.ದೊಡ್ಡಪ್ಪಾಚಾರಿ ಅವರು ಳಲ ಬಯಲಾಟ ಹಸ್ತ ಪ್ರತಿಗಳನ್ನು ಪ್ರತಿ ಮಾಡಿಕೊಂಡಿದ್ದರು. ಎಂಬುದನ್ನು ಗಮನಿಸಿದರೆ ಈ ಪ್ರದೇಶ ಬಯಲಾಟಗಳು ಪ್ರದರ್ಶಿಸಲಲ್ಪಡುವ ಪ್ರಮುಖ ಕೇಂದ್ರಗಳಲ್ಲಿ ಒಂದಾಗಿತ್ತು ಎಂದು ಭಾವಿಸಬಹುದು.

'ಕುರುಗೋಡಿನ ದೊಡ್ಡಪ್ಪಾಚಾರಿ ಅವರು ಬಯಲಾಟಗಳಲ್ಲಿ ನುರಿತ ಕಲಾವಿದರು. ಬಯಲಾಟಗಳಲ್ಲಿ ಚಿಕ್ಕಂದಿನಿಂದಲೇ ಸ್ತ್ರೀ ಪಾತ್ರ ನಿರ್ವಹಿಸುತ್ತ ಬಂದವರು. ಕುರುಗೋಡಿನ ಜೀರ್ ಗಾದೆಪ್ಪ ದೊಡ್ಡಪ್ಪಾಚಾರಿಯ ಗುರುಗಳು. ದೊಡ್ಡಪ್ಪಾಚಾರಿ ರಾಮಾಯಣದಲ್ಲಿ ಸೀತೆ, ದುಷ್ಯಾಸನ ಕಥೆಯಲ್ಲಿ ದ್ರೌಪದಿ, ದಕ್ಷಬ್ರಹ್ಮದಲ್ಲಿ ಪಾರ್ವತಿ, ಗಿರಿಜಾ ಕಲ್ಯಾಣದಲ್ಲಿ ರತಿ, ಲವಕುಶರ ಕಾಳಗದಲ್ಲಿ ಸೀತೆಯಾಗಿ ಪಾತ್ರವಹಿಸಿದ್ದಾರೆ. ಇವರು ಕಥೆ ಕಲಿಸುವ ಮಾಸ್ತರರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು ಎಂದು ತಿಳಿಯುತ್ತದೆ. ಕುರುಗೋಡಿನವರೇ ಆದ ಈರಪ್ಪ ಬಯಲಾಟದ ಗೀಳು ಅಂಟಿಸಿಕೊಂಡು ಬಯಲಾಟ ಕಲಿಸುವ ವೃತ್ತಿಯನ್ನು ಹಿಡಿದಿದ್ದಾರೆ ಮತ್ತು ಸ್ವತಃ ಮುಮ್ಮೇಳದಲ್ಲಿ ಹಾಡುತ್ತಾರೆ. ಇವರ ಹತ್ತಿರವೂ ನಾಲ್ಕು ಬಯಲಾಟದ ಹಸ್ತಪ್ರತಿಗಲಿರುವದು ತಿಳಿದು ಬರುತ್ತದೆ.

ಕುರುಗೋಡಿನ 'ಮೇಲುಮಠದ ದೊಡ್ಡಯ್ಯ (ಕ್ರಿ.ಶ. ೧೮೬೦-೧೯೫೦)ನವರು 'ಲವಕುಶರ ಕಾಳಗ ಮತ್ತು ಷಣ್ಮುಖ ವಿಜಯ' ಎಂಬ ಎರಡು ಬಯಲಾಟಗಳನ್ನು ರಚಿಸಿರುವುದು ತಿಳಿಯುತ್ತದೆ. ಶಿಕ್ಷಕ ವೃತ್ತಿಯವರಾದ ಇವರು ಕುರುಗೋಡಿನ ನೀಲಮ್ಮನ ಮಠಕ್ಕೆ ಮತ್ತು ಸೋಮಸಮುದ್ರಕ್ಕೆ ಪುರಾಣ ಪ್ರವಚನಗಳಿಗೆ ಹೋಗುತ್ತಿದ್ದರು. ಇವರು ಮಂಗಳಾರತಿ ಪದಗಳನ್ನು ರಚಿಸಿದ್ದರು ಎಂದು ತಿಳಿಯುತ್ತದೆ.[6] ಈ ಎಲ್ಲ ಹಿನ್ನೆಲೆಗಳನ್ನು ಗಮನಿಸಿದಾಗ ಕುರುಗೋಡಿನಲ್ಲಿ ಜನಪದ ರಂಗಭೂಮಿ ಜನಪ್ರಿಯತೆಗಳಿಸಿಕೊಂಡಿತ್ತು ಎಂಬುದನ್ನು ಗಮನಿಸಬಹುದಾಗಿದೆ.

**ಐತಿಹ್ಯಗಳು**

ಭಾರತೀಯ ಸಂಸ್ಕೃತಿಯಲ್ಲಿ ನಂಬಿಕೆ, ಸಂಪ್ರದಾಯ, ಆಚರಣೆಗಳು, ದೈವಿಕತೆ ಹಾಸು ಹೊಕ್ಕಾಗಿರುವುದನ್ನು ಕಾಣುತ್ತೇವೆ. ಪ್ರತಿಯೊಂದು ಪ್ರದೇಶದಲ್ಲಿ ಅನೇಕ ಐತಿಹ್ಯಗಳನ್ನೊಳಗೊಂಡ ಕಥೆಗಳು ಕಂಡು ಬರುವುದು ಸರ್ವೇಸಾಮಾನ್ಯ. ಜಾನಪದವು ಒಂದೊಂದು ಕಲ್ಲಿಗೂ ಒಂದೊಂದು ಕಥೆ ಹೆಣೆದಿದ್ದಾರೆ. ಹಂಪೆಯಲ್ಲಿರುವ ಅಕ್ಕತಂಗಿಯರ ಕಲ್ಲುಗಳನ್ನು ಗಮನಿಸಬಹುದು. ಅವುಗಳ ನೆಲೆ, ಹಿನ್ನೆಲೆ ಕುರಿತು ಅಧ್ಯಯನ ಮಾಡಿದಾಗ ಅದರಿಂದ ಗತಕಾಲದಲ್ಲಿ ನಡೆದ ಚರಿತ್ರೆ ಅಥವಾ ಸಂಸ್ಕೃತಿಯೊಂದರ ತುಣುಕು ಗೋಚರಿಸುತ್ತದೆ.

'ಐತಿಹ್ಯಗಳು ಇತಿಹಾಸದ ವಿಕೃತಗೊಂಡ ಮುರಿದ ಚೂರುಗಳಾಗಿ ಚರಿತ್ರೆಯ ನಿರ್ಮಾಣಕ್ಕೆ ಸಹಾಯಕವಾಗುತ್ತವೆ. ಹೀಗಾಗಿ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಐತಿಹ್ಯಗಳು ಐತಿಹಾಸಿಕ ಮಹತ್ತ್ವವನ್ನು ಪಡೆಯುತ್ತವೆ. ಇತಿಹಾಸದ ಅಧ್ಯಯನದಲ್ಲಿ ಐತಿಹ್ಯಗಳು ಮೈಲುಗಲ್ಲುಗಳಾಗಿವೆ. ಒಬ್ಬ ಚರಿತ್ರೆಕಾರ ಸಂಧಿಗ್ಧ ಸ್ಥಿತಿಯಲ್ಲಿದ್ದಾಗ ಐತಿಹ್ಯಗಳು ಒಂದೊಂದು ಸಲ ಸ್ಪಷ್ಟವಲ್ಲದಿದ್ದರೂ ಅಸ್ಪಷ್ಟ ಬೆಳಕು ಚೆಲ್ಲಿ ಸಂಶೋಧನೆಗೆ ನೆರವಾಗುತ್ತದೆ' ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಜನಪದ ಕಾವ್ಯದಂತೆ ಬಿತ್ತರಿಸುವ ಕುರುಗೋಡು ಶಾಸನದಲ್ಲಿ ಮಹಾಶಿವ ಭಕ್ತನಾದ ಸಿಂದ ಅರಸ ರಾಚಮಲ್ಲನ ವರ್ಣನೆಯಲ್ಲಿ, ಶಿವನು ನಂದಿ, ಮಹಾಕಾಳ, ಪಾರ್ವತಿಯೊಡನೆ ಬಂದು ರಾಚಮಲ್ಲನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಾರೆ. ಆಗ ಲೋಕಕ್ಕೆ ಕೌತುಕವಾಗಿ ಕಾಣುವಂತೆ ಕುರುಗೋಡು ಪಟ್ಟಣದ ಶ್ರೀ ಸ್ವಯಂಭೂದೇವರ ಪಶ್ಚಿಮ ಭಾಗದಲ್ಲಿ ಲಿಂಗ ರೂಪದಲ್ಲಿ ಉದ್ಭವಿಸಲು ಶ್ರೀ ಮದುದ್ಭವರಾಜಮಲ್ಲನೆಂದು ಹೆಸರು ಪಡೆಯುತ್ತಾನೆ.

ಕುರುಗೋಡಿನ ಹೊರವಲಯದಲ್ಲಿರುವ ಹೊರವಲಯದಲ್ಲಿರುವ ಮಾರ್ತಾಂಡ ದೇವಸ್ಥಾನ ಅಲ್ಲಿಯ ಜನರ ಬಾಯಿಯಲ್ಲಿ ಅದು ಮಾತಾಡೊ ಗುಡಿಯಾಗಿ ಪರಿಣಮಿಸಿದೆ. ಇದಕ್ಕೆ ಕಾರಣ ಇಷ್ಟೆ. ಗುಡಿಯಲ್ಲಿ ಮಾತನಾಡಿದರೆ ಅಲ್ಲಿ ಪ್ರತಿಧ್ವನಿಯಾಗುತ್ತದೆ. ಆ ಪ್ರತಿಧ್ವನಿಯನ್ನಿಟ್ಟುಕೊಂಡು 'ಮಾತಾಡೊ ಗುಡಿ'ಎಂಬ ಹೆಸರನ್ನು ಹುಟ್ಟುಹಾಕಿದಂತಿದೆ. ಕುರುಗೋಡಿನ ಊರ ಹೊರಗಿರುವ ಸಂಗಮೇಶನ ದೇವಸ್ಥಾನವನ್ನು 'ಹಿಂಡುಲಿ ಸಂಗಮೇಶನ ದೇವಸ್ಥಾನ' ಎಂದೇ ಗುರುತಿಸುತ್ತಿದ್ದಾರೆ. ಕುರುಗೋಡು ಸುತ್ತಲಿನ ಪ್ರದೇಶ ಗುಡ್ಡ ಬೆಟ್ಟಗಳಿಂದ ಕೂಡಿರುವಂತಹದ್ದು. ಇಲ್ಲಿ ಹುಲಿಗಳ ಸಂಖ್ಯೆ ಒಂದು ಕಾಲಕ್ಕೆ ಅಧಿಕವಾಗಿದ್ದು, ನೀರು ಆಹಾರಕ್ಕಾಗಿ ಸಂಗಮೇಶ್ವರ ಗುಡಿಯ ಹತ್ತಿರ ಬಂದು ವಾಸಿಸುತ್ತಿರಬೇಕು. ಇದನ್ನು ಕಂಡ ಜನರು ಸಂಗಮೇಶ್ವರ ದೇವಸ್ಥಾನದಲ್ಲಿ ಹಿಂಡಿಂಡಾಗಿ ಹುಲಿಗಳು ಕಂಡು ಬರುತ್ತವೆಂದು ಹೇಳುತ್ತಿರುವುದೇ ಮುಂದೆ 'ಹಿಂಡುಲಿ ಸಂಗಮೇಶ್ವರ ದೇವಸ್ಥಾನ' ಆಗಿ ಪರಿಣಮಿಸಿರಬೇಕು.

ಕುರುಗೋಡಿನ ಜನಪದರ ಸೌಂದರ್ಯ ಪ್ರಜ್ಞೆಯನ್ನು ಕಲ್ಲು ಬೆಟ್ಟಗಳಲ್ಲಿಯೂ ಹೇಗೆ ಕಂಡು ಕೊಂಡಿದ್ದಾರೆಂಬುದನ್ನು ಗಮನಿಸಬಹುದು. ಕುರುಗೋಡಿನ ಭೌಗೋಳಿಕ ಪ್ರದೇಶವನ್ನು ಗಮನಿಸಿದಾಗ ಅದು ಸುತ್ತಲೂ ಬೆಟ್ಟಗುಡ್ಡಗಳಿಂದ ತುಂಬಿಕೊಂಡಿದೆ ಈ ಬೆಟ್ಟಗುಡ್ಡಗಳ ಸ್ವರೂಪವನ್ನು ಕಂಡು ಒಂದೊಂದಕ್ಕೆ ಒಂದೊಂದು ಹೆಸರು ಸೂಚಿಸಿದ್ದಾರೆ. ಅದರಲ್ಲಿ ಕೋಳಿಗುಡ್ಡವೂ ಒಂದು. ಈ ಬೆಟ್ಟ ಪ್ರದೇಶದ ಸ್ವರೂಪ ಕೋಳಿಯಾಕಾರದಲ್ಲಿ ಕಂಡು ಬಂದದ್ದರಿಂದ ಅದಕ್ಕೆ ಕೋಳಿಗುಡ್ಡ ಎಂದು ಹೆಸರಿಸಿದ್ದಾರೆ. ಈ ಹೆಸರುಗಳು ಮೌಖಿಕ ಪರಂಪರೆಯಲ್ಲೇ ಮುಂದುವರೆದು ಬಂದಿರುವುದನ್ನು ಕಾಣುತ್ತೇವೆ.

ಕುರುಗೋಡಿನಲ್ಲಿ ಕಂಡು ಬರುವ ಕತ್ತೆ ಬಂಡೆ ಶಾಸನ ಇದು ಅಂದು ಭೂಮಿಯನ್ನು ಅಳತೆ ಮಾಡುವುದರ ಬಗೆಗೆ ಸೂಚಿಸುತ್ತದೆ. ಎಂಟು ಗೇಣಿನ ಕಟ್ಟಿಗೆಯಿಂದ ಭೂಮಿ ಅಳತೆ ಮಾಡುತ್ತಿದ್ದದರ ಬಗ್ಗೆ ಈ ಶಾಸನ ಉಲ್ಲೇಖಿಸುತ್ತದೆ. ಈ ಪ್ರದೇಶದ ಜನರು ಪರಂಪರಾನುಗತವಾಗಿ ಭೂಮಿ ಅಳತೆ ಮಾಡುತ್ತ ಬಂದಿರುವುದನ್ನು ಈ ಶಾಸನದಲ್ಲಿ ಮಾತ್ರ ಕಾಣುತ್ತೇವೆ. ಈಗಲೂ ಜೋಕುಮಾರನ ಆಚರಣೆಯಲ್ಲಿ ಕೊನೆಯದಿನ ಅವನನ್ನು ಈ ಕತ್ತೆಬಂಡೆಗೆ ತಂದು ಒಂದು ಉದ್ದನೆಯ ಕೋಲಿನಿಂದ ತಲೆ ಒಡೆಯುತ್ತಾರೆ. ಅದೆ ಕೋಲಿನಿಂದ ಹೊಲ, ನಿವೇಶನ ಅಳೆಯುವ ಸಂಪ್ರದಾಯ ಮುಂದುವರೆದುಕೊಂಡು ಬಂದಿದೆ.

ಕುರುಗೋಡು ಈ ಶಬ್ದ ಹೇಗೆ ಬಂದಿದೆ ಎಂದು ಈ ಪರಿಸರದ ಜನರನ್ನು ವಿಚಾರಿಸಿದರೆ ಅವರ ದೃಷ್ಟಿ ಮೊದಲು ದೊಡ್ಡ ಬಸವೇಶ್ವರನ ಕಡೆಗೆ ಹೊರಳಿ, ಈ ಊರಿನ ಪ್ರಸಿದ್ಧ ದೈವವಾದ ದೊಡ್ಡ ಬಸವಣ್ಣನಿಗೆ ಕಿರಿದಾದ ಕೋಡುಗಳಿವೆ. ಈ ಕಿರುಗೋಡಿನಿಂದಲೇ ಕಿರುಗೋಡು ಕುರುಗೋಡು ಆಗಿದೆ ಎಂಬ ಅಭಿಪ್ರಾಯವನ್ನು ಮುಂದಿಡುತ್ತಾರೆ.

ದೊಡ್ಡ ಬಸವೇಶ್ವರನ್ನು ಕುರಿತಾದ ಐತಿಹ್ಯವೊಂದು ಜನರ ಬಾಯಿಯಲ್ಲಿದೆ. ಕುರುಗೋಡಿನ ಈ ಬಸವೇಶ್ವರ ಮೊದಲು ಬಹಳ ಚಿಕ್ಕವನಿದ್ದ. ಇವನು ವರ್ಷದಿಂದ ವರ್ಷಕ್ಕೆ ಬೆಳೆಯತೊಡಗಿದ. ಹೀಗೆ ಇವನು ಬೆಳೆಯುತ್ತಾ ಹೋದರೆ ಎಷ್ಟೆಷ್ಟು ದೊಡ್ಡ ದೊಡ್ಡದಾದ ಗುಡಿಗಳನ್ನು ಕಟ್ಟಬೇಕಾಗುತ್ತದೆ. ಎಂದು ವಿಚಾರಿಸಿದ ಜನ ಇವನು ಬೆಳೆಯದಂತೆ ತಡೆಯಲು ಬೆನ್ನಿಗೆ ಹಾರೆ ಹಾಕಿದ್ದಾರೆ ಎಂದು ಹೇಳುತ್ತಾರೆ.

ಕುರುಗೋಡಿನಲ್ಲಿರುವ ಕೊಟ್ಟೂರು ಸ್ವಾಮಿ ಮಠ ಸುಮಾರು ಎಂಟನೂರು ವರ್ಷಗಳ ಹಿಂದಿನದು ಎಂದು ಇಲ್ಲಿಯ ಜನ ಅಭಿಪ್ರಾಯ ಪಡುತ್ತಾರೆ. ಇಲ್ಲಿರುವ ಗದ್ದಿಗೆಗೆ ನಡೆದುಕೊಂಡರೆ ಮಾನವರ ರೋಗ, ರುಜಿನಗಳು ಕಡಿಮೆಯಾಗುತ್ತವೆ ಎಂಬ ಪ್ರತೀತಿ ಇದೆ. ಹೀಗೆ ಕುರುಗೋಡಿನ ಸುತ್ತಲೂ ಅನೇಕ ಐತಿಹ್ಯಗಳಿವೆ. ಅವು ಮೌಖಿಕ ಪರಂಪರೆಯಲ್ಲಿ ಮುಂದುವರೆದುಕೊಂಡು ಬಂದಿರುವುದನ್ನು ಇಂದೂ ಕಾಣುತ್ತೇವೆ.

**ಜನಪದ ಪುರಾಣಗಳು**

ಜನಪದ ಮಹಾಕಾವ್ಯಗಳಲ್ಲಿ ದೈವವಾಗಿ ನಿಂತಿರುವ ನಾಯಕರು ಒಂದು ಸಮುದಾಯದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಚಾರಿತ್ರಿಕ ವ್ಯಕ್ತಿಗಳು. ಒಂದು ಕಾಲಘಟ್ಟದಲ್ಲಿ ಈ ಸಾಂಸ್ಕೃತಿಕ ನಾಯಕ-ನಾಯಕಿಯರ ಚರಿತ್ರೆಯು ಆ ಸಮುದಾಯದ ಮೌಖಿಕ ಪರಂಪರೆಯಲ್ಲಿ ಮಾತ್ರ ಉಳಿದುಕೊಂಡಿತ್ತು. ಶಿಷ್ಟಪುರಾಣಗಳ ಪ್ರಭಾವ ಪ್ರೇರಣೆ ಈ ಸಮುದಾಯದ ಮೇಲಾದದ್ದರಿಂದ ಈ ಸಮುದಾಯಗಳು ತಮ್ಮ ಸಾಂಸ್ಕೃತಿಕ ನಾಯಕನ ಚರಿತ್ರೆಯನ್ನು ಪ್ರಕಟಪಡಿಸುವುದಕ್ಕಾಗಿ ಅವನಿಗೆ ದೈವತ್ವದ ಪಟ್ಟಕಟ್ಟಿ ಪುರಾಣ ವ್ಯಕ್ತಿಯನ್ನಾಗಿಸಿದರು. ಇದಕ್ಕೆ ವಿರುದ್ಧವಾಗಿ ಶಿಷ್ಟರು ತಮ್ಮ ಪೌರಾಣಿಕ ವ್ಯಕ್ತಿಗಳನ್ನು ಚಾರಿತ್ರಿಕ ವ್ಯಕ್ತಿಯನ್ನಾಗಿಸಲು ಬಯಸಿರುವುದು ಕಂಡು ಬರುತ್ತದೆ. ಜನಪದ ಸಮುದಾಯಗಳು ತಮ್ಮ ಸಾಂಸ್ಕೃತಿಕ ವ್ಯಕ್ತಿಯನ್ನು ಒಂದು ಸಲ ದೈವಕ್ಕೇರಿಸಿದರೆ ಸಾಕು. ಅವನ ಮೇಲೆ ಅನೇಕ ಕಥೆ ಪವಾಡ, ಐತಿಹ್ಯಗಳನ್ನು ಹೆಣೆದು, ಸಾಂಸ್ಕೃತಿಕ ವ್ಯಕ್ತಿಯ ವಾಸ್ತವಿಕ ಬದುಕನ್ನು ಮರೆಮಾಚಿ ಬಿಡುತ್ತಾರೆ. ಹೀಗಾಗಿ ಜನಪದ ಪುರಾಣಗಳಲ್ಲಿ ಕಂಡು ಬರುವ ದೈವಗಳೆಲ್ಲವೂ ಸಮುದಾಯಗಳ ಮಧ್ಯ ಬಾಳಿದ ಸಾಂಸ್ಕೃತಿಕ ನಾಯಕರೇ ಎಂದು ಅರ್ಥೈಸಿಕೊಳ್ಳಬೇಕಾಗುತ್ತದೆ.

ಕುರುಗೋಡಿನಲ್ಲಿ ಶಿವಶರಣೆ ಈರಮ್ಮನನ್ನು ಕುರಿತಾದ ಕಥೆಯೊಂದು ಪ್ರಚಲಿತದಲ್ಲಿದೆ. ಶಿವಶರಣೆ ಈರಮ್ಮನಿಗೆ ಐಕ್ಯವಾಗುವ ದಿನ ಬಂದಿತು. ಆ ದಿನದ ತಿಥಿ ನಕ್ಷತ್ರಗಳು ಈರಮ್ಮನಿಗೆ ದೇಹತ್ಯಾಗ ಮಾಡಲು ಅನುಕೂಲಕರವಾಗಿರಲಿಲ್ಲ. ಹೀಗಾಗಿ ಈರಮ್ಮ ಈಶ್ವರ ಗುಡ್ಡಕ್ಕೆ ಹೋಗಿ ಅಲ್ಲಿ ಲಿಂಗ ಪ್ರತಿಷ್ಠಾಪನೆ ಮಾಡಿ ಮಠಕ್ಕೆ ಹಿಂತಿರುಗುತ್ತಾಳೆ. ನಂತರ ಮಠದಲ್ಲಿರುವ ಬಚ್ಚಲ ಮನೆಗೆ ಹೋದ ಈರಮ್ಮ ಅಲ್ಲಿಯೇ ಅದೃಶ್ಯಳಾಗುತ್ತಾಳೆ. ಈರಮ್ಮ ಅದೃಶ್ಯಳಾದ ಸ್ಥಳದಲ್ಲಿ ಮಂಟಪವೊಂದಿತ್ತು. ಗಾಳಿ, ಮಳೆ, ಬಿಸಿಲಿನಿಂದ ಅದಕ್ಕೆ ಏನೂ ಆಗಿರಲಿಲ್ಲ. ಇದೇ ಊರಿನ ಕೋಮಟರ ರಾಧಮ್ಮ ಸುಮಾರು ೪೫ ವರ್ಷಗಳ ಹಿಂದೆ ಅದನ್ನು ಜೀರ್ಣೋದ್ಧಾರ ಮಾಡಿದ್ದಾಳೆ. ಶ್ರಾವಣಮಾಸದಲ್ಲಿ ದೊಡ್ಡ ಬಸವೇಶ್ವರನ ಪಲ್ಲಕ್ಕಿ ಈರಮ್ಮನ ಮಠಕ್ಕೆ ಬಂದು ಆ ನಂತರ ನೀಲಮ್ಮನ ಮಠಕ್ಕೆ ಹೋಗುತ್ತದೆ ಎಂದು ಹೇಳುತ್ತಾರೆ.

ಕುರುಗೋಡಿನ ಸುತ್ತಲಿನ ಪ್ರದೇಶದಲ್ಲಿ ಜಾನಪದ ಅಧ್ಯಯನಕಾರರಿಗೆ ಅತ್ಯಂತ ಮೌಲಿಕವಾದ ಸಾಮಗ್ರಿ ದೊರೆಯುತ್ತದೆ. ಈ ಲೇಖನ ಕುರುಗೋಡಿನ ಮೌಖಿಕ ಸಾಹಿತ್ಯದ ಅಧ್ಯಯನಕಾರರಿಗೆ ಒಂದು ಸ್ಫೂರ್ತಿಯಾಗಬಹುದೆಂದು ಭಾವಿಸಿದ್ದೇನೆ.

—

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] ಡಾ.ದೇವೇಂದ್ರಕುಮಾರ ಹಕಾರಿ, 'ಜಾನಪದ ಭಂಡಾರ'(ಲೇ) ಆಚರಣೆ ಕುಣಿತ

[2] ಡಾ.ವೀರೇಶ ಬಡಿಗೇರ, 'ಉತ್ತರ ಕರ್ನಾಟಕದ ಗೀತಮೇಳಗಳು'

[3] ಅದೇ. ಪು.೯

[4] ಡಾ.ಬಸವರಾಜ ಮಲಶೆಟ್ಟಿ, 'ಉತ್ತರ ಕರ್ನಾಟಕದ ಬಯಲಾಟಗಳು'

[5] ಡಾ.ಕೆ.ಆರ್.ದುರ್ಗಾದಾಸ್, 'ಬಳ್ಳಾರಿ ಜಿಲ್ಲೆಯ ಬಯಲಾಟಗಳು'

[6] ಅದೇ.

# ೮. ನಂಬಿಕೆ ಮತ್ತು ಆಚರಣೆ

ಮಾನವನಷ್ಟೇ ಪಾರಂಪರಿಕ ಹಳಮೆ ಮಾನವ ಸಂಸ್ಕೃತಿಯದು. ಮಾನವನ ಜೀವನದ ಅತ್ಯಂತ ಪ್ರಾಚೀನವಾದ ಅವಸ್ಥೆಯಿಂದ ಇಂದಿನವರೆಗೆ ಸಮಷ್ಟಿರೂಪದ ಜೀವನಾನುಭವಗಳು ಆತನ ಬದುಕಿನಲ್ಲಿ ಹರಳುಗೊಂಡಿವೆ. ಇದನ್ನೇ ಮಾನವಶಾಸ್ತ್ರಜ್ಞರು 'ಸಂಸ್ಕೃತಿ' (Culture) ಎಂಬುದಾಗಿ ಪ್ರತಿಪಾದಿಸುತ್ತಾರೆ. ಇದು ಕಾಲ, ದೇಶ, ಜಾತಿ, ಜನಾಂಗ, ಭಾಷೆ ಮುಂತಾದ ಪರಿಮಿತಿಗಳನ್ನು ದಾಟಿ ಸಮುದಾಯದಿಂದ ಸಮುದಾಯಗಳನ್ನು ಒಳಗುಮಾಡಿಕೊಳ್ಳುವ ಮೂಲಕ ವೈವಿಧ್ಯಮಯ ಸಾಂಸ್ಕೃತಿಕ ಸಂಬಂಧ, ಸಾಮಿಪ್ಯ ಮತ್ತು ಸಮಾಂತರತೆಗಳನ್ನು ಬೆಳೆಸಿರುವುದನ್ನು ಕಾಣಬಹುದು. ಇಂತಹ ಸಂಕೀರ್ಣ ಸಾಂಸ್ಕೃತಿಕ ಸಂಬಂಧಗಳು ಹಲವು ಅಧ್ಯಯನಕಾರರ ಹಾಗೂ ಸಂಶೋಧಕರ ಕೌತುಕದ ನೆಲೆಗಳಾಗಿ ಕಂಡುಬಂದು ಅವುಗಳನ್ನು ಬಿಡಿಸುವ ಅದರ ಆಂತರ್ಯದ ಸತ್ಯಾಸತ್ಯತೆಯನ್ನು ಹುಡುಕುವ ಕಡೆಗೆ ವಿದ್ವಾಂಸರನ್ನು ತೊಡಗಿಸುವ ನೆಲೆಯಲ್ಲಿ ಪ್ರೇರೇಪಿಸಿದವು. ಹೀಗಾಗಿ ಸಂಸ್ಕೃತಿಯ ಹುಡುಕಾಟದ ಅಧ್ಯಯನಗಳು ಆರಂಭಗೊಂಡವು ಎನ್ನಬಹುದು. ಈ ನೆಲೆಯಲ್ಲಿ ಹಲವಾರು ಕ್ಷೇತ್ರದ ವಿದ್ವಾಂಸರು ಶೋಧನೆ ಹಾಗೂ ಅಧ್ಯಯನ ಕಾರ್ಯದಲ್ಲಿ ತೊಡಗುವ ಮೂಲಕ ಮಾನವ ಸಂಸ್ಕೃತಿಯ ವಿವಿಧ ಸ್ಥರವಿನ್ಯಾಸಗಳ ಬಗೆಗೆ ಮಹತ್ವದ ವಿಚಾರಗಳನ್ನು ಕಟ್ಟಿ ಕೊಟ್ಟಿದ್ದಾರೆ. ಮಾನವಶಾಸ್ತ್ರಜ್ಞರು, ಜಾನಪದ ವಿದ್ವಾಂಸರು, ಭಾಷಾಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು, ಇತಿಹಾಸ ಹಾಗೂ ಪುರಾತತ್ವ ಶಾಸ್ತ್ರಜ್ಞರು ಇಲ್ಲಿ ಮುಖ್ಯರಾಗುತ್ತಾರೆ.

ಮಾನವ ಸಂಸ್ಕೃತಿಯ ನೈಜ ಬೇರು ಹುದುಗಿರುವುದು ಆತನ ಮೌಖಿಕ ಪರಂಪರೆಯ ಜಾನಪದರಲ್ಲಿ ಎಂದರೆ ತಪ್ಪಾಗಲಾರದು. ಇದು ಮಾನವನ ಜೀವನದ ಉಗಮದ ಕಾಲದಿಂದ ಪ್ರಸ್ತುತ ನಾಗರಿಕ ಬದುಕಿನ ತನಕ ಆತನ ಸಮಗ್ರ ಸಾಂಸ್ಕೃತಿಕ ವಿಚಾರಗಳೂ ಜಾನಪದದಲ್ಲಿ ಅಮೂರ್ತಗೊಂಡಿದೆ. ಇದನ್ನೆ ಡಾ.ಬಿ.ಎಂ.ಶ್ರೀ ಅವರ 'ಜನವಾಣಿ ಬೇರು ಕವಿವಾಣಿ ಹೂ' ಎಂಬ ಮಾತು ಪುಷ್ಟಿನೀಡುತ್ತದೆ. ಜಾನಪದಶಾಸ್ತ್ರ ಎಲ್ಲಾ ಶಾಸ್ತ್ರ ಅಧ್ಯಯನಗಳ ಮಾತೃಸ್ಥಾನವನ್ನು ಹೊಂದಿದೆ ಎಂದು ಹೇಳಬಹುದು. 'ಜಾನಪದ' ಒಂದು ಶಾಸ್ತ್ರ ಅಧ್ಯಯನವಾಗಿ ರೂಪಗೊಂಡದ್ದು ಇತರೆ ಅಧ್ಯಯನಗಳನ್ನು ಮತ್ತಷ್ಟು ಪುಷ್ಟೀಕರಿಸುವ ಹಿನ್ನೆಲೆಯಲ್ಲಿ, ಆಯಾ ಶಾಸ್ತ್ರಗಳು ಹೊಂದಲೇಬೇಕಾದ ಹಲವಾರು ಮೂಲಾಂಶಗಳನ್ನು ನೀಡುವ ಮೂಲಕ ಅವುಗಳನ್ನು ಇನ್ನಷ್ಟು ಗಟ್ಟಿಗೊಳಿಸುವ ಮೂಲಕ ಆಯಾಶಾಸ್ತ್ರಗಳ ಅರ್ಥ ಹಾಗೂ ಸ್ವರೂಪದ ವೈಶ್ಯಾಲತೆಗೆ ಕಾರಣವಾಗಿದೆ ಎನ್ನಬಹುದು. ಪ್ರಸ್ತುತ ಸಂದರ್ಭದಲ್ಲಿ ಜಗತ್ತಿನಾದ್ಯಂತ ಅಂತರ್ ಶಿಸ್ತೀನ ಅಧ್ಯಯನ ಹಾಗೂ ಅನ್ವಯಿಕ ಅಧ್ಯಯನಗಳ ಮೂಲಕ ಪ್ರತಿಯೊಂದು ಶಾಸ್ತ್ರವೂ ಮತ್ತಷ್ಟು ವಿಸ್ತಾರಗೊಳ್ಳುತ್ತ ಹಾಗೂ ಒಂದು ನಿರ್ದಿಷ್ಟ ಗುರಿಯ ಕಡೆಗೆ ಸಾಗಿರುವುದನ್ನು ಕಾಣಬಹುದು. ಅನ್ವಯಿಕ ಅಧ್ಯಯನದ ನೆಲೆಯಲ್ಲಿ ಯಾವುದೇ ವಿಷಯಾಧ್ಯಯನದ ಸಂದರ್ಭದಲ್ಲೂ ಆಯಾ ಶಾಸ್ತ್ರ ವಿಷಯಗಳ ನೆರೆಯ ಸಂಬಂಧಾತ್ಮಕ ಶಾಸ್ತ್ರಗಳ ಅವಲೋಕನ ಅಧ್ಯಯನವೊಂದನ್ನು ಪುಷ್ಟೀಕರಿಸುವ ಹಿನ್ನೆಲೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಹಾಗಾಗಿ ಇತ್ತೀಚಿನ ದಿನಗಳಲ್ಲಿ ಯಾವುದೇ ವಿಷಯದ ಅಧ್ಯಯನಕಾರ ಅಥವಾ ಸಂಶೋಧಕನ ಆಲೋಚನೆ, ಅವಲೋಕನ, ಶೋಧದ ಮನಸ್ಸು ಅನ್ವಯಿಕ ವಸ್ತು ವಿಷಯಗಳ ಹಿನ್ನೆಲೆಯಲ್ಲಿ ಕೆಲಸ ನಿರ್ವಹಿಸುವ ಮೂಲಕ ಅಧ್ಯಯನದ ಹರವನ್ನು ಹೆಚ್ಚಿಸಿ ಅದಕ್ಕೆ ಮತ್ತಷ್ಟು ಗಟ್ಟಿತನ ಹಾಗೂ ವಾಸ್ತವತೆಯ ನೆಲೆಯನ್ನು ಕಟ್ಟಿಕೊಡುತ್ತದೆ ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಪ್ರಾಚ್ಯವಸ್ತುಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಜಾನಪದ ಇತ್ಯಾದಿ ವಿಷಯಗಳು ತುಂಬ ಅವಶ್ಯವಾಗಿ ಅನ್ವಯಿಕ ಹಾಗೂ ತೌಲನಿಕವಾದ ಅಧ್ಯಯನಕ್ಕೆ ಒಳಗಾಗಬೇಕಾದ ಅವಶ್ಯಕತೆ ಇದೆ. ಇವು ಒಂದಕ್ಕೊಂದು ಪೂರಕವಾದ ಶಾಸ್ತ್ರ ಅಧ್ಯಯನಗಳೆಂಬುದನ್ನು ಮರೆಯುವಂತಿಲ್ಲ.

**ಜಾನಪದ ಮತ್ತು ಪೂರಕ ಶಾಸ್ತ್ರಗಳು**

ಇದುವರೆಗೆ ಸಂಸ್ಕೃತಿ ಹಾಗೂ ಚರಿತ್ರೆಯ ಹುಡುಕಾಟದಲ್ಲಿ ಕೇವಲ ಲಿಖಿತ ಆಕರಗಳಷ್ಟೇ ಮುಖ್ಯ ಎಂಬುದಾಗಿ ಪರಿಗಣಿಸಿ ಸಂಸ್ಕೃತಿ ಹಾಗೂ ಚರಿತ್ರೆಯ ವಿಚಾರಗಳನ್ನೂ ಕಟ್ಟಿಕೊಡುವ ಮೂಲಕ ಆದಿಮ ಬದುಕಿನ ಅಮೂರ್ತರೂಪಗಳಾಗಿ ಉಳಿದುಬಂದಿರುವ ಪಾರಂಪರಿಕವಾದ, ಜನಪದ ನಂಬಿಕೆ, ಆಚರಣೆ, ಸಂಪ್ರದಾಯ, ಮೌಖಿಕ ಸಾಹಿತ್ಯ ಇತ್ಯಾದಿ ವಿಷಯಗಳನ್ನು ಕಡೆಗಣಿಸಲಾಗಿತ್ತು. ಇಂತಹ ಮಹತ್ವದ ಆಕರಗಳೂ ಸಹ ಸಂಸ್ಕೃತಿ ಹಾಗೂ ಚರಿತ್ರೆಯನ್ನು ಕಟ್ಟಿಕೊಡುವ ವಿಷಯ ವಿಚಾರಗಳ ನೆಲೆಯಲ್ಲಿ ಮಹತ್ವದ

ಪಾತ್ರವಹಿಸುತ್ತವೆ. ಈ ಅರಿವು ಮೂಡಿದುದು ಇತ್ತೀಚಿನ ದಿನಗಳಲ್ಲಿ ಎಂದರೆ ತಪ್ಪಾಗಲಾರದು. ಈ ಹಿನ್ನೆಲೆಯಲ್ಲಿ ಜಾನಪದ ಒಂದು ಸ್ವತಂತ್ರ ಅಧ್ಯಯನದ ಶಿಸ್ತಾಗಿ ಜಗತ್ತಿನಾದ್ಯಂತ ವಿವಿಧ ವಿದ್ವಾಂಸರಿಂದ ಅನೇಕ ರೀತಿಯಲ್ಲಿ ಬೆಳೆದು ಇಂದು ಅಧ್ಯಯನ ಶಾಸ್ತ್ರಗಳ ಕ್ಷೇತ್ರದಲ್ಲಿ ಹೆಬ್ಬಾಲವಾಗಿ ಬೆಳದಿದೆ. ಕೇವಲ ಬರಹ ಸಂಸ್ಕೃತಿಯ ಆಕರಗಳನ್ನಷ್ಟೇ ಅಧ್ಯಯನ ಕ್ಷೇತ್ರದಲ್ಲಿ ಪೂರಕ ಆಕರಗಳಾಗಿ ಬಳಸುತ್ತಿದ್ದ ಸಂದರ್ಭದಲ್ಲಿ ಪಾರಂಪರಿಕವಾಗಿ, ತಲೆಮಾರಿನಿಂದ ತಲೆಮಾರಿಗೆ ಮೌಖಿಕ ಜ್ಞಾನ ಪರಂಪರೆಯ ಮೂಲಕ ಬದುಕಿ ಬಾಳಿಬಂದ ಹಲವಾರು ಸಮುದಾಯಗಳಲ್ಲಿನ ಜ್ಞಾನ ಪರಂಪರೆಯನ್ನು ಅವಲೋಕಿಸಿ ಅಧ್ಯಯನ ಮಾಡುವ ಮೂಲಕ ಅನಕ್ಷರಸ್ಥ ಸಮುದಾಯಗಳಲ್ಲಿನ ಜ್ಞಾನಪರಂಪರೆಗೆ ಮನ್ನಣೆ ದೊರಕಿಸಿಕೊಡುವ ನಿಟ್ಟಿನಲ್ಲಿ ಜಾನಪದ ವಿದ್ವಾಂಸರು ಮಹತ್ವದ ಪಾತ್ರವಹಿಸಿದ್ದಾರೆ. ಒಂದು ಕಾಲಕ್ಕೆ ನಿರ್ಲಕ್ಷಕ್ಕೆ ಒಳಗಾಗಿದ್ದ ಜನಸಾಮಾನ್ಯರ ಜ್ಞಾನದ ನೆಲೆಗಳನ್ನು ಶೋಧಿಸಿ, ಪ್ರಸ್ತುತ ಸಂದರ್ಭದಲ್ಲಿ ಅದರ ಮಹತ್ವವನ್ನು ತಿಳಿಸಿದ ಕೀರ್ತಿ ಜಾನಪದ ಅಧ್ಯಯನಕಾರರಿಗೆ ಸಲ್ಲುತ್ತದೆ.

ಸಂಸ್ಕೃತಿಯ ಮೂಲಭೂತ ಅಂಶಗಳನ್ನು ಜಾನಪದದಲ್ಲಿ ಹೇಗೆ ಅಮೂರ್ತಗೊಂಡಿರುತ್ತದೆ ಎಂಬುದರ ಬಗೆಗೆ ಶ್ರೇಷ್ಠ ಜಾನಪದ ವಿದ್ವಾಂಸರಾದ ಥಿಯೋಡರ್ ಹೆಚ್.ಗ್ಯಾಸ್ಟರ್ ಹೀಗೆ ಅಭಿಪ್ರಾಯಪಡುತ್ತಾರೆ. ಜಾನಪದವೆಂಬುದು ಜನತೆಯು ಪ್ರಜ್ಞಾಪೂರ್ವಕವಾಗಿಯೋ ಅಥವಾ ತನಗರಿವಿಲ್ಲದೆಯೋ ಕಾಪಾಡಿಕೊಂಡು ಬಂದಿರುವ ಸಾಂಸ್ಕೃತಿಕ ಭಾಗ. ಸಾರ್ವತ್ರಿಕವಾಗಿ ಚಲಾವಣೆಯಲ್ಲಿರುವ ಈಗಿನ ಹಿಂಡುಲಿ ಸಂಗಮೇಶ್ವರ ದೇವಾಲಯದ ಪ್ರದೇಶವೇ ಹಳೆಯ ಕುರುಗೋಡು ಎಂಬುದಾಗಿ ಹೇಳಲಾಗುತ್ತದೆ. ಮೂಲದಲ್ಲಿ ಸುಂಕಲಮ್ಮನಿಗೆ ಪ್ರತ್ಯೇಕವಾದ ಗುಡಿ ಇರಲಿಲ್ಲ. ತೆರೆದ ಬಯಲಿನಲ್ಲಿ ಬೇವಿನ ಮರದ ಬುಡದಲ್ಲಿ ಈ ದೇವರನ್ನು ಪ್ರತಿಷ್ಠಾಪಿಸಲಾಗಿತ್ತು. ಅಲ್ಲದೆ, ಅಲ್ಲಿಗೆ ದನಕರುಗಳು ಹೋಗದಂತೆ ಸುಮಾರು ಎದೆಮಟ್ಟದ ಮಣ್ಣಿನ ತುಂಡುಗೋಡೆ ನಿರ್ಮಿಸಿ ಹಬ್ಬದ ಸಂದರ್ಭದಲ್ಲಿ ಸುಣ್ಣ ಕೆಮ್ಮಣ್ಣಿನಿಂದ ಅದನ್ನು ಅಲಂಕಾರಗೊಳಿಸಲಾಗುತ್ತಿತ್ತು. ಇಂದಿಗೂ ಇಲ್ಲಿನ ದೈವದ ಶಿಲ್ಪವು ಸಹಜ ಸ್ಥಿತಿಯಲ್ಲೇ ಉಳಿದುಬಂದಿದೆ. ೧೯೬೯ರಲ್ಲಿ ಈ ದೇವಿಗೆ ಊರಿನ ಜನರೆಲ್ಲ ಸೇರಿ ದೇವಾಲಯದ ಕಟ್ಟಿದುದಾಗಿ ತಿಳಿದುಬರುತ್ತದೆ. ಇದು ತುಂಬ ಸ್ವಾರಸ್ಯಕರವಾಗಿದೆ. ನಾಡಿನಾದ್ಯಂತ ಕಂಡುಬರುವ ದೇವಾಲಯದ ಬಗೆಗೆ ಹಾಗೂ ತಮ್ಮ ಊರಿನ ಹಳೆಯ ದೇವಾಲಯಗಳ ಬಗೆಗೆ ಜನಪದರು ಒಂದಲ್ಲ ಒಂದು ಘಟನೆಯನ್ನು ಆಧರಿಸಿ ಹಲವಾರು ಕಥೆ, ಐತಿಹ್ಯ, ಪುರಾಣಗಳನ್ನು ಹೇಳುತ್ತಾರೆ. ಅಂತಹದರಲ್ಲಿ ತಮ್ಮ ಊರಿನ ದೇವಾಲಯವನ್ನು ಸೂರ್ಯ ಮುಳುಗಿ ಸೂರ್ಯ ಮೂಡುವುದರೊಳಗೆ ಅಂದರೆ ಒಂದೇ ರಾತ್ರಿಯಲ್ಲಿ ಕಟ್ಟಿ ಮುಗಿಸಿ ದೇವರನ್ನು ಪ್ರತಿಷ್ಠಾಪಿಸಿ ಎಳ್ಳುಬಿತ್ತಿ, ಎಳ್ಳುಬೆಳೆದು ಕಟಾವು ಮಾಡಿ ಎಳ್ಳಿನಿಂದ ಎಣ್ಣೆ ತೆಗೆದು ಆ ಎಣ್ಣೆಯಿಂದ ದೀಪ ಹೊತ್ತಿ, ಬೆಳಗಾಗುವುದರೊಳಗೆ ಯಾರಿಗೂ ತಿಳಿಯದಂತೆ ಮುಂದಿನ ಊರಿಗೆ ಹೊರಟುಹೋದರು. ಅವರು ಚೋಳರು. ಯಾರ ಕಣ್ಣಿಗೂ ಕಾಣಿಸಿಕೊಳ್ಳುವುದಿಲ್ಲ. ಅವರನ್ನು ನೋಡಿದವರು ಯಾರೂ ಇಲ್ಲ. ಅವರನ್ನು ನೋಡಿದವರು ರಕ್ತಕಾರಿ ಸಾಯುತ್ತಾರೆ.

ನಂಬುಗೆ (ನಂಬಿಕೆ), ರೂಢಿ, ಪದ್ಧತಿ ಮತ್ತು ಆಚರಣೆಗಳನ್ನೂ, ಪುರಾಣ, ಐತಿಹ್ಯ ಮತ್ತು ಆಯಾ ಜನತೆ ಸಾಮುದಾಯಿಕವಾಗಿ ಒಪ್ಪಿಕೊಂಡಿರುವ ಕಥೆಗಳಲ್ಲಿಯೂ, ಆ ಜನರ ಸಮಷ್ಟಿಯಾದ ಮನೋಧರ್ಮ ಹಾಗೂ ಪ್ರತಿಭೆಯನ್ನು ಅಭಿವ್ಯಕ್ತಿಪಡಿಸುವ ಕಲೆ, ಕುಲಕಸುಬುಗಳಲ್ಲಿಯೂ ಅದು ಜೀವಂತವಾಗಿ ಉಳಿದುಕೊಂಡಿರುತ್ತದೆ. ಜಾನಪದವು ಹೀಗೆ ಜನಸಾಮಾನ್ಯರ ಜ್ಞಾನಭಂಡಾರವಾಗಿರುವುದರಿಂದ ಮತ್ತು ಅವರ ಮನೋಧರ್ಮದ ಸಮಗ್ರಗೊಂಡ ಘಟಕವಾಗಿರುವುದರಿಂದ, ಲಕ್ಷಣಬದ್ಧ ಸಾಹಿತ್ಯ ಹಾಗೂ ಕಲೆಗಳಿಗೆ ಅದು ನಿರಂತರ ಆಕರವೂ, ಆಧಾರವೂ ಆಗಿ ಕಾರ್ಯಮಾಡುತ್ತದೆ. ಆದರೆ ಜಾನಪದವು ಈ ಲಕ್ಷಣ ಬದ್ಧ ಸಾಹಿತ್ಯ ಹಾಗೂ ಕಲೆಗಳಿಂದ ಭಿನ್ನವಾದುದು. ಏಕೆಂದರೆ “ಜಾನಪದವು ಮೂಲತಃ ಜನತೆಯ ಒಡೆತನಕ್ಕೆ ಅಧೀನವಾದ, ಜನತೆಯಿಂದ ಹುಟ್ಟಿದ ಮತ್ತು ಜನತೆಗಾಗಿ ಇರುವ ಸೊತ್ತು.” ಹೀಗಿದ್ದುದರಿಂದ ನಮ್ಮ ಪರಂಪರೆ ಸಂಸ್ಕೃತಿ ಎಂದು ನಾವು ಈ ವರೆಗೆ ಕಟ್ಟಿಕೊಂಡು ಬಂದಿರುವ ಚಿತ್ರವನ್ನು ಮತ್ತೊಮ್ಮೆ ಪುನರಾವಲೋಕನ ಮಾಡುವ ಸಂದರ್ಭವೀಗ ಒದಗಿ ಬಂದಿದೆ. ಇದುವರೆಗೂ ನಾವು ಅವಲೋಕಿಸುತ್ತಾ ಕಟ್ಟಿಕೊಂಡ ಸಂಸ್ಕೃತಿ, ಚರಿತ್ರೆ ಎಂಬ ವಿಚಾರಗಳು ಕೇವಲ ಶಿಷ್ಟವರ್ಗ, ಶಿಷ್ಟಪರಂಪರೆ ಹಾಗೂ ಶಿಷ್ಟ ಸಮಾಜ ನಿರ್ಮಿಸಿ ನಯಗೊಳಿಸಿದ ಅಭಿಜಾತ ರೂಪವೆಂದೇ ಹೇಳಬೇಕು. ಸಂಸ್ಕೃತಿ ಹಾಗೂ ಚರಿತ್ರೆಯ ನೈಜ ದರ್ಶನವಾಗಬೇಕಾದರೆ ನಾವು ಜಾನಪದ ಅಂತಸತ್ವವನ್ನು ಅರ್ಥಮಾಡಿಕೊಳ್ಳಬೇಕು. ಪ್ರಸ್ತುತ ಸಂದರ್ಭದ ನವನಾಗರಿಕ ನೆಲೆಯಲ್ಲಿ ಬೆಳೆದು ನಿಂತಿರುವ ರಾಜಕೀಯ, ಸಾಮಾಜಿಕ, ಧಾರ್ಮಿಕ ವಿಚಾರಗಳು, ದೇವರು, ಅರ್ಚನಾವಿಧಾನ, ಶಾಸ್ತ್ರ, ಪುರಾಣ, ಕಾವ್ಯ, ಕಲೆ ಮುಂತಾದ

ವಿಚಾರಗಳೆಲ್ಲವೂ ಬೆಳೆದು ಬಾಳುತ್ತಿರುವುದು ಜಾನಪದ ನೆಲೆಯಿಂದಲೇ. ಆದಿಮಾನವ ಹಲವಾರು ವಿಷಯ ವಿಚಾರಗಳು ಇಂದಿಗೂ ನಮ್ಮ ಸಂಪ್ರದಾಯ, ಹಬ್ಬ, ಆಚರಣೆ, ಕಲೆ, ನಂಬಿಕೆ, ಪದ್ಧತಿ, ರೂಢಿಗಳಲ್ಲಿ ಉಳಿದುಬಂದಿರುವುದನ್ನು ಕಾಣಬಹುದು. ಹೀಗೆ ಜಾನಪದ ಇತರೆ ಪೂರಕ ಅಧ್ಯಯನ ವಿಷಯಗಳನ್ನು ಕಟ್ಟಿಬೆಳೆಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ.

**ಜಾನಪದ-ಪುರಾತತ್ವ-ಇತಿಹಾಸ**

ಈಗಾಗಲೇ ಸ್ಪಷ್ಟಪಡಿಸಿಕೊಂಡಿರುವಂತೆ ಜಾನಪದ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹಾಗೂ ಕ್ರಿಯಾತ್ಮಕ ರೂಪಗಳಲ್ಲಿ ಪಾರಂಪರಿಕವಾಗಿ ಸಾಗಿಬಂದಿರುವಂತಹದ್ದು. ಆದರೆ ಇತಿಹಾಸ ಎಂದು ಕರೆಯಲ್ಪಡುವ ವಿಷಯವು ಮಾನವನ ಜೀವಿತಕಾಲದ ಹೋರಾಟದ ಕತೆ. ಅದರ ನಿರೂಪಣೆ ಎಂದು ವಿವರಿಸಿ ಹೇಳಬಹುದು. ಈ ಕತೆಯನ್ನು ಅರ್ಥೈಸಿಕೊಳ್ಳಲು ನಾವು ಹೆಚ್ಚಾಗಿ ಲಿಖಿತ ಆಧಾರಗಳನ್ನೇ ಅವಲಂಬಿಸುತ್ತಿದ್ದೇವೆ. ಇದನ್ನು ವಸಾಹತು ಸಂದರ್ಭದಲ್ಲಿ ಆರಂಭಗೊಂಡ ಭಾರತದ ಇತಿಹಾಸ ರಚನೆಯಲ್ಲೂ ಇಂತಹದ್ದೇ ಧೋರಣೆಗಳನ್ನು ಅನುಸರಿಸಲಾಗಿದೆ. ಬರೆವಣಿಗೆಯ ಮೊಟ್ಟಮೊದಲ ಉಪಯೋಗ ಅಂದರೆ ಬರವಣಿಗೆಯ ಬಳಕೆಗೂ ಮೊದಲ ಇದ್ದ ಮಾಹಿತಿಗಳಿಗೂ ಸಹ ಸಂಸ್ಕೃತಿ ಹಾಗೂ ಚರಿತ್ರೆ ಎರಡನ್ನೂ ಕಟ್ಟಿಕೊಡುವ ಗುಣವನ್ನು ಹೊಂದಿರುತ್ತವೆ. ಹಾಗೂ ಈ ನಿಟ್ಟಿನಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಲಿಖಿತ ಆಧಾರಗಳು ಮಾತ್ರ ಚರಿತ್ರೆಯನ್ನು ಕಟ್ಟಿಕೊಡಬಲ್ಲವು ಎಂಬ ಭ್ರಮೆ ಆಚರಿಸಿದೆ. ಬರೆವಣಿಗೆಯ ಮೊಟ್ಟಮೊದಲ ಉಪಯೋಗವಾದುದು ೬೦೦೦ ವರ್ಷಗಳ ಹಿಂದೆ. ಇದನ್ನು ಮಾನವನ ಇತಿಹಾಸದ ಕಾಲಕ್ಕೆ ಹೋಲಿಸಿದರೆ ತುಂಬ ಅತ್ಯಲ್ಪಕಾಲವೆಂದೇ ಹೇಳಬೇಕಾಗುತ್ತದೆ. ಜಗತ್ತಿನಾದ್ಯಂತ ಮನುಕುಲದ ಚರಿತ್ರಾಕಾರರು ಮಾನವ ಹಲವಾರು ದಶಲಕ್ಷ ವರ್ಷಗಳ ಹಿಂದಿನಿಂದಲೇ ನಾಗರಿಕ ಪ್ರಜ್ಞೆಯನ್ನು ಹೊಂದಿದ್ದ ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಹೀಗಾಗಿ ಮನುಕುಲದ ಬರೆವಣಿಗೆಯ ಹುಟ್ಟಿನ ವರೆಗಿನ ಕಾಲಾವಧಿಯನ್ನು "ಚರಿತ್ರಪೂರ್ವಯುಗ" ಅಥವಾ "ಪಾಕ್ಚಾರಿತ್ರಿಕಯುಗ" ಎಂಬುದಾಗಿ ಗುರುತಿಸುತ್ತಾರೆ. ಚರಿತ್ರೆ ಪೂರ್ವಯುಗ ಲಕ್ಷಾಂತರ ವರ್ಷಗಳದು ಎಂಬುದು ಸ್ಪಷ್ಟ. ಹಾಗಾಗಿ ನಾವು ಚರಿತ್ರೆ ಪೂರ್ವಯುಗದ ಪ್ರಾಕ್ಚಾರಿತ್ರಿಕ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಹೆಚ್ಚಾಗಿ ಅಲಿಖಿತ ಆಕರಗಳನ್ನು ಅವಲಂಬಿಸಬೇಕಾಗುತ್ತದೆ. ಪುರಾತನ ವಸ್ತುಗಳ ವೈಜ್ಞಾನಿಕ ವಿಮರ್ಶೆ ಪುರಾತತ್ವಶಾಸ್ತ್ರ ಎನಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಪುರಾತನ ವಸ್ತುಗಳು ಎಂದಾಗ ಅವುಗಳಲ್ಲಿ ಕಲೆ, ವಾಸ್ತುಶಿಲ್ಪ, ಜೀವನ ಬಳಕೆಯ ವಸ್ತು ವಿಷಯಗಳು ಒಳಗೊಳ್ಳುತ್ತದೆ. ಇದನ್ನು ಚಾರಿತ್ರಿಕ ಪುರಾತತ್ವ ಶೋಧನೆ ಎಂದು ಕರೆಯಬಹುದಾಗಿದೆ. ಆದರೆ ಪ್ರಾಕ್ಚಾರಿತ್ರಿಕ ಯುಗದ ಅಧ್ಯಯನಕ್ಕೆ ಅಂದು ಮಾನವ ಬಳಸುತ್ತಿದ್ದ, ಉಪಕರಣಗಳು, ಅವಶೇಷಗಳು, ಮಾನವ ದೇಹಶಾಸ್ತ್ರ, ಸಮಾಜದ ಆಚರಣೆಗಳು, ಜೀವನ ವಿಧಿವಿಧಾನಗಳು ಮುಂತಾದ ಹಲವಾರು ವಿವರಗಳು ತುಂಬ ಅವಶ್ಯ. ಪ್ರಾಕ್ಚಾರಿತ್ರಿಕ ಕಾಲದಿಂದಲೂ ಜನಸಾಮಾನ್ಯರು ತಾವು ಬಳಸುವ ವಸ್ತುವಿಷಯಗಳಿಗೆ ನೀಡುತ್ತ ಬಂದಿರುವ ಮಹತ್ವವನ್ನು ಗಮನದಲ್ಲಿರಿಸಿಕೊಂಡು ಅವುಗಳ ಬಳಕೆಯ ವಿಧಾನ, ಪ್ರಾಮುಖ್ಯತೆ, ಉದ್ದೇಶ ಇತ್ಯಾದಿ ಅಂಶಗಳನ್ನು ಗಮನದಲ್ಲಿರಿಸಿ ಅಧ್ಯಯನ ಕೈಗೊಳ್ಳುವ ಮೂಲಕ ಅದರ ವಾಸ್ತವತೆಯನ್ನು ಕಂಡುಕೊಂಡಂತಾಗುತ್ತದೆ. ಸಾಂಪ್ರದಾಯಿಕ ಇತಿಹಾಸ ಕಾರರು ಬರೆವಣಿಗೆಯ ಆಕರ ಹಾಗೂ ಆಧಾರಗಳನ್ನು ಹೊಂದಿಸಿ ಹೇಗೆ ಇತಿಹಾಸವನ್ನು ನಿರ್ವಚಿಸುತ್ತಾರೋ ಹಾಗೆಯೇ ಜನಪದರೂ ಸಹ ತಮ್ಮ ವಸ್ತು ಪರಿಕರ, ಸಮುದಾಯಗಳ ಹಿನ್ನೆಲೆ, ಹಲವಾರು ಕಾಲಘಟ್ಟಗಳಲ್ಲಿ ಘಟಿಸಿದ ಘಟನೆಗಳನ್ನು ತಮ್ಮದೇ ರೀತಿಯಲ್ಲಿ ನಿರ್ವಚಿಸುತ್ತಾರೆ. ನಾನು ಕಳೆದ ಕೆಲದಿನಗಳ ಹಿಂದೆ ಕಮಲಾಪುರದ ಕೆರೆ ತಾಂಡಕ್ಕೆ ನನ್ನ ವಿದ್ಯಾರ್ಥಿಗಳೊಡನೆ ಕ್ಷೇತ್ರಕಾರ್ಯಕ್ಕೆ ಹೋಗಿದ್ದೆ. ತಾಂಡದ ಸೇವಾಲಾಲ್‌ನ ಗುಡಿಯ ಸಮೀಪ ಒಂದು ಚಿಕ್ಕ ದೇವರ ಗುಡಿ ನಿರ್ಮಿಸಿದ್ದಾರೆ. ಅದು ಬನ್ನಿಮರಕ್ಕೆ ಹೊಂದಿ ಕೊಂಡಂತಿದೆ. ಆ ಗುಡಿಯಲ್ಲಿ ಹಳೆಯ ಶಿಲಾಯುಗದ ಕಲ್ಲಿನ ಕೈಗೊಡಲಿಯನ್ನು ಇಟ್ಟು ಇದಕ್ಕೆ ವಿಭೂತಿ, ಕುಂಕುಮ ಹಚ್ಚಿ ಪೂಜೆಸಲ್ಲಿಸುತ್ತಿದ್ದಾರೆ. ಅಲ್ಲಿನ ಜನರಿಗೆ ಇದು ಏನು ಯಾವ ದೇವರು ಎಂದಿನಿಂದ ಈ ಗುಡಿಯನ್ನು ಪೂಜಿಸುತ್ತಿದ್ದೀರಿ ಎಂಬ ಪ್ರಶ್ನೆಗೆ ಅವರು "ಇದು ತುಂಬ ಹಿಂದಿನಿಂದಲೂ ಪೂಜೆ ಮಾಡ್ಕಂತ ಬಂದೀವ್ರಿ ಇದು ದುರ್ಗಮ್ಮನ ಗುಡಿರಿ" ಎಂಬುದಾಗಿ ಹೇಳುತ್ತಾರೆ. ಹೀಗೆ ಪ್ರಾಕ್ಚಾರಿತ್ರಿಕ ವಸ್ತುಗಳು ಜನಸಾಮಾನ್ಯರಲ್ಲಿ ವಿವಿಧ ಬಗೆಯಲ್ಲಿ ನಿರ್ವಚನಕ್ಕೆ ಒಳಗಾಗಿ ಬಳಕೆಗೊಳ್ಳುತ್ತಿರುವುದು ಕಂಡು ಬರುತ್ತದೆ. ಆದರೆ ಆದಿ ಮಾನವನಿಂದ ಇಂದಿನವರೆಗೂ ಆಯುಧ ಸಲಕರಣೆಗಳು ಜನಪದರಲ್ಲಿ ಪೂಜ್ಯಸ್ಥಾನ ಹೊಂದಿವೆ ಎಂಬುದನ್ನು ಮರೆಯುವಂತಿಲ್ಲ. ಪ್ರಾಕ್ಚಾರಿತ್ರಿಕ ಹಾಗೂ ಚರಿತ್ರೆಯ ವಿಷಯಗಳ ಶೋಧನೆಯ ಸಂದರ್ಭದಲ್ಲಿ ಮೌಖಿಕ ಸಾಮಗ್ರಿಗಳು ಲಿಖಿತ ಸಾಮಗ್ರಿಗಳಿಗಿಂತ ಭಿನ್ನವಾದ ಸತ್ಯವನ್ನು ಪ್ರಕಟಿಸುತ್ತವೆ. ಉತ್ಖನನ ಸಂದರ್ಭದಲ್ಲಿ ದೊರಕುವ ಜೀವನ ಬಳಕೆಯ ವಸ್ತುಗಳು ಉದಾಹರಣೆಗೆ ಧೂಪಾರತಿ, ಪ್ರಣತಿ,

ಮಡಿಕೆ, ಕುಡಿಕೆ ಇತ್ಯಾದಿ ವಸ್ತುಗಳು ಅವುಗಳ ಬಳಕೆಗೊಳ್ಳುವ ಸಂದರ್ಭ ಬಳಸುವ ಸಮುದಾಯ ರಚನೆಯ ವಿನ್ಯಾಸ, ಬಳಕೆಗೊಂಡಿರುವ ಕ್ರಮ ಇತ್ಯಾದಿ ವಿವರಗಳನ್ನು ಪಡೆಯಲು ಹಾಗೂ ತಿಳಿದುಕೊಳ್ಳಲು ನಾವು ಇಂದಿಗೂ ಜನರ ಆಚರಣೆ, ನಂಬಿಕೆ, ಹಬ್ಬ, ಉತ್ಸವ, ಸಂಪ್ರದಾಯದಂತಹ ವಿಷಯಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಕೆಲವು ಸಮುದಾಯಗಳಲ್ಲಿ ಹುಟ್ಟಿದ ಮಕ್ಕಳ ಮಾಸವನ್ನು ತಮ್ಮ ಮನೆ ಬಾಗಿಲಿನಲ್ಲಿ ಕುಣಿ ತೆಗೆದು ಹೂಳುವುದನ್ನು ಕಾಣಬಹುದು. ಹುಟ್ಟಿದ ಮಗು ಹೊಟ್ಟೆಯಲ್ಲೇ ಸತ್ತು ಹೊರಬಂದಾಗ ಅದನ್ನು ಮಡಕೆಯಲ್ಲಿ ಇಟ್ಟು ಗೊಬ್ಬರದ ತಿಪ್ಪೆಯಲ್ಲಿ ಹೂಳುತ್ತಾರೆ. ಮಗು ಹುಟ್ಟಿ ಕೆಲ ದಿನ ಅಥವಾ ಗಂಟೆಗಳ ಕಾಲ ಇದ್ದು ಸತ್ತರೆ ಅದನ್ನು ಹುತ್ತದಲ್ಲಿ ಹೂಳುವ ಸಂಪ್ರದಾಯವನ್ನು ಕಾಣಬಹುದು. ದಕ್ಷಿಣ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಶವಸಂಸ್ಕಾರದ ಸಂದರ್ಭದಲ್ಲಿ ಅಕಾಲಿಕ ಮರಣಕ್ಕೆ ತುತ್ತಾದ ವ್ಯಕ್ತಿಗಳನ್ನು ಹೂಳುವಾಗ ಶವದ ಕಾಲಿನ ಹಿಮ್ಮಡಿಯ ಚೆಣ್ಣೀನರವನ್ನು ಕತ್ತರಿಸಿ ಹೂಳಲಾಗುತ್ತದೆ. ಈ ರೀತಿ ಮಾಡುವುದರಿಂದ ಅಕಾಲಿಕ ಮರಣಕ್ಕೆ ತುತ್ತಾದ ವ್ಯಕ್ತಿ ಓಡಾಡಲು ಸಾಧ್ಯವಾಗುವುದಿಲ್ಲ ಅಲ್ಲದೆ ಇತರರಿಗೆ ಯಾವುದೇ ತೊಂದರೆ ಕೊಡಲು ಸಾಧ್ಯವಾಗುವುದಿಲ್ಲ ಎಂಬ ನಂಬಿಕೆ ಈ ತೆರನಾದ ಶವಸಂಸ್ಕಾರ ಪದ್ಧತಿಯಿಂದ ತಿಳಿದು ಬರುತ್ತದೆ. ಪುರಾತತ್ವ ಶೋಧನಾ ಕಾರ್ಯದಲ್ಲಿ ನಡೆಯುವ ಹಲವಾರು ಉತ್ಖನನ ಸಂದರ್ಭದಲ್ಲಿ ದೊರಕುವ ವಸ್ತುವಿಷಯಗಳ ಬಗೆಗೆ ವೈಜ್ಞಾನಿಕ ವಾಸ್ತವ ಹಾಗೂ ಸತ್ಯಾಸತ್ಯತೆಯ ವಿಚಾರಗಳ ಹುಡುಕಾಟದ ಸಂದರ್ಭದಲ್ಲಿ ಪುರಾತತ್ವ ಅಥವಾ ಪ್ರಾಕ್ಚಾರಿಕ ಸಂಶೋಧಕರು ಹಾಗೂ ಅಧ್ಯಯನಯಕಾರರು ಇಂತಹ ವಿಷಯಗಳಿಗೆ ಸಂಬಂಧಪಟ್ಟಂತೆ ಜಾನಪದದ ನೆಲೆಯನ್ನು ಚೆನ್ನಾಗಿ ಗ್ರಹಿಸುವ ಮೂಲಕ ಸಮುದಾಯಗಳ ಆಚರಣೆ, ಸಂಪ್ರದಾಯ, ವಿಧಿವಿಧಾನ ಜೀವನಕ್ರಮಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವ ಮೂಲಕ ತಮ್ಮ ಅಧ್ಯಯನ ಹಾಗೂ ಶೋಧನಾ ಸಂದರ್ಭಗಳಲ್ಲಿ ಲಿಖಿತ ಆಕರಗಳು ನೀಡಲಾರದ ವಾಸ್ತವ ಸತ್ಯದ ನೆಲೆಗಳನ್ನು ಕಂಡುಕೊಳ್ಳಬಹುದಾಗಿದೆ. ಇಲ್ಲಿ ಕಂಠಸ್ಥ ಪರಂಪರೆಯ ವಿಷಯ ಸಾಮಾಗ್ರಿಗಳಲ್ಲಿ ಕಾಲ್ಪನಿಕತೆ ಸೇರಿಕೊಂಡಿರಬಹುದು. ಘಟನೆಗಳು ಕಾಲದ ಅಂತರವನ್ನು ಮರೆತು ಒಂದಾಗಿರಬಹುದು. ವ್ಯಕ್ತಿ, ಸ್ಥಳಗಳ ಹೆಸರುಗಳು ವ್ಯತ್ಯಾಸಗೊಂಡಿರಬಹುದು. ಆ ಕಾಲದ ಬೆಳವಣಿಗೆಯು ಮೂಲ ತಿರುಳಿನ ಸುತ್ತ ಕವಚಗಳ ಪದರುಗಳನ್ನು ಸೇರಿಸಿರಬಹುದು. ಆದರೆ ಬಹುಜನರ ನೋವು- ನಲಿವುಗಳು-ಆಸೆ-ಆಕಾಂಕ್ಷೆಗಳು ಬೇರೆ ಬೇರೆ ರೂಪಗಳಲ್ಲಿ ದಾಖಲವಾಗಿ ಪ್ರಸರಿಸುತ್ತಾ ಇಂತಹ ಕಂಠಸ್ಥ ಪರಂಪರೆಯಾಗಿದೆ. ಎನ್ನುವುದನ್ನು ಮರೆಯುವಂತಿಲ್ಲ.

ಬಳ್ಳಾರಿ ತಾಲೂಕಿಗೆ ಸೇರಿದ ಕುರುಗೋಡು ಸಾಂಸ್ಕೃತಿಕ, ಐತಿಹಾಸಿಕ ಹಾಗೂ ಧಾರ್ಮಿಕ ಕ್ಷೇತ್ರವಾಗಿದ್ದು ಬಳ್ಳಾರಿಯಿಂದ ಸುಮಾರು ೨೮ ಕಿ.ಮೀ. ದೂರದಲ್ಲಿದೆ. ಹೆಬ್ಬಂಡೆಗಳ ರಾಶಿ ಹಾಗೂ ಬೆಟ್ಟ ಸಾಲುಗಳಿಂದ ನಿಸರ್ಗ ನಿರ್ಮಿತವಾದ ಸುಂದರ ತಾಣ ಇದಾಗಿದೆ. ಇಂತಹ ಸುಂದರ ಹಾಗೂ ಸಂರಕ್ಷಿತ ತಾಣ ಆದಿಮಾನವನ ವಸತಿಯ ನೆಲೆಯಾಗಿ ಕಂಡುಬರುತ್ತದೆ. ಬೃಹತ್ ಶಿಲಾಯುಗ ಹಾಗೂ ತಾಮ್ರಯುಗಗಳಿಗೆ ಸಂಬಂಧಪಟ್ಟ ಹಲವಾರು ಕುರುಹುಗಳು ಈ ಪ್ರದೇಶದಲ್ಲಿ ದೊರಕಿವೆ. ಇಂದಿಗೂ ಆದಿಮಾನವನ ಗವಿವರ್ಣ ಚಿತ್ರಗಳು, ಬಯಲು ಬಂಡೆಯ ರೇಖಾಚಿತ್ರಗಳು, ಕಲ್ಲಿನ ಆಯುಧಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ. ಅಷ್ಟೇ ಅಲ್ಲದೆ ಕ್ರಿ.ಶ. ೧೦ನೆಯ ಶತಮಾನದಿಂದ ೧೨ನೇ ಶತಮಾನದ ವರೆವಿಗೂ ಬಲ್ಲಕುಂದೆ ೩೦೦ ನಾಡಿನ ರಾಜಧಾನಿಯಾಗಿ ಈ ಪಟ್ಟಣವು ಬಳ್ಳಾರಿ ಜಿಲ್ಲಾ ಪ್ರದೇಶ ಸಿಂದವಾಡಿ ೧೦೦೦೦ ವಿಭಾಗಕ್ಕೆ ಒಳಪಟ್ಟಿತ್ತು. ಈ ಪ್ರದೇಶದಲ್ಲಿ ಸಿಂದವಂಶದ ಅರಸರು ಪರಂಪರಾಗತವಾಗಿ ಆಳುತ್ತಿದ್ದುದರಿಂದ ಈ ಪ್ರದೇಶಕ್ಕೆ ಸಿಂದವಾಡಿನಾಡು ಸಿಂದವಾಡಿಸಾಸಿರ ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು. ಸಿಂದವಾಡಿ ನಾಡಿನ ಉಪವಿಭಾಗವಾದ ಬಲ್ಲಕುಂದೆ ೩೦೦ ಪ್ರದೇಶವು ಬಳ್ಳಾರಿ, ಸಿರುಗುಪ್ಪ, ಸಂಡೂರು, ಹೊಸಪೇಟೆ ತಾಲ್ಲೂಕುಗಳ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು ಎಂಬುದನ್ನು ಸಿರುಗುಪ್ಪ೭ ಶಾಸನವೊಂದರಲ್ಲಿ ಉಲ್ಲೇಖಿಸುತ್ತದೆ. ಈ ಬಲ್ಲಕುಂದೆ ನಾಡಿಗೆ ಕುರುಗೋಡು ರಾಜಧಾನಿಯಾಗಿತ್ತು. ಇದರ ಉಪವಿಭಾಗಗಳು ದೊರವಡಿ ೭೦, ತೆಕ್ಕೆಕಲ್ಲು ೧೨, ಎಂಬುದಾಗಿ ಹೇಳಲಾಗುತ್ತದೆ. ಬಹಳ ಹಿಂದಿನಿಂದಲೂ ಆಂಧ್ರ ಕರ್ನಾಟಕ ಪ್ರದೇಶವನ್ನು ಒಗ್ಗೂಡಿಸಿ ಎರಡು ಸಂಸ್ಕೃತಿಗಳನ್ನೂ ಮೇಳೈಸಿಕೊಂಡು ಮೆರೆದ ಕೀರ್ತಿ ಸಿಂದವಂಶದ ಅರಸರಿಗೆ ಸಲ್ಲುತ್ತದೆ. ಒಂದನೇ ರಾಚಮಲ್ಲ ಹಾಗೂ ಇಮ್ಮಡಿ ರಾಚಮಲ್ಲ ಈ ವಂಶದ ಪ್ರಮುಖ ಅರಸರಾಗಿ ಕಂಡುಬರುತ್ತಾರೆ. ಇವರು ಶೈವ ಧರ್ಮವಲಂಬಿಗಳಾಗಿದ್ದರೆಂದು ತಿಳಿದುಬರುತ್ತದೆ. ಆ ಕಾಲಕ್ಕೆ ಈ ಪಟ್ಟಣದಲ್ಲಿ ನಿರ್ಮಾಣಗೊಂಡ ಹಲವಾರು ಶೈವ, ಜೈನ ದೇವಾಲಯಗಳು ಹಾಗೂ ಜೈನಮಂದಿರಗಳು ಕೋಟೆ ಕೊತ್ತಲಗಳು, ಅರವಟಿಗೆ, ಕೆರೆ, ಬಾವಿಗಳು ಇಂದಿಗೂ ಅಂದಿನ ಸಾಂಸ್ಕೃತಿಕ ಹಾಗೂ ಸಾಮಾಜಿಕ ಜೀವನದ ಪ್ರತೀಕವಾಗಿ ಕಂಡುಬರುತ್ತದೆ. ಈ ಪ್ರದೇಶದಲ್ಲಿ ಹೆಚ್ಚಾಗಿ

ದೊರಕುವ ದಾನ ಶಾಸನಗಳು ಅಂದಿನ ರಾಜನ ಸಾಮಾಜಿಕ ಕಳಕಳಿಯ ಗುಣಕ್ಕೆ ಸಾಕ್ಷಿಯಾಗಿವೆ. ಕ್ರಿ.ಶ. ೧೨ನೆಯ ಶತಮಾನದ ಕೊನೆಯಲ್ಲಿ ಈ ಪ್ರದೇಶವು ಹೊಯ್ಸಳ ದೊರೆಗಳ ಆಡಳಿತಕ್ಕೆ ಒಳಪಟ್ಟಿತ್ತು. ಅನಂತರ ವಿಜಯಗರ ಸಾಮ್ರಾಜ್ಯಕ್ಕೆ ಒಳಪಟ್ಟು ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ಹಂಡೆವಂಶದ ಬಾಲದ ಹನುಮಪ್ಪನಾಯಕ ಮತ್ತು ಆತನ ವಂಶಸ್ಥರು ಕುರುಗೋಡು ಪಟ್ಟಣವನ್ನು ಆಳಿದರು. ಕುರುಗೋಡು ಪಟ್ಟಣದ ಸ್ಥಳೀಯ ಚರಿತ್ರೆಯ ಬಗೆಗೆ ಹಲವಾರು ವೈಶಿಷ್ಟ್ಯಪೂರ್ಣವಾದ ಅಂಶಗಳು ಕಂಡು ಬರುತ್ತವೆ. ಈ ಊರಿಗೆ 'ಕುರುಗೋಡು' ಎಂಬ ಹೆಸರು ಬರಲು ಕಾರಣವೇನು? ಎಂಬ ಪ್ರಶ್ನೆಗೆ ಇಲ್ಲಿಯ ಸ್ಥಳೀಯರು ತಮ್ಮದೇ ಅರಿವಿನ ಹಿನ್ನೆಲೆಯಲ್ಲಿ ಹಲವು ಬಗೆಯಲ್ಲಿ ವಿವರಣೆ ನೀಡುತ್ತಾರೆ.

- ಈ ಪಟ್ಟಣದಲ್ಲಿರುವ ಬೃಹದಾಕಾರದ ಏಕ ಶಿಲಾಬಸವ ಅಥವಾ ನಂದಿಯ ಮೂರ್ತಿಯ ಕೋಡುಗಳು ಮೂಡುತ್ತಿರುವ ಅಥವಾ ಬೆಳೆಯುತ್ತಿರುವ ಎಳೆಯ ಕೋಡುಗಳು ಅಂದರೆ ಜನಪದರಲ್ಲಿ 'ಕುರು' ಎಂದರೆ ಮೂಡುತ್ತಿರುವ, ಮೊಳಕೆಯಾಗಿರುವ ಅಥವಾ ಬೆಳೆಯುತ್ತಿರುವ ಎಂಬ ಅರ್ಥವನ್ನು ನೀಡುತ್ತದೆ. ಗೋಡು ಎಂಬ ಪದವು ಕುರು ಪದದ ಜೊತೆಗೆ ಬಂದಾಗ ಕೋಡು ಅಥವಾ ಕೊಂಬುಗಳು ಎಂಬುದಾಗಿ ಅರ್ಥೈಸುವ ಮೂಲಕ ಈ ಬಸವನ ಎಳೆಯ ಬೆಳೆಯುತ್ತಿರುವ ಕೋಡುಗಳಿಂದಾಗಿ ಈ ಊರಿಗೆ ಕುರುಗೋಡು ಎಂಬ ಹೆಸರು ಬಂದಿದೆ ಎಂಬುದಾಗಿ ಹೇಳುತ್ತಾರೆ.
- ಈ ಕುರುಗೋಡು ಪಟ್ಟಣವು ಸುತ್ತಲೂ ರಾಶಿ ರಾಶಿ ಕಲ್ಲುಗಳ ಬೆಟ್ಟಗಳಿಂದ ಆವೃತ್ತವಾಗಿದ್ದು, ಕೆಲವು ಬೆಟ್ಟಗಳು ಎತ್ತರವಾಗಿ ಚೂಪಾಗಿ ಬಸವನ ಕೋಡುಗಳಂತೆ ನೈಸರ್ಗಿಕ ರಚನೆ ಹೊಂದಿರುವುದರಿಂದ ಈ ಊರಿಗೆ ಈ ಹೆಸರು ಬಂದಿದೆ ಎಂಬುದಾಗಿ ಹೇಳಲಾಗುತ್ತದೆ.
- ಇಲ್ಲಿನ ಬಸವ ಅಥವಾ ನಂದಿಯಮೂರ್ತಿ ಸ್ವಯಂಭು ಅಂದರೆ ಉದ್ಭವವಾದುದೆಂಬುದು ಜನಪದರ ಪ್ರಾಚೀನ ನಂಬಿಕೆ. ಆದ್ದರಿಂದ ಅದು ಈ ಪ್ರದೇಶಕ್ಕೆ ಒಂದು ಕುರುಹು ಆಗಿ ಅಂದರೆ ಮರೆಯಲಾಗದ ಎಂದೂ ನೆನಪಿನಲ್ಲಿ ಉಳಿಯುವಂತಹ ಗುರುತಾಗಿ ಪರಿಣಮಿಸಿದೆ ಎಂಬ ನಂಬಿಕೆಯಿಂದಾಗಿ ಕುರುಹಿನ ಕೂಡು ಕುರುಗೋಡು ಎಂಬುದಾಗಿ ಈ ಪಟ್ಟಣಕ್ಕೆ ಈ ಹೆಸರು ಬಂದಿದೆ ಎಂಬುದು ಜನಪದರ ಮತ್ತೊಂದು ಹೇಳಿಕೆ.

ಒಂದು ಸಮುದಾಯ ತುಂಬ ಹಿಂದಿನಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ವಾಸಮಾಡುತ್ತಾ ಬಂದು, ಆನಂತರ ಕೆಲ ಸಮುದಾಯಗಳು ಆ ಸ್ಥಳದಲ್ಲಿ ನೆಲೆಗೊಳುತ್ತವೆ. ಮೂಲದಿಂದಲೂ ನೆಲೆಗೊಂಡು ಬಂದ ಸಮುದಾಯಗಳ ಹೆಸರೇ ಆ ಪ್ರದೇಶಕ್ಕೆ ಅನ್ವಯವಾಗುವಂತೆ ಗುರುತಿಸಲಾಗುತ್ತದೆ. ಉದಾಹರಣೆಗೆ ಗೊಲ್ಲರ ಹಟ್ಟಿ, ಗೊಂಡೇನಹಳ್ಳಿ, ಉಪ್ಪಾರಹಳ್ಳಿ ಇತ್ಯಾದಿ ಈ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿ ತುಂಬ ಹಿಂದಿನಿಂದಲೂ ಪಾರಂಪರಿಕವಾಗಿ ನೆಲೆಗೊಂಡು ಬಂದ ಕುರುಬ ಹಾಗೂ ಕುರುಹಿನ ಶೆಟ್ಟಿ ಸಮುದಾಯಗಳಿಂದ ಈ ಪಟ್ಟಣಕ್ಕೆ ಕುರುಗೋಡು ಎಂಬ ಹೆಸರು ಬಂದಿರಬಹುದೆ ಎಂದು ಚರ್ಚೆಯಾಗಬೇಕಿದೆ. ಏಕೆಂದರೆ ಇಲ್ಲಿ ಗೋಡು, ಗೂಡು, ಪೋಡು, ವಾಡೆ ಇತ್ಯಾದಿ ಪದಗಳು ವಾಸಿಸುವ ಸ್ಥಳ ಅಥವಾ ನೆಲೆನಿಂತಿರುವ ಸ್ಥಳ ಎಂಬ ಹೆಸರನ್ನು ಸೂಚಿಸುತ್ತವೆ. ಈ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವ ಕುರುಬ ಹಾಗೂ ಕುರುಹಿನ ಶೆಟ್ಟಿ ಸಮುದಾಯಗಳ ಹಿನ್ನೆಲೆಯಿಂದ ಕುರುಹಿನ ಕೋಡು ಕುರುಗೋಡು ಎಂಬ ಹೆಸರು ಬಂದಿರಬಹುದಾಗಿ ಊಹಿಸಬಹುದಾಗಿದೆ.

ಕ್ರಿ.ಶ. ೧೭೦೧-೧೦ರಲ್ಲಿ ಹಂಡೆವಂಶದ ದೇವಪ್ಪನಾಯಕ ಪಟ್ಟಣದ ಸುರಕ್ಷತೆಯ ದೃಷ್ಟಿಯಿಂದ ಕುರುಗೋಡು ಹಳೇ ಪಟ್ಟಣದ ಪೂರ್ವಕ್ಕೆ ಗುಡ್ಡದ ಕೆಳಗೆ ಕೋಟೆ ಕಟ್ಟಿಸಿ ಹೊಸ ಊರನ್ನು ಸ್ಥಾಪನೆ ಮಾಡಿದ್ದರಿಂದ ಪ್ರಸ್ತುತ ಕುರುಗೋಡು ಪಟ್ಟಣ ನಿರ್ಮಾಣವಾಯಿತು ಎಂದು ಅಭಿಪ್ರಾಯ ಪಡಲಾಗುತ್ತದೆ. ಅಲ್ಲದೆ ಹಳೆಯ ಊರಿಗೆ ಕಾಲರ ಹಾಗೂ ಪ್ಲೇಗ್‌ನಂತಹ ಮಾರಕ ರೋಗಗಳು ಬಂದೊದಗಿದ್ದರಿಂದ ಜನರು ಹಳೆಯ ಊರನ್ನು ತೊರೆದು ಇಂದಿನ ಕುರುಗೋಡು ಪಟ್ಟಣಕ್ಕೆ ಸ್ಥಳಾಂತರಗೊಂಡರು ಎಂಬುದಾಗಿ ಹೇಳಲಾಗುತ್ತದೆ. ಸುಮಾರು ಒಂದು ಶತಮಾನಗಳ ಕಾಲ (೧೧ನೇ ಶತಮಾನದಿಂದ ೧೨ನೇ ಶತಮಾನದ ಕೊನೆಯವರೆಗೆ) ಕುರುಗೋಡು ಪ್ರದೇಶವನ್ನು ಕೇಂದ್ರವಾಗಿರಿಸಿಕೊಂಡು ಆಳಿದ ರಾಜವಂಶದವರಲ್ಲಿ ಕುರುಗೋಡು ಸಿಂದರು ಪ್ರಮುಖರಾಗಿ ಕಂಡು ಬರುತ್ತಾರೆ. ಇವರನ್ನು ನಾಗಕುಲದವರು ಎಂದು ಕರೆಯುತ್ತಾರೆ. ಇವರಲ್ಲಿ ನಾಗಾರಾಧನೆ ಆಚರಣೆ ಹೆಚ್ಚು ರೂಢಿಯಲ್ಲಿದ್ದ ಬಗೆಗೆ ತಿಳಿದುಬರುತ್ತದೆ. ಈ ಪ್ರದೇಶದಲ್ಲಿ ಇಂದಿಗೂ ಈ ಆಚರಣೇ ರೂಢಿಯಲ್ಲಿದ್ದು, ಪ್ರಾಚೀನ ನಾಗಾರಾಧನೆಯ

ಕುರುಹುಗಳು ಅಲ್ಲಲ್ಲಿ ಕಂಡು ಬರುತ್ತವೆ. ಹೀಗೆ ಆಚರಣೆ, ನಂಬಿಕೆ, ಸಂಪ್ರದಾಯ, ನಿಷೇಧ ಪದ್ಧತಿ, ವಿಧಿವಿಧಾನಗಳು ಮಾನವನ ಸಂಸ್ಕೃತಿಯೊಳಗೆ ಸಮ್ಮಿಳಿತಗೊಂಡ ಸಂಸ್ಕೃತಿಯ ರೂಪ ವೈವಿಧ್ಯಗಳು ಅದರಲ್ಲೂ ವಿಶೇಷವಾಗಿ ಮಾನವನ ಸಂಸ್ಕೃತಿ ಚರಿತ್ರೆಯ ಹಲವಾರು ದರ್ಶನಗಳನ್ನು ಆಚರಣೆಗಳಲ್ಲಿ ಕಾಣಬಹುದು.

ಕುರುಗೋಡಿನಲ್ಲಿ ವರ್ಷದಾದ್ಯಂತ ನಡೆಯುವ ಹಬ್ಬ, ಉತ್ಸವ, ಆಚರಣೆ, ಸಂಪ್ರದಾಯಗಳನ್ನು ಈ ಪ್ರದೇಶದ ಪಾರಂಪರಿಕ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳುವ ಮೂಲಕ ಸಮುದಾಯಗಳು, ಸಂಸ್ಥಾನಗಳ ಚಾರಿತ್ರಿಕ ಅಂಶಗಳನ್ನು ಕಂಡು ಕೊಳ್ಳಬಹುದು. ಕುರುಗೋಡಿನಲ್ಲಿ ಕಂಡುಬರುವ ದೈವಗಳು ಇಲ್ಲಿನ ಆಚರಣೆಗಳ ಪ್ರಮುಖ ಕೇಂದ್ರ ಬಿಂದುವಾಗಿ ಕಂಡುಬರುತ್ತವೆ. ಇಲ್ಲಿ ಪ್ರಮುಖವಾಗಿ ಕಂಡುಬರುವ ದೈವಗಳೆಂದರೆ :

*ಕುರುಗೋಡು ದೊಡ್ಡಬಸವೇಶ್ವರ, ಗ್ರಾಮದೇವತೆ ಸುಂಕಲಮ್ಮ, ಹಂಡೆ ಹನುಮಪ್ಪ, ಪಂಚಮುಖದಯ್ಯ, ಗವಿ ವೀರಭದ್ರ, ಕೊಳ್ಳದ ವೀರಭದ್ರ, ವಜ್ರಬಂಡೆ ಬಸಪ್ಪ, ಕಲ್ಲುಡೆಪ್ಪ, ನೀಲಕಂಠೇಶ್ವರ, ಹಿಂಡುಲಿ ಸಂಗಮೇಶ್ವರ, ಬಾಳೆಕೊಳ್ಳದ ಎಲ್ಲಮ್ಮ, ಕೆಂಚಮ್ಮ, ಕಾಳಮ್ಮ, ಚೌಕಿ ನೀಲಮ್ಮ, ಮಲಯಮ್ಮ, ಕವಲೆಗಿಡದ ಮಾರಮ್ಮ, ಬುಡೆಕಲ್ಲಪ್ಪ, ಪೋಪ್ಪಪ್ಪ, ಜಂಗಳಿ ಬಸವಣ್ಣ, ಕೋಟೆ ಈಶ್ವರ, ಕೋಟೆ ಆಂಜನೇಯ, ಚೌಕಮ್ಮ, ತಾಯಮ್ಮ,*

ದೊಡ್ಡಬಸವೇಶ್ವರ ಕುರುಗೋಡಿನ ಪ್ರಮುಖವಾದ ದೈವ. ಈ ದೇವರಿಂದಲೇ ಕುರುಗೋಡಿಗೆ ಹೆಸರು ಬಂದಿದೆ ಎಂಬುದು ಜನಪದರ ನಂಬಿಕೆ. ಈ ದೇವಾಲಯದ ಮಹಾದ್ವಾರವು ಪಶ್ಚಿಮಾಭಿಮುಖವಾಗಿದೆ. ಸುಮಾರು ೬೦ ಅಡಿ ಎತ್ತರದ ಇಟ್ಟಿಗೆ ಹಾಗೂ ಗಾರೆಗಳಿಂದ ನಿರ್ಮಿಸಿದ ೫ ಅಂತಸ್ತುಗಳ ಗೋಪರವಿದೆ. ದೇವಾಲಯದ ನವರಂಗವು ಹನ್ನೆರಡು ಕಂಬಗಳಿಂದ ಕೂಡಿದೆ. ಗರ್ಭಗುಡಿಯಲ್ಲಿ ಸುಮಾರು ೨೫x೨೦ ಅಡಿಗಳಷ್ಟು ವಿಸ್ತಾರವಾಗಿದೆ. ಗರ್ಭಗೃಹದ ಮಧ್ಯಭಾಗದಲ್ಲಿ ಪ್ರಾಕೃತಿಕವಾಗಿ ರಚನೆಗೊಂಡ ಬೃಹತ್ ಶಿಲೆಯಿಂದ ಕಂಡರಿಸಿ ಕೆತ್ತಿದ ಮಲಗಿದ ಭಂಗಿಯ ನಂದಿ ವಿಗ್ರಹ ಇದೆ. ಇದು ಸುಮಾರು ೧೪ ಅಡಿ ಎತ್ತರವಿದ್ದು, ದೊಡ್ಡ ವಿಗ್ರಹವಾಗಿರುವುದರಿಂದ ಇದನ್ನೆ ದೊಡ್ಡಬಸವೇಶ್ವರ ಎಂದು ಕರೆಯುತ್ತಾರೆ. ಈ ಪ್ರದೇಶವನ್ನು 'ದಕ್ಷಿಣಕಾಶಿ' ಎಂದೂ ಕರೆಯುತ್ತಾರೆ.

ಈ ದೇವಾಲಯ ಶಾಸನಾಧಾರದ ಪ್ರಕಾರ ೧೫೨೪ರಲ್ಲಿ ವಿಜಯನಗರದ ಅರಸ ಶ್ರೀಕೃಷ್ಣದೇವರಾಯನ ಸಮಕಾಲೀನ ಕೃಷ್ಣಪ್ಪನಾಯಕನ ಕಾಲದಲ್ಲಿ ಈ ದೇವರಿಗೆ ಭೂಮಿಯನ್ನು ದಾನಬಿಟ್ಟ ಬಗೆಗೆ ತಿಳಿದುಬರುತ್ತದೆ. ಈ ದೇವಾಲಯದ ನಿರ್ಮಾಣ, ಕಲ್ಯಾಣ ಚಾಲುಕ್ಯರ ಆಡಳಿತದ ಕೊನೆ ಹಾಗೂ ವಿಜಯನಗರದ ಅರಸರ ಆರಂಭದ ಕಾಲಾವಧಿಯಲ್ಲಿ ಹಂತಹಂತವಾಗಿ ನಿರ್ಮಾಣಗೊಂಡಿತು ಎಂಬುದಾಗಿ ಹೇಳಲಾಗುತ್ತದೆ. ಮಾರ್ಚ್ ತಿಂಗಳ ಹೋಳಿ ಹುಣ್ಣಿಮೆಯ ಸಂದರ್ಭದಲ್ಲಿ ಈ ದೇವರ ಜಾತ್ರೆ ನಡೆಯುತ್ತದೆ. ಇದು ಈ ಜಿಲ್ಲೆಯಲ್ಲಿ ಹಂಪಿ ಜಾತ್ರೆಯನ್ನು ಬಿಟ್ಟರೆ ಎರಡನೆಯ ದೊಡ್ಡ ಜಾತ್ರೆ ಎಂದು ಹೇಳಬಹುದು. ಮಾರ್ಚ್ ತಿಂಗಳ ಹೋಳಿ ಹುಣ್ಣಿಮೆಯ ಸಂದರ್ಭದಲ್ಲಿ ಕುರುಗೋಡಿನ ದೊಡ್ಡ ಬಸವೇಶ್ವರ ಜಾತ್ರೆ ನಡೆಯುತ್ತದೆ. ಇದು ಗ್ರಾಮ ದೈವದ ಜಾತ್ರೆಯಾದುದರಿಂದ ಈ ಸಂದರ್ಭದಲ್ಲಿ ಇತರೆಡೆಗಳಲ್ಲಿ ಹೋಳಿ ಹುಣ್ಣಿಮೆ ಆಚರಣೆಗೊಳಿಸುವುದರಿಂದ ಭಿನ್ನವಾದ ಇಲ್ಲಿನ ಆಚರಣೆಗಳು ಇಲ್ಲಿ ನಡೆಯುತ್ತಿರುತ್ತವೆ. ಹೋಳಿ ಹುಣ್ಣಿಮೆಯಂದು ನಡೆಯುವ ಓಕುಳಿ ಆಚರಣೆ ಇಲ್ಲಿ ಕಂಡುಬರುವುದಿಲ್ಲ. ಪ್ರತಿ ವರ್ಷ ಕುರುಗೋಡಿನ ಎಲ್ಲಾ ಸಮುದಾಯದ ಪ್ರಮುಖರು ಸೇರಿ ಜಾತ್ರೆಯ ದಿನದ ಕಾರ್ಯಕ್ರಮವನ್ನು ಕೈಯಿಂದಲೇ ಸಿದ್ಧಪಡಿಸುತ್ತಾರೆ. ಹೀಗೆ ಪ್ರತಿಯೊಂದು ಸಮುದಾಯಗಳೂ ಜಾತ್ರೆಯ ಆಚರಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತವೆ. ಜಾತ್ರೆಗಿಂತ ಒಂಬತ್ತು ದಿನದ ಮುಂಚಿತವಾಗಿ ಎಲ್ಲರೂ ಕಂಕಣ ಕಟ್ಟಿಕೊಳ್ಳುವ ಪದ್ಧತಿ ಇದೆ. ಕಂಕಣ ಕಟ್ಟಿಕೊಂಡ ನಂತರ ಅವರಲ್ಲಿ ಮಾಂಸಹಾರ ಸೇವನೆ ಇತ್ಯಾದಿ ವಿಷಯಗಳ ನಿಷೇಧವಿರುತ್ತದೆ. ಜಾತ್ರೆಯಾದ ನಂತರ ಕಟ್ಟಿದ ಕಂಕಣವನ್ನು ಬಿಚ್ಚುತ್ತಾರೆ. ಆ ಸಂದರ್ಭದಲ್ಲಿ ಹಿಂದೆ ಓಕುಳಿ ಆಚರಣೆ ಇದೆ. ಈ ಹಿಂದೆ ದೇವದಾಸಿ ಹೆಣ್ಣುಮಕ್ಕಳು ಓಕುಳಿಯಾಡುವ ಪದ್ಧತಿ ಇತ್ತು. ಬೇರೆಯವರು ಈ ಹೆಣ್ಣುಮಕ್ಕಳಿಗೆ ಓಕುಳಿ ಹಾಕುತ್ತಾ ಅವರಿಂದ ಪೊರಕೆಯಿಂದ ಹೊಡೆಸಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಓಕುಳಿ ಆಚರಣೆ ಶುದ್ಧಗೊಳ್ಳುವ ಪ್ರಕ್ರಿಯೆಯಾಗಿ ಜನಪದರಲ್ಲಿ ಕಂಡು ಬರುತ್ತದೆ. ಉದಾಹರಣೆಗೆ ಓಕುಳಿಯಲ್ಲಿ ಎರಡು ಬಗೆ, ಒಂದು ನೀರಿನ ಓಕುಳಿ ಮತ್ತೊಂದು ಸಗಣಿ ಓಕುಳಿ ಅಥವಾ ತೊಪ್ಪೆ ಓಕುಳಿ. ಸಗಣಿ ಓಕುಳಿ ದಕ್ಷಿಣ ಕರ್ನಾಟಕದ ಪ್ರದೇಶದಲ್ಲಿ ಇಂದಿಗೂ ಪ್ರಚುರದಲ್ಲಿದೆ. ಸಗಣಿ, ಗೋಮೂತ್ರ, ನೀರು ಇವು

ಶುದ್ಧೀಕರಣಗೊಳ್ಳುವ ಬಗೆಯಲ್ಲಿ ಓಕುಳಿ ಆಚರಣೆಯಲ್ಲಿ ಬಳಕೆಯಾಗುತ್ತವೆ. ಸಾಮಾನ್ಯವಾಗಿ ಓಕುಳಿ ಆಚರಣೆ ಗ್ರಾಮ ದೈವಗಳನ್ನು ವರ್ಷಕ್ಕೊಮ್ಮೆ ಪೂಜಿಸಲು ಹೊರತೆಗೆಯುವ ಸಂದರ್ಭದಲ್ಲಿ ಹಾಗೂ ಜಾತ್ರೆಯ ಆಚರಣೆಯ ಮುಕ್ತಾಯದ ಸಂದರ್ಭದಲ್ಲಿ ನಡೆಯುವುದನ್ನು ಗಮನಿಸಬಹುದು. ಸೋಮಲಾಪುರ ಹಾಗೂ ಮುಷ್ಟಗಟ್ಟೆಯ ಬೇಡ ಸಮುದಾಯದವರು ಕೆರೆಕೆರೆ ಜಾತ್ರೆಯ ಸಂದರ್ಭದಲ್ಲಿ ಕುಂಬಗಳನ್ನು ಪೂಜಿಸಿ ತಂದು ಧೂಳುಗಾಯಿ ಓಡೆದು ಮೊದಲಿಗೆ ಈರಣ್ಣ ದೇವರಿಗೆ ಪೂಜೆ ಸಲ್ಲಿಸಿ ನೀಲಮ್ಮನ ಮಠಕ್ಕೆ ಹೋಗಿ ಅಲ್ಲಿಯೂ ಪೂಜೆ ಸಲ್ಲಿಸಿ, ದೊಡ್ಡಬಸವೇಶ್ವರ ದೇವಸ್ಥಾನಕ್ಕೆ ಬಂದು ಪೂಜೆ ಸಲ್ಲಿಸುತ್ತಾರೆ. ಅಲ್ಲಿನ ಮಡಿವಾಳೇಶ್ವರ ಗುಡಿಯ ಪಕ್ಕದ ಬೇವಿನಗಿಡದ ಕಟ್ಟೆಯ ಮೇಲೆ ಕುಂಬಗಳನ್ನು ಇಳಿಸಿ ಪೂಜೆ ಸಲ್ಲಿಸುತ್ತಾರೆ. ಇಂದಿಗೂ ಈ ಸ್ಥಳಕ್ಕೆ ಕುಂಬದಕಟ್ಟೆ ಎಂಬುದಾಗಿ ಕರೆಯುತ್ತಾರೆ. ಬಗೆಗೆ ಚರ್ಚಿಸಿ ತೀರ್ಮಾನಿಸುತ್ತಾರೆ. ಹೋಳಿ ಹುಣ್ಣಿಮೆಯ ಒಂಬತ್ತು ದಿನಗಳ ಮುಂಚಿತವಾಗಿ ಗ್ರಾಮದಲ್ಲಿ ತುಂಬಾ ಕಟ್ಟುನಿಟ್ಟಿನ ಕ್ರಮವನ್ನು ಅನುಸರಿಸಲಾಗುತ್ತದೆ. ಈ ಸಂದರ್ಭದಲ್ಲಿ ಬೇರಾವುದೇ ಆಚರಣೆ ಪದ್ಧತಿಗಳು ನಡೆಯುವುದಿಲ್ಲ. ಮಾಂಸದ ಅಡುಗೆ ಇತ್ಯಾದಿಗಳನ್ನು ಯಾವುದೇ ಸಮುದಾಯಗಳು ಅತಿ ಭಕ್ತಿಯಿಂದ ಗ್ರಾಮ ದೈವದ ಪೂಜೆ ಹಾಗೂ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತವೆ. ಇಲ್ಲಿನ ಪ್ರತಿಯೊಂದು ಸಮುದಾಯದವರೂ ಜಾತ್ರೆಯ ಆಚರಣೆಗೆ ಸಂಬಂಧಿಸಿದಂತೆ ತಮ್ಮ ತಮ್ಮ ಪಾಲಿನ ಕೆಲಸಗಳನ್ನು ಚಾಚುತಪ್ಪದೆ ನಿರ್ವಹಿಸುತ್ತವೆ. ಇದು ಸಮುದಾಯಗಳ ನಡುವಿನ ಸೌಹಾರ್ದತೆಯ ಸಂಕೇತವೂ ಹೌದು. ಜಾತ್ರೆಗೆ ಮುನ್ನ ವಡ್ಡರ ಸಮುದಾಯದವರು ರಥದ ಮನೆಯಿಂದ ರಥವನ್ನು ಹೊರಗೆ ತಂದು ಬಿಡುತ್ತಾನೆ. ಜಾತ್ರೆಯ ರಥೋತ್ಸವಕ್ಕೆ ಬೇಕಾದ ರೀತಿಯಲ್ಲಿ ಬಡಿಗೇರ ಸಮುದಾಯದವರು ರಥವನ್ನು ಸಿದ್ಧಪಡಿಸುತ್ತಾರೆ. ರಥಕ್ಕೆ ಬೇಕಾದ ಇರುಸು ಹಾಗೂ ಗಾಲಿಗಳನ್ನು ಕಮ್ಮಾರರು ಸಜ್ಜುಗೊಳಿ ಸುತ್ತಾರೆ. ಚಿಪ್ಪಿಗ ಸಮುದಾಯದವರು ರಥದ ಧ್ವಜವನ್ನು ಜಾತ್ರೆಯ ಮೊದಲ ದಿನ ಎಲ್ಲಾ ಸಮುದಾಯದ ಮುಖ್ಯಸ್ಥರ ಹಾಗೂ ಪ್ರಮುಖರು ಸೇರಿ ದೊಡ್ಡ ಬಸವೇಶ್ವರನಿಗೆ ಧ್ವಜವನ್ನು ಸಮರ್ಪಿಸುವ ಮೂಲಕ ಜಾತ್ರೆಗೆ ಚಾಲನೆ ನೀಡುತ್ತಾರೆ. ಇಲ್ಲಿನ ನೀಲಮ್ಮನ ಮಠ ಹಾಗೂ ದೊಡ್ಡಬಸವೇಶ್ವರ ದೇವಾಲಯ ಜಾತ್ರೆಯ ಪ್ರಮುಖ ಕೇಂದ್ರಬಿಂದುವಾಗಿ ಕಂಡು ಬರುತ್ತವೆ. ಮೊದಲು ದೊಡ್ಡ ಬಸವೇಶ್ವರನ ಗುಡಿಯ ಬಸವನನ್ನು ನೀಲಮ್ಮನ ಮಠಕ್ಕೆ ಪೂಜಾ ವಿಧಿವಿಧಾನಗಳ ಮೂಲಕ ಕರೆದೊಯ್ದು ಬಿಟ್ಟುಬರುತ್ತಾರೆ. ಅನಂತರ ನೀಲಮ್ಮನವರ ಮಠದಿಂದ ಕುಂಬ ಕಳಶದ ಸಮೇತವಾಗಿ ಮುತ್ತೈದೆಯರು ದೊಡ್ಡ ಬಸವೇಶ್ವರನ ಗುಡಿಗೆ ಬರುತ್ತಾರೆ. ಈ ಸಮಯದಲ್ಲಿ ಮಠದ ಗುರುಗಳೂ ಬರುತ್ತಾರೆ. ಕುಂಬ ಕಳಸ ಸಮೇತವಾಗಿ ತೇರನ್ನು ಬಳಸಿ ರಥೋತ್ಸವಕ್ಕೆ ಅಣಿಮಾಡುತ್ತಾರೆ. ಸಾಮಾನ್ಯವಾಗಿ ರಥದಲ್ಲಿ ಕೂರುವವರು ನೀಲಮ್ಮನ ಮಠದವರು. ನೀಲಮ್ಮ ಬಸವೇಶ್ವರರ, ಶಿಶುಮಗಳು ಎಂಬುದು ಇಲ್ಲಿನ ಜನಪದರ ನಂಬಿಕೆ. ಒಂಬತ್ತು ದಿನಗಳ ಜಾತ್ರೆಯ ಆಚರಣೆಯಲ್ಲಿ ಪ್ರತಿದಿನವೂ ಒಂದೊಂದು ಬಗೆಯ ಉತ್ಸವ ಆಚರಣೆಗಳು ನಡೆಯುತ್ತವೆ. ಒಂದು ದಿನ ನವಿಲು ವಾಹನ ಉತ್ಸವ, ನಂದಿವಾಹನ ಉತ್ಸವ ಇತ್ಯಾದಿ. ಹೋಳಿ ಹುಣ್ಣಿಮೆಯ ದಿನದಂದು ನಡೆಯುವ ರಥೋತ್ಸವ ದಲ್ಲಿ ದೊಡ್ಡಬಸವೇಶ್ವರ ಹಾಗೂ ನೀಲಮ್ಮ ಎರಡೂ ಮೂರ್ತಿಗಳನ್ನೂ ರಥದಲ್ಲಿ ಕುಳ್ಳಿರಿಸಿ ರಥೋತ್ಸವ ನಡೆಯುತ್ತದೆ. ರಥೋತ್ಸವದ ನಂತರ ಒಂಬತ್ತು ದಿನಗಳ ಹಿಂದೆ ಕಟ್ಟಿದ್ದ ಕಂಕಣವನ್ನು ಬಿಚ್ಚುವ ಆಚರಣೆ, ಕಂಕಣ ಬಿಚ್ಚಿದ ನಂತರ ಗ್ರಾಮದಲ್ಲಿ ಮಾಂಸಹಾರ ಊಟೋಪಚಾರದ ಕಾರ್ಯಗಳು ನಡೆಯುತ್ತದೆ.

**ಶ್ರಾವಣ ಮಾಸದ ಆಚರಣೆಗಳು**

ಶ್ರಾವಣ ಮಾಸ ಕೃಷಿಕ ಸಮುದಾಯ ಹಾಗೂ ಪಶುಪಾಲಕ ಸಮುದಾಯಗಳಿಗೆ ತುಂಬ ಮಹತ್ವದ ದಿನಗಳು. ಈ ಸಂದರ್ಭದಲ್ಲಿ ಜನಪದರಲ್ಲಿ ಹೆಚ್ಚಿನ ಆಚರಣೆಗಳನ್ನು ಕಾಣಬಹುದು. ಶೈವ ಹಾಗೂ ವೈಷ್ಣವನ ಸಂಪ್ರದಾಯಗಳ ದೈವಗಳಿಗೆ ಸಂಬಂಧಿಸಿದಂತೆ ಆಯಾ ವಾರಗಳಲ್ಲಿ ಪೂಜೆ ಆಚರಣೆಗಳು ನಡೆಯುತ್ತವೆ. ಸಾಮಾನ್ಯವಾಗಿ ಶ್ರಾವಣ ಸೋಮವಾರದ ದಿನಗಳಲ್ಲಿ ಇಲ್ಲಿನ ಶ್ರಾವಣ ಮಾಸದ ವಿಶೇಷ ಆಚರಣೆಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ವಜ್ರಬಂಡೆ ಬಸಪ್ಪ, ಹಿಂಡುಲಿ ಸಂಗಮೇಶ್ವರ, ಪಂಚಮುಖದಯ್ಯ, ಗವಿವೀರಭದ್ರ ಹೀಗೆ ಶ್ರಾವಣ ಮಾಸದ ಪ್ರತಿ ಸೋಮವಾರದಂದು ಒಂದೊಂದು ದೇವರುಗಳಿಗೂ ಪೂಜೆ ಸಲ್ಲುತ್ತದೆ. ಸಾಮಾನ್ಯವಾಗಿ ಶ್ರಾವಣ ಮಾಸದ ಮೂರನೇ ಸೋಮವಾರವನ್ನು ವಜ್ರಬಂಡೆ ಸೋಮವಾರ ಎಂದೇ ಕರೆಯಲಾಗುತ್ತದೆ. ಅಂದು ವಜ್ರಬಂಡೆ ಬಸವೇಶ್ವರನಿಗೆ ಪೂಜೆ ನಡೆಯುತ್ತದೆ. ಇಲ್ಲಿ ಹಂಡೆ ಹನುಮಪ್ಪನ ದೇವಸ್ಥಾನವಿದ್ದು ಇದಕ್ಕೆ ಹಂಡೆ ವಂಶಸ್ಥರು ಪೂಜಾರಿಗಳಾಗಿರುತ್ತಾರೆ. ಇಂದಿಗೂ ಯಾದವ ಅಥವಾ ಗೊಲ್ಲದಾಸರು ಈ ದೇವರನ್ನು ಪೂಜಿಸುತ್ತಾರೆ. ಶ್ರಾವಣ ಮಾಸದ

ಮೂರನೇ ಶನಿವಾರದಂದು ಇಲ್ಲಿ ಪರವು ಆಚರಣೆ ನಡೆಯುತ್ತದೆ. ಈ ದಿನದಂದು ಊರಿನ ಎಲ್ಲಾ ಸಮುದಾಯದವರೂ ಬುತ್ತಿಕಟ್ಟಿಕೊಂಡು ಗುಡಿಗೆ ಹೋಗಿ ಗಂಗೆಪೂಜೆ, ಭಜನೆ ಕಾರ್ಯಕ್ರಮನಡೆಸಿ ಬುತ್ತಿ ಊಟಮಾಡಿ ಬರುತ್ತಾರೆ.

ಶ್ರಾವಣಮಾಸದಲ್ಲಿ ದೊಡ್ಡ ಬಸವೇಶ್ವರ ದೇವಸ್ಥಾನದಲ್ಲಿ ದೇವಸ್ಥಾನದಲ್ಲಿ ಈ ದೇವರಿಗೆ ಸಂಬಂಧಪಟ್ಟಂತೆ ವಿಶೇಷ ಆಚರಣೆಯೊಂದು ನಡೆಯುತ್ತದೆ. ಇದು ಹಂಪಿಯಲ್ಲಿ ನಡೆಯುವ ಫಲಪೂಜೆ ಆಚರಣೆಯಂತೆ ಕಂಡುಬರುತ್ತದೆ. ಈ ಸಂದರ್ಭದಲ್ಲಿ ಬಸವೇಶ್ವರನ ಗುಡಿಯ ಹೊರಭಾಗದ ಅಂಗಳದಲ್ಲಿ ಈ ಕಾರ್ಯಕ್ರಮ ಜರುಗುತ್ತದೆ. ನೀಲಮ್ಮ ಹಾಗೂ ಬಸವೇಶ್ವರರ ಪಾಲಿಕೆಗಳನ್ನು ಎದುರುಬದುರಾಗಿ ನಿಲ್ಲಿಸಿಕೊಂಡು ಈ ಆಚರಣೆ ನಡೆಯುತ್ತದೆ. ನೀಲಮ್ಮನ ಪರವಾಗಿ ಲಿಂಗಾಯಿತ ಸ್ವಾಮಿಗಳು, ಎರಡುಗುಂಪುಗಳಾಗಿ ಹೆಣ್ಣು ಗಂಡುಗಳ ಮದುವೆ ಒಪ್ಪಂದದ ಕ್ರಮದಲ್ಲಿ ಈ ಆಚರಣೆ ನಡೆಯುತ್ತದೆ. ಈ ಸಂದರ್ಭದಲ್ಲಿ ಬಸವೇಶ್ವರ ದೇವಸ್ಥಾನದ ಕ್ರಮದಲ್ಲಿ ಈ ಆಚರಣೆ ನಡೆಯುತ್ತದೆ. ಈ ಸಂದರ್ಭದಲ್ಲಿ ಬಸವೇಶ್ವರ ದೇವಸ್ಥಾನದ ಗೂಳಿಯನ್ನು ಎದುರಿಗಿರಿಸಿಕೊಂಡು ಗಂಡಿನ ಕಡೆಯವರು ನೀಲಮ್ಮನಿಗೆ ಏನು ವಸ್ತು ಒಡವೆ ಬೇಕೆಂಬುದಾಗಿ ಕೇಳುತ್ತಾರೆ. ಅದಕ್ಕೆ ಪ್ರತಿಯಾಗಿ ನೀಲಮ್ಮನ ಕಡೆಯವರು ಇಂತಿಂಥಾ ವಸ್ತು ಒಡವೆ ಬೇಕೆಂಬುದಾಗಿ ತಿಳಿಸುತ್ತಾರೆ. ಈ ಸಂದರ್ಭದಲ್ಲಿ ಮಾನವ ಸಹಜವಾದ ವಾಗ್ವಾದಗಳು, ನಿರಾಕರಣೆ ಮತ್ತು ಮಾತಿಗೆ ಕೂಡುವ ಹಲವು ಬಗೆಯ ನಾಟಕೀಯ ಸನ್ನಿವೇಶಗಳು ಏರ್ಪಡುತ್ತವೆ. ಕೊನೆಗೆ ಎರಡೂ ಗುಂಪುಗಳು ಒಪ್ಪಿ ಮದುವೆಯ ನಿಶ್ಚಿತಾರ್ಥ ಏರ್ಪಡುತ್ತದೆ. ಇದು ಗಂಗೆತ್ತಿನವರ ಆಟದ ಸನ್ನಿವೇಶವನ್ನು ನೆನಪಿಗೆ ತರುತ್ತದೆ. ಜನಪದರು ದೈವಗಳನ್ನು ನಮ್ಮಂತೆಯೇ ಎಂದು ಭಾವಿಸಿರುವ ಕ್ರಮ ಈ ಆಚರಣೆಯಿಂದ ವ್ಯಕ್ತವಾಗುತ್ತದೆ. ಈ ಆಚರಣೆಯನ್ನು ಕುರುಗೋಡಿನ ದೊಡ್ಡ ಬಸವೇಶ್ವರ ಜಾತ್ರೆಯ ಮೊದಲ ಹಂತವೆಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


೧.ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ : ಜೆ.ಎಂ.ನಾಗಯ್ಯ, ೨೦೦೨, ಲೋಹಿಯಾ ಪ್ರಕಾಶನ, ಬಳ್ಳಾರಿ

೨. ಅವಲೋಕನ ಕರ್ನಾಟಕ ಪರಂಪರೆ ಸಮೀಕ್ಷೆ : ಎಚ್ಚಸ್ಕೆ (ಸಂ), ೧೯೮೫, ವಿಶ್ವಕನ್ನಡ ಸಮ್ಮೇಳನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೩. ಸಂಡೂರು ಪರಿಸರದ ಕಾರ್ತಿಕೇಯ ತಪೋವನ ಚಾರಿತ್ರಿಕ ಅಧ್ಯಯನ : ವಾಸುದೇವ ಬಡಿಗೇರ, ೧೯೯೭, ಮಯ ಪ್ರಕಾಶನ, ಕಮಲಾಪುರ.

೪. ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು : ಪ್ರೊ.ಲಕ್ಷ್ಮಣ ತೆಲಗಾವಿ, ೧೯೭೬, ಹುಲ್ಲೂರು ಶ್ರೀನಿವಾಸ ಜೋಯಿಸರ ಗ್ರಂಥ ಪ್ರಕಟಣಾ ಸಮಿತಿ, ಚಿತ್ರದುರ್ಗ

೫. ಕರ್ನಾಟಕದಲ್ಲಿ ಪುರಾತತ್ವ ಶೋಧನೆ : ಡಾ.ಎ.ವಿ. ನರಸಿಂಹಮೂರ್ತಿ, ೧೯೮೩, ಐಬಿಎಚ್ ಪ್ರಕಾಶನ, ಬೆಂಗಳೂರು.

೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧ ಬಳ್ಳಾರಿ ಜಿಲ್ಲೆ : ಡಾ.ದೇವರಕೊಂಡಾರೆಡ್ಡಿ ಸಂ, ೧೯೯೮, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.


೭. ಕುರುಗೋಡು ದರ್ಶನ :

೮. ಕರ್ನಾಟಕದ ಪುರಾತತ್ವ ಶೋಧ : ಡಾ.ಸಿ.ಮಹಾದೇವ, ೨೦೦೧, ಶ್ರೀ ಲಕ್ಷ್ಮಿ ಪ್ರಕಾಶನ, ಹೊಸಪೇಟೆ

೯. ಕರ್ನಾಟಕ ಪುರತ್ವಾತ ನೆಲೆಗಳು : ಡಾ.ಕೆ.ಬಿ.ಶಿವತಾರಕ್, ೨೦೦೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦. ಪುರಾತತ್ವ ಶೋಧನೆ : ಡಾ.ಎಸ್.ಶ್ರೀಕಂಠಶಾಸ್ತ್ರೀ, ೧೯೬೦, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

# ಛಾಯಾಚಿತ್ರಗಳು






ಪ್ರಾಗೈತಿಹಾಸಿಕ ನೆಲೆಗಳಿಂದ ಕೂಡಿದ ಬೆಟ್ಟಗಳ ಸಾಲು, ಕುರುಗೋಡು (ಲೇಖನ ೧)



ಕಲ್ಲುಬೆಟ್ಟಗಳ ಸಾಲು



ಪ್ರಾಗಿತಿಹಾಸ ಕಾಲದ ಕುಳಿ (Cup marks)



ಕುಳಿಗಳ ಸಾಲು


ಎರಡನೇ ಕಲ್ಲಾಸರೆ (ಲೇಖನ ೨)


ಒಂಬತ್ತನೇ ಕಲ್ಲಾಸರೆ


ಕಲ್ಲೇಶ್ವರ ದೇವಾಲಯ, ಕುರುಗೋಡು (ಲೇಖನ ೫)


ಹಿಂಡುಲಿ ಸಂಗಮೇಶ್ವರ ದೇವಾಲಯದ ಮುಂಭಾಗ


ಹಿಂಡುಲಿ ಸಂಗಮೇಶ್ವರ ದೇವಲಯ ಪಾರ್ಶ್ವನೋಟ


ಹಿಂಡುಲಿ ಸಂಗಮೇಶ್ವರ ದೇವಲಯದ ಪ್ರದಕ್ಷಿಣಾಪಥ


ಹಿಂಡುಲಿ ಸಂಗಮೇಶ್ವರ ಗುಡಿಯ ಸ್ತಂಭ


ಹಿಂಡುಲಿ ಸಂಗಮೇಶ್ವರ ಗುಡಿಯ ಅಧಿಷ್ಠಾನ



ಕಣಿವೆ ಈಶ್ವರ ದೇವಾಲಯ



ದೊಡ್ಡ ಬಸವೇಶ್ವರ ದೇವಾಲಯದ ಮುಖ್ಯ ಗೋಪುರ



ದೊಡ್ಡ ಬಸವೇಶ್ವರ ದೇವಾಲಯದ ಮುಖಮಂಟಪ



ಬೃಹತ್ ನಂದಿ, ವಜ್ರಬಂಡಿ ಬಸಪ್ಪ ದೇವಾಲಯ

***